೫೦ ಕರ್ನಾಟಕ

ಸಾಹಿತ್ಯ ಪಾರಿಭಾಷಿಕ ಮಾಲೆ

ಸ್ತ್ರೀವಾದ

ಡಾ॥ ಬಿ.ಎನ್. ಸುಮಿತ್ರಾಬಾಯಿ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು – ೫೬೦ ೦೦೨

ಸುವರ್ಣ ಕರ್ನಾಟಕ – ೨೦೦೬

ಸಾಹಿತ್ಯ ಪಾರಿಭಾಷಿಕ ಮಾಲೆ

ಸ್ತ್ರೀವಾದ

ಡಾ. ಬಿ.ಎನ್. ಸುಮಿತ್ರಾಬಾಯಿ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨
ದೂರವಾಣಿ : ೨೨೨೧ ೧೬೩೦

STREEVADA : A book on Feminism by Dr. B.N. Sumitrabai.

Published by : Registrar, Karnataka Sahitya Academy, Kannada Bhavana, J.C. Road, Bangalore - 560 002.

Pages : 16 + 120

Price : **Rs. 40/-**

First Print : 1999

Second Print : 2006

Copies : 1000

ಮೊದಲನೇ ಮುದ್ರಣ : ೧೯೯೯

ಎರಡನೇ ಮುದ್ರಣ : ೨೦೦೬

ಪ್ರತಿಗಳು : ೧೦೦೦

ಪುಟಗಳು : ೧೬ + ೧೨೦

ಬೆಲೆ : ರೂ. ೪೦/-

ಪ್ರಕಾಶಕರು :

ವಿ.ಎನ್. ಮಲ್ಲಿಕಾರ್ಜುನಸ್ವಾಮಿ

ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು - ೫೬೦ ೦೨೦

ಲಕ್ಷ್ಮೀ ಮುದ್ರಣಾಲಯ

LAKSHMI MUDRANALAYA

ISO 9001-2000

ಚಾಮರಾಜಪೇಟೆ, ಬೆಂಗಳೂರು-೧೮

ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

ಅಧ್ಯಕ್ಷರ ಮಾತು

'ಸಾಹಿತ್ಯ ಪಾರಿಭಾಷಿಕ ಮಾಲೆ'ಯ ಅಡಿಯಲ್ಲಿ ಅನೇಕ ಪುಸ್ತಕಗಳನ್ನು ಅಕಾಡೆಮಿಯು ಪ್ರಕಟಿಸುತ್ತ ಬಂದಿದೆ. ಈ ನಿಟ್ಟಿನಲ್ಲಿ ಪ್ರಕಟವಾದ ಬಹುತೇಕ ಪುಸ್ತಕಗಳು ಮುಗಿದುಹೋಗಿವೆ. ಇವುಗಳಲ್ಲಿ ಡಾ. ಬಿ.ಎನ್. ಸುಮಿತ್ರಾಬಾಯಿ ಅವರ 'ಸ್ತ್ರೀವಾದ'ವೂ ಒಂದು. ಇದಕ್ಕೆ ಓದುಗರ ಬೇಡಿಕೆ ಜಾಸ್ತಿಯಾಗುತ್ತಿರುವುದರಿಂದ ಈ ಕೃತಿಯನ್ನು ಮರುಮುದ್ರಿಸಲಾಗುತ್ತಿದೆ.

ಈ 'ಸ್ತ್ರೀವಾದ'ದ ಲೇಖಕಿ ಬಿ.ಎನ್. ಸುಮಿತ್ರಾಬಾಯಿಯವರಿಗೆ ಮತ್ತು ಅಂದವಾಗಿ ಅಚ್ಚುಮಾಡಿಕೊಟ್ಟ ಲಕ್ಷ್ಮಿಮುದ್ರಣಾಲಯ, ಬೆಂಗಳೂರು ಇವರಿಗೆ ನಮ್ಮ ಕೃತಜ್ಞತೆಗಳು.

ಸೆಪ್ಟೆಂಬರ್ ೨೦೦೬ — ಗೀತಾ ನಾಗಭೂಷಣ

ಸಂಪಾದಕೀಯ

ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪ್ರಕಟವಾಗುತ್ತಿರುವ ಈ 'ಸಾಹಿತ್ಯ ಪಾರಿಭಾಷಿಕ ಪುಸ್ತಕ ಮಾಲೆ'ಗೆ ಮುಖ್ಯ ಪ್ರೇರಣೆ ದೊರೆತದ್ದು ಜಾನ್.ಡಿ. ಜಂಪ್ ಅವರ ಸಂಪಾದಕತ್ವದಲ್ಲಿ ಮೆಥುಯಿನ್ ಪ್ರಕಾಶನದವರು ಇಂಗ್ಲಿಷಿನಲ್ಲಿ ಹೊರತರುತ್ತಿರುವ 'ಕ್ರಿಟಿಕಲ್ ಈಡಿಯಂ' ಮಾಲೆಯ ಪುಸ್ತಕಗಳಿಂದ. ಕನ್ನಡದಲ್ಲಿ ವಿಮರ್ಶೆಯ ಪರಿಭಾಷೆ ಇನ್ನೂ ನಿಶ್ಚಿತ ಸ್ವರೂಪವನ್ನು ಪಡೆದುಕೊಂಡಿಲ್ಲ. ಅನೇಕ ಪರಿಕಲ್ಪನೆಗಳ ಅರ್ಥವ್ಯಾಪ್ತಿ ಸ್ಪಷ್ಟವಾಗಿಲ್ಲ. ಸಾಕಷ್ಟು ಪ್ರಮಾಣದಲ್ಲಿ ಪ್ರಬುದ್ಧ ವಿಮರ್ಶೆ ಪ್ರಕಟವಾಗುತ್ತಿದ್ದರೂ ವಿಮರ್ಶೆಗೆ ಸಂಬಂಧಿಸಿದ ಮೂಲಭೂತ ಸಾಮಗ್ರಿ ತಕ್ಕ ಪ್ರಮಾಣದಲ್ಲಿ ಬಂದಿಲ್ಲ. ಈ ಅವಶ್ಯಕತೆಯನ್ನು ಪೂರೈಸುವ ದೃಷ್ಟಿಯಿಂದ ಈ ಮಾಲೆಯ ಯೋಜನೆಯನ್ನು ಹಾಕಿಕೊಳ್ಳಲಾಯಿತು. ಆದರೆ ಈ ಮಾಲೆಯಲ್ಲಿ ಪ್ರಕಟವಾಗುತ್ತಿರುವ ಪುಸ್ತಿಕೆಗಳು ಯಾವುದೇ ರೀತಿಯಲ್ಲಿ ಇಂಗ್ಲಿಷ್ ಮಾಲೆಯ ಪುಸ್ತಕಗಳ ಅನುವಾದವಾಗಲಿ, ಅನುಕರಣೆಯಾಗಲಿ ಅಲ್ಲ; ಎಲ್ಲ ರೀತಿಯಿಂದಲೂ ಇವು ಸ್ವತಂತ್ರ ಕೃತಿಗಳು.

ಮಾಲೆಯಲ್ಲಿ ಈಗ ಇಪ್ಪತ್ತೈದು ಪುಸ್ತಿಕೆಗಳನ್ನು ಹೊರತರಲು ಯೋಜಿಸಲಾಗಿದ್ದು, ಅವುಗಳ ವಿಷಯಗಳನ್ನು ಕನ್ನಡ ಸಾಹಿತ್ಯದ ಪ್ರಸ್ತುತತೆಯ ದೃಷ್ಟಿಯಿಂದ ಆಯ್ಕೆ ಮಾಡಲಾಗಿದೆ. ಕೆಲವು ವಿಷಯಗಳಂತೂ ಕನ್ನಡಕ್ಕೆ ಮಾತ್ರ ವಿಶಿಷ್ಟವಾದವು. ಎಲ್ಲ ಪುಸ್ತಿಕೆಗಳಿಗೂ ಕನ್ನಡ ಸಾಹಿತ್ಯವೇ ದೃಷ್ಟಿಕೋನದ ಕೇಂದ್ರವಾಗಿದೆ. ಅನೇಕ ವಾದಗಳಿಗೂ, ಪರಿಕಲ್ಪನೆಗಳಿಗೂ ಪಾಶ್ಚಾತ್ಯ ಸಾಹಿತ್ಯವೇ ಮೂಲವಾಗಿದ್ದರೂ, ಅವು ಕನ್ನಡಕ್ಕೆ ಬಂದ ಸಂದರ್ಭ, ನಡೆದ ಹೊಂದಾಣಿಕೆ, ಪಡೆದ ಬದಲಾವಣೆಗಳನ್ನು ಇಲ್ಲಿ ಮುಖ್ಯವಾಗಿ ಗಮನಿಸಲಾಗಿದೆ. ಉದಾಹರಣೆಗೆ, 'ರೊಮ್ಯಾಂಟಿಸಿಜಂ' ಎಂಬ ಪರಿಕಲ್ಪನೆ ಪಶ್ಚಿಮದಿಂದ ಬಂದುದಾದರೂ, ಅದು ಕನ್ನಡ ನವೋದಯಲ್ಲಿ ಪಡೆದುಕೊಂಡ ಸ್ವರೂಪವೇ ಬೇರೆಯಾಗಿದೆ. ಇದೇ ಮಾತನ್ನು 'ನವ್ಯತೆ', 'ವಾಸ್ತವತಾವಾದ', 'ಮಾರ್ಕ್ಸ್‌ವಾದ' ಇತ್ಯಾದಿಗಳ ಬಗೆಗೂ ಹೇಳಬಹುದು. ಸಂಸ್ಕೃತಿಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾದ ಈ ಅಂಶದ ಮೇಲೆ ಈ ಪುಸ್ತಿಕೆಗಳಲ್ಲಿ ಹೆಚ್ಚಿನ ಒತ್ತು ಬಿದ್ದಿದ್ದರೆ ಅದು ಸಹಜವೇ ಆಗಿದೆ. ಆಧುನಿಕ ಕನ್ನಡ ಸಾಹಿತ್ಯವೆಲ್ಲ ಪಶ್ಚಿಮದ ಅನುಕರಣೆ ಎಂಬ ತಪ್ಪು ಕಲ್ಪನೆ ಇದರಿಂದ ತಕ್ಕಮಟ್ಟಿಗಾದರೂ ಕಡಿಮೆಯಾದೀತು ಎಂದು ನಮ್ಮ ನಂಬಿಕೆ.

ಈ ಪುಸ್ತಿಕೆಗಳು ಸಾಮಾನ್ಯ ಸಾಹಿತ್ಯಾಸಕ್ತರಿಂದ ಹಿಡಿದು ಕನ್ನಡ ಎಂ.ಎ. ಮಟ್ಟದ ವಿದ್ಯಾರ್ಥಿಗಳಿಗೂ ಉಪಯುಕ್ತವಾಗುವಂತೆ ಪರಿಚಯಾತ್ಮಕವಾಗಿರಬೇಕೆಂಬುದು ನಮ್ಮ ಉದ್ದೇಶ. ಆದರೆ ಅನೇಕ ಸಂದರ್ಭಗಳಲ್ಲಿ ಬರವಣಿಗೆ ಈ ಸೀಮಿತ ಉದ್ದೇಶವನ್ನು ದಾಟಿ ಪ್ರಬುದ್ಧ ಸಾಹಿತ್ಯಾಭ್ಯಾಸಿಗಳ ಚರ್ಚೆಗೂ ಯೋಗ್ಯವಾಗುವಷ್ಟು ಮುಂದೆ ಹೋಗಿದೆ. ಲೇಖಕರು ತಮ್ಮ ಸ್ವತಂತ್ರ ವಿಚಾರಗಳನ್ನೂ, ಒಳನೋಟಗಳನ್ನೂ, ಆಳವಾದ ಅಭ್ಯಾಸವನ್ನೂ ಒದಗಿಸಿ ಈ ಪುಸ್ತಿಕೆಗಳ ಮೌಲ್ಯವನ್ನು ಹೆಚ್ಚಿಸಿದ್ದಾರೆ.

೭೦–೮೦ ಪುಟಗಳ ಮಿತಿಯಲ್ಲಿ ವಿಷಯ ಆದಷ್ಟು ಸಮಗ್ರವಾಗಿ ಮತ್ತು ಅಡಕವಾಗಿ ಬರುವಂತಾಗಬೇಕೆಂಬುದು ನಮ್ಮ ಯೋಜನೆಯ ಒಂದು ಮುಖ್ಯ ಅಂಶ. ಆದರೆ ಪುಟಸಂಖ್ಯೆಯ ಮಿತಿಯನ್ನು ಅಷ್ಟು ಕಟ್ಟು–ನಿಟ್ಟಾಗಿ ಅನುಸರಿಸಿಲ್ಲ. ವಿಷಯದ ವ್ಯಾಪ್ತಿಯನ್ನು ಅವಲಂಬಿಸಿ ಒಂದೆರಡು ಪುಸ್ತಿಕೆಗಳು ಗಾತ್ರದಲ್ಲಿ ದೊಡ್ಡವೂ ಆಗಿವೆ.

ಮಾಲೆಯಲ್ಲಿ ಸೇರಿರುವ ವಿಷಯಗಳು ಒಂದೇ ರೀತಿಯದಾಗಿಲ್ಲ. ಕೆಲವು ಸಾಹಿತ್ಯಕ ವಾದಗಳು, ಕೆಲವು ಪರಿಕಲ್ಪನೆಗಳು, ಕೆಲವು ಚಳವಳಿಗಳು, ಇನ್ನು ಕೆಲವು ಸಾಹಿತ್ಯಪ್ರಕಾರಗಳು, ವಿಷಯಗಳ ವೈವಿಧ್ಯ ಮತ್ತು ಭಿನ್ನ ಸ್ವರೂಪಗಳಿಂದಾಗಿ ಈ ಪುಸ್ತಿಕೆಗಳ ರಚನಾಕ್ರಮದಲ್ಲಿ ಏಕರೂಪತೆ ಇಲ್ಲ. ಆದರೂ ಪ್ರತಿಯೊಂದರಲ್ಲಿ ವ್ಯಾಖ್ಯೆ, ಸ್ವರೂಪ, ಸಾಮಾಜಿಕ ಮತ್ತು ತಾತ್ವಿಕ ಹಿನ್ನೆಲೆ, ಮುಖ್ಯ ವೈಶಿಷ್ಟ್ಯಗಳು, ಪಶ್ಚಿಮದಲ್ಲಿ ಬೆಳೆದು ಬಂದ ರೀತಿ, ಕನ್ನಡದಲ್ಲಿ ಬಂದಾಗ ಆದ ಹೊಂದಾಣಿಕೆ, ಮುಖ್ಯ ಸಾಹಿತ್ಯ ಕೃತಿಗಳಲ್ಲಿ ಅವುಗಳ ಅಭಿವ್ಯಕ್ತಿ– ಈ ಕ್ರಮವನ್ನು ಸ್ಥೂಲವಾಗಿ ಇರಿಸಿಕೊಂಡಿದೆ. ವಿಷಯ ನಿರೂಪಣೆ ಆದಷ್ಟು ವಸ್ತುನಿಷ್ಠವಾಗಿರುವಂತೆ ನೋಡಿಕೊಳ್ಳಲಾಗಿದೆ.

ಪಾರಿಭಾಷಿಕ ಶಬ್ದಗಳ ಬಳಕೆಯ ಬಗ್ಗೆ ಒಂದು ಮಾತನ್ನು ಅಗತ್ಯವಾಗಿ ಹೇಳಬೇಕು. ಈ ವಿಷಯದಲ್ಲಿ ನಮ್ಮಲ್ಲಿ ಬಹಳಷ್ಟು ಗೊಂದಲವಿದೆ. ಒಂದೇ ಇಂಗ್ಲಿಷ್ ಶಬ್ದಕ್ಕೆ ಕನ್ನಡದಲ್ಲಿ ಅನೇಕ ಸಮಾನಾರ್ಥಕ ಶಬ್ದಗಳು ಬಳಕೆಗೆ ಬಂದಿವೆ. ಬೇರೆ ಬೇರೆ ಲೇಖಕರು ಬೇರೆ ಬೇರೆ ಶಬ್ದಗಳನ್ನು ಬಳಸುತ್ತಿದ್ದಾರೆ. ಎಷ್ಟೋ ಸಂದರ್ಭಗಳಲ್ಲಿ ಒಬ್ಬರೇ ಲೇಖಕರು ಬೇರೆ ಬೇರೆ ಕಡೆ ಬೇರೆ ಬೇರೆ ಶಬ್ದಗಳನ್ನು ಬಳಸಿರುವುದೂ ಉಂಟು. ಈ ಸಮಸ್ಯೆಯನ್ನು ಕೊನೆಯದಾಗಿ ಪರಿಹರಿಸುವ ಮಹಾತ್ವಾಕಾಂಕ್ಷೆ ಈ ಮಾಲೆಗೆ ಇಲ್ಲ. ಆದರೂ ಈ ಮಾಲೆಯ ಮಟ್ಟಿಗೆ ಏಕರೂಪತೆ ತರುವ ಪ್ರಯತ್ನ ಮಾಡಲಾಗಿದೆ. ಅಗತ್ಯಬಿದ್ದ ಕಡೆ ಬಳಕೆಯಲ್ಲಿರುವ ಇತರ ಪರ್ಯಾಯ ಶಬ್ದಗಳನ್ನೂ

ಸೂಚಿಸಲಾಗಿದೆ. ಅಪರಿಚಿತ ಮತ್ತು ಹೊಸದಾಗಿ ರೂಪಿಸಿದ ಶಬ್ದಗಳಿಗೆ ಕಂಸಿನಲ್ಲಿ ಮೂಲ ಶಬ್ದವನ್ನೂ ಕೊಡಲಾಗಿದೆ.

ಸಾಧ್ಯವಿದ್ದಷ್ಟೂ, ಉದ್ಧೃತ ಭಾಗಗಳನ್ನು ಕನ್ನಡ ಅನುವಾದದಲ್ಲಿ ಕೊಟ್ಟಿದೆ.

ಕೊನೆಯಲ್ಲಿ 'ಅಭ್ಯಾಸ ಸೂಚಿ'ಯೊಂದು ಇದ್ದು, ಅದರಲ್ಲಿ ಪುಸ್ತಿಕೆಯಲ್ಲಿ ಉದ್ಧರಿಸಿದ ಎಲ್ಲ ಮೂಲಗಳ ಸಂಪೂರ್ಣ ವಿವರಗಳನ್ನು ಕಾಣಬಹುದು. ಉದ್ಧೃತ ಭಾಗಗಳಿಗೆ ಸಂಬಂಧಿಸಿದಂತೆ ಲೇಖಕರ ಹೆಸರಿನ ಜೊತೆಗೆ ಯಾವ ಕೃತಿಯಿಂದ ಉದ್ಧರಿಸಲಾಗಿದೆಯೊ ಆ ಕೃತಿ ಪ್ರಕಟವಾದ ವರ್ಷ ಮತ್ತು ಪುಟಸಂಖ್ಯೆಗಳನ್ನು ಮಾತ್ರ ನಮೂದಿಸಿದೆ. ಲೇಖಕರ ಹೆಸರು ಮತ್ತು ವರ್ಷವನ್ನು ಅನುಸರಿಸಿ 'ಅಭ್ಯಾಸ ಸೂಚಿ'ಯನ್ನು ನೋಡಿದರೆ ಅಲ್ಲಿ ಕೃತಿಯ ಹೆಸರು ಮತ್ತು ಪ್ರಕಟಣೆಯ ವಿವರಗಳನ್ನು ಕಾಣಬಹುದು. ಇದರಲ್ಲಿ ಪ್ರಾಥಮಿಕ ಮೂಲಗಳನ್ನು ಮತ್ತು ಸೃಜನಶೀಲ ಕೃತಿಗಳನ್ನು ಸೇರಿಸಿಲ್ಲ, ಇದೇ ಸೂಚಿಯಲ್ಲಿಯೇ ಆಯಾ ವಿಷಯವನ್ನು ಕುರಿತು ಹೆಚ್ಚಿನ ಅಭ್ಯಾಸಕ್ಕೆ ಉಪಯುಕ್ತವಾದ ಗ್ರಂಥಗಳನ್ನೂ ಸೇರಿಸಲಾಗಿದೆ.

ಈ ಮಾಲೆ ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಉಪಯುಕ್ತವಾದಲ್ಲಿ ಶ್ರಮವಹಿಸಿ ಬರೆದುಕೊಟ್ಟ ಲೇಖಕರ ಮತ್ತು ಆಸಕ್ತಿವಹಿಸಿ ಪ್ರಕಟಣೆ ಕೈಕೊಂಡ ಅಕಾಡೆಮಿಯ ಉದ್ದೇಶ ಸಾರ್ಥಕವಾದಂತೆ.

ಮಾಲೆಯ ಸಂಪಾದಕತ್ವವನ್ನು ನನಗೆ ವಹಿಸಿಕೊಟ್ಟ ಅಕಾಡೆಮಿಗೂ, ಯೋಜನೆಯನ್ನು ಮೆಚ್ಚಿ ಪುಸ್ತಿಕೆಗಳನ್ನು ಬರೆದುಕೊಟ್ಟ ಲೇಖಕರಿಗೂ ನಾನು ಕೃತಜ್ಞ.

– ಡಾ. ಗಿರಡ್ಡಿ ಗೋವಿಂದರಾಜ

ಲೇಖಕರ ಮಾತು

(ಎರಡನೆಯ ಮುದ್ರಣಕ್ಕೆ)

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಈ ಹಿಂದೆ 'ಸಾಹಿತ್ಯ ಪಾರಿಭಾಷಿಕ ಮಾಲೆ'ಯಲ್ಲಿ ಪ್ರಕಟಿಸಿದ್ದ 'ಸ್ತ್ರೀವಾದ' ಎಂಬ ನನ್ನ ಪುಸ್ತಕವು ಈಗ ಮರುಮುದ್ರಣಗೊಳ್ಳುತ್ತಿರುವುದು ಸಂತೋಷ ತಂದಿದೆ.

ಪಶ್ಚಿಮ ದೇಶಗಳಲ್ಲಿ ಸ್ತ್ರೀವಾದಿ ತಾತ್ವಿಕತೆಯು ಬೆಳೆದು ಬಂದ ಬಗೆಯನ್ನೂ, ಅಲ್ಲಿ ಹುಟ್ಟಿದ ವಿವಿಧ ಸ್ತ್ರೀವಾದಿ ಪಂಥಗಳ ತಾತ್ವಿಕ ನಿಲುವುಗಳನ್ನೂ ಒಂದು ಚಾರಿತ್ರಿಕ ಕ್ರಮದಲ್ಲಿ ಪರಿಚಯಿಸುವ ಯತ್ನವಾಗಿ ಈ ಪುಸ್ತಕ ರಚಿತವಾಗಿತ್ತು.

ಕಳೆದ ೨೫ ವರ್ಷಗಳಲ್ಲಿ ಕರ್ನಾಟಕದಲ್ಲೂ ಸ್ತ್ರೀವಾದಿ ಚಿಂತನೆಯು ಹಲವು ಘಟ್ಟಗಳಲ್ಲಿ ಬೆಳೆಯುತ್ತ ಬಂದಿದೆ. ಎಪ್ಪತ್ತು-ಎಂಬತ್ತರ ದಶಕಗಳಲ್ಲಿ ಕಳೆದ ಶತಮಾನದಲ್ಲಿ ಮಹಿಳಾ ಚಳವಳಿ ಕಾಣಿಸಿಕೊಂಡು, ಅದರ ರಾಜಕೀಯ ಹೋರಾಟ ಸಿದ್ಧಾಂತವಾಗಿ ಸ್ತ್ರೀವಾದವು ಇಲ್ಲಿ ಕಾಲಿರಿಸಿತು.

ಸ್ಥಳೀಯ ಸಂಸ್ಕೃತಿಯೊಂದಿಗೆ ಮುಖಾಮುಖಿಯಾಗುತ್ತಾ ಸ್ತ್ರೀವಾದಿ ತಾತ್ವಿಕ ಜಿಜ್ಞಾಸೆಯು ಬೆಳೆದಿದ್ದು, ಈಚಿನ ದಿನಗಳಲ್ಲಿ ನಾಡಿನ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಮಹಿಳಾ ಅಧ್ಯಯನ ವಿಭಾಗಗಳಲ್ಲಿ ಒಂದು ಅಧ್ಯಯನ ವಿಷಯವಾಗಿ, ಜ್ಞಾನಮಾರ್ಗವಾಗಿ ಅದು ಸ್ಥಳೀಯ ಅವಶ್ಯಕತೆಗೆ ಅನುಗುಣವಾಗಿ ವಿಸ್ತರಿಸಿಕೊಳ್ಳುತ್ತಿದೆ. ಮಹಿಳಾ ಅಧ್ಯಯನ, ಮಹಿಳಾ ಸಾಹಿತ್ಯ ಕುರಿತ ಸಂಶೋಧನೆಗಳು ಹೆಚ್ಚಿದಂತೆ ಈ ಸಿದ್ಧಾಂತದ ಪರಿಚಯ ನೀಡುವ ಪುಸ್ತಕಗಳ ಬೇಡಿಕೆ ಹೆಚ್ಚುತ್ತಿದೆ. ಇಂತಹ ರಚನಾತ್ಮಕವೆನ್ನಬಹುದಾದ ಬೆಳವಣಿಗೆಯ ಫಲವಾಗಿ ಪ್ರಸ್ತುತ 'ಸ್ತ್ರೀವಾದ' ಕೂಡ ಮತ್ತೆ ಮುದ್ರಿತವಾಗುತ್ತಿರುವುದು ನಿಜಕ್ಕೂ ಆರೋಗ್ಯಕರ ಬೆಳವಣಿಗೆಯಾಗಿದೆ.

ಈಗ ಮತ್ತೆ ಮುದ್ರಿಸುವ ಸಂದರ್ಭದಲ್ಲಿ ಮೊದಲಿದ್ದ ಕೃತಿಗೆ 'ಮಹಿಳಾ ಸಾಹಿತ್ಯ-ಸ್ವಂತ ಪರಂಪರೆ, ಸ್ವಂತ ಅಭಿವ್ಯಕ್ತಿ' ಎಂಬ ಅಧ್ಯಾಯವೊಂದನ್ನು ಹೊಸದಾಗಿ ರಚಿಸಿರುತ್ತೇನೆ. ಈ ದೃಷ್ಟಿಯಿಂದ ಇದು ಪರಿಷ್ಕೃತ ಮರು ಅವೃತ್ತಿಯಾಗಿದೆ.

ಈ ರೀತಿ ನನ್ನ ಕೃತಿಯೊಂದನ್ನು ಮತ್ತೆ ಮುದ್ರಿಸಲು ಆಯ್ಕೆ ಮಾಡಿರುವುದಕ್ಕಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ನಾಡೋಜ ಗೀತಾ ನಾಗಭೂಷಣ ಅವರಿಗೂ ರಿಜಿಸ್ಟ್ರಾರ್ ಆದ ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿಯವರಿಗೂ ನಾನು ಹೃತ್ಪೂರ್ವಕ ಕೃತಜ್ಞತೆಗಳನ್ನು ಈ ಮೂಲಕವಾಗಿ ಅರ್ಪಿಸುತ್ತಿದ್ದೇನೆ.

ಬೆಂಗಳೂರು ೨೦೦೬ — ಬಿ.ಎನ್. ಸುಮಿತ್ರಾಬಾಯಿ

ಲೇಖಕರ ಮಾತು

(ಮೊದಲನೆಯ ಮುದ್ರಣಕ್ಕೆ)

ಕರ್ನಾಟಕದಲ್ಲಿ ಕಳೆದ ಎರಡು ದಶಕಗಳಲ್ಲಿ ನಡೆದಿರುವ ಮಹಿಳಾ ಚಳುವಳಿ ಮತ್ತು ಸ್ತ್ರೀವಾದಿ ತಾತ್ವಿಕತೆಯನ್ನು ಕುರಿತ ಜಿಜ್ಞಾಸೆಗಳು ಸಾಹಿತ್ಯ ವಿಮರ್ಶೆ, ಸಂಶೋಧನೆಗಳ ಕ್ಷೇತ್ರದಲ್ಲಿ ಉಂಟುಮಾಡಿರುವ ಎರಡು ಎದ್ದುತೋರುವ ಪರಿಣಾಮಗಳಿವು: ೧. ಸುಶಿಕ್ಷಿತ ಮಧ್ಯಮವರ್ಗದ ಮಹಿಳೆಯರಲ್ಲಿ ಹೆಚ್ಚಿರುವ ಸ್ತ್ರೀವಾದಿ ಪ್ರಜ್ಞಾ ಜಾಗೃತಿ ಮತ್ತು ಸ್ವಾಭಿವ್ಯಕ್ತಿಯ ಅನನ್ಯತೆಗಾಗಿ ಜಿಜ್ಞಾಸೆ; ೨. ವಸಾಹತೋತ್ತರ ಚಿಂತನೆಗಳ ಪ್ರಭಾವದಿಂದ ಪಾಶ್ಚಿಮಾತ್ಯ ಸ್ತ್ರೀವಾದವನ್ನು ಚಿಕಿತ್ಸಾತ್ಮಕವಾಗಿ, ನೋಡುವ ಸ್ವ-ಸಂಸ್ಕೃತಿ ಶೋಧನೆಗಾಗಿ ಹೆಚ್ಚುತ್ತಿರುವ ಕಾಳಜಿ.

ಮಹಿಳೆ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಎಷ್ಟೆಲ್ಲ ದಮನಕ್ಕೆ ಒಳಗಾಗಿದ್ದಾಳೆ ಎಂಬ ಬಿಂದುವಿನಿಂದ ಪಾಶ್ಚಿಮಾತ್ಯ ಸ್ತ್ರೀವಾದಿ ತಾತ್ವಿಕತೆ ಆರಂಭವಾಗಿದ್ದರೂ, ಇವತ್ತಿನ ಸಂದರ್ಭದಲ್ಲಿ ಮಹಿಳೆಯರ ಸ್ವಾಯತ್ತ ನೆಲೆಯನ್ನು, ಸ್ವಾಭಿವ್ಯಕ್ತಿಯ ಮೂಲಕವಾದ ವ್ಯಕ್ತಿತ್ವದ ಬಿಡುಗಡೆಯನ್ನು ಅದು ಮುಖ್ಯ ಕಾಳಜಿಯಾಗಿ ಹೊಂದಿದೆ. ಕರ್ನಾಟಕದಲ್ಲಿ ಎಪ್ಪತ್ತರ – ಎಂಭತ್ತರ ದಶಕಗಳ ನಡುವೆ ಈ ಚಿಂತನೆಗಳು ಕಾಲಿರಿಸಿದಾಗ, ತೀವ್ರ ಆತಂಕ, ಸಂಶಯ, ವಿಡಂಬನೆ ಹಾಗೂ ಸಂಸ್ಕೃತಿ ವಿನಾಶದ ಭೀತಿಗಳಿಂದ ಹುಟ್ಟಿದ ವಿರೋಧವನ್ನು ಅವು ಎದುರಿಸಬೇಕಾಯಿತು. ಆ ಹಂತವನ್ನು ದಾಟಿರುವ ಈ ಹೊತ್ತಿನಲ್ಲಿ ಕನ್ನಡಿಗರು ಬೇರೆ ರೀತಿಯ ಪ್ರಶ್ನೆಗಳನ್ನು ಇಂದು ಒಡ್ಡುತ್ತಾರೆ. ನಮ್ಮ ಸಾಹಿತ್ಯ, ಸಾಂಸ್ಕೃತಿಕ ಪರಿಸರದಲ್ಲಿ ವಚನಯುಗ, ಜಾನಪದ ಸಾಮಗ್ರಿ, ಕೆಳಸ್ತರೀಯ ಜನಜೀವನದ ಅನುಭವಗಳು, ಮಾತೃಸಂಸ್ಕೃತಿ ಕೇಂದ್ರಿತ ತಾತ್ವಿಕತೆ ಮುಂತಾದವುಗಳಿಂದ ಸ್ತ್ರೀವಾದಕ್ಕೆ ಅವಶ್ಯಕ ಬಲವನ್ನು ಗಳಿಸಿಕೊಳ್ಳಲು ಸಾಧ್ಯವಿಲ್ಲವೆ? ಹಾಗಿದ್ದಾಗ ನಮ್ಮೆಲ್ಲಾ ಸ್ತ್ರೀವಾದಿ ಚರ್ಚೆಗಳನ್ನೂ ಏಕೆ ಸಿಮೋನ್ ದ ಬೋವಾ ಇಲ್ಲವೆ ಕೇಟ್ ಮಿಲೆಟ್‌ರಿಂದ ಆರಂಭಿಸಬೇಕು? ಎಂಬಂಥ ಪ್ರಶ್ನೆಗಳು ಇಂದು ಸ್ತ್ರೀವಾದಕ್ಕೆ ಈ ನಾಡಿನಲ್ಲಿ ಎದುರಾಗುತ್ತವೆ. ಸ್ವಸಂಸ್ಕೃತಿ ಶೋಧನೆಯ ಕಳಕಳಿ ಈ ಪ್ರಶ್ನೆಗಳ ಮೂಲದಲ್ಲಿರುತ್ತದೆ.

ಈ ಕಳಕಳಿಯನ್ನು ಒಪ್ಪಿಯೂ ನಾವು ಒಂದು ಮಾತನ್ನು ಮರೆಯುವಂತಿಲ್ಲ. ಪಾಶ್ಚಿಮಾತ್ಯ ಚಿಂತನೆಯೊಂದಕ್ಕೆ ಸ್ಪಷ್ಟವಾಗಿ ಯಾವುದೇ ಆತ್ಮಾವಹೇಳನವಿಲ್ಲದೆ ಮುಖಾಮುಖಿ ಆಗುವುದಕ್ಕೆ ಕೂಡ ಆ ಚಿಂತನೆಯ ನಿರ್ದುಷ್ಟವಾದ ತಿಳುವಳಿಕೆ ಅಪೇಕ್ಷಣೀಯ. ಆದ್ದರಿಂದ ಅಂಥ ತಿಳುವಳಿಕೆಯನ್ನು ಪಡೆವ, ನೀಡುವ ಎಲ್ಲ ಪ್ರಯತ್ನಗಳನ್ನೂ ವಿದೇಶೀಯ ಚಿಂತನೆಗಳನ್ನು ತಂದು ಇಲ್ಲಿ ಬಿತ್ತುವ ಪ್ರಯತ್ನವೆಂದು ಹೆದರಿಕೆಯಿಂದ ನೋಡಬೇಕಿಲ್ಲ. ಹಾಗೆ ಹುಡುಕಲು ಹೊರಟರೆ ನಮ್ಮ ಸಂಸ್ಕೃತಿಯ ಅತ್ಯಂತ ನಿಕಟವಾದ ಎಲ್ಲ ಪರಿಚಯ, ಆ ದಿಕ್ಕಿನ ಎಲ್ಲಾ ಆಧುನಿಕ ಜಿಜ್ಞಾಸೆಗಳೂ ನಮಗೆ ಸಾಧ್ಯವಾಗುತ್ತಿರುವುದು ಪಾಶ್ಚಾತ್ಯ ಚಿಂತನೆಗಳ ಮೂಲಕವಾಗಿಯೇ. ಬಸವಣ್ಣನವರ ಇಲ್ಲವೆ ಅಕ್ಕಮಹಾದೇವಿಯ ಕಾಲದಿಂದ ನಾವು ಕಡಿದುಕೊಂಡು ದೂರವಾಗಿ ಹೋದದ್ದು ಒಂದು ನಿಜಸ್ಥಿತಿ. ಹೊರದೇಶಗಳಿಂದ ಕಲಿತ ಸಮಾನತೆ, ಮಾನವತಾ ವಾದಗಳ ಬೆಳಕಿನಲ್ಲಿ ಅವರನ್ನು ಅರ್ಥಮಾಡಿಕೊಂಡೇವೆನ್ನುವುದೂ ಇನ್ನೊಂದು ನಿಜಸ್ಥಿತಿ. ಹೀಗೆಯೇ ಜಾನಪದ ಸಾಮಗ್ರಿಯನ್ನು ಹೇಗೆ ಸ್ವಸಂಸ್ಕೃತಿ ಶೋಧಕ್ಕೆ ಬಳಸಬಹುದೆಂಬ ನಮ್ಮ ಇವತ್ತಿನ ತಿಳವಳಿಕೆಗೂ ಪಶ್ಚಿಮದವರು ಅಥವಾ ಅವರನ್ನು ಪ್ರಶ್ನಿಸ ಹೊರಟ ಬೇರಾರೋ ಆ ದಿಕ್ಕಿನಲ್ಲಿ ಮಾಡಿರುವ ಪ್ರಯತ್ನಗಳೇ ಮಾದರಿ ಅಥವಾ ಪ್ರೇರಣೆಯಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಪಾಶ್ಚಾತ್ಯ ಸ್ತ್ರೀವಾದವನ್ನು ಸಂಕ್ಷಿಪ್ತವಾಗಿ ಒಂದೆಡೆ ಪರಿಚಯಿಸಿಕೊಡುವ ಈ ಕಿರುಹೊತ್ತಿಗೆಗೂ ಕೊನೆಯಪಕ್ಷ ಒಂದು ಮೀಟುಗೋಲಿನ ರೀತಿಯ ಪ್ರಯೋಜನವು ಇರುತ್ತದೆಂಬ ನಂಬಿಕೆಯಿಂದ ಇದನ್ನು ಸಿದ್ಧಪಡಿಸಲಾಗಿದೆ.

ಪ್ರತಿಯೊಂದು ಸಂಸ್ಕೃತಿಯೊಳಗೂ ತನ್ನಷ್ಟಕ್ಕೇ ಅನನ್ಯವಾದದ್ದು, ಬೇರೊಂದು ಸಂಸ್ಕೃತಿಗೂ ಕೊಡಬಹುದಾದದ್ದು ಇರುತ್ತದೆ. ಹಾಗೆಯೇ ಭಿನ್ನ ಸಾಂಸ್ಕೃತಿಕ ಹಿನ್ನೆಲೆಯಿಂದ ಪಡೆದುಕೊಂಡ ವಿಚಾರಗಳನ್ನು ಸ್ಥಳೀಯ ಜನಜೀವನದ ಗತಿತಾರ್ಕಿಕತೆಗೆ ಹೊಂದುವಂತೆ ಉಪಯುಕ್ತವಾದ ಸಂವಾದವೊಂದನ್ನು ಹುಟ್ಟುಹಾಕುವಂತೆ ಬರಮಾಡಿಕೊಳ್ಳಬೇಕಾಗುತ್ತದೆ. ಸ್ಥಳೀಯ ಜನರ ಚಿಂತನಾಕ್ರಮ ಹಾಗೂ ಸಂವೇದನೆಗಳಿಗೆ ಹೊಂದುವುದೇ ಅಸಾಧ್ಯವಾದ ಸಂಗತಿಗಳನ್ನು ಅವುಗಳ ಅತಿಯಾದ ಪರಕೀಯತೆಯಿಂದಾಗಿಯೇ ಜನರು ತಿರಸ್ಕರಿಸಲೂಬಹುದು. ಅದಾಗಬಾರದು ಎಂದರೆ ಆ ಹೊಸ ಚಿಂತನೆಯೊಂದಿಗೆ ಯಾವುದೇ ಆತ್ಮಾವಹೇಳನವಿಲ್ಲದೆ, ಸರಿಸಮನಾಗಿ ನಿಂತು ಮುಖಾಮುಖಿಯಾಗುವುದು ಅವಶ್ಯಕ. ಈ ರೀತಿಯ ಮುಖಾಮುಖಿಯಲ್ಲೇ ದೇಶೀಕರಣದ ತಳಹದಿಯಿದೆ ಎಂಬ ತಿಳುವಳಿಕೆಯು ಈ ಪುಸ್ತಕದ ಮೂಲದಲ್ಲಿದೆ ಎಂದು ನಮ್ರವಾಗಿ ಹೇಳಬಯಸುತ್ತೇನೆ.

ಪ್ರಸ್ತುತ ಈ ಕಿರುಹೊತ್ತಿಗೆಯಲ್ಲಿ ಪಾಶ್ಚಾತ್ಯ ಸ್ತ್ರೀವಾದದ ತಾತ್ವಿಕ ರೂಪಗಳನ್ನು ಅವು ಬೆಳೆದು ಬಂದ ಕ್ರಮದಲ್ಲಿಯೇ ಪರಿಚಯಿಸುವ ಯತ್ನವಿದೆ. ಇದರಿಂದ ಚರಿತ್ರೆ ಮಾದರಿಯ ಲಕ್ಷಣ ಈ ಪುಸ್ತಕಕ್ಕೆ ಉಂಟಾಗಿದೆ ಎಂದು ಯಾರಿಗಾದರೂ ಅನ್ನಿಸಿದರೆ, ಅದು ಸಹಜವೇ. ಏಕಾಕಾರವಾಗಲಿ, ಏಕಸೂತ್ರವಾಗಲಿ, ಅಥವಾ ಸಾಹಿತ್ಯಕ್ಕಷ್ಟೇ ಮೀಸಲಾದ ಲಕ್ಷಣ ವ್ಯಾಖ್ಯಾನವಾಗಲಿ ಇಲ್ಲದಿರುವ ಸ್ತ್ರೀವಾದವನ್ನು ಸಂಗ್ರಹಿಸಿ ತಾತ್ವಿಕ ಸೂತ್ರಗಳ ರೀತಿ ಕಟ್ಟಿಕೊಡುವ ಯಾವುದೇ ಯತ್ನದಲ್ಲೂ, ಆ ಸಿದ್ಧಾಂತದ ಮೂಲ ಸ್ವರೂಪಕ್ಕೇ ಧಕ್ಕೆ ಉಂಟುಮಾಡುವ ಸಾಧ್ಯತೆ ಇರುತ್ತದೆ. ಈ ಕಾರಣಕ್ಕಾಗಿಯೇ "ಸಾಹಿತ್ಯ ಪಾರಿಭಾಷಿಕ ಮಾಲೆ"ಯ ಮೂಲಕ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ಇತರ ಪುಸ್ತಕಗಳಲ್ಲಿ ಇರುವ ಎಷ್ಟೋ ಲಕ್ಷಣಗಳಿಗೆ ಕೊಂಚ ಆಚೀಚೆಗೆ ಈ ಹೊತ್ತಿಗೆಯು ಇರುವಂತಾಗಿದೆ.

ಹೀಗಿದ್ದೂ ಈ ಪುಸ್ತಕವನ್ನು ನನ್ನಿಂದ ಬರೆಸಿ, ಸ್ವತಃ ಪರಿಶೀಲಿಸಿ, ಇದರ ಮಿತಿಗಳೊಂದಿಗೂ 'ಸಾಹಿತ್ಯ ಪಾರಿಭಾಷಿಕ ಮಾಲೆ'ಗೆಂದೇ ಪ್ರಕಟಿಸಲು ಮುಂದಾದ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಗಿರಡ್ಡಿ ಗೋವಿಂದರಾಜ ಅವರಿಗೆ ನಾನು ತುಂಬ ಆಭಾರಿಯಾಗಿದ್ದೇನೆ. ಈ ಪುಸ್ತಕದಲ್ಲಿನ ವಿದೇಶೀಯ ಹೆಸರುಗಳನ್ನು ಹೇಗೆ ಉಚ್ಚರಿಸಬೇಕು ಎಂಬ ಬಗ್ಗೆ ಸಲಹೆ ನೀಡಿ ನೆರವಾದ, ಅನೇಕ ಐರೋಪ್ಯಭಾಷೆಗಳ ನಿಕಟ ಪರಿಚಯವಿರುವ ಡಾ॥ ರೊಬೆರ್ತ್ ಜೆಯ್ದೆನ್‌ಬೊಸ್ ಅವರಿಗೂ ಈ ಮೂಲಕವಾಗಿ ನನ್ನ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

– **ಬಿ.ಎನ್. ಸುಮಿತ್ರಾಬಾಯಿ**

ಪರಿವಿಡಿ

೧. ಸ್ತ್ರೀವಾದಿ ಚಿಂತನೆ : ಹಿನ್ನೆಲೆ

ಸ್ತ್ರೀವಾದ ಅಥವಾ ಫೆಮಿನಿಸಂ ಎನ್ನುವುದು ಒಂದು ರಾಜಕೀಯ ಸಿದ್ಧಾಂತ. ಅದು ಸ್ತ್ರೀ–ಪುರುಷರ ನಡುವಿನ ಲಿಂಗಾಧರಿತ ತಾರತಮ್ಯಗಳ ಪ್ರಚಲಿತ ವ್ಯವಸ್ಥೆಯನ್ನು ಬದಲಾಯಿಸಲು ಹಕ್ಕೊತ್ತಾಯಿಸುತ್ತದೆ ಮತ್ತು ಸಾಮಾಜಿಕ, ರಾಜಕೀಯ, ಆರ್ಥಿಕ ಮುಂತಾದ ಬದುಕಿನ ನೆಲೆಗಳಲ್ಲಿ ಸ್ತ್ರೀಪುರುಷರನ್ನು ಸಮಾನವಾಗಿ ಸ್ಥಾಪಿಸಬಲ್ಲ ವ್ಯವಸ್ಥೆಗಾಗಿ ನಡೆಯುವ ಹೋರಾಟವೆ ಅದರ ಮುಖ್ಯವಾದ ಕಾರ್ಯವಿಧಾನವಾಗಿದೆ. ಸ್ತ್ರೀವಾದ ಪಶ್ಚಿಮದಿಂದ ಭಾರತಕ್ಕೆ ಆಮದಾಗಿ ಬಂದಿರುವ ಇತರ ಅನೇಕ ವಿಚಾರಧಾರೆಗಳ ಸಾಲಿಗೆ ಸೇರುತ್ತದೆ. ಆದರೆ ಅದರ ಪ್ರಾಥಮಿಕ ಗುರಿ ಕೇವಲ ಬೌದ್ಧಿಕ ಚಿಂತನಾ ಸೂತ್ರವಷ್ಟೇ ಆಗಿಲ್ಲ. ಅದು ವರ್ತಮಾನದ ಜನಜೀವನ ಕ್ರಮವನ್ನು ರೂಪಿಸಿರುವಂಥ ಸಂಸ್ಕೃತಿಯ ಸ್ವರೂಪವನ್ನು ಪರಿಶೀಲನೆಗೆ ಗುರಿಮಾಡುತ್ತ, ಜನರಲ್ಲಿ ಪ್ರಜ್ಞಾಜಾಗೃತಿಗಾಗಿ ಯತ್ನಿಸುತ್ತದೆ. ಈ ಅರ್ಥದಲ್ಲಿ ಸ್ತ್ರೀವಾದವು ಒಂದು ಪ್ರಯೋಗರೂಪಿ ಕ್ರಿಯೆ ಕೂಡ ಆಗಿರುತ್ತದೆ.

ಪಶ್ಚಿಮದಲ್ಲಿ ಸ್ತ್ರೀವಾದವು ಹುಟ್ಟಿರುವುದರ ಹಿಂದೆ ದೀರ್ಘವಾದ ಮಹಿಳಾ ಹೋರಾಟದ ಚರಿತ್ರೆಯುಂಟು. ಯುರೋಪ್ ಖಂಡದ ಜರ್ಮನಿ, ನೆದರ್‌ಲ್ಯಾಂಡ್ಸ್, ಫ್ರಾನ್ಸ್, ಇಟಲಿ, ಸ್ಕಾಂಡಿನೇವಿಯಾ ಮೊದಲಾದ ಅನೇಕ ದೇಶಗಳಲ್ಲಿ ಹಾಗೂ ಬ್ರಿಟನ್ ಮತ್ತು ಉತ್ತರ ಅಮೆರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ಆಯಾ ದೇಶದ ಸಾಂಸ್ಕೃತಿಕ ಹಿನ್ನೆಲೆಗೆ ಅನುಗುಣವಾಗಿ ಮಹಿಳೆಯರ ಸ್ಥಾನಮಾನ ಮತ್ತು ಹಕ್ಕುಗಳಿಗಾಗಿ ಮಹಿಳೆಯರೇ ಹೋರಾಟ ಮಾಡುತ್ತಾ ಬಂದಿರುವ ಚರಿತ್ರೆ ಸುಮಾರು ಇನ್ನೂರು ವರ್ಷಗಳಷ್ಟು ದೀರ್ಘವಾದದ್ದು. ಆದರೆ ಇಪ್ಪತ್ತನೆಯ ಶತಮಾನದ ಅರವತ್ತರ ಮತ್ತು ಎಪ್ಪತ್ತರ ದಶಕಗಳಲ್ಲಿ ಈ ದೇಶಗಳಲ್ಲಿ ತುಂಬ ವ್ಯಾಪಕವಾದ ಮಹಿಳಾ ಚಳವಳಿಗಳು ನಡೆದವು. ಪಶ್ಚಿಮದ ಮಹಿಳೆಯರ ಈ ಸಂಘಟಿತ ಹೋರಾಟಗಳ ಕೇಂದ್ರದಲ್ಲಿ ಬೇರೆ ಬೇರೆ ಮಹಿಳಾ ಸಮಸ್ಯೆಗಳಿದ್ದವು. ಆದರೆ ಆ ಎಲ್ಲ ಹೋರಾಟಗಳಿಗೂ ಅಂತಿಮವಾಗಿ ಮಹಿಳೆಯರ ಬಿಡುಗಡೆಯೇ ಗುರಿಯಾಗಿದ್ದುದರಿಂದ, ಪಶ್ಚಿಮದ ಮಹಿಳೆಯರ ಈ ೧೯೬೦, ೧೯೭೦ರ ದಶಕಗಳ ಹೋರಾಟಗಳನ್ನು ಒಟ್ಟಾಗಿ 'ಮಹಿಳಾ ವಿಮೋಚನಾ ಚಳವಳಿ' (Women's Liberation Movement) ಎಂದು ಗುರುತಿಸಲಾಗುತ್ತದೆ.

ವಿವಿಧ ಪಾಶ್ಚಿಮಾತ್ಯ ದೇಶಗಳ ಮಹಿಳೆಯರ ಮುಖ್ಯ ಸಮಸ್ಯೆಗಳಿಗೆ ಅನುಗುಣವಾಗಿ ಮಹಿಳಾ ವಿಮೋಚನಾ ಚಳುವಳಿಯು ಬಹುಮುಖಿ ಕಾಳಜಿಗಳನ್ನು ಹೊಂದಿತ್ತು.

೧. ಕೆಲವು ಗುಂಪಿನವರಿಗೆ ಮಹಿಳೆಯರನ್ನು ಪುರುಷರ ಲೈಂಗಿಕ ಉಪಭೋಗಕ್ಕಾಗಿಯೇ ಇರುವ ವಸ್ತುಗಳೆಂಬಂತೆ ನೋಡುವ ವ್ಯವಸ್ಥೆಯ ಬಗ್ಗೆ ತೀವ್ರ ವಿರೋಧವಿತ್ತು. ಇಂಥವರು ಅಶ್ಲೀಲತೆಯ ವಿರುದ್ಧವಾಗಿ ಹಾಗೂ ಕುಟುಂಬದ ಒಳಗೂ, ಹೊರಗೂ ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ, ಹಿಂಸೆ, ದೌರ್ಜನ್ಯಗಳ ವಿರುದ್ಧವಾಗಿ ಪ್ರತಿಭಟನೆ ನಡೆಸಿದ್ದರು.

೨. ಬೇರೆ ಕೆಲವು ಹೋರಾಟಗಾರರಿಗೆ ಮಹಿಳೆಯರಿಗೆ ಶಿಕ್ಷಣ, ಉದ್ಯೋಗ, ವೇತನ, ಅಭಿವೃದ್ಧಿ ಮತ್ತು ಸವಲತ್ತುಗಳಲ್ಲಿ ಸಮಾನ ಅವಕಾಶಗಳು ದೊರಕಬೇಕೆಂಬುದೇ ವಿಮೋಚನೆಯಾಗಿ ಕಾಣಿಸಿತ್ತು. ಇವರು ಮಾನವ ಜಗತ್ತಿನ ಅಧಿಕಾರ ಮತ್ತು ಸವಲತ್ತುಗಳು ಸ್ತ್ರೀಪುರುಷರಲ್ಲಿ ಸಮಾನವಾಗಿ ಹಂಚಿಕೆಯಾಗಬೇಕೆಂದು ಹಕ್ಕೊತ್ತಾಯಿಸುತ್ತಿದ್ದರು.

೩. ಮಹಿಳಾ ಚಳವಳಿಯಲ್ಲಿದ್ದ ಇನ್ನೊಂದು ಗುಂಪಿನವರ ಮುಖ್ಯ ಕಾಳಜಿ ಮಕ್ಕಳ ಅಭಿವೃದ್ಧಿ ಮತ್ತು ಪಾಲನೆಗಳು ಸಮಾಜದ ಜವಾಬ್ದಾರಿಯಾಗಬೇಕು, ಮದುವೆ, ತಾಯ್ತನಗಳಲ್ಲಿ ಸ್ವಾತಂತ್ರ್ಯ ಮತ್ತು ಆಯ್ಕೆಯ ಹಕ್ಕು ಮಹಿಳೆಯರಿಗೆ ಬೇಕು ಎಂಬುದಾಗಿತ್ತು.

೪. ಕೆಲವು ಮಹಿಳಾ ಹೋರಾಟಗಾರರು ರಾಜಕೀಯಾರ್ಥಿಕ ಸಾಮಾಜಿಕ ಹೋರಾಟಗಳ ಸಂದರ್ಭದಲ್ಲಿ ತಾವು ಗಳಿಸಿಕೊಂಡ ಅನುಭವದಿಂದ ಪ್ರೇರಿತರಾಗಿ ಪಾಶ್ಚಿಮಾತ್ಯ ಬೌದ್ಧಿಕ ಮತ್ತು ಸಾಂಸ್ಕೃತಿಕ ಚಿಂತನೆಯನ್ನು ಮರುಪರೀಕ್ಷೆಗೆ ಒಳಗು ಮಾಡತೊಡಗಿದರು. ಪಶ್ಚಿಮದ ತಾತ್ವಿಕ ಚಿಂತನೆಯೊಳಗೆ ಹೆಣ್ಣೆಂದರೆ ಎಂಥ ಪರಿಕಲ್ಪನೆಗಳಿವೆ? ಹೆಣ್ತನ ಮತ್ತು ಹೆಣ್ಣಿನ ಲೈಂಗಿಕತೆಯ ಸ್ವರೂಪ ಹೀಗೇ ಇರುತ್ತದೆ/ಇರುವಂಥದು ಎಂದು ಪುರುಷರೇ ನಿರ್ಧರಿಸಿ ನಿರ್ವಚನೆ ಮಾಡುತ್ತಿರುವುದರ ದುಷ್ಪರಿಣಾಮಗಳೇನು? ಇದರಿಂದ ಪಾರಾಗಲು ಮಹಿಳೆಯರೇ ತಮ್ಮನ್ನೂ, ತಮ್ಮತನವನ್ನೂ ಮರುವ್ಯಾಖ್ಯಾನಿಸಲು ಇರುವ ಸಾಧ್ಯತೆಗಳೇನು? ಎನ್ನುವಂಥ ತಾತ್ವಿಕ ವೈಚಾರಿಕ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಯತ್ನಿಸತೊಡಗಿದರು.

೫. ಪಿತೃಪ್ರಧಾನ ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಕೆಲವು ಗುಂಪಿನ ಮಹಿಳೆಯರು ತಮ್ಮ ವರ್ಗ, ಜನಾಂಗೀಯ ಕಾರಣಗಳಿಗಾಗಿಯೂ, ಮಹಿಳೆಯಾಗಿರುವುದರಿಂದಲೂ ಬಹುಮುಖ ಶೋಷಣೆಗಳಿಗೆ ಹೇಗೆ ಬಲಿಪಶುಗಳಾಗಿದ್ದಾರೆ ಎಂಬುದನ್ನು ಬೆಳಕಿಗೆ ತರುವುದು ಮತ್ತೆ ಕೆಲವರ ಮುಖ್ಯ ಕಾಳಜಿಯಾಯಿತು.

ಹೀಗೆ ಆರಂಭದಿಂದಲೂ ಸ್ತ್ರೀವಾದವು ಒಂದೇ ಸಮಸ್ಯೆಯ ಸುತ್ತ ಬೆಳೆದ ಏಕಾಕಾರದ ಏಕಸೂತ್ರದ ವಿಚಾರಧಾರೆಯಾಗಿರದೆ, ಕಾಲ, ದೇಶ, ರಾಜಕೀಯ ಶಕ್ತಿ, ಭಾಷೆ, ವರ್ಗ,

ಜನಾಂಗ, ಮುಂತಾದ ರೀತಿಗಳಲ್ಲಿ ಮಹಿಳೆಯರ ಬೇರೆ ಬೇರೆ ಪರಿಸ್ಥಿತಿಗಳಿಗೆ ತಕ್ಕುತೆ ಬೇರೆ ಬೇರೆಯಾದ ಸಮಸ್ಯೆಗಳ ತಳಹದಿಯ ಮೇಲೆ ಬೆಳೆದಂಥ ಬಹುರೂಪದ ಚಿಂತನೆಗಳನ್ನು ಒಳಗೊಂಡದ್ದಾಗಿದೆ. ಪಶ್ಚಿಮದ ಬಂಡವಾಳಶಾಹಿ ಪಿತೃಪ್ರಧಾನ ಸಂಸ್ಕೃತಿಯಲ್ಲಿ ಇದು ಹುಟ್ಟಿಬಂದಿದ್ದರಿಂದ ಪಿತೃಪ್ರಧಾನ ವ್ಯವಸ್ಥೆಯಲ್ಲಿನ ಲಿಂಗಪ್ರಭೇದ (gender) ವ್ಯವಸ್ಥೆಯ ತೀವ್ರವಾದ ವಿಮರ್ಶೆಗೇ ಇದು ಯತ್ನಿಸುತ್ತದೆ. ಅಂಥದೇ ಲಿಂಗತಾರತಮ್ಯವಿರುವ ಯಾವುದೇ ಸಮಾಜದಲ್ಲಿ ಸ್ತ್ರೀಪುರುಷರ ನಡುವಿನ ಸಂಬಂಧಗಳೆಲ್ಲ ಅಧಿಕಾರ ರಾಜಕೀಯ ವುಳ್ಳದ್ದಾಗಿರುವುದನ್ನು ಅದು ಗುರುತಿಸುತ್ತದೆ. ಮಾತ್ರವಲ್ಲ ಅಂಥ ಅಧಿಕಾರ ಸಂಬಂಧಗಳ ಬದಲಾವಣೆಗಾಗಿ ತಾತ್ವಿಕ ಹೋರಾಟ ಹೂಡುತ್ತದೆ. ಸ್ತ್ರೀವಾದದ ಇಂಥ ತಾತ್ವಿಕತೆಯ ಕೆಲವು ಮುಖ್ಯಲಕ್ಷಣಗಳನ್ನು ಹೀಗೆ ಗುರುತಿಸಬಹುದು:

೧. ಪಿತೃಪ್ರಾಧಾನ್ಯ ಎಂಬುದು ಮಹಿಳೆಯರ ಹಿತಾಸಕ್ತಿಗಳನ್ನು ಪುರುಷರ ಹಿತಾಸಕ್ತಿಗಳಿಗೆ ಅಧೀನವಾಗಿಸಿರುವ ಅಧಿಕಾರ ಸಂಬಂಧಗಳಿರುವ ವ್ಯವಸ್ಥೆಯನ್ನು ಸೂಚಿಸುತ್ತದೆ. ಒಂದೊಂದು ಸಮಾಜದಲ್ಲೂ ಈ ಅಧಿಕಾರ ಸಂಬಂಧಗಳು ಬೇರೆ ಬೇರೆ ರೀತಿಯದಾಗಿರಬಹುದು. ಹಾಗೆಯೇ ಒಂದೇ ಸಮಾಜದೊಳಗೂ ಈ ಸಂಬಂಧಗಳು ಬಹುರೂಪಗಳಲ್ಲಿ ಪ್ರಕಟವಾಗುತ್ತಿರಬಹುದು. ಉದಾಹರಣೆಗೆ, ಹೆಣ್ಣು ಗಂಡೆಂಬ ಲಿಂಗಾಧರಿತ ವ್ಯತ್ಯಾಸಗಳ ತಳಹದಿಯ ಮೇಲೆ ಸ್ತ್ರೀಪುರುಷರ ದುಡಿಮೆಯ ವಲಯಗಳು, ಕೆಲಸಗಳ ಸ್ವರೂಪಗಳು ಹಾಗೂ ಅವರ ದುಡಿಮೆಯ ಶ್ರಮಕ್ಕೆ ಬೆಲೆಕಟ್ಟುವ ಮಾನದಂಡಗಳು ಬೇರೆ ಬೇರೆಯಾಗಿರುವುದು ಇಂಥ ಅಧಿಕಾರ ಸಂಬಂಧಗಳು ಆ ಸಮಾಜದಲ್ಲಿ ಇರುವುದರ ಲಕ್ಷಣವಾಗಿರುತ್ತದೆ. ಆದರೆ ಕೃಷಿಪ್ರಧಾನ ಗ್ರಾಮೀಣ ಭಾರತದಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಪ್ರಭಾವ ಇನ್ನೂ ತೀವ್ರವಾಗಿದೆ. ಇಂಥ ಸಮಾಜದಲ್ಲಿ ಪಿತೃಪ್ರಧಾನ ಸಂಸ್ಕೃತಿಯ ಮೌಲ್ಯಗಳು ಸಮಾಜದ ಬೇರೆ ಬೇರೆ ರೂಪಗಳಲ್ಲಿ ಬೇರೆ ಬೇರೆ ಸ್ತರಗಳಲ್ಲಿ ಮೈಪಡೆದಿರುತ್ತವೆ. ಜಾತಿಪದ್ಧತಿ, ವರ್ಗಭೇದಗಳು ಮತ್ತು ಪ್ರಾಚೀನ ಮಾತೃಸಂಸ್ಕೃತಿಯ ಪಳೆಯುಳಿಕೆಗಳು, ನಮ್ಮ ಸಮಾಜದಲ್ಲಿನ ಲಿಂಗತಾರ ತಮ್ಯದ ಸ್ವರೂಪವನ್ನು ಹೆಚ್ಚು ಸಂಕೀರ್ಣವಾಗಿಸುತ್ತವೆ. ಹಿರಿತನಕ್ಕೆ ಅಧೀನವಾಗಿರುವುದು ಮತ್ತು ಒಟ್ಟು ಕುಟುಂಬ ಲಕ್ಷಣಗಳೂ ಇಲ್ಲಿ ಸ್ತ್ರೀ-ಪುರುಷ ಸಂಬಂಧಗಳಿಗೆ ಬೇರೆ ಬೇರೆ ಆಯಾಮಗಳನ್ನು ಸೃಷ್ಟಿಸುತ್ತವೆ.

ಇಂಥ ಶ್ರೇಣೀಕೃತ ವ್ಯವಸ್ಥೆಯಲ್ಲಿ ಪುರುಷನ ಶ್ರೇಷ್ಠತೆ. ಪುರುಷನ ಪರಮಾಧಿಕಾರದ ಮೂಲಕ ಸೃಷ್ಟಿಯಾಗಿರುವ ಎಲ್ಲ ಬಗೆಯ ವಿಚಾರಧಾರೆಗಳು. ಜ್ಞಾನಪ್ರಕಾರಗಳು. ಕಲೆ. ಸಾಹಿತ್ಯಗಳುತರಹ ಸಾಂಸ್ಕೃತಿಕ ಅಭಿವ್ಯಕ್ತಿಗಳೂ ಪುರುಷಕೇಂದ್ರಿತ ದೃಷ್ಟಿಕೋನದಿಂದಲೇ ರೂಪುಗೊಂಡಿದ್ದು ಅದನ್ನೇ ಎತ್ತಿಹಿಡಿಯುತ್ತಿರುತ್ತವೆಂದು ಸ್ತ್ರೀವಾದವು ತೋರಿಸಿಕೊಡುತ್ತದೆ. ಆಧುನಿಕ ಕಾಲದಲ್ಲಿ ಚರಿತ್ರೆ. ಮಾನವಶಾಸ್ತ್ರ. ಜನಾಂಗಶಾಸ್ತ್ರ. ಸಮಾಜಶಾಸ್ತ್ರ. ಜೀವಶಾಸ್ತ್ರ. ಮನೋವಿಜ್ಞಾನದ ಕ್ಷೇತ್ರಗಳಲ್ಲಿ ನಡೆದಿರುವ ಸಂಶೋಧನೆಗಳು ಮನುಷ್ಯರ ಬಗ್ಗೆ ಕಲಿಸುವ

ವಾಸ್ತವಾಂಶಗಳು ಬೇರೆ. ಆದರೆ ಪುರುಷಕೇಂದ್ರಿತ ಸಂಸ್ಕೃತಿಯು ಹುಟ್ಟುಹಾಕಿ ಬೆಳೆಸಿರುವ, ರೂಢಿಗತವಾದ ನಂಬಿಕೆಗಳು ಮತ್ತು ಮೌಲ್ಯಗಳು, ಆಚರಣೆಗಳು ಇಂದಿಗೂ ಮಹಿಳೆಯರ ಬದುಕು ಮತ್ತು ವ್ಯಕ್ತಿತ್ವಗಳು ಹೀಗೇ ಇರಬೇಕೆಂದು ರೂಪಿಸುತ್ತಿರುತ್ತವೆ. ಈ ಬಗೆಯ ಸ್ಥಾಪಿತ ಮೌಲ್ಯಗಳು ನಂಬಿಕೆಗಳು, ಆಚರಣೆಗಳನ್ನು ವೈಜ್ಞಾನಿಕ ವಾಸ್ತವಾಂಶಗಳ ಬೆಳಕಿನಲ್ಲಿ ಒರೆಹಚ್ಚಿ, ಅವುಗಳಲ್ಲಿನ ಮಿಥ್ಯಾಂಶಗಳನ್ನು ಸ್ತ್ರೀವಾದವು ಪ್ರಶ್ನಿಸುತ್ತದೆ. ಉದಾಹರಣೆಗೆ ಹೆಣ್ಣು ಅಬಲೆ, ದೈಹಿಕವಾಗಿ ಪುರುಷರಿಗಿಂತ ದುರ್ಬಲಳು, ಆದ್ದರಿಂದ ಪುರುಷನ ರಕ್ಷಣೆ/ವಶದಲ್ಲಿ ಆಕೆ ಇರಬೇಕು ಎನ್ನುತ್ತದೆ ಭಾರತೀಯ ಧಾರ್ಮಿಕ ನಂಬಿಕೆ. ಇದು ನಮ್ಮ ನಾಗರಿಕತೆಯ ಯಾವುದೋ ಒಂದು ನಿರ್ದಿಷ್ಟ ಹಂತದಲ್ಲಿನ ಸ್ತ್ರೀ–ಪುರುಷ ಸಾಮರ್ಥ್ಯಗಳ ಕೆಲವು ಮಗ್ಗುಲನ್ನು ಮಾತ್ರ ಸೂಚಿಸಬಲ್ಲುದೇ ಹೊರತು ಎಲ್ಲ ಕಾಲಕ್ಕೂ, ಎಲ್ಲ ಜನಕ್ಕೂ ಇದು ಅನ್ವಯವಾಗಲಾರದು. ಬುಡಕಟ್ಟು ಜನಾಂಗಗಳಲ್ಲಿ ಗ್ರಾಮೀಣ ದುಡಿಮೆಗಾರ ಸ್ತರಗಳಲ್ಲಿ ಮಹಿಳೆಯರ ದೈಹಿಕಶಕ್ತಿ ಪುರುಷರದಕ್ಕಿಂತ ಹೆಚ್ಚಲ್ಲದಿದ್ದರೆ, ಕಡಿಮೆಯದೂ ಆಗಿರುವುದಿಲ್ಲ. ವಸ್ತುಸ್ಥಿತಿ ಹೀಗಿದ್ದೂ ಪಿತೃಪ್ರಧಾನ ವ್ಯವಸ್ಥೆ ಮಾತ್ರ ತದ್ವಿರುದ್ಧವಾದುದನ್ನೇ ನಂಬಿಸಲು ಯತ್ನಿಸುತ್ತಿರುತ್ತದೆ ಎಂಬುದರತ್ತ ಸ್ತ್ರೀವಾದವು ಬೆಳಕು ಚೆಲ್ಲಲು ಯತ್ನಿಸುತ್ತದೆ.

೨. ಜೀವಶಾಸ್ತ್ರೀಯ ಲೈಂಗಿಕ ವ್ಯತ್ಯಾಸಗಳಿಗೆ ಸಾಮಾಜಿಕವಾಗಿ ಎಂಥ ಅರ್ಥವನ್ನು ನೀಡಲಾಗುತ್ತದೆ ಎಂಬುದರ ಮೇಲೆ ಪಿತೃಪ್ರಧಾನತೆಯ ಅಧಿಕಾರವಿರುತ್ತದೆ. ಈ ವ್ಯವಸ್ಥೆಯಲ್ಲಿ ಮಹಿಳೆಯರ ಸ್ವಭಾವಗಳನ್ನೂ, ಅವರ ಸಾಮಾಜಿಕ ಪಾತ್ರಗಳನ್ನೂ ನಿರ್ಧರಿಸುತ್ತಿರುವ ಸಂಗತಿಗಳು ಪುರುಷರನ್ನೇ ಮಾನದಂಡವಾಗಿಟ್ಟುಕೊಂಡಿರುತ್ತವೆ. ಉದಾಹರಣೆಗೆ, ದೇವರು, ವ್ಯಕ್ತಿ ಮುಂತಾದ ಶಬ್ದಗಳು ಮೂಲತಃ ಪುರುಷವಾಚಕಗಳು. ಆದರೆ ಸಮಾಜದ ಮಾನವರೆಲ್ಲರನ್ನೂ ಅವರ ಎಲ್ಲಾ ಬಗೆಯ ದೈವಕಲ್ಪನೆಗಳನ್ನೂ, ಬಿಡಿ ವ್ಯಕ್ತಿಗಳನ್ನೂ ಸಾಮಾನ್ಯ ರೀತಿಯಿಂದ ಸೂಚಿಸುತ್ತವೆ ಎಂಬಂತೆ ಇವುಗಳ ಬಳಕೆಯಿರುತ್ತದೆ. ಇಂಥ ಪದಗಳ ಒಳಗೇ ಸ್ತ್ರೀಯೂ ಸೇರಿರುತ್ತಾಳೆ ಎಂಬಂತೆಯೇ ಒಂದು ಗ್ರಹಿಕೆ ಕೆಲಸ ಮಾಡುತ್ತಿರುತ್ತದೆ. ಶಬ್ದಗಳು ಒಂದು ಭಾಷೆಯಲ್ಲಿ ರೂಪುಗೊಂಡಿರುವ ರೀತಿಗೂ, ಆ ಭಾಷೆಯನ್ನು ಸೃಷ್ಟಿಸಿದ ಜನಾಂಗದ ಸಾಂಸ್ಕೃತಿಕ ಚಿಂತನೆಯ ಸ್ವರೂಪಕ್ಕೂ ನಿಕಟ ಸಂಬಂಧ ಇರುವುದರತ್ತ ಸ್ತ್ರೀವಾದವು ಗಮನ ಸೆಳೆಯುತ್ತದೆ. ಮಹಿಳೆಯ ಗೈರುಹಾಜರಿಯನ್ನು ತಪ್ಪಿಸಿ, ಆಕೆಯ ಸ್ವತಂತ್ರ ಅಸ್ತಿತ್ವ, ಅಸ್ಮಿತೆಗಳನ್ನು ಸ್ಥಾಪಿಸಬಲ್ಲಂಥ ಭಾಷಾ ರಚನೆಗಾಗಿ ಶ್ರಮಿಸುತ್ತದೆ.

೩. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಪುರುಷರು ತಮ್ಮ ಹಿತಾಸಕ್ತಿಗಳಿಗೆ ಮಾತ್ರ ಮೀಸಲಾಗಿಟ್ಟುಕೊಂಡ ಹಕ್ಕುಗಳು, ಸವಲತ್ತುಗಳೊಳಗೆ ಮಹಿಳೆಯರೂ ಪ್ರವೇಶ ಪಡೆಯಬೇಕೆಂದು ಹೋರಾಡುತ್ತಾ ಬಂದ ದೀರ್ಘ ಪ್ರಯತ್ನಗಳ ಫಲವಾಗಿ ಅಷ್ಟಿಷ್ಟು ಸಾಮಾಜಿಕ ಹಾಗೂ ರಾಜಕೀಯ ಲಾಭಗಳು ಮಹಿಳೆಯರಿಗೆ ಸಿಗುವಂತಾಗಿದೆ. ಆದರೂ ಶಿಕ್ಷಣ, ಮತದಾನ, ಸಾಮಾಜಿಕ ಜೀವನ ಮತ್ತು ದುಡಿಮೆಯ ಮಾರುಕಟ್ಟೆಗಳಲ್ಲಿ ಮಹಿಳೆಯರ

ಪ್ರವೇಶ ಎಂಬುದು ಬಹಳಷ್ಟು ಆರ್ಥಿಕವಾಗಿ ಮುಂದುವರೆದ ದೇಶಗಳಲ್ಲಿ ಕೂಡ ಸುಲಭವಲ್ಲ. ಎಲ್ಲೆಲ್ಲಿ ಇಂಥ ಸವಲತ್ತುಗಳು ಮಹಿಳೆಯರಿಗೆ ದೊರೆತಿವೆಯೋ ಅಂಥ ಕಡೆಗಳಲ್ಲಿಯೂ ಪುರುಷರ ಬೇರೆ ಬೇರೆ ಅವಶ್ಯಕತೆಗಳ ಪೂರೈಕೆಗಾಗಿ ವಿನ್ಯಾಸಗೊಂಡಿರುವ ಷರತ್ತುಗಳಿಗೆ ಮಹಿಳೆಯರು ಬದ್ಧರಾಗಿರಬೇಕಾಗಿದೆ. ಉದಾಹರಣೆಗೆ, ಓದಿದ ಹುಡುಗಿಯನ್ನೇ ಮದುವೆಯಾಗಬಯಸುವುದು, ಹುಡುಗಿ ಕೆಲಸದಲ್ಲಿ ಇರಬೇಕು ಎಂಬುದು, ದುಡಿಮೆಯಲ್ಲಿ ಮಹಿಳೆಯರ ಸಾಧನೆ ಒಂದು ಸಂಸ್ಥೆಗೆ ಎಷ್ಟರ ಮಟ್ಟಿಗೆ ಬೇಕು ಎಂಬುದೆಲ್ಲವೂ ಪುರುಷರಿಗಾಗಿ, ಪುರುಷರಿಂದಲೇ ನಿರ್ಧರಿತವಾಗುತ್ತಿರುತ್ತವೆ. ಹಿಂದುಳಿದ ರಾಷ್ಟ್ರವೊಂದರಲ್ಲಿ ಕರ್ನಾಟಕದಂಥ ಪ್ರಾಂತದಲ್ಲಿ 'ಮಹಿಳೆಯರ ಆರ್ಥಿಕ ಪ್ರಗತಿ' ಎಂದು ಇಂದು ಗುರುತಿಸಲ್ಪಡುತ್ತಿರುವ ಬಹುಪಾಲು ಬೆಳವಣಿಗೆಗಳ ಹಿಂದೆ ಪುರುಷರ ಆರ್ಥಿಕ ಅವಶ್ಯಕತೆಗಳೇ ಕೆಲಸ ಮಾಡುತ್ತಿರುವುದು ಒಂದು ವಾಸ್ತವಾಂಶ. ಅಂದರೆ ಪುರುಷರೂಪಿತವಾದ ಮಾರುಕಟ್ಟೆ ವ್ಯವಸ್ಥೆಗಳೊಳಗೇ ಇವರ ಇರವು ಅನಿವಾರ್ಯವಾಗಿ ಇವರನ್ನು ತಮ್ಮ ಮನೆ, ಕುಟುಂಬಗಳ ಪರಂಪರಾಗತ ಪಾತ್ರಗಳಿಂದ ಹೊರಕ್ಕೆ ಕರೆತಂದಿದೆ.

ಆದರೆ ಉದ್ಯೋಗದ ಮಾರುಕಟ್ಟೆಯ ವ್ಯವಸ್ಥೆಯನ್ನು ಕಟ್ಟಿ ಬೆಳೆಸಿರುವ ಪುರುಷರಿಗೆ ತಾಯ್ತನದ ಹೊರೆಯಾಗಲಿ, ಮಕ್ಕಳ ಪಾಲನೆ ಪೋಷಣೆಗಳ ಅನಿವಾರ್ಯ ಜವಾಬ್ದಾರಿಗಳಾಗಲಿ, ಇರುವುದಿಲ್ಲ. ಕತ್ತು, ಬೆನ್ನು, ಸೊಂಟ ಮುರಿಯುವಂಥ ಗೃಹಕೃತ್ಯಗಳ ಸಂಕೋಲೆಯೂ ಅವರಿಗಿಲ್ಲ. ಹೀಗೆ ಸರ್ವತಂತ್ರ ಸ್ವತಂತ್ರವಾದ ಸ್ಥಾನದಲ್ಲಿದ್ದು ದಕ್ಷತೆ, ದುಡಿವ ಸಾಮರ್ಥ್ಯ, ವೈಜ್ಞಾನಿಕ ಮತ್ತು ತಾಂತ್ರಿಕ ತಿಳುವಳಿಕೆಗಳ ಮೇಲೆ ಶ್ರೇಷ್ಠತೆಯ ಚೌಕಟ್ಟುಗಳನ್ನು ಅವರು ಕಟ್ಟಿಕೊಂಡಿರುತ್ತಾರೆ. ಇಂತಹ ಚೌಕಟ್ಟಿನೊಳಕ್ಕೆ ಪ್ರವೇಶ ಪಡೆವ ಮಹಿಳೆಯರು ಒಂದು ಕಡೆ ತಮ್ಮ ಸ್ತ್ರೀತ್ವದ ಫಲವಾದ ಕೌಟುಂಬಿಕ ಜವಾಬ್ದಾರಿಗಳಿಗೂ ಮತ್ತೊಂದು ಕಡೆ ತಮ್ಮ ದುಡಿಮೆಯ ಜಗತ್ತಿನ 'ವಸ್ತುನಿಷ್ಠ'ವೆನಿಸಿಕೊಂಡ ನಿಷ್ಠುರವಾದ ನಿರೀಕ್ಷೆಗಳಿಗೂ ಬದ್ಧರಾಗುವ ಪ್ರಯತ್ನದಲ್ಲಿ ಎರಡೂ ದಿಕ್ಕುಗಳಲ್ಲಿ ಹೆಣಗಾಡುತ್ತಿರುತ್ತಾರೆ. ಇಲ್ಲವೆ, ಪರಿಸ್ಥಿತಿಗಳೊಂದಿಗೆ ವ್ಯಾವಹಾರಿಕವಾದ ವೈಯಕ್ತಿಕ ಹೊಂದಾಣಿಕೆಗಳನ್ನು ಮಾಡಿಕೊಳ್ಳುತ್ತಾರೆ. ಮಹಿಳಾ ದಕ್ಷತೆಯ ಮಾಪನದಲ್ಲಿ ಸ್ತ್ರೀವಿಶಿಷ್ಟ ಸಂದರ್ಭಗಳ ಅರಿವು ಅವಶ್ಯಕ. ಹಾಗೆಯೇ ಪ್ರಗತಿ, ಸಾಧನೆ ಮುಂತಾದ ಆಧುನಿಕ ಪರಿಕಲ್ಪನೆಗಳೆಲ್ಲ ಮಾನವೀಕರಣಕ್ಕೆ ಒಳಗಾಗಬೇಕಾಗುತ್ತದೆ ಎಂಬುದು ಸ್ತ್ರೀವಾದದ ಒಂದು ನಿಲುವು.

೬. ಪ್ರಕೃತಿ ಹೇಳಿದ್ದರೂ ಲಿಂಗಾಧರಿತ ಶ್ರಮವಿಭಜನೆಯ ಇಂಥ ವ್ಯವಸ್ಥೆಯ ಬಗ್ಗೆ ಇಡೀ ಮಾನವಕುಲವು ಪುನರಾಲೋಚನೆ ಮಾಡಬೇಕಾಗಿದೆ ಎಂಬ ಬಗ್ಗೆ ಸಾಮಾನ್ಯವಾಗಿ ಜನರಲ್ಲಿ ಅಸಮ್ಮತಿಯೇ ವ್ಯಕ್ತವಾಗುತ್ತಿರುವುದನ್ನು ಕಾಣಬಹುದು. ಬದಲಾವಣೆಗಳನ್ನು ನಿರಾಕರಿಸುವ ಅಥವಾ ಅವುಗಳನ್ನು ಯೋಚಿಸಲೂ ಒಪ್ಪದ ಜನರ ಇಂಥ ಅಸಮ್ಮತಿಯ ತಳದಲ್ಲಿ ಸ್ತ್ರೀಯರು ನೈಸರ್ಗಿಕವಾಗಿ ಪುರುಷರಿಗಿಂತ ಭಿನ್ನರಾಗಿದ್ದು, ಭಿನ್ನರೀತಿಯ ಸಾಮಾಜಿಕ

ಕಾರ್ಯಗಳಿಗೇ ಹೆಚ್ಚು ಸಮರ್ಥರಿರುತ್ತಾರೆ ಎಂಬ ಗ್ರಹಿಕೆಯು ಕೆಲಸ ಮಾಡುತ್ತಿರುತ್ತದೆ. ಅಂದರೆ ಮಹಿಳೆ ಕುಟುಂಬದೊಳಗೇ ಹೆಚ್ಚು ಹೊಂದುತ್ತಾಳೆಂಬ ಪಿತೃಪ್ರಧಾನ ವ್ಯವಸ್ಥೆಯ ಗ್ರಹಿಕೆಯೇ ಇಂಥ ಜನರು ಒಪ್ಪಿರುವ ಸ್ತ್ರೀಕುರಿತ ಮಾನದಂಡವೂ ಆಗಿರುತ್ತದೆ. ಆಧುನಿಕ ಸಮಾಜಗಳಲ್ಲೂ ಆಡಳಿತ ವ್ಯವಸ್ಥೆ, ಕಾನೂನು ವ್ಯವಸ್ಥೆಗಳಲ್ಲೂ ಈ ನಂಬಿಕೆಗೆ ಅನುಗುಣವಾಗಿ ತರತಮದ ನೀತಿಗಳು ರೂಪುಗೊಂಡಿರುತ್ತವೆ. ಉದಾಹರಣೆಗೆ, ತಾಯಿಗೆ ಮಾತ್ರ ಹೆರಿಗೆ ರಜೆ ನೀಡಿ, ತಂದೆಗೆ ಆ ಸಂಬಂಧದ ಯಾವ ಬಿಡುವನ್ನೂ ಕೊಡಲೊಪ್ಪದ ಉದ್ಯೋಗ ನೀತಿಯಿದ್ದಾಗ, ತಮ್ಮ ಮಗುವಿನ ಪಾಲನೆ, ಪೋಷಣೆಗಳಲ್ಲಿ ಪಾಲ್ಗೊಳ್ಳುವುದು ಪುರುಷರಿಗೆ ಅಸಾಧ್ಯವಾಗಬಹುದು. ಉದ್ಯೋಗ ವ್ಯವಸ್ಥೆ, ವೃತ್ತಿಗಳ ರಚನೆಗಳಲ್ಲಿ ತಾಯಿ–ತಂದೆಯರ ಜವಾಬ್ದಾರಿ ಎನ್ನುವಂಥ ಮಾನವೀಯವೂ ಸಾಮಾಜಿಕವೂ ಅದ ಅವಶ್ಯಕತೆಯ ಬಗ್ಗೆ ಯಾವ ಅರಿವೂ ಇರುವುದಿಲ್ಲ. ಪಶ್ಚಿಮದ ಹಲವು ಉದಾರವಾದಿ ಪ್ರಜಾಪ್ರಭುತ್ವವಾದಿ ದೇಶಗಳಲ್ಲೂ ಇಂಥ ಸ್ಥಿತಿಯಿದೆ. ಇನ್ನು ಭಾರತದಲ್ಲಾದರೋ ಹೆರಿಗೆಯಿಂದ ಹಿಡಿದು ಮಗುವಿನ ಸಮಸ್ತ ರಕ್ಷಣೆಗೂ ಮಹಿಳೆಯರೇ ಜವಾಬ್ದಾರರೆಂಬುದೇ ಪರಂಪರಾಗತ ಜೀವನ ಕ್ರಮ. ಇಂಥ ಪರಿಸರದಲ್ಲಿ ಗಂಡಸರು ತಂದೆತನದ ಜವಾಬ್ದಾರಿಗಳಿಂದ ಸುರಕ್ಷಿತವಾಗಿ ಪಲಾಯನ ಮಾಡಲು ವ್ಯವಸ್ಥೆಯೇ ಅವಕಾಶಗಳನ್ನು ಒದಗಿಸಿಕೊಡುತ್ತದೆ. ಅಷ್ಟೇಕೆ, ಎಷ್ಟೋ ಸಂದರ್ಭಗಳಲ್ಲಿ ಸಂತಾನ ಸಂಗೋಪನೆಯ ವಲಯದೊಳಗೆ ಗಂಡಸಿಗೆ ಪ್ರವೇಶಾವಕಾಶ ಕೂಡ ನಿರಾಕೃತವಾಗುವುದೂ ಇದೆ.

ಪುರುಷನಿಯಂತ್ರಿತ 'ಹೊರ ಜಗತ್ತು' ಮಹಿಳೆಯರ 'ಒಳ ಜಗತ್ತು'ಗಳ ನಡುವಿನ ಈ ಅಗಾಧವಾದ ಕಂದರಗಳ ಫಲವಾಗಿ ಸ್ತ್ರೀಪುರುಷರಿಬ್ಬರ ವ್ಯಕ್ತಿತ್ವದ ಬೆಳವಣಿಗೆಗಳು ಸಮಗ್ರವಾಗಿ ಆಗಲಾರದೆ ಹೋಗುತ್ತದೆ. ಇದರಿಂದ ಸಮಾಜದ ಸಮಗ್ರ ವಿಕಾಸ ಮತ್ತು ಪ್ರಗತಿಗಳೂ ಕುಂಠಿತವಾಗುತ್ತವೆಂಬುದನ್ನು ಸ್ತ್ರೀವಾದವು ತೋರಿಸಿಕೊಡಲು ಯತ್ನಿಸುತ್ತದೆ.

೫. ಮಹಿಳೆಯರು ಪುರುಷರಿಗಿಂತ ಭಿನ್ನವಾದ ಪಾತ್ರಗಳನ್ನು ನಿರ್ವಹಿಸಲು ಸೃಷ್ಟಿಯಾಗಿದ್ದಾರೆ ಎಂಬ ಗ್ರಹಿಕೆಯು ಸ್ತ್ರೀ ಪುರುಷರಿಬ್ಬರೂ ಸಮಾನ ಶ್ರೇಷ್ಠರೆಂದೇನೂ ಭಾವಿಸಲಾರದು. ಬದಲಾಗಿ ಹೆಂಗಸರು ನೈಸರ್ಗಿಕವಾಗಿ ಪತ್ನಿ ಮತ್ತು ತಾಯಿಯ ಪಾತ್ರಕ್ಕೆಂದೇ ಇದ್ದಾರೆಂಬುದು ಅಲ್ಲಿ ಮುಖ್ಯ. ಆದ್ದರಿಂದಲೇ ಒಬ್ಬ ಒಳ್ಳೆಯ ಪತ್ನಿ ಹಾಗೂ ತಾಯಿ ಎನ್ನಿಸಿಕೊಳ್ಳುವುದು ಹೆಣ್ಣಿನ ಉಳಿದೆಲ್ಲ ಬಗೆಯ ಸಾಧನೆಗಳಿಗಿಂತ ಮುಖ್ಯವೆಂಬಂತೆ ಪ್ರತಿಪಾದಿಸಲಾಗುತ್ತದೆ. ಪುರುಷರಿಗಷ್ಟೇ ಮೀಸಲೆನಿಸಿದ್ದ ಕಾರ್ಯಕ್ಷೇತ್ರಗಳಲ್ಲಿ ಹೊಕ್ಕು ಗಮನಾರ್ಹ ಸಾಧನೆಗಳನ್ನು ಮಾಡಿದ ಮಹಿಳೆಯರ ಬಗ್ಗೆ ಕೂಡ ಅವರು ಪತ್ನಿ ಮತ್ತು ತಾಯಿಯ ತಮ್ಮ 'ಸಹಜ' ಪಾತ್ರಗಳನ್ನು ಮರೆತಿಲ್ಲ ಎಂಬುದನ್ನು ಬಿಂಬಿಸಲು ನಮ್ಮ ಸಮೂಹ ಮಾಧ್ಯಮಗಳು ಹೇಗೆ ಪ್ರಯತ್ನಿಸುತ್ತವೆ ಎಂಬುದು ಇಂಥ ಧೋರಣೆಗೆ ಒಂದು ನಿದರ್ಶನ.

ವ್ಯಕ್ತಿಗಳು ಆ ಎರಡೂ ಬಗೆಯ ಪಾತ್ರದಕ್ಷತೆ ಸಾಧಿಸಿರುವುದು ಬೇರೆಯ ಸಂಗತಿ. ಆದರೆ 'ಒಳ್ಳೆಯ' ಪತ್ನಿ ಅಥವಾ ತಾಯಿ ಆಗಿರುವುದು ಎಂದರೆ ವ್ಯವಸ್ಥೆಯು ನಿರೀಕ್ಷಿಸುವ ಕೆಲವು ನಿರ್ದಿಷ್ಟ ಗುಣಗಳನ್ನು ಆ ಮಹಿಳೆಯರು ಹೊಂದಿರಬೇಕು. ಆ ಗುಣಗಳನ್ನೇ ಹೆಣ್ಣಿನ ನಿಸರ್ಗದತ್ತವಾದ ಗುಣಗಳೆಂದು ಆರೋಪಿಸಿ, ಸ್ತ್ರೀಯಾದವರಲ್ಲಿ ಎಲ್ಲರಲ್ಲೂ ಅವು ಸಹಜವಾಗಿ ಇರುತ್ತವೆ ಅಥವಾ ಇರಲೇಬೇಕು ಎಂದು ಎತ್ತಿ ಹಿಡಿಯಲಾಗುತ್ತದೆ. ಸ್ತ್ರೀಸ್ವಭಾವ ನಾರೀಗುಣ (Femininity) ಎಂದು ಎತ್ತಿಹಿಡಿಯಲ್ಪಡುವ ಗುಣಗಳಾದ ತಾಳ್ಮೆ, ಮಾರ್ದವತೆ, ಕ್ಷಮೆ, ಭಾವನಶೀಲತೆ, ಅಂತಃಸ್ಫೂರ್ತಿ, ನಿಸ್ವಾರ್ಥ, ತ್ಯಾಗಬುದ್ಧಿ ಮುಂತಾದವು ನಮ್ಮ ಸಂಸ್ಕೃತಿಯಲ್ಲಿ ಸ್ತ್ರೀತ್ವದ ಆದರ್ಶ ಲಕ್ಷಣಗಳೆಂದು ಕರೆಸಿಕೊಳ್ಳುತ್ತವೆ. ಹೆಣ್ಣಿನ ವ್ಯಕ್ತಿತ್ವವನ್ನು ಇಂಥ ಗುಣಗಳೊಂದಿಗೆ ಸಮೀಕರಿಸಿ, ಇವುಗಳನ್ನೇ ಮೌಲ್ಯಗಳೆಂದು ಬಿಂಬಿಸಿ, ಬಲಗೊಳಿಸುವ ಪರಿಸರದಲ್ಲಿ ಈ ಚೌಕಟ್ಟಿನಲ್ಲಿ ಸೇರಿಕೊಳ್ಳಲಾರದ ಭಿನ್ನಗುಣಗಳೊಂದಿಗೆ ಸಮೀಕರಿಸಿ, ಇವುಗಳನ್ನೇ ಮೌಲ್ಯಗಳೆಂದು ಬಿಂಬಿಸಿ, ಬಲಗೊಳಿಸುವ ಪರಿಸರದಲ್ಲಿ ಈ ಚೌಕಟ್ಟಿನಲ್ಲಿ ಸೇರಿಕೊಳ್ಳಲಾರದ ಭಿನ್ನ ಗುಣಗಳ ಮಹಿಳೆಯರನ್ನು ಅವರ ಭಿನ್ನ ಸ್ವಭಾವಕ್ಕಾಗಿಯೇ ತಿರಸ್ಕಾರ, ಅವಹೇಳನಗಳಿಂದ ನೋಡಲಾಗುತ್ತದೆ. ಸ್ತ್ರೀತ್ವದ ಬಗೆಗಿರುವ ಇಂಥ ಕಲ್ಪನೆಗಳು ಸ್ತ್ರೀಯರ ದುಡಿಮೆಯ ಕ್ಷೇತ್ರ, ವ್ಯಕ್ತಿ ಸಾಧ್ಯತೆಗಳನ್ನೂ ನಿರ್ಧರಿಸುತ್ತಿರುತ್ತವೆ. ಸೇವೆಯೇ ಪ್ರಧಾನವಾದ ಉದ್ಯಮಗಳಲ್ಲಿ ಮತ್ತು ಸಂರಕ್ಷಕ ಭಾವನೆಯನ್ನು ಬಯಸುವ ವೃತ್ತಿಗಳಿಗೆ ಮಹಿಳೆಯರೇ ಸೂಕ್ತ ಎಂದು ಭಾವಿಸಲಾಗುವುದು ಇದಕ್ಕೆ ಉದಾಹರಣೆ.

ಇದಕ್ಕೆ ವಿರುದ್ಧವಾಗಿ ಆಕ್ರಮಣಶೀಲತೆ, ಸ್ಪರ್ಧೆಗಳನ್ನು ಅಪೇಕ್ಷಿಸುವಂಥ ಅಧಿಕಾರ ಕ್ಷೇತ್ರಗಳು, ನಿರ್ಧಾರ ಕೈಗೊಳ್ಳಬೇಕಾಗುವ ಕಾರ್ಯವಲಯಗಳು, ರಾಜಕೀಯದಂಥ ಕ್ಷೇತ್ರಗಳನ್ನು ಪುರುಷರಿಗೆ ಸಹಜವೆಂದು ಭಾವಿಸಲಾಗುತ್ತದೆ. ಮಹಿಳೆಯರೂ ಈ ಕ್ಷೇತ್ರಗಳಲ್ಲಿ ಪ್ರವೇಶಿಸಿದ್ದರೂ ಅವರಿಂದಲೂ ಅದೇ ಬಗೆಯ 'ಪೌರುಷಮಯ' ಗುಣಗಳನ್ನೇ ನಿರೀಕ್ಷಿಸಲಾಗುತ್ತದೆ. ಆದರೆ ಹಾಗೆ ಒಂದು ವೇಳೆ ಅವರು 'ಪುರುಷರ' ಹಾಗೇ ದಕ್ಷತೆ ತೋರಿದರೂ ಅವೆಂದೂ 'ಸ್ತ್ರೀಸಹಜ' ಗುಣಗಳೆಂದು ಅನ್ನಿಸಿಕೊಳ್ಳುವುದಿಲ್ಲ. 'ಗಂಡು ಹೆಂಗಸು' ಎಂಬ ಮಾದರಿ ಇದಕ್ಕೆ ನಿದರ್ಶನ.

ಈ ರೀತಿಯಲ್ಲಿ ಸಂಸ್ಕೃತಿಯ ವಿಭಿನ್ನ ಗುಣಗಳ ಪಟ್ಟಿಗಳಲ್ಲಿ ಸ್ತ್ರೀ ಪುರುಷರ ಸ್ವಭಾವಗಳನ್ನು ವಿಂಗಡಿಸುವುದು ನಿಜಸ್ಥಿತಿಗೆ ವಿರುದ್ಧವಾದ, ಮೇಲಿನಿಂದ ಹೇರಲ್ಪಟ್ಟ ಮೌಲ್ಯಕಲ್ಪನೆಗಳನ್ನೇ ಮನುಷ್ಯರಲ್ಲಿ ಬಿತ್ತಿಬೆಳೆಸುತ್ತದೆ. ಇದರಿಂದ ಈ ನಿರೀಕ್ಷೆಗಳನ್ನು ತಲುಪಲಾಗದ ಸ್ಥಿತಿಗಳು ಸ್ತ್ರೀಯರಿಗೂ, ಪುರುಷರಿಗೂ ಮಾನಸಿಕ ಕ್ಷೋಭೆಗಳನ್ನು, ಸಾಮಾಜಿಕ ಅವಮಾನಗಳನ್ನು ಸೃಷ್ಟಿಸುತ್ತಿರುವುದರತ್ತ ಸ್ತ್ರೀವಾದವು ಬೆಳಕು ಬೀರಿದೆ.

೬. ಪಿತೃಪ್ರಧಾನ ವ್ಯವಸ್ಥೆಯೊಳಗಿನ ಸಂಬಂಧಗಳು ವ್ಯಕ್ತಿಗಳ ಇಷ್ಟಾನಿಷ್ಟಗಳಿಂದಾಗಲೀ ಅಥವಾ ವ್ಯಕ್ತಿಗಳಾಗಿ ಸ್ತ್ರೀಯರಿಗೆ ಇಲ್ಲವೆ ಪುರುಷರಿಗೆ ಒಳ್ಳೆಯದಾಗಿ/ಕೆಟ್ಟದಾಗಿ ತೋರುತ್ತವೆ ಎಂಬುದರಿಂದ ಆಗಲಿ ನಿರ್ಧಾರಿತವಾಗುವಂಥದ್ದಲ್ಲ. ಆ ಸಂಬಂಧಗಳು ಸಮಾಜದ ವಿವಿಧ

ಸಂಸ್ಥೆಗಳೊಳಗೆ ಹಾಗೂ ಸಾಮಾಜಿಕ ಆಚರಣೆಗಳೊಳಗೆ ಮೈಗೂಡಿ ಕೊಂಡಿರುತ್ತವೆ. ಅಂದರೆ ಅವುಗಳು 'ಸಂರಚಿತ' (structured) ಸಂಬಂಧಗಳು. ಈ ಸಂಬಂಧಗಳು ಬಿಡಿ ವ್ಯಕ್ತಿಗಳು ಬಯಸುವಷ್ಟರಿಂದಲೇ ಇಲ್ಲವಾಗಲಾರವು. ಮಾತ್ರವಲ್ಲ, ಹಲವು ಸಂದರ್ಭಗಳಲ್ಲಿ ಬಿಡಿವ್ಯಕ್ತಿಗಳೂ ಇಂಥ ಶೋಷಣಾತ್ಮಕ ಸಂಬಂಧಗಳನ್ನು ಉಳಿಸಿಡುವ ಏಜೆಂಟರೇ ಆಗಿರುತ್ತಾರೆ. ಉದಾ: ಭಾರತದಲ್ಲಿ ವರದಕ್ಷಿಣೆಗಾಗಿ ವಧುಗಳನ್ನು ದಹಿಸುವ ಪಿಡುಗು ಇಂದು ಸರ್ವವ್ಯಾಪಿಯಾಗಿದ್ದು ಪ್ರತಿಯೊಂದು ಇಂಥ ಘಟನೆಯಲ್ಲೂ ಒಬ್ಬ ಹೆಣ್ಣು, ಅವಳ ಗಂಡ, ಅತ್ತೆ ನಾದಿನಿ, ತಂದೆ, ತಾಯಿ ಮುಂತಾದ ವ್ಯಕ್ತಿಗಳೇ ಸ್ತ್ರೀಶೋಷಣೆಯನ್ನು ಪುನರಾವರ್ತಿಸುವುದು ಕಂಡು ಬರುತ್ತದೆ. ವರದಕ್ಷಿಣೆಯ ಪದ್ಧತಿಯು ಸ್ತ್ರೀಕುಲಕ್ಕೆ ಹೀಗೆ ಮಾರಕ ದುಷ್ಪರಿಣಾಮವನ್ನು ಬೀರುತ್ತದೆಂಬ ಅರಿವು ಎಷ್ಟೇ ಪ್ರಚಾರದಲ್ಲಿದ್ದರೂ 'ಮದುವೆಯೇ ಹೆಣ್ಣಿನ ಬದುಕಿನ ಏಕಮಾತ್ರ ಗುರಿ' ಎಂಬ ಬಲವಾದ ನಂಬಿಕೆಯು ರೂಢಿಯಲ್ಲಿ ಇರುವವರೆಗೂ, ಹೇಗಾದರೂ ಹೆಣ್ಣು ಪರರ ಒಡವೆಯೆಂದು ನಂಬಿ, ಹೊರಹಾಕಲು ಹಾತೊರೆವ ತಂದೆತಾಯಿಗಳೂ, ಹಾಗೆ ಹೋಗುವಲ್ಲಿಯೇ ಬದುಕಿನ ಸಾರ್ಥಕತೆಯನ್ನು ಅನುಭವಿಸುವ ವಧುಗಳೂ, ಇವರ ಹಪಾಹಪಿಯನ್ನು ಹಣದ ಲಾಭಕ್ಕಾಗಿ ದುಡಿಸಿಕೊಳ್ಳುವ ಗಂಡಿನವರೂ ಹಾಗೇ ಈ ಪದ್ಧತಿಯನ್ನು ಮುಂದುವರೆಸುತ್ತಲೇ ಇರುತ್ತಾರೆ. ಅಂದರೆ ಶೋಷಣಾ ಸಂಬಂಧಗಳು ಸಾಮಾಜಿಕ ಸಂಬಂಧಗಳಿಂದಲೂ ವ್ಯಕ್ತಿಗಳು ಅವುಗಳಲ್ಲಿ ಪಾಲುದಾರರಾಗಿರುವುದರಿಂದಲೂ ಮುಂದುವರೆಸಲ್ಪಡುತ್ತವೆ. ಮನುಷ್ಯರೇಕೆ ಹೀಗೆ ಒಬ್ಬರು ಇನ್ನೊಬ್ಬರನ್ನು ಶೋಷಿಸುತ್ತಾರೆ? ಈ ಶೋಷಣೆಗಳ ಸ್ವರೂಪವೇನು? ಇದರಲ್ಲಿ ವ್ಯಕ್ತಿತ್ವ ಎಂಬುದು ವಹಿಸುತ್ತಿರುವ ಪಾತ್ರ ಎಷ್ಟು? ಪ್ರಜ್ಞಾಪೂರ್ವಕವಿರಲಿ, ಅಪ್ರಜ್ಞಾಪೂರ್ವಕವಿರಲಿ, ಈ ಶೋಷಣಾತ್ಮಕ ವಿಚಾರಗಳು ಮತ್ತು ಭಾವನೆಗಳು ಹೇಗೆ ಈ ರೀತಿಯೇ ಕೆಲಸ ಮಾಡುತ್ತವೆ? ವ್ಯಕ್ತಿಗೂ ಸಮಾಜಕ್ಕೂ ಇರುವ ಯಾವ ಸಂಬಂಧಗಳು ಈ ಶೋಷಣೆಯನ್ನು ಹುಟ್ಟುಹಾಕಿ, ಬೆಳೆಸಿ, ಉಳಿಸಿಡುತ್ತಿವೆ? ಎಂಬುದನ್ನು ಸೈದ್ಧಾಂತಿಕವಾಗಿ ವಿವರಿಸುವುದೇ ಸ್ತ್ರೀವಾದದ ಮೊದಲ ಮೆಟ್ಟಿಲು.

೭. ವ್ಯಕ್ತಿಗಳಾಗಿ ಮನೆಗಳಲ್ಲಿ ರೂಪುಗೊಳ್ಳುವ ಹೆಣ್ಣು, ಗಂಡುಗಳು ಶಾಲೆ, ಕಾಲೇಜುಗಳಲ್ಲಿ ಹದಿಹರೆಯದ ಸಮವಯಸ್ಕರ ಸಮುದಾಯಗಳಲಿ, ಬದುಕಿನ ಜನಪ್ರಿಯ ಮಾದರಿಗಳಲ್ಲಿ ಪ್ರವೇಶಿಸುತ್ತಾರೆ, ಹಾಗೆಯೇ ಧಾರ್ಮಿಕ ಸಂಸ್ಥೆಗಳು, ಮಂದಿರ, ಮಸೀದಿ, ಚರ್ಚು ಗುರುದ್ವಾರಗಳೊಳಗೂ, ಉದ್ಯೋಗಗಳ ವರ್ತುಲಗಳೊಳಗೂ ತಮ್ಮ ಅಸ್ಮಿತೆಯ ಅರ್ಥಗಳನ್ನು ಪಡೆದುಕೊಳ್ಳುತ್ತಾರೆ ಈ ಎಲ್ಲ ಸ್ಥಳಗಳಲ್ಲಿ ಅವರು ಹೇಗಿರಬೇಕು, ಬದುಕಬೇಕು – ಎಂಬುದೆಲ್ಲ ಅವರ ಪ್ರವೇಶಕ್ಕೂ ಮೊದಲೇ ತೀರ್ಮಾನವಾಗಿರುತ್ತವೆ. ಆಯಾ ವಲಯಗಳ ಕಾಯಿದೆ, ಕಾನೂನು, ನೀತಿ, ನಿಯಮಗಳು ಯಾವುದನ್ನು ಸತ್ಯ, ಸಹಜ, ಒಳ್ಳೆಯದು ಎಂದು ತೀರ್ಮಾನಿಸುತ್ತಿರುವೆಯೋ ಅವುಗಳನ್ನು ವ್ಯಕ್ತಿಗಳೂ ಸ್ವೀಕರಿಸಿ, ಪಾಲಿಸುವ ಮೂಲಕ ಅವನ್ನು ಉಳಿಸಿಡಲು ಹೆಣಗುತ್ತಾರೆ. 'ಹುಡುಗ' 'ಹುಡುಗಿ'ಯರೆಂದರೆ ಹೇಗಿರಬೇಕು ಎಂದು ಬಾಲ್ಯದಲ್ಲೆ ಕಲಿವ ಅವರು ಮುಂದೆ 'ಪುರುಷ'ರಾಗಿ 'ಮಹಿಳೆ'ಯರಾಗಿ ಹೇಗಿರಬೇಕೆಂಬುದನ್ನೂ

ಪರಿಕಲ್ಪಿಸಿಕೊಂಡಿರುತ್ತಾರೆ. ವ್ಯಕ್ತಿಗಳಾಗಿ ಅವರು ಈ ಸ್ಥಾನಗಳ ಪೈಕಿ ತಮಗೆ ಹೊಂದುವಂಥದ್ದನ್ನು ಆಯ್ಕೆ ಮಾಡಿಕೊಳ್ಳುತ್ತಿರುತ್ತಾರೆ.

ಆದರೆ ಈ ಆಯ್ಕೆಯ ಸಾಧ್ಯತೆಗಳು ಸ್ತ್ರೀಪುರುಷರಿಗೆ ಒಂದೇ ರೀತಿಯದಾಗಿರುವುದಿಲ್ಲ. ಮಹಿಳೆಯರಿಗೆ ಬದುಕಿನ ಎಷ್ಟೋ ಅವಕಾಶಗಳು ಇಂದು ತೆರೆದಿವೆ. ಆದರೆ ಪುರುಷರೊಂದಿಗೆ, ಅವರ ಸ್ವೀಕಾರ, ತಿರಸ್ಕಾರ, ಹೊಂದಾಣಿಕೆಗಳನ್ನು ಅವಲಂಬಿಸಿರುವ ಎಲ್ಲ ಬದುಕಿನ ಸಾಧ್ಯತೆಗಳೂ ಪತ್ನಿ ಇಲ್ಲವೆ ತಾಯಿಯ ಪಾತ್ರಗಳತ್ತಲೇ ಒತ್ತು ಕೊಡುವಂತಿರುತ್ತವೆ. ಯಾವ ವೃತ್ತಿಯನ್ನು ಮಹಿಳೆಯರು ಕೈಗೊಂಡರೂ ಪುರುಷರಿಗೆ ಆಕರ್ಷಕರಾಗಿ ಅಪೇಕ್ಷಣೀಯವಾಗಿ ಕಾಣಬೇಕು. ತಮ್ಮ ಹೆಣ್ಣುತನ, ಲೈಂಗಿಕತೆಯನ್ನು ಒಬ್ಬನೇ ಪುರುಷನಿಗೆ ಮೀಸಲಿಡುವುದು ಅವರ ವ್ಯಕ್ತಿತ್ವದ ಉನ್ನತ ಆದರ್ಶವೆನಿಸುತ್ತದೆ. ತನ್ನೆಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಆತನಿಗಾಗಿ, ಮಕ್ಕಳಿಗಾಗಿ ಹರಿಸುವುದೇ ಹೆಣ್ಣಿನ ಘನತೆಯೆನಿಸುತ್ತದೆ. ಈ ಸಂದೇಶವನ್ನು ಸಹಸ್ರ ಮಾರ್ಗಗಳಿಂದ ಮಹಿಳೆಯರಿಗೆ ತಲುಪಿಸಲಾಗುತ್ತಿರುತ್ತದೆ. ಶಿಶುಸಾಹಿತ್ಯ, ಮಹಿಳಾ ಪತ್ರಿಕೆಗಳು, ಧರ್ಮ, ಜಾಹೀರಾತು ಉದ್ಯಮ ಕಾದಂಬರಿಗಳು, ದೂರದರ್ಶನ, ಸಿನೆಮಾ ಮತ್ತು ಸಾಮಾಜಿಕ ಸಂಸ್ಥೆಗಳು ಎಲ್ಲವೂ ಈ ಸಂದೇಶಕ್ಕೆ ವಾಹಕಗಳಾಗಿರುತ್ತವೆಂಬುದನ್ನು ಬಯಲಿಗೆ ತರುವುದು ಸ್ತ್ರೀವಾದದ ಒಂದು ಹಿತಾಸಕ್ತಿಯಾಗಿದೆ.

೮. ಪುರುಷಕೇಂದ್ರಿತ ಚಿಂತನೆ, ದೃಷ್ಟಿಕೋನ ಮಾನವ ಸ್ವಭಾವವನ್ನು ಹೆಣ್ಣಿನದು, ಗಂಡಿನದು ಎಂದು ಇಬ್ಬಗೆಯಾಗಿ ವಿಂಗಡಿಸಿ ಸ್ವೀಕರಿಸುತ್ತಾ ಬಂದಿರುವುದನ್ನು ಈ ಮೊದಲು ಪ್ರಸ್ತಾಪಿಸಿದ್ದಾಗಿದೆ. ಕೋಮಲತೆ, ಮಾರ್ದವತೆ, ಭಯ, ಭಾವನಾಶೀಲತೆಗಳು ಹೆಣ್ಣುಗುಣಗಳೆಂದೂ, ಸಾಹಸ, ಬಿರುಸು, ಆಕ್ರಮಣಕಾರಿತ್ವ, ತರ್ಕನಿಷ್ಠೆಗಳನ್ನು ಗಂಡು ಗುಣಗಳೆಂದೂ ಹೇಳಲಾಗುತ್ತದೆ. ನಿಜವಾಗಿ ಈ ಇಬ್ಬಗೆಯ ಗುಣಗಳು ಸ್ತ್ರೀಪುರುಷರಿಬ್ಬರಲ್ಲೂ ಇರಬಹುದು. ಅವು ಯಾರೊಬ್ಬರ ಸ್ವತ್ತಲ್ಲ. ಆಯಾ ವ್ಯಕ್ತಿಯ ಕೌಟುಂಬಿಕ ಪರಿಸರ, ಬಾಲ್ಯದ ಅನುಭವಕ್ಕೆ ಅನುಗುಣವಾಗಿ ಯಾವುದೋ ಕೆಲವು ಗುಣಗಳು ಪ್ರಧಾನವಾಗಿ ಅವಳಲ್ಲಿ/ಅವನಲ್ಲಿ ಕಾಣಿಸಿಕೊಳ್ಳುತ್ತವಷ್ಟೆ.

ಆದರೆ ಪಿತೃಪ್ರಧಾನ ದೃಷ್ಟಿಕೋನವು ಹೆಣ್ಣಿನಲ್ಲಿ ಸ್ತ್ರೀಗುಣಗಳೂ, ಗಂಡಿನಲ್ಲಿ ಪುರುಷ ಗುಣಗಳೂ ಅದೇ ಕ್ರಮದಲ್ಲಿ ಇರಬೇಕಾದದ್ದು ಅವರ ವ್ಯಕ್ತಿತ್ವದ ಆದರ್ಶ ಸ್ಥಿತಿಯೆಂದು ಸಾರಿ ಒತ್ತಿ ಹಿಡಿಯುತ್ತದೆ. ಇದರಿಂದ ಮಾನವ ಸಹಜವಾದ ಇತರ ಸ್ವಭಾವಗಳು ಸಾಮಾಜಿಕವಾಗಿ ಹತ್ತಿಕ್ಕಲ್ಪಡುತ್ತವೆ. ಅಲ್ಲದೆ ನಿರೀಕ್ಷಿತ ಗುಣಗಳ ಚೌಕಟ್ಟಿಗೆ ಹೊಂದದವರನ್ನು ಸಾಮಾಜಿಕ ಅವಹೇಳನಕ್ಕೆ ಗುರಿಮಾಡಲಾಗುತ್ತದೆ. 'ಗಂಡಬೀರಿ' 'ಹೆಣ್ಣಿಗ' ಮುಂತಾದ ಮಾತುಗಳು ನಿರ್ದಿಷ್ಟವಾದ ಹೆಣ್ಣು/ಗಂಡು ಮಾದರಿಗಿಂತ ಭಿನ್ನರಾದವರನ್ನು ಕೀಳಾಗಿ ನೋಡುತ್ತಿರುವ ರೀತಿಗೆ ನಿದರ್ಶನಗಳು. ಈ ತಾರತಮ್ಯದ ವಿಸ್ತೃತ ರೂಪಗಳನ್ನು ಸ್ತ್ರೀವಾದವು ಗುರುತಿಸುತ್ತದೆ.

೯. ಪುರುಷಪ್ರಧಾನ ವ್ಯವಸ್ಥೆಯಲ್ಲಿ ಗಂಡುಗುಣಗಳೇ ಶ್ರೇಷ್ಠವೆಂದು ಮೇಲುಗೈ ಪಡೆದಿರುತ್ತವೆ. ಕನ್ನಡದಲ್ಲಿ ಬಳಕೆಯಿರುವ ಮಾತಿನ ಕೆಲವು ವರಸೆಗಳು ಸ್ಪಷ್ಟವಾಗಿ ಇಂಥ ಭಾವವನ್ನು ಸೂಚಿಸುತ್ತವೆ. 'ಗಂಡು ಭಾಷೆ' 'ಗಂಡು ಮೆಟ್ಟಿನ ನಾಡು' ಮೊದಲಾದ ನುಡಿಗಟ್ಟುಗಳು ಇಲ್ಲಿನ ವ್ಯವಸ್ಥೆಯಲ್ಲಿ ಸ್ತ್ರೀಸ್ವಭಾವವನ್ನೂ ಅದನ್ನು ಪಡೆದಿರುವ ಸ್ತ್ರೀಯರನ್ನೂ ಹೇಗೆ ಪುರುಷರಿಗಿಂತ ದುರ್ಬಲವ್ರೂ, ಕೆಳಗಿನದೂ ಆದ ನೆಲೆಯಲ್ಲಿ ಎಣಿಸಲಾಗುತ್ತದೆ ಎಂಬುದಕ್ಕೆ ಸೂಚನೆ ನೀಡಬಲ್ಲವು. ಅದೇ ಚಿಂತನೆಯು 'ಬಳೆ ತೊಟ್ಟುಕೊಂಡಿರುವಿಕೆ'. 'ಸೀರೆ ಉಟ್ಟುಕೊಂಡಿರುವಿಕೆ' ಮುಂತಾದ ಸ್ತ್ರೀಯರ ವೇಷಭೂಷಣವನ್ನು ಪುರುಷರನ್ನು ಹೀನೈಸಲು, ಹಂಗಿಸಲು ಬಳಸುವ ಮೂಲಕ ಇವೆಲ್ಲ ಕೀಳ್ತನದ (ಸ್ತ್ರೀ ಲಕ್ಷಣವಾದ್ದರಿಂದ!) ಲಕ್ಷಣಗಳೆಂದೇ ಸಾರಿ ಹೇಳುತ್ತವೆ.

ಈ ರೀತಿಯ ವ್ಯವಸ್ಥೆಯಲ್ಲಿ ಕಲಿಕೆ, ಆಸಕ್ತಿ, ಆಚಾರ, ವಿಚಾರಗಳೆಲ್ಲ ಪುರುಷರದಾದಾಗ ಮೇಲು, ಸ್ತ್ರೀಯರದಾದಾಗ ಕೀಳೆಂದು ಶ್ರೇಣೀಕೃತವಾಗಿರುತ್ತವೆ. ಇಂತಹ ಶ್ರೇಣೀಕರಣದಿಂದಾಗಿ ಮಹಿಳೆಯರ ಪ್ರತಿಭೆ, ವ್ಯಕ್ತಿತ್ವ ವಿಕಾಸಗಳು ಮುರುಟಿ ಹೋಗಬಹುದು. ಜೇಡರ ದಾಸಿಮಯ್ಯನಂಥ ಶಿವಶರಣನು 'ಒಳಗಿರುವ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ' ಎಂದು ಸಾರಿರಬಹುದು. ಸಂಚಿಯ ಹೊನ್ನಮ್ಮನು 'ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು' ಎಂದು ಪ್ರಶ್ನಿಸಿರಬಹುದು. ಆದರೆ ಈ ಉಪದೇಶ, ಪ್ರಶ್ನೆಗಳು ಹುಟ್ಟಿದ್ದು ಲಿಂಗತಾರತಮ್ಯವನ್ನು ಬಲವಾಗಿ ಆಚರಿಸುವ ಸಾಮಾಜಿಕ ಪರಿಸರದಲ್ಲಿಯೇ ಎಂಬುದನ್ನು ನಿರ್ಲಕ್ಷಿಸುವಂತಿಲ್ಲ. ವ್ಯವಸ್ಥೆಯು ತಿದ್ದಿ, ತೀಡಿ, ರೂಪಿಸುವ ತಾರತಮ್ಯಗಳನ್ನು ತಮ್ಮಲ್ಲಿ ಅಂತಸ್ಥವಾಗಿಸಿಕೊಳ್ಳುತ್ತಲೇ ಬೆಳೆವ ಸ್ತ್ರೀಯರು ಸ್ವತಃ ತಮ್ಮನ್ನು ಪುರುಷರಿಗಿಂತ ಕೀಳೆಂದೂ 'ಹಾಳು ಹೆಣ್ಣುಜನ್ಮ', ಹೆಣ್ಣುಮುಂಡೇದು', 'ಹೆಣ್ಣುಬೊಮ್ಮಟೆ'ಯೆಂದೂ ಕಂಡುಕೊಳ್ಳುತ್ತಾ, ತಮ್ಮ ಮಕ್ಕಳಲ್ಲೂ ಅಂಥದೇ ನಂಬಿಕೆ, ಮೌಲ್ಯಗಳನ್ನು ಬೆಳೆಸುತ್ತಾ ಸಾಮಾಜೀಕರಿಸುತ್ತಾರೆ. ಈ ರೀತಿ ಲಿಂಗತಾರತಮ್ಯದ ಮೊದಲ ಪಾಠಶಾಲೆ ಮನೆಯೇ ಆಗಿ, ಮೊದಲ ಗುರುವು ಜನನಿಯೇ ಆಗಿರುವುದೊಂದು ವಿಪರ್ಯಾಸ ಮಾತ್ರವಲ್ಲ. ಲಿಂಗತಾರತಮ್ಯವನ್ನು ಪೀಳಿಗೆಯಿಂದ ಪೀಳಿಗೆಗೆ ರವಾನಿಸಿ, ಉಳಿಸಿಡುವುದರಲ್ಲಿ ಇವರದೇ ಪ್ರಮುಖ ಪಾತ್ರ. ಪುರುಷಪ್ರಧಾನ ಸಂಸ್ಕೃತಿಯ ಪ್ರಮುಖ ಸಂರಕ್ಷಕರು ಸ್ತ್ರೀಯರೇ ಎಂಬುದನ್ನು ಗುರುತಿಸಿಕೊಡುವ ಮೂಲಕ ಸ್ತ್ರೀಯರ ಪ್ರಜ್ಞಾಜಾಗೃತಿಗೆ ಸ್ತ್ರೀವಾದವು ಯತ್ನಿಸುತ್ತದೆ.

೧೦. ಪೀಳಿಗೆಯಿಂದ ಪೀಳಿಗೆಗೆ ರವಾನೆಯಾಗಿ, ರಕ್ತಗತವಾಗುತ್ತಾ ಹೋಗುವ ಇಂಥ ನಂಬಿಕೆಗಳು, ಮೌಲ್ಯಗಳು ಮತ್ತು ಆಚರಣೆಗಳ ಫಲವಾಗಿ ಕೆಲವು ಗೃಹೀತಗಳು ರೂಢಿಸಿರುತ್ತವೆ. ಉದಾಹರಣೆಗೆ, ಬಹಳಷ್ಟು ಜನರ ಸಾಮಾನ್ಯ ನಂಬಿಕೆ ಎಂದರೆ, ಪ್ರತಿಯೊಬ್ಬ ಹೆಣ್ಣಿಗೂ ತಾಯ್ತನದ ಹಂಬಲವು ಸ್ವಾಭಾವಿಕ; ತಾಯಿಯಾಗದಿದ್ದಲ್ಲಿ ಆಕೆಯ ಬದುಕು ಪರಿಪೂರ್ಣವಲ್ಲ ಎಂದಿರುತ್ತದೆ. ಹಾಗೆಯೇ ಮಗುವನ್ನು ಹೆತ್ತ ಮಾತ್ರಕ್ಕೇ ವಾತ್ಸಲ್ಯ, ಅಂತಃಕರಣ, ಜೀವಪ್ರೇಮ,

ಜೀವನ ಶ್ರದ್ಧೆಗಳೆಲ್ಲ ತಾವಾಗಿ ಆಕೆಯಲ್ಲಿ ಹುಟ್ಟಿಕೊಳ್ಳುತ್ತವೆಂದೂ, ಎಷ್ಟೇ ಕಷ್ಟಕರ ಸ್ಥಿತಿಯಲ್ಲಿದ್ದಾಗಲೂ ಸ್ತ್ರೀಗೆ ತಾಯ್ತನವು ಸದಾ ಅಪೇಕ್ಷಣೀಯವೇ ಆಗಿರುತ್ತದೆಂದೂ ಜನರ ಭಾವನೆ. ನಮ್ಮ ಜನಪ್ರಿಯ ಚಲನಚಿತ್ರಗಳು, ಕಥೆ ಕಾದಂಬರಿಗಳು ಇಂಥ ನಂಬಿಕೆಗಳನ್ನು ಮತ್ತೆ ಮತ್ತೆ ಪ್ರತಿಪಾದಿಸುತ್ತ ಬಲಗೊಳಿಸುತ್ತಿರುವುದು ನಿತ್ಯ ನೋಟವಾಗಿದೆ.

ತಾಯ್ತನವನ್ನು ವಾಸ್ತವ ನೆಲೆಗಿಂತ ಉದಾತ್ತೀಕರಿಸಿ ನೋಡುವ, ವೈಭವೀಕರಿಸಿರುವ, ಭಾರತದಲ್ಲೇ ತಾಯಿಯಾಗಲಾರದವರ, ಬಂಜೆ ಸ್ತ್ರೀಯರ ಪಾಡು ನಾಯಿಗಿಂತ ಕಡೆಯಾಗಿರುತ್ತದೆ ಎಂಬುದು ಈ ವ್ಯವಸ್ಥೆಯ ಕ್ರೂರ ಅತಿರೇಕಕ್ಕೆ ಉದಾಹರಣೆ. ಬೇಡವಿದ್ದರೂ ಬಲವಂತವಾಗಿ ತಾಯ್ತನವು ಹೇರಲ್ಪಟ್ಟಾಗ ಆ ಹೆಂಗಸು ಅದನ್ನು ಹೊರೆಯೆಂದು ಎಣಿಸಲಾರಳೆ? ಆ ಸ್ಥಿತಿಯಿಂದ ಹುಟ್ಟುವ ಕ್ಲೇಶ, ಬಿಕ್ಕಟ್ಟು, ಆಯಾಸಗಳೆಲ್ಲ ಸದಾ ಹೆಣ್ಣಿಗೆ ಆನಂದದಾಯಕವೇ ಆಗಿರಲು ಹೇಗೆ ಸಾಧ್ಯ? ಬೇರೆ ದಾರಿಗಳು ಲಭ್ಯವಿದ್ದಾಗ ಎಷ್ಟು ಸ್ತ್ರೀಯರು ತಾಯ್ತನವನ್ನು ನಿಜವಾಗಿ ಬಯಸಿಯಾರು? ಮುಂತಾದ ಪ್ರಶ್ನೆಗಳು ಇಲ್ಲಿ ಏಳುತ್ತವೆ. ಆದರೆ ಸಹಸ್ರಾರು ವರ್ಷಗಳ ರೂಢಿಗತ ನಂಬಿಕೆಯು ತಾಯ್ತನವು ಹೆಣ್ಣಿನ ಸಂಪ್ರದಾಯವೆಂದೇ ಸ್ಥಾಪಿಸಿರುವಾಗ ಜನರು ಅದನ್ನು ಪ್ರಶ್ನಿಸದೆಯೇ ಸಹಜವೆಂದೇ ಸ್ವೀಕರಿಸುತ್ತಾರೆ. ಈ ಕ್ರಮ ಚಾರಿತ್ರಿಕವೆಂದಾಗಲಿ, ಇದು ಬದಲಾಗಬಹುದು ಎಂದಾಗಲಿ ಅವರು ಚಿಂತಿಸಲಾರರು.

೧೧. ಇಂಥ ಯಥಾಸ್ಥಿತಿವಾದಿ ಚಿಂತನೆಗೆ ವಿರುದ್ಧವಾಗಿ ಸ್ತ್ರೀವಾದವು ಪಿತೃಪ್ರಧಾನ ವ್ಯವಸ್ಥೆಯ ಸಂಬಂಧಗಳ ಸ್ವರೂಪವೇನೆಂದು ಅರ್ಥಮಾಡಿಕೊಳ್ಳಲು ಹಲವು ದಿಕ್ಕಿನಿಂದ ಪ್ರಯತ್ನಮಾಡಿದೆ. ಲಿಂಗಾಧರಿತ ಶ್ರಮವಿಭಜನೆಯ ಚರ್ಚೆ ಕೂಡ ಇಂಥ ಮುಖ್ಯ ಯತ್ನಗಳಲ್ಲಿ ಒಂದಾಗಿದೆ. ಕ್ಷೇತ್ರವನ್ನು ಒಳಾಂಗಣದ್ದು ಮತ್ತು ಹೊರಗಿನದು ಎಂದು ವಿಭಜಿಸಿರುವುದಕ್ಕೂ ಲಿಂಗಶ್ರೇಣೀಕರಣವೇ ಕಾರಣ. ಒಳಗಿನ ಎಲ್ಲ ಕೆಲಸಗಳು ಮಹಿಳೆಯರ ಅವಶ್ಯಕ ಕರ್ತವ್ಯಗಳಾಗಿದ್ದು, ತಮ್ಮನ್ನು ಸಾಕುವ ಪುರುಷರಿಗಾಗಿ ಅವರ ಅಧೀನರಾಗಿ ಮಾಡಲೇಬೇಕಾದ ಸೇವೆಗಳೆಂದು ಮಹಿಳೆಯರ ಮನೆಗೆಲಸದ ಮತ್ತಿತರ ದುಡಿಮೆಯನ್ನು ಭಾವಿಸಲಾಗುತ್ತದೆ. 'ಗೃಹಿಣೀ ಗೃಹಮುಚ್ಯತೇ', 'ಗೃಹಿಣಿಯಿದ್ದರೆ ಮನೆ' ಮುಂತಾಗಿ ಈ ನೆಲೆಯನ್ನು ವೈಭವೀಕರಿಸಲಾಗುತ್ತದೆ. ಆದರೂ ಹೊರಗಡೆ 'ದುಡಿದು ಸಂಪಾದಿಸಿ' ತರುವ ಗಂಡಸರ ದುಡಿಮೆಗೆ ಇದೆಂದೂ ಸಮನೆನಿಸಲಿಲ್ಲ. ಬದಲಾದ ಕಾಲದ ಗತಿಯಲ್ಲಿ ಮಹಿಳೆ ಕೂಡ ಮನೆಯ ಹೊರಗೂ ದುಡಿಯುವುದು ರೂಢಿಗೆ ಬಂದಿತಾದರೂ ಆಕೆಯ ಅಂಥ ಗಳಿಕೆ ಮನೆಯ ಒಟ್ಟು ಆದಾಯಕ್ಕೆ 'ಪೂರಕ' ಎಂದು ನೋಡಲಾಗುತ್ತದೆಯೇ ಹೊರತು ಅದೇ ಅನಿವಾರ್ಯ, ಪ್ರಧಾನವೆನಿಸುವುದಿಲ್ಲ. ಉದ್ಯೋಗವನ್ನು ಪುರುಷ ಲಕ್ಷಣವೆಂದೇ ಇಂದಿಗೂ ನೋಡುವುದು. ಮಹಿಳೆಯರು ನಿರುದ್ಯೋಗಿ ಪುರುಷರಿಗೆ ತಮ್ಮ ಉದ್ಯೋಗಗಳನ್ನು ತೆರವು ಮಾಡಿಕೊಡುವುದೇ ಒಳ್ಳೆಯದೆಂದು ಭಾವಿಸುವುದರ ಹಿಂದೆ ಲಿಂಗತಾರತಮ್ಯವೇ ಕೆಲಸ ಮಾಡುತ್ತಿರುತ್ತದೆ.

ಹೀಗೆ ಹೆಣ್ಣು-ಗಂಡಿನ ದುಡಿಮೆಗಳಿಗೆ ಎರಡು ರೀತಿಯಲ್ಲಿ ಬೆಲೆಕಟ್ಟುವ ನಮ್ಮ ವ್ಯವಸ್ಥೆಯಲ್ಲಿ ಕಡಿಮೆ ಸಂಬಳ ಸುಲಭವಾಗಿ ಕೆಲಸದಿಂದ ತೆಗೆದುಹಾಕುವುದು, ಅನಿಶ್ಚಿತತೆ, ಅಭದ್ರತೆ, ಭ್ರಷ್ಟಚಾರ, ಪಿತೃವಂಶೀಯ ಕುಟುಂಬ ಪದ್ಧತಿಯಿಂದಾಗಿ ತವರಿನಿಂದ ಗಂಡನ ಮನೆಗೆ ರವಾನೆಯಾಗುವ ಅನಿವಾರ್ಯ, ತಾಯ್ತನವೇ ಮುಂತಾದ ಅನೇಕ ಅಂಶಗಳು ಮಹಿಳೆಯರ ದುಡಿಮೆಯ ಹಕ್ಕನ್ನೂ, ಅವರ ದಕ್ಷತೆ, ಸಾಮರ್ಥ್ಯಗಳನ್ನೂ ದುಡಿಮೆಯ ಸಾಧನೆಗಳನ್ನೂ ನಿಯಂತ್ರಿಸುತ್ತಿರುವುದು ಸಾಮಾನ್ಯ ನೋಟ. ಇಂಥ ಸ್ಥಿತಿಯಿಂದ ವಿಮುಕ್ತಿ ದೊರೆಯಬೇಕಾದರೆ ಒಳ-ಹೊರ ದುಡಿಮೆಗಳು ಸ್ತ್ರೀ-ಪುರುಷರಿಬ್ಬರಿಗೂ ಸಮಾನ, ಅನಿವಾರ್ಯ ಧರ್ಮವಾಗಬೇಕು ಎಂಬುದು ಸ್ತ್ರೀವಾದದ ಮುಖ್ಯ ಹಕ್ಕೊತ್ತಾಯವಾಗಿದೆ.

೧೨. ಭಾರತೀಯ ಸಂದರ್ಭದಲ್ಲಿ ಸ್ತ್ರೀವಾದದ ಮೂಲಕ ಮಹಿಳೆಯರ ಹಾಗೂ ಇಡೀ ಸಾಂಸ್ಕೃತಿಕ ಸಂರಚನೆಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವ ಆಧುನಿಕ ಚಿಂತನೆಗೆ ಹೊರಗಿನಿಂದ ಪ್ರೇರಣೆ ದೊರೆತಿದೆ ನಿಜ. ಆದರೆ ಸ್ತ್ರೀಯರ ಬಗೆಗಿನ ಈ ನೆಲದ ಚಿಂತನೆಗಳು ಯಾವಾಗಲೂ ಸ್ತ್ರೀಯರ ವಿರುದ್ಧವಾಗಿಯೇ ಇವೆಯೆಂದೇನೂ ಅಲ್ಲ. ಲಿಂಗತಾರತಮ್ಯದ ವಿರುದ್ಧವಾದ ಧ್ವನಿಗಳೂ ಚರಿತ್ರೆಯ ಹಲವು ಹಂತಗಳಲ್ಲಿ ಕೇಳಿಬಂದಿವೆ. ಆ ರೀತಿಯ ಪ್ರತಿಭಟನೆ, ಪಶ್ಚಿಮದ ಸ್ತ್ರೀವಾದದ ಚರಿತ್ರೆಗಿಂತ ಎಷ್ಟೋ ಹಿಂದಿನಿಂದಲೂ ನಮ್ಮಲ್ಲಿ ಕಾಣಿಸಿಕೊಂಡಿದೆ. ಆದರೆ 'ಸ್ತ್ರೀಪರತೆ'ಯ ಈ ಸ್ಥಳೀಯ ಲಕ್ಷಣಗಳನ್ನು ವಿಶ್ಲೇಷಿಸಲು ತುಲನಾತ್ಮಕವಾಗಿ ಪಶ್ಚಿಮದ ಸ್ತ್ರೀವಾದದೊಂದಿಗೆ ಹೋಲಿಸಿ ನೋಡಲು ಪಾಶ್ಚಿಮಾತ್ಯ ಸ್ತ್ರೀವಾದಿ ಚಿಂತನೆಗಳ ಪರಿಚಯ ಅವಶ್ಯಕವಿದೆ.

○

೨. ಪಾಶ್ಚಿಮಾತ್ಯ ಸ್ತ್ರೀವಾದದ ವಿವಿಧ ಮಗ್ಗುಲುಗಳು

ಸ್ತ್ರೀವಾದದ ಮೊದಲ ಚಿಂತಕಿಯರು

ಜನರ ಪ್ರಜ್ಞಾಕ್ರಾಂತಿಯನ್ನು ಗುರಿಯಾಗಿಟ್ಟುಕೊಂಡು ಹೊರಡುವ ಆಧುನಿಕ ಸಿದ್ಧಾಂತಗಳ ನಡುವೆ ಮಹತ್ವದ ಸ್ಥಾನವನ್ನು ಪಡೆದಿರುವ ಪಾಶ್ಚಿಮಾತ್ಯ ಸ್ತ್ರೀವಾದದ ಚಿಂತನೆಗಳು ಸುಮಾರು ಇನ್ನೂರು ವರ್ಷಗಳಿಂದ ಕ್ರಮವಾಗಿ ಬೆಳೆದು ಬಂದಂಥವು. ಹದಿನೆಂಟನೆಯ ಶತಮಾನದ ಮೇರಿ ವುಲ್‌ಸ್ಟನ್‌ಕ್ರಾಫ್ಟ್, ಹತ್ತೊಂಬತ್ತು-ಇಪ್ಪತ್ತನೆಯ ಶತಮಾನಗಳ ನಡುವೆ ಇದ್ದ ವರ್ಜೀನಿಯಾ ವುಲ್ಫ್, ಇಪ್ಪತ್ತನೆಯ ಶತಮಾನದ ಚಿಂತಕಿಯರೆಲ್ಲರ ವಿಚಾರಗಳನ್ನು ಪ್ರಭಾವಿಸಿದ ಸಿಮೋನ್ ದ ಬೋವಾ ಸ್ತ್ರೀವಾದದತ್ತ ಜಗತ್ತಿನ ಗಮನ ಸೆಳೆದ ಮಹತ್ವದ ಲೇಖಕಿಯರು ಮುಂದೆ ಬೆಟಿ ಫ್ರೀಡನ್, ಮೇರಿ ಎಲ್‌ಮನ್, ಶುಲಾಮಿತ್ ಫೈರ್‌ಸ್ಟೋನ್, ಹಾಗೂ ಕೇಟ್ ಮಿಲೇಟ್ ತಮ್ಮದೇ ಆದ ವಿಚಾರಧಾರೆಗಳಿಂದ ಸ್ತ್ರೀವಾದದ ಮೊದಲ ಹಂತದ ಚಿಂತಕಿಯರೆಂದು ಖ್ಯಾತಿ ಪಡೆದಿದ್ದಾರೆ.

ಚಳವಳಿ ಮತ್ತು ಸಂಸ್ಕೃತಿ ಮೀಮಾಂಸೆ

ಸ್ತ್ರೀವಾದಕ್ಕೆ ಪಶ್ಚಿಮ ದೇಶಗಳಲ್ಲಿ ತಳಪಾಯ ಕಟ್ಟಿದವರು ಈ ಮಹಿಳೆಯರು. ಆದರೆ ಅವರವರ ಕಾಲದಲ್ಲಿ ತುಂಬ ಪ್ರಭಾವ ಬೀರಿದ್ದ ಪುರುಷರ ಚಿಂತನೆಗಳೇ ಇವರ ಚಿಂತನೆಗಳಿಗೆ ಮುಖ್ಯ ಪ್ರೇರಣೆ ಎಂಬುದನ್ನು ಗಮನಿಸಬೇಕು. ಮೇರಿ ವುಲ್‌ಸ್ಟನ್‌ಕ್ರಾಫ್ಟ್ ರುಸೋನ ವಿಚಾರಗಳಿಂದ, ಸಿಮೋನ್ ದ ಬೋವಾ ಸಾರ್ತ್ರ್, ಕಾರ್ಲ್‌ಮಾರ್ಕ್ಸ್ ಮತ್ತು ಫ್ರಾಯ್ಡನ ತಾತ್ವಿಕ ಸಿದ್ಧಾಂತಗಳಿಂದ ತಮ್ಮ ಚಿಂತನೆಗಳಿಗೆ ಪ್ರೇರಣೆ ಪಡೆದದ್ದು ಇಂದು ಬೌದ್ಧಿಕ ಲೋಕದಲೆಲ್ಲಾ ತಿಳಿದಿರುವ ಸಂಗತಿ. ಕೇಟ್ ಮಿಲೆಟ್ಟಳ ಲಿಂಗರಾಜಕೀಯ ಸಿದ್ಧಾಂತದ ಹಿಂದೆ ಆ ಕಾಲದ ಅಮೇರಿಕದ ವಿಶ್ವವಿದ್ಯಾನಿಯಗಳಲ್ಲಿ ಗಾಢವಾಗಿದ್ದ 'ನ್ಯೂ ಕ್ರಿಟಿಸಿಸಂ' ವಾದಿಗಳಾದ ಪುರುಷರ ಧೋರಣೆಗಳೇ ಪ್ರೇರಣೆಗಳಾಗಿದ್ದವು. ಆದರೆ ಒಂದು ಸಿದ್ಧಾಂತವನ್ನು ಯಾರು ಮೊದಲು ಹುಟ್ಟುಹಾಕಿದರು - ಸ್ತ್ರೀಯರೋ ಪುರುಷರೋ ಎಂಬುದಕ್ಕಿಂತಲೂ ಆ ಸಿದ್ಧಾಂತವನ್ನು ಯಾವುದಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬುದು ಹೆಚ್ಚು ಮಹತ್ವದ್ದು. ಆದ್ದರಿಂದ ಸ್ತ್ರೀನಿಷ್ಠನೆಲೆಯಿಂದ ಜಗತ್ತನ್ನು ಕುರಿತ ದಾರ್ಶನಿಕ, ಸಾಮಾಜಿಕ, ಆರ್ಥಿಕ ವಿಚಾರಗಳನ್ನು ಬೆಳೆಸಲು ತಮ್ಮ ಕಾಲದ ಪ್ರಭಾವಶಾಲಿ ತಾತ್ವಿಕ ವಿಚಾರಗಳನ್ನು ಬಳಸಿಕೊಂಡರೂ, ಹೊಸ

ನೋಟವೊಂದನ್ನು ಕಲ್ಪಿಸಿದ್ದು ಈ ಮೊದಲ ಚಿಂತಕಿಯರ ಸಾಧನೆಯೆನ್ನಬಹುದು. ಇವರ ಚಿಂತನೆಗಳ ಸಾರಾಂಶಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿಕೊಳ್ಳುವ ಮೊದಲು ಮುಖ್ಯವಾಗಿ ಈ ಕೆಲವು ವಿಷಯಗಳನ್ನು ತಿಳಿದಿರಬೇಕು. ಸ್ತ್ರೀವಾದಕ್ಕೆ ಎರಡು ಮುಖ್ಯ ಆಯಾಮಗಳಿವೆ.

೧. ವಾಸ್ತವ ಜೀವನದಲ್ಲಿ ಮಹಿಳೆಯರು ಎದುರಿಸುತ್ತಿರುವ ಭೌತಿಕ ಶೋಷಣೆಗಳನ್ನು, ಅವುಗಳಿಗೆ ಕಾರಣವಾಗಿರುವ ವ್ಯವಸ್ಥೆಯನ್ನು ಸಂಘಟಿತ ಸಾಮಾಜಿಕ, ರಾಜಕೀಯ ಹೋರಾಟಗಳ ಮೂಲಕ ಪ್ರತಿಭಟಿಸುವುದು ಸ್ತ್ರೀವಾದದ ಒಂದು ಆಯಾಮ.

೨. ಸಂಸ್ಕೃತಿ ಮೀಮಾಂಸೆಯ ಒಂದು ಅಂಗವಾಗಿ ಸಾಹಿತ್ಯ ಕಲೆಗಳ ಸ್ತ್ರೀವಾದಿ ವಿಮರ್ಶೆ, ವಿಶ್ಲೇಷಣೆಗೆ ಯತ್ನಿಸುವುದು ಅದರ ಇನ್ನೊಂದು ಆಯಾಮ, ಮೇರಿ ವುಲ್‌ಸ್ಟನ್‌ಕ್ರಾಫ್ಟಳಿಂದ ಹಿಡಿದು ಜರ್ಮೇನ್ ಗ್ರಿಯರಳವರೆಗೆ ಪ್ರತಿಯೊಬ್ಬರೂ ಸ್ತ್ರೀವಾದದ ರಾಜಕೀಯ ಸಿದ್ಧಾಂತವನ್ನು ಹೇಳುವ ತಮ್ಮ ತಮ್ಮ ವಿಚಾರಗಳಿಗೆ ಸಾಹಿತ್ಯ ವಿಶ್ಲೇಷಣೆಯ ಮೂಲಕ ಅವಶ್ಯಕ ಸಮರ್ಥನೆ, ನಿದರ್ಶನಗಳನ್ನು ಪಡೆದುಕೊಳ್ಳುತ್ತಾರೆಂಬುದು ಗಮನಾರ್ಹ. ಹೀಗೆ ಸ್ತ್ರೀವಾದದ ಸೈದ್ಧಾಂತಿಕತೆಗೂ ಸಾಹಿತ್ಯ ವಿಮರ್ಶೆಗೂ ಆರಂಭದಿಂದಲೂ ಸಂಬಂಧ ಏರ್ಪಟ್ಟಿದೆ.

ಮೇರಿ ವುಲ್‌ಸ್ಟನ್‌ಕ್ರಾಫ್ಟ್ (೧೭೫೯-೧೭೯೭)

ಹದಿನೆಂಟನೆಯ ಶತಮಾನದ ಕೊನೆಯಲ್ಲಿ ಯುರೋಪಿನ ತುಂಬ ಪ್ರಭಾವಬೀರಿದ್ದ ರುಸೋ ಮತ್ತು ಲಾಕ್ (Locke)ರ ವಿಚಾರಗಳು ಮಾನವರೆಲ್ಲರೂ ಸ್ವಾತಂತ್ರ್ಯ, ಸಮಾನ ರಾಜಕೀಯ, ಕಾನೂನು ಹಕ್ಕುಗಳಿಗೆ ಅರ್ಹರೆಂದು ಸಾರಿದ್ದವು. ಪ್ರತಿಯೊಬ್ಬ ವ್ಯಕ್ತಿಯ ಪ್ರತಿಭಾವಿಕಾಸಕ್ಕೆ ಅವಕಾಶವಿರಬೇಕೆಂದು ಪ್ರತಿಪಾದಿಸುವುದು ಆಗಿನ ಮುಖ್ಯ ಆದರ್ಶವೆನಿಸಿತ್ತು. ಫ್ರೆಂಚ್ ಕ್ರಾಂತಿಗೆ ನಾಂದಿ ಹಾಡಿದಂಥ ಇಂಥ ವಿಚಾರಗಳ ತಳಹದಿಯ ಮೇಲೆ, ಮಹಿಳೆಯರ ಸ್ವಾತಂತ್ರ್ಯ, ಸಮಾನತೆಗಳ ಪರವಾಗಿ ವಾದ ಹೂಡಿದಾಕೆ ಮೇರಿ ವುಲ್‌ಸ್ಟನ್‌ಕ್ರಾಫ್ಟ್. ಮಹಿಳೆಯರೂ ಮಾನವ ವ್ಯಕ್ತಿಗಳೇ ಆದ್ದರಿಂದ ಎಲ್ಲ ಮಾನವರಿಗೂ ಇರುವ ಪ್ರತಿಭಾ ಅವಕಾಶಗಳು ಮಹಿಳೆಯರಿಗೂ ದೊರಕಬೇಕೆಂದು ಆಕೆ ಪ್ರತಿಪಾದಿಸಿದಳು. A Vindication of Rights of Women (೧೭೯೧) ಎಂಬ ಆಕೆಯ ಚರಿತ್ರಾರ್ಹ ಕೃತಿಯಲ್ಲಿ ಆಕೆ ಆ ಕಾಲದ ಸಾಮಾಜಿಕ ವ್ಯವಸ್ಥೆಯ ವಿಶದವಾದ ವಿಮರ್ಶೆಯನ್ನು ಮಾಡಿದ್ದಾಳೆ. ಸ್ತ್ರೀವಿರೋಧಿಯಾಗಿದ್ದ ಅಂಶಗಳನ್ನೆಲ್ಲ ಆಮೂಲಾಗ್ರವಾಗಿ ಪರಿಶೀಲಿಸಿ, ಸ್ತ್ರೀಪರವಾದ ಹಕ್ಕೊತ್ತಾಯಗಳನ್ನು ಮುಂದಿಟ್ಟಿದ್ದಾಳೆ.

ಮೇರಿವುಲ್‌ಸ್ಟನ್‌ಕ್ರಾಫ್ಟ್ ತನ್ನ ಕೃತಿಯ ಕೇಂದ್ರದಲ್ಲಿ ಲಿಂಗತಾರತಮ್ಯ ಮತ್ತು ಸ್ತ್ರೀಯರ ಪ್ರತ್ಯೇಕೀಕರಣಗಳಿಂದಾಗಿ ಮಾನವೀಯವಾಗಿ ಸ್ತ್ರೀಯರಿಗೆ ದೊರಕಬೇಕಿದ್ದ ಹಕ್ಕುಗಳು ಹೇಗೆ ದೊರಕುತ್ತಿಲ್ಲ ಎಂಬುದನ್ನು ಚರ್ಚೆಗೆ ತಂದಿದ್ದಾಳೆ. ಲಿಂಗಭೇದ ನೀತಿಯು ಮಹಿಳೆಯರನ್ನು

ಹೀನ ನೆಲೆಯಲ್ಲಿ ಇರಿಸುತ್ತದೆ ಮತ್ತು ಖಾಸಗಿ ಆಸ್ತಿವ್ಯವಸ್ಥೆಯು ಅವರನ್ನು ದಾಸ್ಯಕ್ಕೆ ಒಳಗಾಗಿಸುವ ಮೂಲ ಕಾರಣಗಳಲ್ಲಿ ಒಂದು ಎಂದು ಈಕೆ ಸೂಚಿಸುತ್ತಾಳೆ. ಸಾಮಾಜಿಕವಾಗಿ ಪ್ರಬಲ ಸ್ಥಾನದಲ್ಲಿರುವ ಪುರುಷರ ಸಮಸ್ಯೆಗಳನ್ನು ಇಡೀ ಸಮಾಜದ ಸಮಸ್ಯೆಗಳೆಂಬಂತೆ ಗಂಭೀರವಾಗಿ ಪರಿಗಣಿಸಲಾಗುತ್ತದೆ. ಆದರೆ ದುರ್ಬಲ ಸ್ಥಾನದಲ್ಲಿ ಉಳಿದಿರುವ ಮಹಿಳೆಯರ ಸಮಸ್ಯೆಗಳನ್ನು ಕೇವಲ ಅವರವರ ವೈಯಕ್ತಿಕ ಜವಾಬ್ದಾರಿಗಳೆಂಬಂತೆ ನೋಡಲಾಗುತ್ತದೆ ಎಂಬುದರ ಕಡೆಗೆ ಮೇರಿ ವುಲ್‌ಸ್ಟನ್‌ಕ್ರಾಫ್ಟ್ ಗಮನ ಸೆಳೆಯುತ್ತಾಳೆ.

ಸ್ತ್ರೀಯರು ತಮ್ಮನ್ನೂ, ತಮ್ಮ ಬದುಕನ್ನೂ, ಅನುಭವಗಳನ್ನೂ ತಾವೇ ವ್ಯಾಖ್ಯಾನಿಸಬೇಕಾದ ಅವಶ್ಯಕತೆಯ ಬಗ್ಗೆ ಈಕೆ ಆಗ್ರಹಪಡಿಸಿರುವುದು ಗಮನಿಸಬೇಕಾದ ಸಂಗತಿ. ಈ ಜಗತ್ತಿನ ಒಳಿತು ಕೆಡುಕುಗಳ ಬಗ್ಗೆ ನಿರ್ಧರಿಸುವ ಅಧಿಕಾರವನ್ನು ಪುರುಷರೇ ಏಕೆ ಇಟ್ಟುಕೊಂಡಿರಬೇಕು? ಸ್ತ್ರೀಯರಿಗೆ ಯಾವುದು ಬೇಕು, ಯಾವುದು ಬೇಡವೆಂದು ನಿರ್ಧರಿಸುವ ಹಾಗೂ ನಿರ್ವಚಿಸುವ ಅಧಿಕಾರವನ್ನು ಅವರು ಪಡೆದದ್ದು ಹೇಗೆ? ಎಂಬ ಪ್ರಶ್ನೆಗಳನ್ನು ಈಕೆ ಚರ್ಚಿಸುತ್ತಾಳೆ. ಪುರುಷರ ದಬ್ಬಾಳಿಕೆಗಳ ಫಲವಾಗಿ ಮಹಿಳೆಯರು ತಮ್ಮ ಧ್ವನಿಯನ್ನು ಕಳೆದುಕೊಂಡಿದ್ದಾರೆ. ತುಂಬ ದಮನಗೊಂಡಿರುವ ಅವರು ತಮ್ಮನ್ನು ಕುರಿತು ತಾವೇ ಏನನ್ನೂ ಹೇಳಲು ಅಸಮರ್ಥರಾಗಿದ್ದಾರೆ. ಇದರಿಂದಾಗಿ ಹೆಂಗಸರ ಬುದ್ಧಿಮತ್ತೆ ಕೆಳದರ್ಜೆಯದೆಂದು ಪುರುಷರು ನಿರ್ಧರಿಸಲು ಕಾರಣವಾಗಿದೆ. ಹತ್ತಿಕ್ಕುವಿಕೆಯೇ ಸ್ತ್ರೀಯರ ಅವನತಿಯ ಮೂಲವೆಂದು ಈಕೆ ವಿಶ್ಲೇಷಿಸುತ್ತಾಳೆ.

ಪುರುಷರ ಹಿತಾಸಕ್ತಿಗೆ ಅನುಗುಣವಾಗಿಯೇ ಸ್ತ್ರೀಯರನ್ನು ರೂಪಿಸುವಂಥ ಶಿಕ್ಷಣ ವ್ಯವಸ್ಥೆಯನ್ನು ರುಸೋ ತೀವ್ರವಾಗಿ ಟೀಕಿಸಿದ್ದು, ಸ್ತ್ರೀಯರ ಸ್ವಭಾವ, ಅವಶ್ಯಕತೆಗಳಿಗೆ ತಕ್ಕಂಥ ಶಿಕ್ಷಣ ನೀಡಿ ಅವರನ್ನು ಬೆಳೆಸಬೇಕೆಂದೂ ಪ್ರತಿಪಾದಿಸಿದ್ದನು. ಆದರೆ ಇದಕ್ಕೆ ಪೂರಕವಾಗಿ ಗಂಡು ಮಕ್ಕಳಿಗೆ ನೀಡುತ್ತಿರುವ ಶಿಕ್ಷಣ, ಅವರನ್ನು ರೂಪಿಸುವ ಕ್ರಮಗಳಲ್ಲೂ ಬದಲಾವಣೆ ಅಗತ್ಯ ಎಂಬ ಬಗ್ಗೆ ಮಾತ್ರ ರುಸೋ ಏನನ್ನೂ ಹೇಳದೆ ಮೌನವಹಿಸುವುದನ್ನು ಮೇರಿ ವುಲ್‌ಸ್ಟನ್‌ಕ್ರಾಫ್ಟ್ ತೋರಿಸಿಕೊಡುತ್ತಾಳೆ. ಪುರುಷಾಧಿಪತ್ಯದ ದುರದೃಷ್ಟಕರವಾದ ಅಂಶಗಳಿಂದ ಮಹಿಳೆಯರು ಹೇಗೆ ಬಲಿಪಶುಗಳಾಗುತ್ತಿದ್ದಾರೆ ಎಂಬುದರ ಬಹುಮುಖ ವಿವೇಚನೆಯ ನಂತರ ಮಹಿಳೆಯರು ತಮ್ಮ ಬದುಕು, ಸ್ವಭಾವಗಳ ಮೇಲೆ ನಿಯಂತ್ರಣವನ್ನು ಸಾಧಿಸಬೇಕೆಂದು ಈಕೆ ಕರೆ ನೀಡಿದ್ದಾಳೆ. ಸ್ತ್ರೀವಿಮುಕ್ತಿಯ ಪ್ರಶ್ನೆಯನ್ನು ಸಾಹಿತ್ಯ ಪಠ್ಯಗಳ ವಿಶ್ಲೇಷಣೆಯ ಮೂಲಕ ಚರ್ಚಿಸಲೆತ್ನಿಸಿರುವುವರಲ್ಲಿ ಮೇರಿ ವುಲ್‌ಸ್ಟನ್‌ಕ್ರಾಫ್ಟ್ ಒಂದು ದಾರಿಯನ್ನು ಹುಟ್ಟುಹಾಕಿದವಳೆನ್ನಬಹುದು. ಒಂದು ಪಠ್ಯವನ್ನು ನಾವು ಹೇಗೆ ಓದುತ್ತೇವೆ ಎಂಬ ಕ್ರಮದಲ್ಲೇ ಬಿಡುಗಡೆಯ ಸಾಧ್ಯತೆಯೂ ಹುದುಗಿರುತ್ತದೆ ಎಂಬುದರತ್ತ ಈಕೆ ಸೂಚನೆ ನೀಡುತ್ತಾಳೆ.

ವರ್ಜೀನಿಯ ವುಲ್ಫ್ (೧೮೮೨-೧೯೪೧)

ಕಾಲದ ದೃಷ್ಟಿಯಿಂದಲೂ, ಮಹಿಳಾ ವಿಮೋಚನೆಯ ಪ್ರಶ್ನೆಯನ್ನು ಅಭಿವ್ಯಕ್ತಿ ಮತ್ತು

ಸೃಜನಶೀಲತೆಯ ಪ್ರಶ್ನೆಯ ಜೊತೆ ಸೇರಿಸಿರುವ ದೃಷ್ಟಿಯಿಂದಲೂ ವರ್ಜೀನಿಯಾ ವುಲ್ಫ್ ತನ್ನದೇ ಆದ ಮಹತ್ವದ ಸ್ಥಾನವನ್ನು ಪಡೆದಿದ್ದಾಳೆ. ಈಕೆಯ ಸೃಜನಶೀಲ ಬರಹಕ್ಕೂ, ಸೃಜನೇತರ ಬರಹಕ್ಕೂ 'ಮಹಿಳೆ'ಯೇ ಕೇಂದ್ರ. ತೀಕ್ಷ್ಣವಾದ ಸ್ವೋಪಜ್ಞತೆಯಿಂದ ಚಿಂತಿಸುವುದಕ್ಕಾಗಿ ಪ್ರಸಿದ್ಧಳಾಗಿರುವ ವುಲ್ಫ್, ಸ್ತ್ರೀನಿಷ್ಠವಾದ ಹಲವು ರಾಜಕೀಯ ಬೇಡಿಕೆಗಳನ್ನು ಮುಂದಿಡುತ್ತಾಳೆ. 'ಮಾತೆಯರಿಗೆ ವೇತನ'ವೆಂಬ ಹೊಸ ಬಗೆಯ ಹಕ್ಕೊತ್ತಾಯ, ವಿವಾಹ ವಿಚ್ಛೇದನಾ ಕಾನೂನಿನ ಸುಧಾರಣೆ, ಶಿಕ್ಷಣ ಉದ್ಯೋಗಗಳಲ್ಲಿ ಆಯ್ಕೆಯ ಸ್ವಾತಂತ್ರ್ಯ, ಮಹಿಳಾ ಹಕ್ಕುಗಳ ಸಮರ್ಥನೆ ಮುಂತಾದವು ಆಕೆಯ ಬರವಣಿಗೆಯಲ್ಲಿ ಆಕೆಯನ್ನು ಕಾಡಿರುವುದು ಕಂಡುಬರುತ್ತದೆ.

ಲಿಂಗಭೇದ ವ್ಯವಸ್ಥೆಗೆ ಒಂದು ತಾತ್ವಿಕ ವಿಶ್ಲೇಷಣೆಯನ್ನು ನೀಡಿ, ಅದು ಸಾಂಸ್ಕೃತಿಕವಾಗಿ ಕಟ್ಟಲ್ಪಟ್ಟದ್ದೂ, ಬದಲಾಗುವಂಥದೂ ಎಂದು ಪ್ರತಿಪಾದಿಸಿ, ಅದು ಪ್ರಶ್ನಾರ್ಹವೆಂದು ಪ್ರತಿಪಾದಿಸಿದ್ದು ವರ್ಜೀನಿಯಾ ವುಲ್ಫ್ ಸ್ತ್ರೀವಾದಿ ಚಿಂತನೆಗೆ ನೀಡಿದ ಮಹತ್ವದ ಕಾಣಿಕೆಯೆನಿಸಿದೆ. ಆಕೆಯ ಸಮಗ್ರ ತಾತ್ವಿಕ ವಿಚಾರಗಳನ್ನೂ ದೊರಕಿಸಿಕೊಡುವ ಮೂರು ಮುಖ್ಯ ಕೃತಿಗಳು ಎಂದರೆ A Room of One's Own (೧೯೨೯), Three Guineas (೧೯೩೮) ಮತ್ತು Women and Writing (೧೯೭೯). ಪುರುಷರು ಮಹಿಳೆಯರನ್ನು ದಮನಗೊಳಿಸುವ ಸಾಮಾಜಿಕ ಹಾಗೂ ಮಾನಸಿಕ ವಿಧಾನಗಳನ್ನು ವಿಶ್ಲೇಷಿಸಿರುವ ವುಲ್ಫ್ ಕೌಟುಂಬಿಕ ಲಿಂಗವಿಭಜನೆಗೂ ಫ್ಯಾಸಿಸಂ, ಮಿಲಿಟರಿ ನಿರಂಕುಶ ಪ್ರಭುತ್ವ ಮತ್ತು ಅನ್ಯಾಯಕರಕಾನೂನು ವ್ಯವಸ್ಥೆಗಳಿಗೂ ನಿಕಟವಾದ ಸಂಬಂಧವಿದೆಯೆಂಬುದನ್ನು ತೋರಿಸಲು ಯತ್ನಿಸಿದ್ದಾಳೆ.

ಪುರುಷನಿಂದ ಭಿನ್ನಳಾದ ಸ್ತ್ರೀ, ಆತನನ್ನೇ ಪ್ರತಿಬಿಂಬಿಸುವ ಕನ್ನಡಿಯಂತಿದ್ದು, ಅವನ ವಿಚಾರ, ಹಿತಾಸಕ್ತಿಗಳೇ ಇರುವಂಥ ಸಾಮಾಜಿಕ ವ್ಯವಸ್ಥೆಯನ್ನೇ ಎತ್ತಿಹಿಡಿಯುತ್ತಾಳೆ, ದೃಢಪಡಿಸುತ್ತಾಳೆ. ಕೌಟುಂಬಿಕ ಶ್ರಮ ವಿಭಜನೆಯಲ್ಲಿ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯರನ್ನು ಪ್ರತ್ಯೇಕಗೊಳಿಸುವುದಕ್ಕೆ ಪುರುಷರು ಸ್ತ್ರೀಯರನ್ನು ಭೌತಿಕವಾಗಿಯೂ, ತಾತ್ವಿಕವಾಗಿಯೂ ಆಳುತ್ತಿರುವುದರಲ್ಲೇ ಕಾರಣವಿದೆ ಎಂದಾಕೆ ಪ್ರತಿಪಾದಿಸುತ್ತಾಳೆ.

ಸ್ತ್ರೀನಿಷ್ಠ ವಿಮರ್ಶೆಯ ಮೊದಲ ಮಾದರಿಗಳನ್ನು ಈಕೆಯ A Room of One's Own ಮತ್ತು Women and Writing ಗ್ರಂಥಗಳಲ್ಲಿ ಕಾಣಬಹುದು. ಮಹಿಳೆಯರ ಬರಹಗಳ ಬಗ್ಗೆ ವಿಶೇಷ ಒಳನೋಟವನ್ನು ಒದಗಿಸಿ, ಇಂಗ್ಲೀಷ್ ಭಾಷೆಯಲ್ಲಿ ಮಹಿಳಾ ಸಾಹಿತ್ಯದ್ದೇ ಒಂದು ಪರಂಪರೆ ಇರುವುದನ್ನು ಗುರುತಿಸಿಕೊಟ್ಟವಳು ವರ್ಜೀನಿಯಾ ವುಲ್ಫ್. ಬರಹಕ್ಕೂ ಸಾಮಾಜಿಕ ಸ್ಥಿತಿಗಳಿಗೂ ಸಂಬಂಧವಿರುವುದನ್ನು ಗುರುತಿಸಿ, ಸ್ತ್ರೀಯರು ಸೃಜನಶೀಲ ಅಭಿವ್ಯಕ್ತಿಗೆ ತೊಡಗಲು ಆರ್ಥಿಕಾದಿ ಸ್ವಾತಂತ್ರ್ಯ, ಸ್ವಾಯತ್ತತೆಗಳು ಅವಶ್ಯಕವೆಂದು ಆಕೆ ಪ್ರತಿಪಾದಿಸುತ್ತಾಳೆ. ಕೃತಿಯೊಂದನ್ನು ರಚಿಸಲು ಲೇಖಕಿಗೆ ಸ್ವಂತ ಆದಾಯವಿರಬೇಕು ಮತ್ತು ಅವಳದೇ ಆದ

ಕೊಠಡಿಯೊಂದು ಇರಬೇಕೆಂಬ ವುಲ್ಫ್‌ಳ ಮಾತುಗಳು ಸ್ವಾತಂತ್ರ್ಯಕ್ಕೂ ಸೃಷ್ಟಿಶೀಲತೆಗೂ ಇರುವ ಸಂಬಂಧದತ್ತ ಸೂಚನೆ ನೀಡುತ್ತವೆ.

ಲೇಖಕಿಯರು ತಮ್ಮ ಒಳಗೂ, ಹೊರಗಿನ ಸಮಾಜದಲ್ಲೂ ಎದುರಿಸಬೇಕಾದ ಅಡೆತಡೆಗಳು ಅವರ ಕೃತಿಯ ಗುಣಮಟ್ಟವನ್ನು ಹೇಗೆ ನಿಯಂತ್ರಿಸುತ್ತವೆ ಎಂಬುದರತ್ತ ಆಕೆ ಬೆಳಕು ಚೆಲ್ಲಿದ್ದಾಳೆ. ಅತಿರೇಕದ ಆದರ್ಶ, ದೈವಿಕತೆಗಳ ಭ್ರಮೆಯಿಂದ ಹೊರಬಂದು, ಮಾನವೀಯ ಮೌಲ್ಯಗಳನ್ನು ಸಾಕಾರಗೊಳಿಸುವಂಥ, ಮಡಿವಂತಿಕೆಯಿಲ್ಲದ, ಪ್ರಾಮಾಣಿಕವಾದ ಬರಹವನ್ನು ಮಹಿಳೆಯರು ಬರೆಯಬೇಕೆಂದು ಆಕೆ ಪ್ರತಿಪಾದಿಸುತ್ತಾಳೆ. ಹೊರಜಗತ್ತಿನ ಅವಕಾಶ, ಸವಲತ್ತುಗಳು ಲೇಖಕಿಗೂ ಅವಶ್ಯಕವೆಂದು ವಾದಿಸುವುದರ ಜೊತೆಗೆ ಅನುಭವವನ್ನು ಒಳಕ್ಕೆ ತೆಗೆದುಕೊಂಡು ತನ್ನದಾಗಿಸಿಕೊಳ್ಳುವುದೂ ಲೇಖಕಿಯ ಅವಶ್ಯಕತೆಯೇ ಎಂದು ಆಕೆ ಸಾರಿದ್ದಾಳೆ. ಈ ರೀತಿ ಸಾಮಾಜಿಕ ವಿಮರ್ಶೆ, ಸ್ವ–ವಿಮರ್ಶೆಯನ್ನು ಬೆಸೆದಿರುವ ವುಲ್ಫ್ ಒಂದು ಪ್ರಬುದ್ಧ ಸ್ವತಂತ್ರ ಸ್ತ್ರೀಧ್ವನಿಯಾಗಿ ಮುಂದಿನವರಿಗೆ ದೃಢವಾದ ಒಂದು ಪ್ರತೀಕವೂ ಆಗಿ ಪ್ರಭಾವ ಬೀರಿದ್ದಾಳೆ. [ಹೆಚ್ಚಿನ ಚರ್ಚೆಗೆ ನೋಡಿ: Torilmoi, ೧೯೮೫ Introduction P.೮–೧೭]

ಸಿಮೋನ್ ದ ಬೋವಾ

ಸ್ತ್ರೀವಾದದ ಆದಿ ಚಿಂತಕಿಯರಲ್ಲಿ ಅಂತರರಾಷ್ಟ್ರೀಯ ಮಟ್ಟದ ಪ್ರಭಾವಶಾಲಿ ವಿಚಾರಪ್ರಖರತೆ ತೋರಿ ಪ್ರಸಿದ್ಧಳಾದ ಲೇಖಕಿ ಸಿಮೋನ್ ದ ಬೋವಾ. ಆಕೆಯ ಚರಿತ್ರಾರ್ಹ ರಚನೆಯಾದ The Second Sex (೧೯೪೯) ವಿಪುಲವಾದ ಪರ–ವಿರೋಧ ಚರ್ಚೆಗೆ ವೇದಿಕೆಯನ್ನು ಒದಗಿಸಿ, ಮುಂದಿನ ಸ್ತ್ರೀವಾದಿ ಚಿಂತನೆಯನ್ನು ಗಾಢವಾಗಿ ಪ್ರಭಾವಿಸಿದ ಕೃತಿಯಾಗಿದೆ. ಚಾರಿತ್ರಿಕ ಭೌತವಾದ (Historical materialism), ಮನೋ ವಿಶ್ಲೇಷಣೆ (Psychoanalysis) ಮತ್ತು ಅಸ್ತಿತ್ವವಾದ(Existentialism)ಗಳನ್ನು ತಳಹದಿಯಾಗಿಟ್ಟುಕೊಂಡು ಈಕೆ ಸ್ತ್ರೀಶೋಷಣೆಗೆ ಒಂದು ತಾತ್ವಿಕ ಚೌಕಟ್ಟಿನಲ್ಲಿ ವಿವರಣೆ ನೀಡಲು, ಅದರ ಸ್ವರೂಪವನ್ನು ನಿರ್ವಚಿಸಲು ಯತ್ನಿಸುತ್ತಾಳೆ. ಸಿಮೋನಳ ಕೆಲವು ಮುಖ್ಯ ವಿಚಾರಗಳಿವು.

ಹೆಣ್ಣು–ಗಂಡು ಎಂಬ ಪ್ರತ್ಯೇಕೀಕರಣ ಜೀವಶಾಸ್ತ್ರೀಯವಾಗಿಯೇ ನಿರ್ಧರಿತವಾಗುವ ಒಂದು ವಿಧಿ. ಅದು ಚಾರಿತ್ರಿಕವಾದ ಬೆಳವಣಿಗೆಯಲ್ಲ. ಆದ್ದರಿಂದ ಬದಲಾಗುವಂಥದೂ ಅಲ್ಲ. ಸಾರ್ವಕಾಲಿಕವಾದ ಒಂದು ಅನಿವಾರ್ಯ ವಾಸ್ತವಾಂಶವದು. ಲಿಂಗಭೇದವು (Gender) ಮನೋವ್ಯಾಪಾರಗಳ ಮೂಲಕ ಪೀಳಿಗೆಯಿಂದ ಪೀಳಿಗೆಗೆ ರವಾನೆಯಾಗುತ್ತಾ, ಸಾಂಸ್ಕೃತಿಕವಾಗಿ ಬೆಳೆಯುತ್ತ ಸಾಗುತ್ತದೆ. ಈ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಅದು ಚರಿತ್ರೆಯ ಒಂದು ಅಂಗವಾಗುತ್ತದೆ. ಆದರೆ ಮೂಲಭೂತ ಲಿಂಗಭೇದವು ಶಾಶ್ವತವಾದ ಸ್ಥಿತಿಯಾಗಿರುವುದರಿಂದಲೇ ಚರಿತ್ರೆಯ ಯಾವ ಘಟ್ಟದಲ್ಲೂ ಬದಲು ಸಾಧ್ಯವಾಗದಂಥ

ವಿಶಿಷ್ಟ ರೀತಿಯಲ್ಲಿ ಮಹಿಳೆಯು ಹತ್ತಿಕ್ಕಲ್ಪಡುತ್ತ ಬಂದಿದ್ದಾಳೆ. ಈ ದಮನವು ಸಾರ್ವಕಾಲಿಕ, ಆದ್ದರಿಂದ ಭೂತಕಾಲದಲ್ಲಿ ಕೂಡ ಅವಳ ಶೋಷಿತಸ್ಥಿತಿ ಇದ್ದೇ ಇತ್ತು. ಭೂತಕಾಲವೂ ಭಿನ್ನವಲ್ಲ. ಹಾಗಿರುವಾಗ ಅವಳ ಭವಿಷ್ಯ ತಾನೇ ಹೇಗೆ ಭಿನ್ನವಾಗಲು ಸಾಧ್ಯ? ಎನ್ನುವ ಒಂದು ರೀತಿಯ ವಿಧಿವಾದಿ ನೆಲೆಯಿಂದ ಸಿಮೋನ್ ತನ್ನ ವಿಚಾರಗಳನ್ನು ಮಂಡಿಸುತ್ತಾಳೆ.

ಜೀವಶಾಸ್ತ್ರವೇ ಮಹಿಳೆಯ ಬದುಕನ್ನು ನಿರ್ಧರಿಸುವ ವಿಧಿ ಎಂದು ಈಕೆ ಹೇಳಿದ್ದರೂ ಮಹಿಳೆಯ ಸ್ಥಾನಮಾನಗಳನ್ನು ನಿರ್ಧರಿಸುವ ಸಂಗತಿಗಳಲ್ಲಿ ಸ್ತ್ರೀಶರೀರ ಮಾತ್ರವಲ್ಲದೆ ತಾತ್ವಿಕ, ಆರ್ಥಿಕ, ಸಾಮಾಜಿಕ ಹಾಗೂ ಮನೋವೈಜ್ಞಾನಿಕ ಅಂಶಗಳೂ ನಿರ್ಧಾರಕ ಶಕ್ತಿಗಳಾಗಿರುತ್ತವೆ ಎಂದು ಆಕೆ ತೋರಿಸಿಕೊಡುತ್ತಾಳೆ. ತಾಯ್ತನ ಎಂಬ ಸ್ತ್ರೀವಿಶಿಷ್ಟ ಲಕ್ಷಣವೇ ಮಹಿಳೆಯನ್ನು ಪುರುಷನಿಂದ ತೀರಾ ಪ್ರತ್ಯೇಕಿಸುವ ಅಂಶ; ಅದರ ಮೂಲಕವೇ ಮಹಿಳೆ ಮನೆಗೆಲಸಕ್ಕೇ ಬದ್ಧವಾಗಿ ಉಳಿವ ಸ್ಥಿತಿ ಏರ್ಪಟ್ಟಿತು. ತಾಯ್ತನಕ್ಕೆ ಅವಶ್ಯಕವಾದ ತಾಳ್ಮೆ, ಕಾಳಜಿ, ಜಾಗರೂಕತೆಗಳು ಮನೆವಾಳ್ತನಕ್ಕೂ ಅವಶ್ಯಕವಾಗಿದ್ದರಿಂದಾಗಿ ಆ ಕೆಲಸ ಮಹಿಳೆಗೆ ಮಾತ್ರವೇ ಮೀಸಲೆನಿಸಿತು. ಆದರೆ ಮಗುವನ್ನು ಹೆರುವುದು, ಹಾಲುಣಿಸುವುದು ಮುಂತಾದವು ಸಾಮಾಜಿಕ ಚಟುವಟಿಕೆಗಳಲ್ಲ; ಅವು ನೈಸರ್ಗಿಕ ವಿದ್ಯಮಾನಗಳಷ್ಟೆ. ಅವುಗಳ ಹಿಂದೆ ಯಾವುದೇ ಯೋಜಿತ ಕಾರ್ಯಕ್ರಮವಿಲ್ಲ. ಇವುಗಳಲ್ಲಿ ಸಕ್ರಿಯವಾಗಿ ತೊಡಗುವುದರಿಂದ ಮಹಿಳೆಯು ಸಾಮಾಜಿಕವಾಗಿ ಉನ್ನತ ಸ್ಥಾನವನ್ನೇನೂ ಪಡೆಯುವುದಿಲ್ಲ ಎಂದು ಸಿಮೋನ್ ದ ಬೋವಾ ವಾದಿಸುತ್ತಾಳೆ.

ಖಾಸಗಿ ಆಸ್ತಿಯ ಹುಟ್ಟು ಮಹಿಳೆಯ ಅಧಃಪತನಕ್ಕೆ ಮೂಲವೆನ್ನುವ ಏಂಗೆಲ್ಸ್‌ನ ವಿಚಾರವನ್ನು ಒಪ್ಪಿ ದ ಬೋವಾ ಕೂಡ ಸಾಮಾಜಿಕ ಉತ್ಪಾದನೆಯಿಂದ ಮಹಿಳೆಯು ಪ್ರತ್ಯೇಕಗೊಂಡ ಸ್ಥಿತಿಯೇ ಮಹಿಳೆಯ ಪತನಕ್ಕೆ, ಅಪಮೌಲ್ಯಕ್ಕೆ ಮೂಲವೆನ್ನುತ್ತಾಳೆ, ಆಸ್ತಿಯ ಯಜಮಾನಿಕೆಯನ್ನು ಪಡೆದ ಪುರುಷ ಮಹಿಳೆಯನ್ನು ಹತ್ತಿಕ್ಕಿದ್ದಕ್ಕೆ ಕಾರಣವನ್ನು ಹುಡುಕಲು ಆಕೆ ಚಾರಿತ್ರಿಕಭೌತವಾದದ ಆಚೆಗೂ ಮುಂದುವರೆದು ಮಾನವಸ್ವಭಾವದ ಮೂಲಪ್ರವೃತ್ತಿಯಲ್ಲಿ ಈ ಸಮಸ್ಯೆಯ ಬೇರುಗಳಿರುವುದನ್ನು ಚರ್ಚಿಸುತ್ತಾಳೆ. ಆಸ್ತಿಯ ಸ್ವಾಮ್ಯ, ಯಜಮಾನಿಕೆ, ಅಧಿಕಾರಿಗಳ ಬಯಕೆಗಳು ಪುರುಷರಲ್ಲೇ ಹುದುಗಿರುವ ಸ್ವಭಾವವಾಗಿದ್ದು, ಇದು ಅವರು ಬದುಕುವ ಪರಿಸರಕ್ಕೂ ಮೀರಿದುದಾಗಿರುತ್ತದೆಂದೂ ಆಕೆ ಸೂಚಿಸುವಲ್ಲಿ ಫ್ರಾಯ್ಡನ ಸಿದ್ಧಾಂತಗಳ ಛಾಯೆಯಿದೆ.

ಒಂದು ಹಂತದಲ್ಲಿ ಜೀವಶಾಸ್ತ್ರವನ್ನು, ಮತ್ತೊಂದು ಹಂತದಲ್ಲಿ ಪುರುಷರ ಪ್ರವೃತ್ತಿಜನ್ಯವಾದ ಅಧಿಕಾರದಾಹವನ್ನು, ಭೌತಿಕ ಪರಿಸರವನ್ನು ಮಹಿಳಾ ಶೋಷಣೆಯ ಮೂಲವೆಂದು ಚರ್ಚಿಸುವ ಸಿಮೋನ್ ದ ಬೋವಾಳ ವಿಚಾರಗಳು ವಿವಾದಾತೀತವಲ್ಲ. ಮುಂದೆ ಅನೇಕ ನಿಟ್ಟಿನಿಂದ ಈಕೆಯ ವಿಚಾರಗಳ ಮರುವಿಮರ್ಶೆಗಳು ನಡೆದಿವೆ. ಹಾಗಿದ್ದರೂ ಉತ್ಪಾದನಾ ವ್ಯವಸ್ಥೆಯು ಸಮಗ್ರವಾಗಿ ಬದಲಾಗಿ, ಉತ್ಪಾದನಾ ಪ್ರಕ್ರಿಯೆಯಲ್ಲಿ ಮಹಿಳೆಯೂ ಒಳಗೊಂಡಲ್ಲಿ ಮಹಿಳೆಯ

ಬಿಡುಗಡೆ ಸಾಧ್ಯವೆಂದು ಆಕೆ ಸೂಚಿಸುವುದರಿಂದ ಹಲವು ಸ್ತ್ರೀವಾದಿ ಪಂಥಗಳಿಗೆ ಆಕೆಯ ಕೃತಿ ಮುಖ್ಯ ತಾತ್ವಿಕ ಸೂತ್ರವನ್ನು ಒದಗಿಸಿತು. ಮನೋವಿಜ್ಞಾನ, ಚರಿತ್ರೆ, ಪುರಾಣ ಹಾಗೂ ಸಾಹಿತ್ಯದಲ್ಲಿನ ನಿದರ್ಶನಗಳನ್ನು ವಿಪುಲವಾಗಿ ಬಳಸಿಕೊಳ್ಳುತ್ತಾ ಈಕೆ 'ಮಹಿಳೆ' ಎಂಬ ಪುರುಷಕಲ್ಪಿತವಾದ ರಚನೆ ಹೇಗೆ ಜಡವಸ್ತುವಿನ ಹಾಗೆ ಇದೆಯೆಂದು ವಿಶ್ಲೇಷಿಸಿದ್ದಾಳೆ. ಮಹಿಳೆಯರು ಬದುಕುವ ರೀತಿಗೂ, ಅವರು ತಮ್ಮ ಅನುಭವವನ್ನು ಗುರುತಿಸಿಕೊಳ್ಳುವ ರೀತಿಗೂ ಸಂಬಂಧವಿದೆ ಎಂಬುದನ್ನು ಹಲವಾರು ಮಹಿಳೆಯ ಆತ್ಮಚರಿತ್ರೆಗಳ ವಿಶ್ಲೇಷಣೆಯ ಮೂಲಕ ಈಕೆ ನಿರೂಪಿಸುತ್ತಾಳೆ. ಬೋವಾ ಬಳಸಿದ ವಿಶ್ಲೇಷಣಾ ತಂತ್ರಗಳೂ, ಆಕೆ ಪ್ರತಿಪಾದಿಸಿದ ವಿಚಾರಗಳೂ ಹೊಚ್ಚ ಹೊಸ ರೀತಿಯದಾಗಿದ್ದವು. ಆದ್ದರಿಂದ ಮುಂದಿನ ಹಲವು ಸ್ತ್ರೀವಾದಿಗಳಿಗೆ ಆಕೆ ಬರೆದ The Second Sex ಒಂದು ಕೈ ದೀವಿಗೆಯಾಯಿತು. ಬೆಟಿ ಫ್ರೈಡನ್ನಳ The Feminine Mystique ಕೃತಿಯು ಸಿಮೋನಳ ಈ ಫ್ರೆಂಚ್ ಕೃತಿಯ ಅಮೆರಿಕನ್ ರೂಪಾಂತರವೆಂದೇ ಪ್ರಸಿದ್ಧಿ ಪಡೆಯಿತು. ಶುಲಾಮಿತ್ ಫೈರ್‌ಸ್ಟೋನ್ ಬರೆದ The Dialectic of Sex ಎಂಬ ಕೃತಿಯನ್ನು ಆಕೆ ದ ಬೋವಾಗೇ ಅರ್ಪಣೆ ಮಾಡಿದ್ದಾಳೆ. ಜೂಲಿಯಟ್ ಮಿಚಲ್ ಮಹಿಳೆಯರ ದಮನದ ಸಮಗ್ರ ಸ್ವರೂಪವನ್ನು ಕಟ್ಟಿಕೊಟ್ಟ ಮಹತ್ವದ ಕೃತಿಯೆಂದು ದ ಬೋವಾಳ ಪುಸ್ತಕವನ್ನು ಪ್ರಶಂಸಿಸಿದ್ದಾಳೆ. ಎರಡನೆಯ ಮಹಾಯುದ್ಧದ ನಂತರದ ಸ್ತ್ರೀವಾದಿ ಚಿಂತನೆಯ ಪ್ರಮುಖ ರೂವಾರಿ ಎಂದು ಜಗತ್ತು ಸಿಮೋನ್ ದ ಬೋವಾಳನ್ನು ಗುರುತಿಸುತ್ತದೆ

ಬೆಟಿ ಫ್ರೈಡನ್ (೧೯೨೧–)

ಬೆಟಿ ಫ್ರೈಡನ್ ವೃತ್ತಿಯಿಂದ ಒಬ್ಬ ಪತ್ರಿಕೋದ್ಯೋಗಿ ಹಾಗೂ ಲೇಖಕಿ. ಅಮೆರಿಕದಲ್ಲಿ ಅರವತ್ತರ ದಶಕದಲ್ಲಿದ್ದ ಸಾಮಾಜಿಕ, ಆರ್ಥಿಕ ಪರಿಸರದ ತೀವ್ರವಾದ ಒತ್ತಡದಲ್ಲಿ ಈಕೆ The Feminine Mystique (೧೯೬೩) ಎಂಬ ಕೃತಿಯನ್ನು ರಚಿಸಿದ್ದು ಮಾತ್ರವಲ್ಲ ಅಲ್ಲಿ ರಾಷ್ಟ್ರೀಯ ಮಹಿಳಾ ಸಂಘಟನೆ (Now)ಯನ್ನು ಕಟ್ಟಿದ ಸಕ್ರಿಯ ಸಾಮಾಜಿಕ ಕಾರ್ಯಕರ್ತೆಯಾಗಿಯೂ ತನ್ನನ್ನು ತೊಡಗಿಸಿಕೊಂಡವಳು.

ಬೆಟಿ ಫ್ರೈಡನ್ನಳ ಕೃತಿಗೆ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀತ್ವದ ಸಿದ್ಧವೂ ಸಾಂಪ್ರದಾಯಿಕವೂ ಆದ ಮಾದರಿಗಳಲ್ಲಿ ತೊಳಲಾಡುತ್ತಿರುವ ಮಹಿಳೆಯರ ಸಂಕಟವೇ ಕೇಂದ್ರ ವಿಷಯವಾಗಿದೆ. ಸಿಮೋನಳ ಕೃತಿಯು ತತ್ವಶಾಸ್ತ್ರೀಯ ಹಿನ್ನೆಲೆಯಿಂದ ತುಂಬ ಗಹನ. ಗಂಭೀರ ವಿಚಾರಗಳನ್ನು ಪ್ರತಿಪಾದಿಸಿದ್ದರೆ, ಅದೇ ವಿಚಾರಗಳನ್ನು ಅಮೆರಿಕಾದ ಜನತೆಗೆ ಅವಶ್ಯಕವಿದ್ದ ವ್ಯಕ್ತಿವಾದ, ಉದಾರ ಮಾನವತಾ ವಾದಗಳ ಹಿನ್ನಲೆಯಲ್ಲಿ ಜನಪ್ರಿಯ ಪತ್ರಿಕಾಬರಹದ ಶೈಲಿಯಲ್ಲಿ ಬೆಟಿ ಫ್ರೈಡನ್ ಪುನರುಚ್ಚರಿಸುತ್ತಾಳೆಂದು ವಿಮರ್ಶಕರು ಗುರುತಿಸುತ್ತಾರೆ.

ಪತ್ರಿಕಾ ಬರಹಕ್ಕಾಗಿ ಭಾಷೆಯನ್ನು ಒಗ್ಗಿಸುವುದಕ್ಕಾಗಿ ಈಕೆ ಚರಿತ್ರೆಯನ್ನು, ಫ್ರಾಯ್ಡನ ಮನೋವಿಶ್ಲೇಷಣಾ ಸಿದ್ಧಾಂತಗಳನ್ನು ತೀರಾ ಸರಳಗೊಳಿಸುತ್ತಾಳೆ. ದೈನಂದಿನ ಬದುಕಿನಲ್ಲಿ

ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮಹಿಳೆಯರು ಅನುಭವಿಸುತ್ತಿರುವ ತಾರತಮ್ಯಗಳ ನೂರಾರು ನಿದರ್ಶನಗಳನ್ನು ಈಕೆ ಒದಗಿಸಿದ್ದಾಳೆ. ಶೈಲಿಯ ವೈಶಿಷ್ಟ್ಯದಿಂದಾಗಿ ಅತ್ಯಂತ ಹೆಚ್ಚಿನ ಜನಪ್ರಿಯತೆ ಈಕೆಯ ಪುಸ್ತಕಕ್ಕೆ ದೊರೆಯಿತು.

ಸುಶಿಕ್ಷಿತರಾಗಿದ್ದು, ಗೃಹಿಣಿಯ ಸೀಮಿತ ಪಾತ್ರಕ್ಕೇ ಬದುಕಿಡೀ ಕಟ್ಟುಬೀಳಬೇಕಾಗಿ ಬಂದಿದ್ದರಿಂದ ತೀವ್ರವಾಗಿ ಅತೃಪ್ತಿ, ಕ್ಷೋಭೆಗೆ ಒಳಗಾಗಿದ್ದ ಅಮೆರಿಕದ ಮಧ್ಯಮ ವರ್ಗದ ಮಹಿಳೆಯರ ಸಮಸ್ಯೆಗಳ ಮೇಲೆ ಈಕೆ ತನ್ನ ಕೃತಿಯ ಚರ್ಚೆಯನ್ನು ಕೇಂದ್ರೀಕರಿಸಿದ್ದಾಳೆ. ಆರ್ಥಿಕ ಸಮೃದ್ಧಿ, ಉದಾರಮಾನವತಾವಾದಗಳೂ, ವ್ಯಕ್ತಿನಿಷ್ಠವಾದವೂ ಆ ಕಾಲದಲ್ಲಿ ಅಮೆರಿಕಾದ ಜನರನ್ನು ಪ್ರಭಾವಿಸಿದ್ದ ಅಂಶಗಳು. ಕೈಗಾರಿಕಾ ಕೇಂದ್ರಗಳಾಗಿದ್ದ ನಗರಗಳ, ಹೊರಗಿದ್ದ ಉಪನಗರಗಳ ಮಧ್ಯಮ ವರ್ಗಗಳ ಮಹಿಳೆಯರಷ್ಟೇ ತಮ್ಮ ಪುರುಷರಿಗೆ ಸಮಾನವಾದ ಸ್ವಾತಂತ್ರ್ಯ ತಮಗೆ ಇಲ್ಲವೆಂಬುದರಿಂದ ಎದುರಿಸುತ್ತಿದ್ದ ಸಮಸ್ಯೆಗಳು ಬೆಟಿಯ ದೃಷ್ಟಿಯಲ್ಲಿ ಪ್ರಧಾನವೆನಿಸಿದ್ದು ಅಂಥ ಸಾಂಸ್ಕೃತಿಕ ಹಿನ್ನೆಲೆಯಲ್ಲಿ. ಮಹಾಯುದ್ಧಗಳ ನಂತರದ ಅಮೇರಿಕಾದ ಮಹಿಳೆಯರು ತಮ್ಮ ಅಸ್ಮಿತೆಯನ್ನು ಸ್ಥಾಪಿಸಲು ಅವಕಾಶ, ಸ್ವಾತಂತ್ರ್ಯಗಳಿಲ್ಲದ್ದರಿಂದಾಗಿ ತೀವ್ರ ಕ್ಷೋಭೆಯನ್ನು ಅನುಭವಿಸುತ್ತಿರುವುದನ್ನು ತುಂಬಾ ವಿವರವಾಗಿ, ಹಾಗೂ ದೈನಂದಿನ ಬದುಕಿನಿಂದ ನೇರವಾಗಿ ಆಯ್ದುಕೊಂಡ ನಿದರ್ಶನಗಳ ಮೂಲಕ ಬೆಟಿ ಫ್ರೈಡನ್ ವಿಶ್ಲೇಷಿಸುತ್ತಾಳೆ. ಮಹಿಳೆಯರು ಈ ಮಾನಸಿಕ ಕ್ಷುಬ್ಧ ಸ್ಥಿತಿಗಳಿಂದ ಹೊರಬರಬೇಕಾದರೆ, ಪತ್ನಿ, ತಾಯಿ, ಗೃಹಣಿಯರಾಗಿ ಬದುಕನ್ನು ಇಡಿಯಾಗಿ ಕಳೆಯುವ ಸ್ಥಿತಿಗಳಿಂದ ಹೊರಬರಬೇಕು. ಸಿದ್ಧಪಾತ್ರಗಳಿಗೇ ಜೋತುಬೀಳದೆ, ಮನೆಯ ಹೊರಗಿನ ಸಾಮಾಜಿಕ ವಾಸ್ತವತೆಗಳಿಗೆ ಮುಖಾಮುಖಿಯಾಗುತ್ತ, ತಮ್ಮದೇ ಆದ ಬದುಕನ್ನು ಸ್ವತಃ ರೂಪಿಸಿಕೊಳ್ಳಬೇಕು. ವಿಶಾಲ ಸಮಾಜದಲ್ಲಿ ತಾನೂ ಒಬ್ಬ ವ್ಯಕ್ತಿಯೆಂದು ಗುರುತಿಸಿಕೊಳ್ಳಲು, ತನ್ನ ಶಕ್ತಿ ಸಾಮರ್ಥ್ಯಗಳನ್ನು ಗುರುತಿಸಿಕೊಳ್ಳಲು ಉದ್ಯೋಗವು ಅವಕಾಶವನ್ನು ನೀಡುತ್ತದೆ. ಸಾಂಪ್ರದಾಯಿಕ ಸ್ತ್ರೀಪಾತ್ರಗಳಲ್ಲೇ ಮುಳುಗದೆ, ವ್ಯಕ್ತಿಯ ಘನತೆ, ಅಸ್ಮಿತೆಗಳನ್ನು ಪಡೆದುಕೊಳ್ಳುವುದರಲ್ಲಿಯೇ ಮಹಿಳೆಯರ ಬಿಡುಗಡೆಯಿದೆ ಎಂಬುದು ಫ್ರೈಡನ್ನಳ ವಾದವಾಗಿದೆ.

ಮಹಿಳೆಯರ ಒಂದು ಗುಂಪಿನವರ ಸೀಮಿತ ಸಮಸ್ಯೆಗಳನ್ನು ಎಲ್ಲಾ ಮಹಿಳೆಯರ ಸಮಸ್ಯೆಗಳೆಂದು ಸಾಧಾರಣೀಕರಿಸಿದ ಬೆಟಿ ಫ್ರೈಡನ್ನಳ ಚಿಂತನೆಯಲ್ಲಿರುವ ಕೊರತೆಗಳು ತೀವ್ರವಾಗಿ ಆಕ್ಷೇಪಕ್ಕೆ ಒಳಗಾಗಿವೆ. ಗೃಹಣಿಯರೆಲ್ಲರೂ ತಮ್ಮ ಆ ಸ್ಥಿತಿಯ ಬಗ್ಗೆ ಹತಾಶೆಯನ್ನೇ ಅನುಭವಿಸುತ್ತಾರೆಂದೂ, ಅವಕಾಶ ಸಿಕ್ಕರೆ ಎಲ್ಲಾ ಮಹಿಳೆಯರೂ ಉದ್ಯೋಗಸ್ಥರಾಗಲು ನುಗ್ಗುತ್ತಾರೆಂದೂ ಕಲ್ಪಿಸಿಕೊಂಡದ್ದು ಈಕೆಯ ವಿಚಾರಗಳ ಬಹುದೊಡ್ಡ ಮಿತಿ ಎನ್ನಿಸಿತು. ಅಲ್ಲದೆ ಪಿತೃಪ್ರಧಾನ ವ್ಯವಸ್ಥೆಯ ಮೂಲದಿಂದ ಉದ್ಭವಿಸಿರುವ ಸ್ತ್ರೀಸಮಸ್ಯೆಗಳು ನಿವಾರಣೆಯಾಗಲು ಆ ವ್ಯವಸ್ಥೆಯೇ ಬದಲಾಗಬೇಕೆಂದು ಭಾವಿಸದೆ ಪಿತೃಪ್ರಧಾನ ವ್ಯವಸ್ಥೆಯ

ಚೌಕಟ್ಟಿನ ಒಳಗೇ ಇದ್ದುಕೊಂಡೂ ಉದ್ಯೋಗದ ಮೂಲಕ ಮಹಿಳೆಯರು ಸ್ವತಂತ್ರವಾದ ನೆಲೆಗಳನ್ನು ಪಡೆಯಬಹುದೆಂದು ಈಕೆ ಪ್ರತಿಪಾದಿಸುತ್ತಾಳೆಂಬುದೂ ಬಹುವಾಗಿ ಟೀಕೆಗೊಳಗಾಗಿದೆ.

ಹೀಗೆ ಬೆಟಿ ಫ್ರೈಡನ್ನಳ ಒಟ್ಟು ವಿಚಾರಧಾರೆಯಲ್ಲೇ ಅನೇಕ ಮಿತಿಗಳಿವೆ. ಹಾಗಿದ್ದರೂ ಸ್ತ್ರೀವಾದಿ ವಿಮರ್ಶೆಯ ಮುಖ್ಯವಾದ ಒಂದು ಸಾಂಸ್ಕೃತಿಕ ಬಿಂದುವಿನ ಪ್ರತಿನಿಧಿಯೆಂದು ಈಕೆಯ ಕೃತಿಯು ಮುಖ್ಯವೆನಿಸಿಕೊಂಡಿದೆ. ಸ್ತ್ರೀಯರ ಪ್ರಜ್ಞಾಜಾಗೃತಿ, ಶಿಕ್ಷಣ, ಉದ್ಯೋಗ, ಧಾರ್ಮಿಕ ಆರ್ಥಿಕ ಕ್ಷೇತ್ರಗಳಲ್ಲಿನ ಪರಿವರ್ತನೆಗಳಿಗಾಗಿ ಈಕೆ ಹಕ್ಕೊತ್ತಾಯಿಸುತ್ತಾಳೆ. ಮಹಿಳೆಯರ ರಾಜಕೀಯ ಹಕ್ಕುಗಳು ಮತ್ತು ಕುಟುಂಬ ವ್ಯವಸ್ಥೆಯ ಬದಲಾವಣೆಗಳೂ ಫ್ರೈಡನ್ ಪ್ರತಿಪಾದಿಸುವ ಪರಿಹಾರಗಳಲ್ಲಿ ಸೇರುತ್ತವೆ. ಸಾಹಿತ್ಯದಲ್ಲಿ ಚಿತ್ರಿತವಾಗಿರುವ ಮಹಿಳೆಯರ ಕಾಲ್ಪನಿಕ ಪ್ರತೀಕಗಳನ್ನು ಭೇದಿಸಿ, ನಿರಚಿಸಿ, ನಿಜದ ಮೇಲೆ ಬೆಳಕು ಬೀರುವಂಥ ವಿಮರ್ಶೆಯೊಂದನ್ನು ಬೆಟಿ ಫ್ರೈಡನ್ ರೂಪಿಸಿದಳು. ಹಾಗೆಯೇ ಸಾಹಿತ್ಯ ವಿಶ್ಲೇಷಣೆಯ ಪ್ರಯೋಗಿಕ ವಿಧಾನವೂ ಆಕೆಯೊಂದಿಗೆ ರೂಢಿಗೆ ಬಂದಿತು. ಅಮೆರಿಕದ ಸ್ತ್ರೀವಾದಿ ಚಿಂತನೆ, ವಿಮರ್ಶೆಗಳ ಬೆಳವಣಿಗೆಗೆ ಈಕೆಯು ನೀಡಿರುವ ಕಾಣಿಕೆ ಮಹತ್ವದ್ದಾಗಿದೆ.

ಮೇರಿ ಎಲ್‌ಮನ್ (೧೯೨೧–)

ಲಿಂಗಭಿನ್ನತೆ ಎಂಬುದು ಬರೀ ಜೀವಶಾಸ್ತ್ರೀಯ ನೆಲಗೆ ಸೀಮಿತವಲ್ಲ; ಬದುಕಿನ ವಿದ್ಯಮಾನಗಳನ್ನು ಗ್ರಹಿಸುವ, ಅರ್ಥಮಾಡಿಕೊಳ್ಳುವ ರೀತಿಯಲ್ಲಿಯೇ, ಲೈಂಗಿಕ ಸಾದೃಶ್ಯವನ್ನು ಆಧರಿಸಿದ ಕ್ರಮವೊಂದು ಇರುತ್ತದೆ. ಇಂಥ ಲೈಂಗಿಕ ಸಾದೃಶ್ಯದ ಚಿಂತನಾಕ್ರಮವು ಮಹಿಳೆಯರೂ, ಪುರುಷರೂ ಜಗತ್ತನ್ನು ಕಾಣುವ ಬಗೆಯನ್ನೂ ಅವರ ಅನುಭವಗಳ ವರ್ಗೀಕರಣವನ್ನು ಭಿನ್ನವಾಗಿ ರೂಪಿಸುತ್ತಿರುತ್ತದೆ ಎಂದು ಪ್ರತಿಪಾದಿಸಿದ್ದರಿಂದ ಮೇರಿ ಎಲ್‌ಮನ್ ಸ್ತ್ರೀವಾದಿ ವಿಮರ್ಶೆಗೆ ಒಂದು ಬೇರೆಯ ದಿಕ್ಕನ್ನು ಸೂಚಿಸಿದ ಲೇಖಕಿಯೆನಿಸಿದ್ದಾಳೆ. ಈಕೆ ಸುದೀರ್ಘಕಾಲದ ಸಾಹಿತ್ಯ–ಅಧ್ಯಯನದ ನಂತರ ಪ್ರಕಟಿಸಿದ Thinking About Women (೧೯೬೮) ತುಂಬ ಪ್ರಸಿದ್ಧವಾಗಿದೆ.

ಸ್ತ್ರೀಪುರುಷರಲ್ಲಿ ಅಂತರ್ಗತವಾಗಿರುವ ಲಿಂಗತ್ವ (sexuality) ಆಧರಿತ ಮಾನಸಿಕ ರೂಢಿಯಿಂದಾಗಿ ಅವರು ತಮ್ಮ ಲಿಂಗತ್ವ ಮೂಲದ ಅಭಿಪ್ರಾಯಗಳನ್ನು ಹೊರಜಗತ್ತಿಗೆ ಆರೋಪಿಸುತ್ತಾರೆ. ಅವರ ಇಂಥ ಯೋಚನಾ ಕ್ರಮವೇ ತರ್ಕಹೀನ. ಹಾಗೂ ಅರ್ಥಹೀನ ಎಂಬುದನ್ನು ಬಯಲಿಗೆಳೆಯುವುದು ಮೇರಿಎಲ್‌ಮನ್ನಳ ಬರಹದ ಮುಖ್ಯ ಉದ್ದೇಶ. ಅದಕ್ಕಾಗಿ ಸಾಹಿತ್ಯದಲ್ಲಿನ ರೂಪಕಗಳನ್ನು, ಜೀವನದ ವಿವಿಧ ಕ್ಷೇತ್ರಗಳಲ್ಲಿ ಹುದುಗಿರುವ ಲಿಂಗತ್ವ ಆಧರಿತ ಚಿಂತನೆಯ ಉದಾಹರಣೆಗಳನ್ನು ಈಕೆ ವಿಶ್ಲೇಷಿಸುತ್ತಾಳೆ.

ಮಹಿಳೆಯರ ಕೃತಿಗಳನ್ನು ಚರ್ಚಿಸುವಾಗ ಪುರುಷರು ಸ್ತ್ರೀತ್ವದ ಪ್ರಶ್ನೆಯನ್ನು ತಮ್ಮ

ಆಸಕ್ತಿಯಾಗಿ ಮಾಡಿಕೊಂಡು, ಕೃತಿಗಳೇ ಮಹಿಳೆಯರೆಂಬಂತೆ ಕಲ್ಪಿಸಿಕೊಂಡು ವಿಮರ್ಶೆಯನ್ನು ಕುಚ-ಜಘನಗಳ ಅಳತೆಗೆ ತೊಡಿಸಿರುವ ಕವಚವೆಂಬಂತೆ ಭಾವಿಸುತ್ತಾರೆ. ಇಂಥ ಲಿಂಗತ್ವ ಕೇಂದ್ರಿತವಾದ ವಿಮರ್ಶೆಯು ಹೆಣ್ತನದ ಸಾಂಪ್ರದಾಯಿಕ ಸಿದ್ಧಮಾದರಿಗಳನ್ನೇ ಎತ್ತಿಹಿಡಿದಿರುತ್ತದೆ. ದ್ರವಸ್ವಭಾವ, ಜಡತೆ, ಅಸ್ಥಿರತೆ, ಸೀಮಿತತೆ, ಪಾವಿತ್ರ್ಯ ಐಹಿಕತೆ, ಆಧ್ಯಾತ್ಮಿಕತೆ, ಅವೈಚಾರಿಕತೆ, ವಿಧೇಯತೆ ಮುಂತಾದ ಗುಣಗಳನ್ನೂ, ಮಾಟಗಾತಿ, ಗಂಡುಬೀರಿ ಮುಂತಾದ ಬದಲಾಗದ್ದು ಎನಿಸಿರುವಂಥ ಪ್ರತೀಕಗಳನ್ನೂ ಇಂಥ ವಿಮರ್ಶೆ ಎತ್ತಿಹಿಡಿದಿರುತ್ತದೆಂದು ನಿದರ್ಶನಗಳ ಸಮೇತ ಮೇರಿ ಎಲ್‌ಮನ್ ತೋರಿಸಿಕೊಡುತ್ತಾಳೆ.

ಸ್ತ್ರೀಪುರುಷರ ದೈಹಿಕ ಭಿನ್ನತೆಗೂ ಅವರ ರಚನೆಗಳಲ್ಲಿ ಕಾಣಿಸುವ ಭಿನ್ನತೆಗೂ ಸಂಬಂಧವಿದೆ ಎನ್ನುವ ಮೇರಿ ಎಲ್‌ಮನ್ ಪ್ರಕಾರ ಪುರುಷರ ಬರಹ ಆತ್ಮವಿಶ್ವಾಸದ ಇಲ್ಲವೆ ಆತ್ಮಸಮರ್ಥನೆಯ ಧ್ವನಿಯನ್ನು ಪ್ರಕಟಿಸಿದರೆ, ಮಹಿಳೆಯರ ಬರಹದಲ್ಲಿ ಇಂಥ ಆತ್ಮವಿಶ್ವಾಸ, ಆತ್ಮ ಸಮರ್ಥನೆಗಳೆರಡಕ್ಕಿಂತ ಭಿನ್ನವಾದ ಸಂವೇದನಾಶೀಲತೆಯೇ ಪ್ರಧಾನವಾದ ಧ್ವನಿಯು ಮೈಗೂಡಿರುತ್ತದೆ. ಸ್ತ್ರೀಬರಹಗಾರರು ಪಿತೃಪ್ರಾಧಾನ್ಯದ ಆಕ್ರಮಣಕಾರಿ ಧೋರಣೆಗಳೊಂದಿಗೆ ರಾಜಿ ಮಾಡಿಕೊಳ್ಳಲು ಇಲ್ಲವೆ ಅವುಗಳನ್ನು, ಎದುರಿಸಲು ನಾನಾ ರೀತಿಯ ತಂತ್ರಗಳನ್ನು ಅನುಸರಿಸುತ್ತಾರೆಂಬುದನ್ನು ಹೇಳಿ ಜೇನ್ ಆಸ್ಟಿನ್ನಳ ಬರಹವನ್ನು ನಿದರ್ಶನವಾಗಿ ಸೂಚಿಸುತ್ತಾಳೆ ಎಲ್‌ಮನ್.

ಪುರುಷರ ಬರಹಗಳಿಗೆ ಹೋಲಿಸಿದಾಗ ಮಹಿಳೆಯರ ರಚನೆಗಳಲ್ಲಿನ ಭಾಷೆ, ಶೈಲಿ, ಧ್ವನಿ, ತಂತ್ರಗಳಲ್ಲಿ ಕಂಡುಬರುವ ಭಿನ್ನತೆಗಳಿಗೆ ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಕಾರಣಗಳಿವೆ ಎಂಬುದಕ್ಕಿಂತ ಲಿಂಗತ್ವ ಭಿನ್ನತೆಯ ಪ್ರಭಾವವೇ ಕಾರಣವೆನ್ನುವುದು ಎಲ್‌ಮನ್ನಳ ಭಾವನೆ. ಆದರೆ ಅರವತ್ತರ ದಶಕದಿಂದೀಚಿನ ಆಧುನಿಕೋತ್ತರ ಚಿಂತನೆಗಳು ಅಧಿಕಾರಯುತವಾಗಿ ಬರೆಯುವ ಧೋರಣೆಯನ್ನೇ ವಿರೋಧಿಸುತ್ತಿರುವುದರಿಂದ, ಹೊಸಕಾಲದ ಸಾಹಿತ್ಯವು ಎಲ್ಲ ಬಗೆಯ ಅಧಿಕಾರ-ಧೋರಣೆಗಳನ್ನು ಬುಡಮೇಲು ಮಾಡಲು ಯತ್ನಿಸುತ್ತದೆ. ಇದರಿಂದ ಮಹಿಳೆಯರಿಗೂ ಹೊಸ ರೀತಿಗಳಿಂದ ಬರೆಯುವ ಸಾಧ್ಯತೆಗಳು ತೆರೆದಂತಾಗಿದೆ. ಎಂದು ಮೇರಿ ಎಲ್‌ಮನ್ ಗುರುತಿಸಿದ್ದು ತುಂಬ ಗಮನಾರ್ಹವಾದದ್ದು.

ಮೇರಿ ಎಲ್‌ಮನ್ನಳ ವಿಮರ್ಶಾಕ್ರಮವನ್ನು ಕೆಲವರು ಮುಂದಿನ ಸ್ತ್ರೀವಾದಿಗಳು ತಮ್ಮ ಮಾದರಿಯೆಂದು ಗುರುತಿಸಿಕೊಳ್ಳುತ್ತಾರೆ. ಉದಾಹರಣೆಗೆ. ಆಂಗ್ಲ-ಅಮೆರಿಕನ್ ಸ್ತ್ರೀವಾದದಲ್ಲಿ ಪ್ರಮುಖವಾಗಿ ಗಮನಸೆಳೆದ ಸಾಂಡ್ರಾ ಗಿಲ್ಬರ್ಟ್, ಸೂಸನ್ ಗುಬರ್‌ರ The Mad Woman in the Attic ಗ್ರಂಥದಲ್ಲಿ ಎಲ್‌ಮನ್ನಳ ಪ್ರೇರಣೆಯಿದೆ. ಲಿಂಗಕೇಂದ್ರಿತ ಚಿಂತನಾಕ್ರಮವನ್ನು ಗುರುತಿಸಿ. ಒಡೆದು, ಅದರ ಪೊಳ್ಳುತನವನ್ನು ಮೇರಿ ಎಲ್‌ಮನ್ ಬಯಲಿಗೆಳೆಯುತ್ತಾಳೆ. ಆದರೆ ಅವಳ ಹಿಂಬಾಲಕರೆಂದು ತಮ್ಮನ್ನು ಕರೆದುಕೊಳ್ಳುವವರ ಒಟ್ಟು ಚಿಂತನೆಯೇ ಲಿಂಗಕೇಂದ್ರಿತವಾಗಿರುವುದನ್ನು ಟೋರಿಲ್ ಮೊಯಿ ಗುರುತಿಸುತ್ತಾರೆ.

ಶುಲಾಮಿತ್ ಫೈರ್ ಸ್ಟೋನ್ (೧೯೪೫-)

ಮಹಿಳಾ ವಿಮೋಚನಾ ಚಳವಳಿಯಲ್ಲಿ ತೀವ್ರಗಾಮಿಗಳ ಪಂಥವೊಂದು ಬೆಳೆದಿದ್ದು ಈ ಪಂಥದ ಮುಖ್ಯ ತಾತ್ವಿಕ ನಂಬಿಕೆಯು 'ಹೆಣ್ಣಿನ ಮೂಲಭೂತ ಸಮಸ್ಯೆಯೆಂದರೆ ಎಲ್ಲ ಕಡೆಗಳಿಂದಲೂ ಅವಳನ್ನು ಆವರಿಸಿ, ದಮನಗೊಳಿಸಿರುವ ಪಿತೃಪ್ರಧಾನ ವ್ಯವಸ್ಥೆಯೇ' ಎನ್ನುತ್ತದೆ. ಈ ತೀವ್ರಗಾಮಿಗಳ ಮುಖವಾಣಿ ಶುಲಾಮಿತ್ ಫೈರ್‌ಸ್ಟೋನ್. ಈಕೆ ಬರೆದಿರುವ The Dialectic of Sex (೧೯೭೦) ಎಂಬ ಕೃತಿಯು ಜೀವಶಾಸ್ತ್ರವೇ ಮಹಿಳೆಯ ವಿಧಿ, ಅದೇ ಸ್ತ್ರೀಶೋಷಣೆಯ ಕೇಂದ್ರನೆಲೆ ಎಂಬುದನ್ನು ಮುಖ್ಯವಾಗಿ ಪ್ರತಿಪಾದಿಸುತ್ತದೆ.

ಫೈರ್‌ಸ್ಟೋನಳ ಕೆಲವು ಮುಖ್ಯವಿಚಾರಗಳಿವು: ಸ್ತ್ರೀಪುರುಷರ ವೈರವು ಅವರ ದೈಹಿಕ ಭಿನ್ನತೆ ಮೂಲದ್ದು. ಪಿತೃಪ್ರಧಾನ ವ್ಯವಸ್ಥೆ ಮತ್ತು ಸಂತಾನೋತ್ಪಾದಕ ಜೈವಿಕ ಶಕ್ತಿಗಳೆರಡೂ ಮಹಿಳೆಯರ ದೃಷ್ಟಿಕೋನವನ್ನು ನಿರ್ದಿಷ್ಟ ಕ್ರಮದಲ್ಲಿ ರೂಪಿಸುತ್ತವೆ. ಲೈಂಗಿಕ ಶೋಷಣೆಯೇ ಜಗತ್ತಿನ ಅತ್ಯಂತ ಪ್ರಾಚೀನ ಶೋಷಣಾರೂಪವಾಗಿದೆ. ಅದು ಚರಿತ್ರಾತೀತ. ಕಾಲ, ದೇಶ, ಸಂಸ್ಕೃತಿಗಳ ಗಡಿಗಳನ್ನು ಮೀರಿದ ಈ ಶೋಷಣೆಯು ಸಾರ್ವತ್ರಿಕ ಸ್ವರೂಪದ್ದು.

ಲಿಂಗಭೇದವು ವರ್ಗಭೇದದಂತೆ ಆರ್ಥಿಕ ಮೂಲದಿಂದ ಉಂಟಾಗಿಲ್ಲ. ಅದೊಂದು ಜೀವಶಾಸ್ತ್ರೀಯ ವಾಸ್ತವಾಂಶ. ಅಂದರೆ ಪುರುಷರೂ ಸ್ತ್ರೀಯರೂ ಭಿನ್ನರೂಪಗಳಲ್ಲೇ ಸೃಷ್ಟಿಯಾಗಿದ್ದಾರೆ. ಅವರಿಗೆ ಸಹಜವಾಗಿಯೇ ಸಮಾನ ಸವಲತ್ತುಗಳಿಲ್ಲ. ಆದರೆ ಅನಿರ್ಬಂಧಿತ ಸಂತಾನೋತ್ಪಾದನೆ, ಕೌಟುಂಬಿಕತೆಗಳಿಂದ ಮಹಿಳೆಯರು ಪುರುಷರ ಅಡಿಯಾಳಾಗಿ, ಅವರನ್ನೇ ಅವಲಂಬಿಸುತ್ತಾ, ಅವರಿಂದಲೇ ದೈಹಿಕ ರಕ್ಷಣೆಯನ್ನು ಬಯಸುವ ಸ್ಥಿತಿಯು ಏರ್ಪಟ್ಟಿತು.

ಆದರೆ ಆಧುನಿಕ ವೈಜ್ಞಾನಿಕತೆ, ತಂತ್ರಜ್ಞಾನದ ಬೆಳವಣಿಗೆಗಳ ಫಲವಾಗಿ ಸಂತಾನ ನಿಯಂತ್ರಣ ಸಾಧ್ಯವಾಗಿದೆ. ಕೃತಕ ಸಂತಾನೋತ್ಪತ್ತಿ ತಂತ್ರಗಳೂ ಅನ್ವೇಷಣೆಗೊಂಡಿವೆ. ಇವುಗಳ ನೆರವಿನಿಂದ ಇಂದು ಸ್ತ್ರೀಪುರುಷರಿಬ್ಬರೂ ಜೀವಶಾಸ್ತ್ರೀಯ ಮೂಲದಿಂದಾದ ಕುಟುಂಬ ವ್ಯವಸ್ಥೆಯು ತಮಗೆ ವಿಧಿಸಿರುವ ಲಿಂಗಪಾತ್ರಗಳ ಬಂಧನದಿಂದ ಪಾರಾಗಲು ಸಾಧ್ಯವಿದೆ. ಆದ್ದರಿಂದ ಮಹಿಳೆಯನ್ನು ಕೇವಲ ಮಕ್ಕಳನ್ನು ಹೆರುವ ಯಂತ್ರದಂತೆ ಪರಿಗಣಿಸುವ ಭಯಂಕರ ಸ್ಥಿತಿಯಿಂದ ಮುಕ್ತಳನ್ನಾಗಿ ಮಾಡಲು ಲಭ್ಯವಿರುವ ಎಲ್ಲಾ ವೈಜ್ಞಾನಿಕ ಸಾಧನಗಳನ್ನೂ ಬಳಸಿಕೊಳ್ಳಬೇಕು. ತಾಯಿಯು ಮಗುವನ್ನು ಹೆತ್ತಬಳಿಕ ಸಾಕಿ, ಪೋಷಿಸುವ ಕೆಲಸವನ್ನು ಗಂಡು-ಹೆಣ್ಣು ಇಬ್ಬರೂ ಸೇರಿದಂತೆ ಇಡೀ ಸಮಾಜವು ತನ್ನ ಜವಾಬ್ದಾರಿಯೆಂದು ಗುರುತಿಸಿಕೊಳ್ಳಬೇಕು. ಹೀಗೆ ಮಾಡುವುದರಿಂದ ಜೀವಶಾಸ್ತ್ರವೆಂಬ ವಿಧಿಯ ಸುತ್ತಲೇ ಕಟ್ಟಲಾಗಿರುವ ಸಾಮಾಜಿಕ ವ್ಯವಸ್ಥೆಗೆ ಕುತ್ತು ಬಂದು, ಅದು ಭಗ್ನಗೊಳ್ಳಬೇಕಾಗುತ್ತದೆ ಎನ್ನುವುದು ಫೈರ್‌ಸ್ಟೋನಳ ವಿಚಾರವಾಗಿದೆ. ಮುಂದಿನ ಕೆಲವು ತೀವ್ರಗಾಮಿ ಸ್ತ್ರೀವಾದಿಗಳ ಮೇಲೆ ಈ ವಿಚಾರಗಳು ಗಾಢವಾಗಿ ಪ್ರಭಾವ ಬೀರಿವೆ.

ಕೇಟ್ ಮಿಲೆಟ್ (೧೯೩೪–)

ಸಾಹಿತ್ಯವು ಸಂಸ್ಕೃತಿಯ ಒಂದು ಉತ್ಪಾದನೆಯಾಗಿದ್ದು, ಅದು ತಾನು ಹುಟ್ಟಿ ಬಂದ ಸಂಸ್ಕೃತಿಯನ್ನೇ ಪ್ರತಿನಿಧಿಸುತ್ತದೆ ಎಂಬ ನಂಬಿಕೆಯ ಬಲವಾದ ತಳಹದಿಯ ಮೇಲೆ ಸಾಹಿತ್ಯ ವಿಮರ್ಶೆಯನ್ನು ಸಂಸ್ಕೃತಿ ವಿಮರ್ಶೆಯನ್ನಾಗಿ ರೂಪಿಸುವುದರಲ್ಲಿ ಕೇಟ್ ಮಿಲೆಟ್ ಬರೆದ The Sexual Politics (೧೯೬೯) ಎಂಬ ಕೃತಿಗೆ ಪ್ರಮುಖ ಸ್ಥಾನವಿದೆ. ಈ ಕೃತಿಯು ಪ್ರಕಟವಾದ ಕಾಲದಲ್ಲಿ ಅಮೇರಿಕದ ವಿಶ್ವವಿದ್ಯಾಲಯಗಳ ವಿದ್ವತ್‌ವಲಯದಲ್ಲಿ ನವ್ಯ ವಿಮರ್ಶಾಪದ್ಧತಿ (New Criticism) ತುಂಬ ಪ್ರಭಾವಶಾಲಿಯಾಗಿತ್ತು. ವಸ್ತುನಿಷ್ಠತೆ, ತಂತ್ರನಿಷ್ಠೆಗಳ ಮೇಲೆ ಕಟ್ಟಲಾದ ನವ್ಯ ವಿಮರ್ಶೆಯ ಸಾಹಿತ್ಯಸೂತ್ರ ಮೌಲ್ಯಮಾಪನದ ಮಾನದಂಡಗಳನ್ನು ತೀವ್ರವಾಗಿ ಪ್ರತಿಭಟಿಸಿದ ಕೇಟ್ ಮಿಲೆಟ್ ತನ್ನ ಪ್ರತಿಕ್ರಿಯೆಗಳನ್ನು ಈ ಪ್ರಸಿದ್ಧ ಕೃತಿಯಲ್ಲಿ ದಾಖಲಿಸಿದ್ದಾಳೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳನ್ನು ಅಧ್ಯಯನ ಮಾಡದೆಯೇ ಸಾಹಿತ್ಯವನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ದಿಟ್ಟತನದಿಂದ ಈಕೆ ಪ್ರತಿಪಾದಿಸಿದ್ದು ಸ್ತ್ರೀವಾದಿ ವಿಮರ್ಶೆಯ ಆರಂಭಕಾಲದ ಬೆಳವಣಿಗೆಯ ಮೇಲೆ ಗಾಢವಾದ ಪರಿಣಾಮ ಬೀರಿತು. ಅಲ್ಲಿಂದ ಮುಂದಕ್ಕೂ ಆಂಗ್ಲ ಅಮೇರಿಕದ್ದೇ ವಿಮರ್ಶಾ ಸಂಪ್ರದಾಯವೊಂದು ಬೆಳೆಯಲು ಆ ಕೃತಿಯೇ ನಾಂದಿ ಹಾಡಿತೆನ್ನಬಹುದು. ಈ ವಿಮರ್ಶಾ ಪಂಥವನ್ನು ಬೆಳೆಸಿದವರು ಅಲ್ಲಿನ ವಿಶ್ವವಿದ್ಯಾಲಯಗಳ ತತ್ವಶಾಸ್ತ್ರ, ಸಾಹಿತ್ಯ, ಸಮಾಜಶಾಸ್ತ್ರಗಳ ಉಪನ್ಯಾಸಕಿಯರು, ಪ್ರಾಧ್ಯಾಪಕಿಯರು, ಮಹಿಳಾ ಪತ್ರಿಕೋದ್ಯೋಗಿಗಳು, ಪ್ರಕಾಶರು. ಇವರಿಗೆಲ್ಲ ಕೇಟ್ ಮಿಲೆಟ್ ದೊಡ್ಡ ಮಾದರಿಯಾದಳು.

'ಅಧಿಕಾರವೇ ರಾಜಕೀಯದ ತಿರುಳು' ಎಂದು ಸಾರಿ ಹೇಳಿದ ಕೇಟ್ ಮಿಲೆಟ್ಟಳ ವಿಚಾರದಲ್ಲಿ ಪುರುಷನಿಂದ ಮಹಿಳೆಯು ದಮನಕ್ಕೊಳಗಾಗುತ್ತಿರುವುದರ ಹಿಂದಿರುವ ಲೈಂಗಿಕ ರಾಜಕೀಯವನ್ನು ಬಯಲಿಗೆಳೆಯುವುದು ಸ್ತ್ರೀವಾದಿ ವಿಮರ್ಶಕರ ಮತ್ತು ಚಿಂತಕರ ಪ್ರಥಮ ಕರ್ತವ್ಯ. ಲೈಂಗಿಕ ರಾಜಕಾರಣಕ್ಕೆ ಸೈದ್ಧಾಂತಿಕವಾದ ವಿಶ್ಲೇಷಣೆಯನ್ನು ನೀಡಿದ್ದು ಮಾತ್ರವಲ್ಲ; ಒಂದು ಕೃತಿಯ ತಳದಲ್ಲಿ ಹುದುಗಿರುವ ಇಂಥ ರಾಜಕಾರಣವನ್ನು ಬಯಲಿಗೆಳೆಯಲಿಕ್ಕೆ ಲೇಖಕರಿಗೂ ಓದುಗರಿಗೂ ಪಠ್ಯದ ಉದ್ದೇಶಗಳಲ್ಲಿ ಕಾಣಿಸುವ ವ್ಯತ್ಯಾಸಗಳೇ ಸಾಧನಗಳಾಗಬಲ್ಲವೆಂದು ಪ್ರಾಯೋಗಿಕವಾಗಿ ಆಕೆ ತೋರಿಸಿಕೊಟ್ಟಳು.

ಪಿತೃಪ್ರಾಧಾನ್ಯದೊಳಗೆ ಪುರುಷ ಪ್ರಾಬಲ್ಯ ಮತ್ತು ಮಹಿಳೆಯ ಅಧೀನತೆಗಳ ಸಂಬಂಧವು ಸರ್ವಾಂತರ್ಯಾಮಿಯಾಗಿ (ಬದುಕಿನ ಎಲ್ಲ ಸ್ತರಗಳೊಳಗೂ) ಸೇರಿಕೊಂಡಿರುತ್ತದೆ. ಸಾಮಾಜೀಕರಣದ ಮೂಲಕ ಈ ವ್ಯವಸ್ಥೆಯು ಪೀಳಿಗೆಯಿಂದ ಪೀಳಿಗೆಗೆ ರವಾನೆಯಾಗುತ್ತದೆ. ಪಿತೃಪ್ರಧಾನ ವಿಚಾರಧಾರೆಯು ಈ ವ್ಯವಸ್ಥೆಯನ್ನು ಶಾಶ್ವತಗೊಳಿಸುತ್ತದೆಂದು ಈಕೆ ಪ್ರತಿಪಾದಿಸುತ್ತಾಳೆ.

ಕೇಟ್ ಮಿಲೆಟ್ಟಳ ವಿಚಾರಗಳನ್ನು ಗಂಭೀರವಾಗಿ ವಿಮರ್ಶೆಗೆ ಒಳಗುಮಾಡಿರುವ ಸ್ತ್ರೀವಾದೀ ಸಿದ್ಧಾಂತಕಾರರು, ಈಕೆಯ ವಿಚಾರಗಳ ಮಿತಿ ಮತ್ತು ದೋಷಗಳತ್ತ ಗಮನ ಸೆಳೆದಿದ್ದಾರೆ. ಹಾಗಿದ್ದರೂ ಸಾಹಿತ್ಯವನ್ನು ಸೈದ್ಧಾಂತಿಕ ಸಂವಾದ ಒಂದು ವೇದಿಕೆಯಾಗಿ ಮಾಡಿದ ಕೇಟ್ ಮಿಲೆಟ್ ಪುರುಷರೂಪಿತ ಸಾಹಿತ್ಯಸಂಸ್ಥೆಗಳು, ಅವರ ತಾತ್ವಿಕ ಪರಂಪರೆಗಳು, ಮತ್ತು ಸಾಹಿತ್ಯದ ವಿವಿಧ ಪ್ರಕಾರಗಳೊಳಗೆ ಅಂತರ್ಗತವಾಗಿರುವ ಲೈಂಗಿಕ ರಾಜಕಾರಣದ ಅಂಶಗಳನ್ನು ಪದರ ಪದರವಾಗಿ ಬಿಡಿಸಿ ತೋರಿಸಿಕೊಟ್ಟು ಈ ಚರ್ಚೆಯೇ ಒಂದು ಹೋರಾಟದ ಸ್ಥಳವಾಗುವಂತೆ ಮಾಡಿದಳು. ಅಂದರೆ ಸಾಹಿತ್ಯವಿಮರ್ಶೆ ಕೂಡ ಒಂದು ಸೈದ್ಧಾಂತಿಕ ಹೋರಾಟದ ರಂಗವೆಂದು ಈಕೆ ತೋರಿಸಿಕೊಟ್ಟಿದ್ದು ಮುಂದಿನ ಸ್ತ್ರೀವಾದಿ ವಿಮರ್ಶೆಗೆ ದೊಡ್ಡ ಪ್ರೇರಣೆಯನ್ನು ಒದಗಿಸಿತು. ಆದ್ದರಿಂದ ಆಕೆಯ ವಿಚಾರಗಳನ್ನು ಇನ್ನಷ್ಟು ಪರಿಚಯಿಸಿ ಕೊಳ್ಳುವುದು ಅವಶ್ಯಕ.

ಸಾಹಿತ್ಯವನ್ನು ಪಿತೃಪ್ರಧಾನ ವ್ಯವಸ್ಥೆಯ ಸಮೂಹಪ್ರಜ್ಞೆಯ ದಾಖಲೆ ಎಂದೇ ಭಾವಿಸಿ ಕೇಟ್ ಮಿಲೆಟ್ ಅದಕ್ಕೆ ಮುಖಾಮುಖಿಯಾಗುತ್ತಾಳೆ. ಲಾರೆನ್ಸ್, ಮೇಯ್ಲರ್, ಮಿಲ್ಲರ್ ಮುಂತಾದ ಬರಹಗಾರರ ರಚನೆಗಳಲ್ಲಿ ಪುರುಷರ ಮೌಲ್ಯಗಳೇ ಹೇಗೆ ಸಾರ್ವತ್ರಿಕ ಮೌಲ್ಯಗಳೆಂಬಂತೆ ಸುಧಾರಣೀಕರಣಗೊಂಡಿದೆ ಎಂದು ಆಕೆ ಗುರುತಿಸುತ್ತಾಳೆ. ಬಂಡವಾಳಶಾಹಿ ವ್ಯವಸ್ಥೆಯೊಳಗೆ ಹಿಂಸೆ, ಲೈಂಗಿಕತೆ ಮತ್ತು ಧನದಾಹಗಳೇ ಮೌಲ್ಯಗಳೆನಿಸಿದ್ದು, ಈ ಪುರುಷ ಬರಹಗಾರರು ಅವುಗಳ ಮೂಲ ಪ್ರತೀಕಗಳೇ (Archetypes) ಮಾನವಸಹಜ ಮೌಲ್ಯಗಳ ಪ್ರತೀಕಗಳಾಗುವಂತೆ ಬಿಂಬಿಸುತ್ತಾರೆಂದು ವಿಶ್ಲೇಷಿಸುತ್ತಾಳೆ. ಪುರುಷನ ಪರಮಾಧಿಕಾರವು ಪ್ರಕಟವಾಗುವ ಒಂದು ಮುಖ್ಯ ಜಾಗವೆಂದರೆ ಲೈಂಗಿಕತೆ. ಪುರುಷರು ಸ್ತ್ರೀಯರನ್ನು ಲೈಂಗಿಕವಾಗಿ ಅಧೀನವಾಗಿ ಉಳಿಸಿಡುವಂಥ ಸಂಕೇತಗಳನ್ನೇ ಮತ್ತೆ ಮತ್ತೆ ಸೃಷ್ಟಿಸುತ್ತಾ ಸಾಹಿತ್ಯವು ಅದೇ ದಬ್ಬಾಳಿಕೆ, ಅಧೀನತೆಗಳ ಸಾಂಸ್ಕೃತಿಕ ವಿನ್ಯಾಸಗಳನ್ನು ಮರುಕಳಿಸುವಂತೆ ಮಾಡುತ್ತದೆ. ಇಂತಹ ಚಿಂತನಾ ಪ್ರಕಾರಗಳೂ ಅಭಿವ್ಯಕ್ತಿ ಸಾಧನಗಳೂ ಪುರುಷರ ಹಿಡಿತದಲ್ಲೇ ಇದ್ದು, ಅವರಿಂದ ಅವರಿಗಾಗಿಯೇ ರೂಪುಗೊಂಡಿರುತ್ತವೆಂದು ಕೇಟ್ ಮಿಲೆಟ್ ಸಾರಿ ಹೇಳುತ್ತಾಳೆ.

The Sexual Politics ಗ್ರಂಥದಲ್ಲಿ ಆಕೆ ಮೂರು ಮುಖ್ಯ ಆರೋಪಗಳನ್ನು ಮಾಡುತ್ತಾಳೆ.

೧. ಪುರುಷ ಬರಹಗಾರರು ಸ್ತ್ರೀಯರು ಮತ್ತು ಪುರುಷರ ಪಾತ್ರಗಳನ್ನು (ತಮ್ಮ ಹಿತಾಸಕ್ತಿಗೆ ಅನುಗುಣವಾಗಿಯೇ) ತಿರುಚಿರುತ್ತಾರೆ.

೨. ಎಲ್ಲಾ ಭಿನ್ನತೆಗಳನ್ನು ಸ್ತ್ರೀಸ್ವಭಾವವೆಂದು ಆರೋಪಿಸಿ ಲೈಂಗಿಕತ್ವವನ್ನೇ ತಪ್ಪಾಗಿ ಪ್ರತಿಪಾದಿಸುತ್ತಾರೆ.

ಮತ್ತು ೩. ಕಥಾಸಾಹಿತ್ಯದ (Fiction) ಸಂರಚನೆಯು ಪುರುಷ ಸಂಸ್ಕೃತಿಯನ್ನೇ ಪ್ರತಿನಿಧಿಸುತ್ತದೆ.

ಈ ಆರೋಪಗಳನ್ನು ಸಮರ್ಥಿಸಿಕೊಳ್ಳಲು ಜೀವಶಾಸ್ತ್ರ, ಸಮಾಜಶಾಸ್ತ್ರ ಶಿಕ್ಷಣ, ಮಾನವಶಾಸ್ತ್ರ ಮತ್ತು ಮನೋವಿಜ್ಞಾನಗಳ ಮಾಹಿತಿಗಳನ್ನು ಉದಾಹರಣೆಗಾಗಿ ಬಳಸಿಕೊಂಡು ಅವೆಲ್ಲದರಲ್ಲೂ ಪಿತೃಪ್ರಾಧಾನ್ಯವೇ ಹೇಗೆ ಕೆಲಸಮಾಡುತ್ತದೆಂದು ತೋರಿಸಿಕೊಡುತ್ತಾಳೆ.

ವಿಮರ್ಶೆಯನ್ನು ಪುರುಷರಚಿತ ಪಠ್ಯಗಳನ್ನು ಅರ್ಥೈಸುವ ಅನುವಾದಿಸುವ ಒಂದು ಕಾರ್ಯ ಎಂಬಂತೆ ನೋಡುವ ಕೇಟ್ ಮಿಲೆಟ್ ಪುರುಷರನ್ನು ನಿಂದಿಸುವುದರ ಬದಲು ಪಿತೃಪ್ರಾಧಾನ್ಯದ ಬರೆವ ಕ್ರಮ ಮತ್ತು ಓದುವ ಕ್ರಮಗಳನ್ನು ಅರ್ಥಮಾಡಿಕೊಳ್ಳಲು ಅಗತ್ಯವಾದ ಓದುವ ತಂತ್ರಗಳನ್ನು ರೂಪಿಸಿಕೊಡುತ್ತಾಳೆಂಬುದನ್ನು ಗಮನಿಸಬೇಕು. ಆದರೆ ಆಕೆ ವಿಮರ್ಶೆಗೆ ಆಯ್ಕೆ ಮಾಡಿಕೊಂಡದ್ದು ಪ್ರಮುಖವಾದ ಸಾಹಿತ್ಯ ಕೃತಿಗಳನ್ನಲ್ಲ. ಹಾಗೆಯೇ ತಾನು ಆರಿಸಿಕೊಂಡ ಕೃತಿಗಳಲ್ಲೂ ಮುಖ್ಯ ವಸ್ತುವಿಗೆ ಸಂಬಂಧಿಸಿದ ಸನ್ನಿವೇಶಗಳನ್ನು ಓದಿಗೆ ಒಳಗು ಮಾಡಿಲ್ಲ. ಹಲವಾರು ಸಂದರ್ಭಗಳಲ್ಲಿ ಆಕೆಯು ಅರ್ಥೈಸಿರುವುದು ಸರಿಯಾಗಿಲ್ಲ ಎಂದು ಮಿಲೆಟ್ಟಳ ಟೀಕಾಕಾರರು ಗುರುತಿಸುತ್ತಾರೆ.

ಹಿಂದೆಂದೂ ಕಂಡಿರದಷ್ಟು ಪ್ರಖರವಾಗಿ ಪಿತೃಪ್ರಧಾನ್ಯದ ಲೈಂಗಿಕರಾಜಕಾರಣದ ಸ್ವರೂಪ, ಸಂದರ್ಭಗಳನ್ನು ಈಕೆಯ ಕೃತಿಯು ನಾಟ್ಯೀಕರಿಸಿರುವುದನ್ನು ಮಿಲೆಟ್ ಸ್ತ್ರೀವಾದಿ ವಿಮರ್ಶೆಗೆ ನೀಡಿದ ದೊಡ್ಡ ಕಾಣಿಕೆಯೆನ್ನಲಾಗುತ್ತದೆ. ಮಿಲೆಟ್ ಮುಖ್ಯವಾಗಿ ಸುಧಾರಕ ಮನೋಧೋರಣೆಯನ್ನು ತನ್ನ ಬರಹದಲ್ಲಿ ಪ್ರಕಟಿಸಿದ್ದಾಳೆ. ಮಾನವರೆಲ್ಲರ ವಿಕಾಸಶೀಲ ಬೆಳವಣಿಗೆ ಹಾಗೂ ಅವರ ನಿಜವಾದ ಪುನರ್ ಶಿಕ್ಷಣದ ಮೂಲಕ ಸ್ತ್ರೀವಾದವು ಎತ್ತಿಹಿಡಿವ ಸಮಾನತೆಯ ಗುರಿಯನ್ನು ಸಾಧಿಸಬಹುದೆಂಬುದು ಆಕೆಯ ವಿಚಾರವಾಗಿದೆ [ವಿಶೇಷ ಅಧ್ಯಯನಕ್ಕಾಗಿ ನೋಡಿ : 'Two Feminist Classics' in Torilmoi : 1985.P 21-41]

ಸ್ತ್ರೀವಾದಿ ಚಿಂತನೆಯ ಮೊದಲಿಗರೆನಿಸಿಕೊಳ್ಳುವ ಈ ಲೇಖಕಿಯರು ಮಹಿಳೆಯ ಶೋಷಣೆ, ವಿಮೋಚನೆ, ಪಿತೃಪ್ರಧಾನ ತಾತ್ವಿಕತೆ, ಮತ್ತು ಲಿಂಗಪ್ರಭೇದದ ಪರಿಕಲ್ಪನೆಗಳಿಗೆ ಮೊದಲು ರೂಪಣದ ಕಾರ್ಯವನ್ನು ಆರಂಭಿಸಿದವರೂ, ಸಾಹಿತ್ಯದ ಮೂಲಕ ಸಂಸ್ಕೃತಿ ವಿಮರ್ಶೆಯನ್ನು ಬೆಳೆಸಲು ಪ್ರಯತ್ನಿಸಿದವರೂ ಆಗಿದ್ದರು. ಆದರೆ ಪಿತೃಪ್ರಧಾನ ಸಂಸ್ಕೃತಿಯನ್ನು ಅಂತ್ಯಗೊಳಿಸುವಲ್ಲಿ ತಮ್ಮ ವಿಮರ್ಶೆಯ ಶಕ್ತಿಯೇನು ಎಂಬುದನ್ನು ಇವರು ಕಂಡುಕೊಳ್ಳುವ ರೀತಿಯು ಕುತೂಹಲ ಹುಟ್ಟಿಸುವಂಥದು. ಸ್ತ್ರೀಯರು ಬರಿಯ ಜಡವಸ್ತುಗಳಂತೆ ತಮ್ಮನ್ನು ಭಾವಿಸಿಕೊಳ್ಳುವ ಸ್ಥಿತಿಯಿಂದ ಹೊರಬರುವುದಕ್ಕೆ ಮತ್ತು ಸಮಾಜದ ಕ್ರಿಯಾಶೀಲ ಉತ್ಪಾದಕ ವ್ಯಕ್ತಿಗಳಾಗಿ ತಮ್ಮನ್ನು ಗುರುತಿಸಿಕೊಳ್ಳುವುದಕ್ಕೆ ಸಾಧ್ಯವಿದೆ ಎಂಬ ಬಲವಾದ ನಂಬಿಕೆಯೊಂದನ್ನು ಇವರೆಲ್ಲರೂ ಹೊಂದಿರುವಂತೆ ತೋರುತ್ತದೆ. ಈ ಚಿಂತಕಿಯರ ಪೈಕಿ ಜನತಾಂತ್ರಿಕ ಸಮಾಜವಾದಿ ಧೋರಣೆಗಳನ್ನು ಪ್ರಕಟಿಸುವುದು ಸಿಮೋನ್‌ದ ಬೋವ್ ಮಾತ್ರವೇ. ಇತರರು ಉದಾರ (ಪ್ರಜಾಪ್ರಭುತ್ವವಾದಿ) ಮಾನವತಾವಾದಿ ಚಿಂತನೆಯನ್ನು ಪ್ರಕಟಿಸುವುದನ್ನು

ಕಾಣಬಹುದು. ಇವರ ಸಾಹಿತ್ಯ/ಸಂಸ್ಕೃತಿ ವಿಮರ್ಶೆಯ ಒಟ್ಟು ತಾತ್ವಿಕ ಸಾರಾಂಶವೇನು ಎಂಬುದನ್ನು ಗುರುತಿಸಲು ಹೀಗೆ ಯತ್ನಿಸಬಹುದು.

ಪುರುಷ ವಿಮರ್ಶಕರಲ್ಲಿ ಆಳವಾಗಿ ಬೇರೂರಿರುವ ಸಂಕುಚಿತ ಮನೋಧರ್ಮವನ್ನೂ ಮಹಿಳೆಯರನ್ನು ಅವರು ಅಸಮರ್ಪಕವಾಗಿ ಪ್ರತಿಪಾದಿಸಿರುವುದನ್ನೂ ಈ ವಿಮರ್ಶಕಿಯರು ವ್ಯಾಪಕವಾಗಿ ಗುರುತಿಸಿ ಕೊಡುತ್ತಾರೆ. ಆದರೆ ಸ್ತ್ರೀವಾದಿ ವಿರ್ಮಶೆಯನ್ನು ಹಲವಾರು ಅನ್ಯಜ್ಞಾನ ಮಾರ್ಗಗಳ ಆಧಾರ ಪಡೆದು ಹಿಗ್ಗಿಸಬಹುದಾದ ಸಾಧ್ಯತೆಯನ್ನು ಸೃಷ್ಟಿಸಿದ್ದು ಈ ವಿಮರ್ಶಕಿಯರ ಮಹತ್ವದ ಸಾಧನೆಯೆನ್ನಬಹುದು. 'ಸಾಹಿತ್ಯ', 'ಸಾಹಿತ್ಯ ವಿಮರ್ಶೆ'ಗಳ ಸಾಂಪ್ರದಾಯಿಕವಾದ ಪರಿಕಲ್ಪನೆಗಳ ಎಲ್ಲೆಗಳನ್ನು ವಿಸ್ತರಿಸಲು ಇವರು ಯತ್ನಸಿದ್ದು ಮುಖ್ಯ ಸಂಗತಿ.

ಸ್ತ್ರೀಯರ ಲೈಂಗಿಕತೆಯನ್ನು ಕುರಿತ ಪುರುಷರು ಕಲ್ಪಿಸಿದ ಮಾದರಿಗಳನ್ನೇನೋ ಇವರು ತೀವ್ರವಾಗಿ ಪ್ರತಿಭಟಸುತ್ತಾರೆ. ಆದರೆ ಸ್ತ್ರೀಯರ ನಿಜವಾದ ಲೈಂಗಿಕತೆಯ ಅಭಿವ್ಯಕ್ತಿಯ ಪರ್ಯಾಯ ಸಾಧ್ಯತೆಗಳ ಬಗ್ಗೆ ಇವರು ಏನೂ ಗಮನ ಹರಿಸುವುದಿಲ್ಲ. ಈ ಅಂಶಗಳನ್ನು ಬಹುಮಟ್ಟಿಗೆ ಹತ್ತಿಕ್ಕಿರುವುದೇ ಕಂಡುಬರುತ್ತದೆ. ಈ ದೃಷ್ಟಿಯಿಂದ ಇವರ ವಿಮರ್ಶೆಯು ಒಂದು ಪ್ರಗತಿಯು ಆಶಾವಾದದ ಧ್ವನಿಗಿಂತಲೂ ನಿರಾಶಾವಾದದ ಧ್ವನಿಯನ್ನೇ ಪಡೆದುಕೊಳ್ಳುತ್ತದೆ. ಲೈಂಗಿಕತೆಯ ಸ್ತ್ರೀನಿಷ್ಠ ನೆಲೆಯ ಬಗ್ಗೆ ನಿರ್ಲಕ್ಷ್ಯ ತೋರುವ ಈ ಕೊರತೆಯು ಪ್ರಬಲ ವೈಚಾರಿಕತೆ, ತಾತ್ವಿಕ ನಿಷ್ಠುರತೆಗಳನ್ನುಳ್ಳ ಸಿಮೋನಳ ಕೃತಿಯಲ್ಲಿ ತುಂಬ ಎದ್ದು ತೋರುವುದು ಗಮನಾರ್ಹ. ಮುಂದಿನ ಕೆಲವು ಸ್ತ್ರೀವಾದಿಗಳು ಹೆಣ್ಣುತನ, ಗಂಡುತನಗಳನ್ನು ಪ್ರತ್ಯೇಕಿಸುವುದನ್ನೇ ಅತಿರೇಕಕ್ಕೆ ಕೊಂಡೊಯ್ದು 'ಸ್ತ್ರೀತ್ವ'ಕ್ಕೆ ಲಕ್ಷಣವೊಂದನ್ನು ನಿರ್ವಚಿಸಲು ಯತ್ನಿಸುತ್ತಾರೆ. ಆದರೆ ಈ ಮೊದಲಿಗರೆನಿಸಿದ ಸ್ತ್ರೀವಾದಿಗಳು ಪುರುಷರಿಗೂ ಸ್ತ್ರೀಯರಿಗೂ ಸುಪ್ತಪ್ರಜ್ಞೆಯ ನೆಲೆಯೊಂದಿದೆ. ಅದು ಉಳಿದೆಲ್ಲವನ್ನೂ ಪ್ರಭಾವಿಸುತ್ತಿರುತ್ತದೆ ಎಂಬ ಅರಿವಿಗೆ ತಮ್ಮ ಚರ್ಚೆಗಳಲ್ಲಿ ಅಷ್ಟಾಗಿ ಗಮನವನ್ನು ನೀಡುವುದಿಲ್ಲ ಎಂಬುದು ನಿಜಕ್ಕೂ ಇನ್ನಷ್ಟು ಪರಿಶೀಲನೆಗೆ ಒಳಪಡಬೇಕಾಗಿರುವ ಸಂಗತಿಯಾಗಿದೆ.

ಇಂಥ ಮುಖ್ಯ ಕೊರತೆಯಿದ್ದರೂ ಸಾಹಿತ್ಯಕ ಮೌಲ್ಯಗಳನ್ನು, ಪ್ರಕಾರಗಳನ್ನು, ವಿಮರ್ಶೆಯ ವಿಷಯಗಳನ್ನು ಬದಲಿಸಲು, ವಿಸ್ತರಿಸಲು ಇವರುಗಳು ಮಾಡಿರುವ ಪ್ರಯತ್ನಗಳು ಮುಖ್ಯವಾಗಿವೆ. ಈ ಮೊದಲು ಸಾಹಿತ್ಯ ವಿಮರ್ಶೆಯ ಕ್ಷೇತ್ರಕ್ಕೆ ಅಪರಿಚಿತವಾಗಿಯೇ ಉಳಿದಿದ್ದ ಎಷ್ಟೋ ಅಂಶಗಳನ್ನು, ಅದರಲ್ಲೂ ಮಹಿಳೆಯರ ಅನುಭವವಲಯಕ್ಕೆ ಸಂಬಂಧಿಸಿದನ್ನು ಮುಖ್ಯವಾಗಿವೆ. ಇವರು ವಿಮರ್ಶೆಯೊಳಕ್ಕೆ ತಂದರು. ಈ ಕಾರಣದಿಂದಲೇ ಮುಂದಿನ ಸ್ತ್ರೀವಾದಿ ವಿಮರ್ಶೆಯು ಇವರಿಗೆ ಋಣಿಯಾಗಿರುತ್ತದೆ.

○

೩. ಸ್ತ್ರೀವಾದಿ ಸಾಹಿತ್ಯವಿಮರ್ಶೆ ಮತ್ತು ಅದರ ವಿವಿಧ ಪಂಥಗಳು

ಸ್ತ್ರೀವಾದಿ ಚಿಂತಕರು ತಮ್ಮ ಪ್ರಭಾವಶಾಲಿಯಾದ ಕ್ರಾಂತಿಕಾರಕ ವಿಚಾರಗಳನ್ನು ಸಾಹಿತ್ಯವಿಮರ್ಶೆಯ ಮಾರ್ಗದ ಮೂಲಕವಾಗಿ ಪ್ರತಿಪಾದಿಸಲು ಯತ್ನಿಸುವುದಕ್ಕೆ ಎರಡು ಮುಖ್ಯ ಕಾರಣಗಳಿವೆ. ೧. ದೇಶದೇಶಗಳ ಸಂಸ್ಕೃತಿಗಳ ಮೇಲೆ ಸಾಂಸ್ಕೃತಿಕವಾದ ಅಧಿಕಾರವು ಸಾರ್ವಜನಿಕವಾಗಿ ಅಭಿವ್ಯಕ್ತಿಗೊಳ್ಳುವ ರೀತಿಗಳಲ್ಲಿ ಸಾಹಿತ್ಯವೂ ಒಂದು. ೨. ಅದು ಶೈಕ್ಷಣಿಕವಾಗಿ ಬೋಧನೆಯ ವಿಷಯವಾಗಿ ವ್ಯಕ್ತಿಯ ಪ್ರಜ್ಞೆಯನ್ನು ತಿದ್ದಿ ರೂಪಿಸುವಲ್ಲಿ ತುಂಬ ಸೂಕ್ಷ್ಮ ರೀತಿಯಲ್ಲಿ ಕೆಲಸಮಾಡುತ್ತದೆ.

ಆದ್ದರಿಂದಲೇ ಸ್ತ್ರೀವಾದಿಗಳು ತಮ್ಮ ಹೋರಾಟದ ಮುಖ್ಯ ತಂತ್ರಗಳಲ್ಲಿ ಸಾಹಿತ್ಯ ವಿಮರ್ಶೆಯೂ ಒಂದೆಂದು ಭಾವಿಸುತ್ತಾರೆ. ಸಂಸ್ಕೃತಿಯ ತಾತ್ವಿಕತೆ ಮತ್ತು ಸಂಕೇತಗಳಲ್ಲಿ ಬೇರೂರಿದ ಪುರುಷಾಧಿಕಾರದ ಸ್ವರೂಪಗಳನ್ನು ಬಯಲಿಗೆಳೆದು, ಅವುಗಳನ್ನು ವಿಮರ್ಶೆಗೆ ಒಳಪಡಿಸಿ, ಅವುಗಳ ವಾಸ್ತವರೂಪದ ಬಗ್ಗೆ ಜನತೆಯಲ್ಲಿ ಪ್ರಜ್ಞಾವಂತಿಕೆಯನ್ನು ಬೆಳೆಸುವುದೇ ಈ ವಿಮರ್ಶೆಯ ಗುರಿ.

ಕಳೆದೆರಡು ದಶಕಗಳಲ್ಲಿ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯನ್ನು ಕುರಿತು ರೂಢಿಗತವಾಗಿರುವ ಕೆಲವು ನಂಬಿಕೆಗಳಿವೆ. ಸ್ತ್ರೀವಾದಕ್ಕೆ ತನ್ನದೇ ಆದ ಏಕರೂಪದ ಸಿದ್ಧಾಂತಸೂತ್ರವೆಂಬುದಿಲ್ಲ. ಅದು ಪಶ್ಚಿಮದಲ್ಲಿ ವಿಭಿನ್ನ ಕಾಲಗಳಲ್ಲಿ ಬೇರೆ ಬೇರೆ ಪುರುಷರು ಪ್ರತಿಪಾದಿಸಿದ ಸಿದ್ಧಾಂತಗಳಿಂದಲೇ ಅಸ್ತಿತ್ವಕ್ಕೆ ಬಂದಿದೆ ಎಂಬುದು ಇಂಥ ಒಂದು ಸಾಂಪ್ರದಾಯಿಕ ನಂಬಿಕೆ. ಈ ದೃಷ್ಟಿಯಿಂದ ನೋಡುವವರು ಉದಾರವಾದಿ ಸ್ತ್ರೀವಾದ (Liberal Feminism), ಮಾರ್ಕ್ಸ್‌ವಾದಿ ಸ್ತ್ರೀವಾದ (Marxist Feminism), ಮನೋವಿಶ್ಲೇಷಣಾವಾದಿ ಸ್ತ್ರೀವಾದ (Psychoanalytic Feminism), ಅಸ್ತಿತ್ವವಾದಿ ಸ್ತ್ರೀವಾದ (Existentialist Feminism) ಮುಂತಾಗಿ ಸ್ತ್ರೀವಾದದ ವಿವಿಧ ಪಂಥಗಳನ್ನು ಹೆಸರಿಸುವುದುಂಟು. ಅಂದರೆ ಸ್ತ್ರೀವಾದಿಗಳು ಬೇರೊಂದು ಸಿದ್ಧಾಂತವನ್ನು ಆಶ್ರಯಿಸಿ, ಅದರಲ್ಲಿನ ಪುರುಷಪಕ್ಷಪಾತಿ ನೆಲೆಗಳನ್ನು ಬಿಟ್ಟು, ಸ್ತ್ರೀವಾದದ ಅಗತ್ಯಕ್ಕೆ ಆ ಸಿದ್ಧಾಂತವನ್ನು ಹೊಂದಿಸಿಕೊಳ್ಳಲು ನಡೆಸಿರುವ ಪ್ರಯತ್ನವನ್ನು ಈ ಬಗೆಯ ಹೆಸರುಗಳು ಸೂಚಿಸುತ್ತವೆ ಎನ್ನಬಹುದು.

ಸ್ತ್ರೀವಾದದ ಪಂಥಗಳನ್ನು ನಿರ್ದಿಷ್ಟವಾದ ಭೌಗೋಳಿಕ ವಲಯಗಳಲ್ಲಿ, ಜನಾಂಗೀಯ ಹಾಗೂ ಲೈಂಗಿಕ ಸಂಬಂಧಗಳ ಆಧಾರದ ಮೇಲೆ ಹೆಸರಿಸುವ ಕ್ರಮ ಹೆಚ್ಚು ಪ್ರಚಾರದಲ್ಲಿದೆ. ಆಂಗ್ಲ-ಅಮೇರಿಕದ ಸ್ತ್ರೀವಾದ, ಫ್ರೆಂಚ್ ಸ್ತ್ರೀವಾದ, ತೀವ್ರಗಾಮಿ ಸ್ತ್ರೀವಾದ, ಕಪ್ಪು ಸ್ತ್ರೀವಾದ, ಲೆಸ್ಬಿಯನ್ ಸ್ತ್ರೀವಾದ, ತೃತೀಯ ಜಗತ್ತಿನ ಸ್ತ್ರೀವಾದ ಇತ್ಯಾದಿ. ಈ ಬಗೆಯ ವೈವಿಧ್ಯಮಯ ಪಂಥಗಳಿಗೆ ಸಾಂಸ್ಕೃತಿಕ ಭಿನ್ನತೆಗಳು ಮುಖ್ಯ ಕಾರಣ. ಪ್ರಾರಂಭದಲ್ಲಿ ಪಶ್ಚಿಮ ಐರೋಪ್ಯ ದೇಶಗಳು, ಬ್ರಿಟನ್ ಮತ್ತು ಅಮೇರಿಕಾ ದೇಶಗಳ ಬಿಳಿಯ ಜನಾಂಗದ ಮಹಿಳೆಯರೇ ಮುಖ್ಯವಾಗಿ ಸ್ತ್ರೀವಾದಿ ಚಿಂತನೆಯನ್ನು ಹುಟ್ಟುಹಾಕಿದವರು. ಆ ದೇಶಗಳಲ್ಲಿ ಇದ್ದ ಅಧೀನ ಜನಾಂಗಗಳ ಮತ್ತು ಬಹಿಷ್ಕೃತ ಸಮಾಜಗಳ ಸ್ತ್ರೀಯರ ಸಮಸ್ಯೆಗಳಿಗೂ ಸ್ತ್ರೀವಾದಿಗಳು ಗಮನಹರಿಸುವಂತಾದದ್ದು ಆಮೇಲೆ. ಆ ಹಂತದಲ್ಲಿ ಕಪ್ಪು ಸ್ತ್ರೀವಾದ, ಲೆಸ್ಬಿಯನ್ ಸ್ತ್ರೀವಾದಗಳು ಹುಟ್ಟಿಕೊಂಡವು. ಪಶ್ಚಿಮ ಜಗತ್ತಿನ ಮೇಲೆ ತಮ್ಮ ಬಹುವಿಧವಾದ ಆರ್ಥಿಕ ಅಭಿವೃದ್ಧಿಗಾಗಿ ಅವಲಂಬಿಸಿಕೊಂಡಿರುವ ಭಾರತವೂ ಸೇರಿದಂತೆ ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳ ಮಹಿಳೆಯರ ಸಮಸ್ಯೆಗಳೂ ಇಂದು ಮೊದಲು ಇದ್ದ ಸ್ತ್ರೀವಾದಿ ಸಮಸ್ಯೆಗಳಿಗೆ ಸವಾಲೊಡ್ಡುತ್ತಿವೆ. ಹೀಗಾಗಿ ಸೈದ್ಧಾಂತಿಕವಾಗಿ ಸ್ತ್ರೀವಾದಕ್ಕೆ ಬಹುರೂಪತೆ ಉಂಟಾಗಿದೆ. ಆದರೆ ಈ ರೀತಿಯ ಬಹುರೂಪತ್ವವು ಆಕಾರವಿಲ್ಲದ, ಹೇಗೆಂದರೆ ಹಾಗೆ ಹಿಗ್ಗುವ ಸ್ಥಿತಿಯಲ್ಲ. ಬದಲಾಗಿ ವಿಭಿನ್ನ ಸಾಂಸ್ಕೃತಿಕ ನೆಲೆಯ ಸ್ತ್ರೀಯರ ಅನುಭವಗಳ ಸೇರ್ಪಡೆಯ ಫಲವಾಗಿ ಹುಟ್ಟಿರುವ ಬಹುಮುಖ ಆಯಾಮಗಳುಳ್ಳ ಸ್ಥಿತಿ ಇದಾಗಿದೆ. ಸ್ತ್ರೀವಾದದ ವಿವಿಧ ಪಂಥಗಳು ಪ್ರತಿಪಾದಿಸುವ ತಾತ್ವಿಕತೆಯ ವಿವಿಧ ಮಗ್ಗುಲುಗಳನ್ನು ಸಂಕ್ಷೇಪವಾಗಿ ಹೀಗೆ ಗುರುತಿಸಬಹುದು:

೧. ಸಾಹಿತ್ಯವು ತನ್ನೊಳಗಿನ ಸತ್ವದಿಂದ ಸ್ಥಾಪಿತವಾದದ್ದನ್ನು ಬುಡಮೇಲು ಮಾಡಬಲ್ಲದು. ಆದರೆ ಪುರುಷಪ್ರಧಾನ ವ್ಯವಸ್ಥೆಯು ಸಾಹಿತ್ಯದ ಈ ಶಕ್ತಿಯನ್ನು ತನ್ನ ಕೈಯಲ್ಲಿಟ್ಟುಕೊಂಡು ತನ್ನದೇ ಹಿತಾಸಕ್ತಿಯುಳ್ಳ ತಾತ್ವಿಕತೆಯನ್ನು ಕೆತ್ತಿಡುವುದಕ್ಕೂ ಮಹಿಳೆಯರನ್ನು ಅಂಚಿಗೆ ಒತ್ತರಿಸುವುದಕ್ಕೂ ಸಾಹಿತ್ಯ ಪರಂಪರೆ ಕೆಲಸಮಾಡುವಂತೆ ಮಾಡಿದೆ. ಅದೇ ರೀತಿಯಲ್ಲಿ ವಿಮರ್ಶೆಯೂ ಮಹಿಳೆಯರನ್ನು ಅಧೀನವಾಗಿ ಉಳಿಸಿಡುವ ಸ್ವಭಾವ ಮತ್ತು ಚಾರಿತ್ರ್ಯವನ್ನೇ ಎತ್ತಿಹಿಡಿಯುವಂಥ ಪ್ರತಿಮೆಗಳನ್ನೂ ಆಚರಣೆಗಳನ್ನೂ ಪರಂಪರಾಗತವಾಗಿ ಬೆಂಬಲಿಸುತ್ತಾ ಬರುತ್ತಿದೆ. ಸಾಹಿತ್ಯ ಮತ್ತು ವಿಮರ್ಶೆಗಳ ಪರಂಪರೆ ಮಹಿಳೆಯರನ್ನೂ ಅವರ ಸಾಧನೆಯನ್ನೂ ಒಂದೋ ನಿರ್ಲಕ್ಷಿಸುತ್ತದೆ. ಕೀಳೈಸುತ್ತದೆ ಇಲ್ಲವೆ ಅವರ ವಿಧೇಯತೆಗಾಗಿ ಅವರನ್ನು ಕೊಂಡಾಡುತ್ತದೆಂಬುದನ್ನು ಪಾಶ್ಚಾತ್ಯ ಸಾಹಿತ್ಯ ಪರಂಪರೆಗಳ ವಿಶ್ಲೇಷಣೆಗಳ ಮೂಲಕ ಗುರುತಿಸಿ ತೋರಿಸಿಕೊಡಲು ಸ್ತ್ರೀವಾದಿಗಳು ಯತ್ನಿಸಿದ್ದಾರೆ.

೨. ಕೆಲವು ಪ್ರತಿಷ್ಠಿತ ಕೃತಿಗಳನ್ನು 'ಮೇರು' ಕೃತಿಗಳೆಂದು ಎತ್ತಿಹಿಡಿಯುತ್ತಾ, ಈ ಕೃತಿಗಳು ಮಾನವೀಯ, ಸಾರ್ವಕಾಲಿಕ, ಸಾರ್ವತ್ರಿಕ ಸತ್ಯಗಳನ್ನು ಹೇಳುತ್ತವೆಂದು ಪರಂಪರೆಯು ಸಾರುತ್ತದೆ. ಆದರೆ ವಾಸ್ತವವೆಂದರೆ ಅಂಥ ಕೃತಿಗಳಲ್ಲಿ ಪ್ರತಿಬಿಂಬಿತವಾಗಿರುವ 'ಸತ್ಯ'ವೇ

ಸಾರ್ವಕಾಲಿಕವೆಂದು ಕೊಂಡಾಡಲ್ಪಡುವುದಕ್ಕೆ ಅವು ಪ್ರಧಾನ ವ್ಯವಸ್ಥೆಯ ಚಿಂತನೆಯನ್ನೇ ಹೇಳುತ್ತವೆ. ಎಂಬುದೇ ಮುಖ್ಯ ಕಾರಣವಾಗಿರುತ್ತದೆ. ಇಂಥ ಮೇರುಕೃತಿಗಳ ಶ್ರೇಣಿಯನ್ನು ರೂಪಿಸುವಲ್ಲಿ ಪರಂಪರೆಯು ಮಹಿಳೆಯರ ಸಾಧನೆಯನ್ನು ನಿರ್ಲಕ್ಷಿಸುವುದಷ್ಟೇ ಅಲ್ಲ. ರಾಜಕೀಯವಾಗಿ ಬಲಿಷ್ಠವಾಗಿರುವ ರಾಷ್ಟ್ರಗಳ ಜನರಲ್ಲದ ಇತರ ಎಲ್ಲ ಜನಾಂಗ, ವರ್ಗ, ಬುಡಕಟ್ಟು, ಜನರ ತನ್ನದಕ್ಕಿಂತ ಭಿನ್ನವಾದ ಎಲ್ಲಾ ಸಾಧನೆಗಳು ಹೀಗೆ ಜಾಗತಿಕ ಶ್ರೇಷ್ಠ ಕೃತಿಶ್ರೇಣಿಗೆ ಹೊರತದದ್ದೆಂದು ಭಾವಿಸುತ್ತದೆ.

ಇಂಥ ಪರಂಪರೆಯ ಹಿಂದಿರುವ ಹಿತಾಸಕ್ತಿಗಳನ್ನು ಶೋಧಿಸುವುದು, ಅದರ ಮೇರು ಕೃತಿಗಳಲ್ಲಿ ಪ್ರತಿಪಾದಿತವಾಗಿರುವ ಮೌಲ್ಯಗಳನ್ನು ಪ್ರಶ್ನಿಸುವುದೇ ಆರಂಭದಲ್ಲಿ ಪಾಶ್ಚಿಮಾತ್ಯ ಸ್ತ್ರೀವಾದಿ ವಿಮರ್ಶೆ ಕೈಗೊಂಡ ಕಾರ್ಯವಾಗಿತ್ತು. ಪುರುಷಪ್ರಧಾನ ವ್ಯವಸ್ಥೆಗೂ, ಸಾಹಿತ್ಯ ಪರಂಪರೆಗೂ ಇರುವ ರಾಜಕಾರಣದ ಒಳಸಂಚನ್ನು ಬಯಲಿಗೆ ತರುವುದರಲ್ಲಿ ಆ ಹಂತದ ವಿಮರ್ಶೆ ಕೇಂದ್ರಿತವಾಗಿತ್ತು.

ಪಿತೃಪ್ರಧಾನ ಸಂಸ್ಕೃತಿಯ ಏಕಮುಖತೆ, ಏಕಲಿಂಗ ಪಕ್ಷಪಾತ ಮತ್ತು ಏಕಪಕ್ಷೀಯ ಮೌಲ್ಯಗಳನ್ನು ಪ್ರತಿಬಿಂಬಿಸುವ ಸಾಹಿತ್ಯವು ಮಹಿಳೆಗೆ ದಮನಕಾರಿಯಾಗುವಂತಹ ಅಂಶಗಳನ್ನು ಮತ್ತೆ ಮತ್ತೆ ಎತ್ತಿಹಿಡಿದು, ಪ್ರತಿಪಾದಿಸಿ ಅವುಗಳನ್ನೇ ಶಾಶ್ವತಗೊಳಿಸಲು ಸದಾ ಪ್ರಯತ್ನಶೀಲ ವಾಗಿರುತ್ತದೆ. ಇಂಥ ವ್ಯವಸ್ಥೆಗೆ ಸಾಹಿತ್ಯವೂ ಒಂದು ಪ್ರಬಲ ಅಸ್ತ್ರವಾಗಿರುತ್ತದೆ ಎಂದು ಗುರುತಿಸಿ ಹೇಳಿ, ಸಾಹಿತ್ಯದ ಮೂಲಕವಾಗಿ ಈ ಪಿತೃಪ್ರಧಾನ ತಾತ್ವಿಕತೆಯು ಕೆಲಸಮಾಡುವ ಬಹುಮುಖಿ ಆಯಾಮಗಳನ್ನು ಗುರುತಿಸಿ ವಿಮರ್ಶಿಸುವುದು ಇಂದಿಗೂ ಸ್ತ್ರೀವಾದದ ಮುಖ್ಯ ಗುರಿಗಳಲ್ಲಿ ಒಂದಾಗಿದೆ.

೩. ಸ್ತ್ರೀಪುರುಷರ ಲೈಂಗಿಕ ಸಂಬಂಧದಲ್ಲಿ ಗಂಡಸಿನ ಪಾತ್ರವನ್ನೇ ವೈಭವೀಕರಿಸಿ, ಸಶಕ್ತವಾದುದೆಂದು, ಮೇಲ್ಮೆಯದೆಂದು ಚಿತ್ರಿಸುವುದು; ಹೆಣ್ಣನ್ನು ಗಂಡಿನ ಭೋಗಕ್ಕೆ ಒದಗಬೇಕಾದ ವಸ್ತುವೆಂಬಂತೆ ಮಾತ್ರ ಕಲ್ಪಿಸಿ, ಆಕೆಯ ವ್ಯಕ್ತಿತ್ವ, ಬದುಕುಗಳನ್ನು ಹೀನೈಸುವುದು ಇಲ್ಲವೆ ಪರಿಮಿತಗೊಳಿಸುವುದು; ಆಕೆಯ ಅಸ್ಮಿತೆ, ಸಮಗ್ರತೆಗಳಿಗೆ ಬೆಲೆ ಕೊಡದೆ ಪರಂಪರಾಗತವಾದ ಲೈಂಗಿಕತೆ, ಸಂತಾನೋತ್ಪಾದಕತೆಗಳಿಗಷ್ಟೇ ಆಕೆಯ ವ್ಯಕ್ತಿತ್ವವನ್ನು ಇಳಿಸಿಡುವ ಲಿಂಗವಾದಿ ಧೋರಣೆಗಳನ್ನು ಸ್ತ್ರೀವಾದಿ ವಿಮರ್ಶೆ ಪ್ರಶ್ನಿಸುತ್ತದೆ.

ಪಾಶ್ಚಾತ್ಯ ಸ್ತ್ರೀವಾದಿಗಳು ಲಿಂಗವಾದ (Sexism) ವನ್ನು ತಮ್ಮ ಸಾಹಿತ್ಯ ಮಾದರಿಗಳಲ್ಲಿ ಕಂಡು ಅವುಗಳನ್ನು ನಿಷ್ಠುರವಾಗಿ ವಿಶ್ಲೇಷಣೆಗೆ ಒಳಗುಮಾಡುತ್ತಾರೆ. ಕರ್ನಾಟಕದ ಸಾಂಸ್ಕೃತಿಕ ಸಂದರ್ಭಕ್ಕೂ ಇಂಥ ಚರ್ಚೆಯನ್ನು ಅನ್ವಯಿಸುವುದಾದರೆ, ಕನ್ನಡದ ಪ್ರಾಚೀನ ಕಾವ್ಯಗಳಲ್ಲೂ ನವ್ಯ ಸಾಹಿತ್ಯದಲ್ಲೂ ಈ ಧೋರಣೆಗಳನ್ನು ಗುರುತಿಸಲು ಸಾಧ್ಯ. ಒಂದು ಕಡೆ ಸನ್ಯಾಸ ಧರ್ಮದ ಆದರ್ಶವೆಂದು, ವಿಷಯ ವೈರಾಗ್ಯಕ್ಕೆ ಪ್ರೇರಕವೆಂದು ಸ್ತ್ರೀನಿಂದನೆಯನ್ನೂ

ಅವಯವಗಳನ್ನು ನಿರರ್ಗಳವಾಗಿ ಪೇರಿಸುವ ಕವಿಗಳು; ಮತ್ತೊಂದುಕಡೆ ಶೃಂಗಾರರಸದ ಕಸರಗಳಲ್ಲಿ ಸ್ತ್ರೀಯ ದೇಹದ ವರ್ಣನೆಯಲ್ಲೇ ಮುಳುಗುವುದು ಕಾಣುತ್ತೇವೆ. ಆದರೆ ವೈರಾಗ್ಯಭಾವವಿರಲಿ, ಶೃಂಗಾರವೇ ಇರಲಿ, ಅದರಲ್ಲಿ ಹೆಣ್ಣಿನ ನಿಜವಾದ ಅನುಭವ ಏನಿದ್ದೀತು ಎಂಬ ಬಗ್ಗೆ ಶೈಲೀಕೃತ ನಿರೂಪಣೆಗಳಷ್ಟೇ ನಮಗೆ ಹಳೆಗನ್ನಡ ಕಾವ್ಯಗಳಲ್ಲಿ ಕಾಣುತ್ತವೆ. ಅಷ್ಟವಿಧವಾದ ನಾಯಿಕೆಯರ ಪರಿಕಲ್ಪನೆಯೊಂದು ಸಂಸ್ಕೃತ ಸಾಹಿತ್ಯ ಪರಂಪರೆಯಿಂದ ಕನ್ನಡಕ್ಕೂ ಬಂದಿತು. ಆದರೆ ಅಂಥ ನಾಯಕಿಯರು ಪುರುಷರ ಕ್ರಿಯೆಗೆ ಸಾಧನವಾಗಿ ಒದಗುವ ಕಾಮಿನಿಯರಾಗಿ ನಿರ್ದಿಷ್ಟ ಕಾವ್ಯ ಲಕ್ಷಣ ಸೂತ್ರಗಳಲ್ಲಿ ಬಂಧಿತರು ಅಷ್ಟೆ, ಸ್ವತಂತ್ರ ವ್ಯಕ್ತಿತ್ವವುಳ್ಳ ಜೀವಿಗಳಲ್ಲ.

ಕೌಟುಂಬಿಕ ಮತ್ತು ಸಾಮಾಜಿಕ ನಿರ್ಬಂಧಗಳಲ್ಲಿ ಮುರುಟಿಹೋದ ಹೆಣ್ಣಿನ ನಿಜವಾದ ಆಸಕ್ತಿ, ಆಸ್ಥೆ, ಆಸೆ, ತೃಪ್ತಿಗಳೆಲ್ಲವನ್ನೂ ಮರೆಮಾಚಿದ ಆದರ್ಶನಾರಿತ್ವದ ಮಾದರಿಗಳಷ್ಟೇ ಹೆಣ್ಣಿನ ಇತ್ಯಾತ್ಮಕ ಅನುಭವವೆನಿಸಿತು. ಅವಳ ಅನುಭವ, ಮನಸ್ಸು, ಬುದ್ಧಿಗಳನ್ನೆಲ್ಲ ‘ಮೊಳಕಾಲ ಕೆಳಗೆಂದು’ ನಿರಾಕರಿಸಿ, ದೈಹಿಕ ಸಮೃದ್ಧತೆ, ದೇಹದಾಹಗಳ ವಿವರಣೆಗಳನ್ನೇ ಸತ್ಯಕ್ಕೆ ಒಂದು ಪರ್ಯಾಯವಾಗಿ ಕಲ್ಪಿಸಲಾಯಿತು. ವಚನ ಸಾಹಿತ್ಯ ಮತ್ತು ಆಧುನಿಕ ನವೋದಯ ಸಾಹಿತ್ಯಗಳಲ್ಲಿ ಈ ಹಳೆಯ ಜಾಡಿಗೆ ಅಪವಾದಗಳನ್ನು ಕಾಣಬಹುದು.

೪. ಸ್ತ್ರೀವಾದಿ ಚರಿತ್ರೆಯು ಸ್ತ್ರೀಯರ ಸಾಂಸ್ಕೃತಿಕ ಇರವನ್ನು ವಿಭಿನ್ನ ಸಾಕ್ಷ್ಯಾಧಾರಗಳಿಂದ ಮತ್ತೆ ಕಟ್ಟಿಕೊಡುತ್ತಾ ಚರಿತ್ರೆಯ ಕಾಲಯಾದಿಯ ಪರಿಕಲ್ಪನೆಯನ್ನು ಸುಧಾರಿಸಲು ಯತ್ನಿಸಿದ್ದರೆ, ಸ್ತ್ರೀವಾದಿ ಸಾಹಿತ್ಯ ವಿಮರ್ಶಕರು ಸ್ತ್ರೀಬರಹಗಾರರನ್ನು ಅಧ್ಯಯನ ಮಾಡುವ ಮೂಲಕ ಸಾಹಿತ್ಯದ ‘ಶ್ರೇಷ್ಠತೆ’ಯ ಪರಿಕಲ್ಪನೆ, ವಿವಿಧ ಕಾಲಘಟ್ಟ, ಮೇರುಕೃತಿಶ್ರೇಣಿಗಳ ಮರುಪರಿಶೀಲನೆಗೆ ಒತ್ತಾಯಿಸುತ್ತಾರೆ. ಪಶ್ಚಿಮದಲ್ಲಿ ಕಪ್ಪು ಮಹಿಳೆಯರ, ಲೆಸ್ಬಿಯನ್ನರ ಸಾಹಿತ್ಯಾಭಿವ್ಯಕ್ತಿಗಳ ಪ್ರವೇಶದೊಂದಿಗೆ ಬಿಳಿಯ ಸ್ತ್ರೀವಾದಿ ಚಿಂತನೆ ಕೂಡ ಮತ್ತೆ ಪರಿಶೀಲನಾರ್ಹವೆನಿಸಿತು.

ಈ ದೃಷ್ಟಿಯಿಂದ ಪಶ್ಚಿಮದ ಕೆಲವು ಸ್ತ್ರೀವಾದಿಗಳು ಪ್ರತಿಷ್ಠಿತ ಮೇರುಕೃತಿಶ್ರೇಣಿಯನ್ನು ಮರು ಓದಿಗೆ, ಮರು ಮೌಲ್ಯಮಾಪನಕ್ಕೆ ಒಳಗುಮಾಡುವತ್ತ ಹೆಚ್ಚು ಆಸಕ್ತಿ ವಹಿಸಿದ್ದರೆ, ಮತ್ತೆ ಕೆಲವರು ನಿರ್ಲಕ್ಷಿತರಾಗಿದ್ದ, ಚರಿತ್ರೆಯು ಮರೆತುಬಿಟ್ಟಿದ್ದ ಲೇಖಕಿಯರನ್ನು ಶೋಧಿಸಿ ಪರ್ಯಾಯ ಚರಿತ್ರೆಯನ್ನು ಕಟ್ಟಲು ಯತ್ನಿಸಿದ್ದಾರೆ. ಕೇಟ್ ಮಿಲೆಟ್, ಜರ್ಮೇನ್ ಗ್ರಿಯರ್, ಗೈಲ್ ಬ್ರೌನ್, ಆನೆಟ್ ಕೊಲೋಡ್ನಿ, ಜುಡಿತ್ ಫೆಟರ್‌ಲೀ ಮುಂತಾದವರು ಸ್ಥಾಪಿತ ಕೃತಿಶ್ರೇಣಿಗಳ ಮರುವಿಮರ್ಶಕರಾಗಿ ಖ್ಯಾತರಾದರು. ಎಲೆನ್ ಮೋಯರ್ಸ್, ನ್ಯಾನ್ಸಿ ಪ್ರ್ಯಾಟ್, ಸಾಂಡ್ರಾ ಗಿಲ್ಬರ್ಟ್, ಸೂಸನ್ ಗುಬರ್, ಎಲೀಸ್ ವಾಕರ್ ಮುಂತಾದ ಸ್ತ್ರೀವಾದಿ ಬರಹಗಾರರು ಮಹಿಳಾ ಸಾಹಿತ್ಯ ಪರಂಪರೆಯನ್ನು ಕಟ್ಟುವ ಮತ್ತು ನಿರ್ಲಕ್ಷ್ಯಕ್ಕೆ ಒಳಗಾದ ಲೇಖಕಿಯರ ಬರಹಗಳಿಗೆ ಸರಿಯಾದ ವಿಮರ್ಶೆಯ ಮೂಲಕ ನ್ಯಾಯವಾದ ಸ್ಥಾನವನ್ನು ಚರಿತ್ರೆಯಲ್ಲಿ ದೊರಕಿಸಿಕೊಡುವ ಮೂಲಕ ಪ್ರಮುಖರೆನಿಸಿದ್ದಾರೆ.

'ಮಹಿಳಾ ಸಾಹಿತ್ಯ'ದ ಪ್ರತ್ಯೇಕ ಅಧ್ಯಯನ, ಮರುಪರಿಶೀಲನ, ಮಹಿಳಾ ಸಾಹಿತ್ಯದ್ದೇ ಒಂದು ಪರಂಪರೆಯನ್ನು ಹುಡುಕಿ ಕಟ್ಟುವ ಪ್ರಯತ್ನ ಕನ್ನಡದಲ್ಲಿ ಕಳೆದ ಎರಡು ದಶಕಗಳಿಂದ ನಡೆದಿದ್ದು, ಮಹಿಳಾ ದೃಷ್ಟಿಯಿಂದ ನಮ್ಮ ಸಾಹಿತ್ಯವನ್ನು ಅಭ್ಯಸಿಸುವ ಯತ್ನವೂ ಸಾಕಷ್ಟು ನಡೆಯತೊಡಗಿದೆ. ಇದರಿಂದ, ಮಹಿಳಾ ಬರಹವನ್ನು ನೋಡುವ ದೃಷ್ಟಿಯಲ್ಲಿ ಮಾತ್ರವಲ್ಲ, ನಮ್ಮದೇ ಸಾಹಿತ್ಯ ಚಳವಳಿಗಳನ್ನು ನೋಡುವ ರೀತಿಯಲ್ಲೂ ಬದಲಾವಣೆಗಳನ್ನು ಗುರುತಿಸಬಹುದು. ಉದಾಹರಣೆಗೆ, ನವ್ಯಸಾಹಿತ್ಯ ಚಳವಳಿಯಂಥ ಪಂಥವೊಂದನ್ನು ಸ್ತ್ರೀದೃಷ್ಟಿಕೋನದಿಂದ ಪರೀಕ್ಷಿಸಿದ್ದಾದರೆ ಆ ಚಳವಳಿಯ ಬಗೆಗಿನ ಅನೇಕ ಪರಿಕಲ್ಪನೆಗಳು ಬದಲಾಗಬಲ್ಲವು. ಮಹಿಳಾ ಸಾಹಿತ್ಯ ಯಾವುದೋ ಒಂದು ಮುಖ್ಯವಾಹಿನಿಗೆ ಅಡಿಟಿಪ್ಪಣಿಯೋ ಅನುಬಂಧವೋ ಆಗಿ ಉಳಿಯದೆ, ಇಡೀ ವಾಹಿನಿಯ ಸಹಜಭಾಗವೇ ಆದಾಗ ಸ್ಥಾಪಿತ ಸಾಹಿತ್ಯ ಚರಿತ್ರೆಯೇ ಸ್ವತಃ ಪ್ರಶ್ನೆಗೊಳಗಾಗುವುದು ಅನಿವಾರ್ಯವಾಗುತ್ತದೆ.

ಸ್ತ್ರೀವಾದದ ತಾತ್ವಿಕತೆಯು ಮುಖ್ಯವಾಗಿ ಲಿಂಗಪ್ರಭೇದ ಮತ್ತು ಅದಕ್ಕೆ ಮೂಲವಾದ ಪಿತೃಪ್ರಧಾನ ವ್ಯವಸ್ಥೆಗಳ ವಿಮರ್ಶೆಯನ್ನು ಬಯಸುತ್ತದೆ ಎಂಬುದು ಈವರೆಗಿನ ಚರ್ಚೆಯಿಂದ ಖಚಿತವಾಗುತ್ತದೆ. ಪಶ್ಚಿಮ ದೇಶಗಳಲ್ಲಿ ಸ್ತ್ರೀವಾದದ ವಿವಿಧ ಪಂಥಗಳ ನಡುವೆ ಇರುವ ತಾತ್ವಿಕ ವ್ಯತ್ಯಾಸಗಳು ಕೂಡ ಆಯಾ ಪಂಥವು ಈ ಲಿಂಗಪ್ರಭೇದ ಮತ್ತು ಪಿತೃಪ್ರಧಾನ ವ್ಯವಸ್ಥೆಯ ಬಗ್ಗೆ ಯಾವ ರೀತಿ ನಿರ್ವಚನಗಳನ್ನು ನೀಡುತ್ತದೆ, ಅವುಗಳನ್ನು ಯಾವ ನಿಲುವಿನಿಂದ ಪರೀಕ್ಷಿಸುತ್ತದೆ ಎಂಬುದನ್ನು ಅವಲಂಬಿಸಿವೆ. ಉದಾಹರಣೆಗೆ, ಬ್ರಿಟನ್ ಹಾಗೂ ಅಮೆರಿಕಾಗಳ ಆಂಗ್ಲಭಾಷಿಕ ವಲಯದಲ್ಲಿನ ಸ್ತ್ರೀವಾದಿಗಳು ತಮ್ಮ ಜನತಾಂತ್ರಿಕ ಉದಾರ ಮಾನವತಾವಾದಿ ನೆಲೆಯಿಂದ ಲಿಂಗಪ್ರಭೇದದ ಬಗ್ಗೆ ತಳೆಯುವ ನಿಲುವು ಬೇರೆ, ಅದೇ ಪ್ರದೇಶದ ಮಾರ್ಕ್ಸ್‌ವಾದಿ/ ಸಮಾಜವಾದಿ ಸ್ತ್ರೀವಾದಿಗಳ ನಿಲುವೇ ಬೇರೆ. ಹಾಗೆಯೇ, ಐರೋಪ್ಯ ಸಾಂಸ್ಕೃತಿಕ ಹಿನ್ನೆಲೆಯುಳ್ಳ ಫ್ರೆಂಚ್ ಸ್ತ್ರೀವಾದಿಗಳು ಈ ಎರಡೂ ಪಂಥಗಳಿಗಿಂತ ಹೆಚ್ಚು ಬೌದ್ಧಿಕ ನೆಲೆಯಲ್ಲಿ ಲಿಂಗಪ್ರಭೇದವನ್ನು ನಿರಾಕರಿಸಲು ಚಿಂತಿಸುವುದನ್ನು ಕಾಣುತ್ತೇವೆ. ಇದೇ ರೀತಿ ಇತರ ಪಂಥಗಳ ತಾತ್ವಿಕತೆಗಳಲ್ಲೂ ಭಿನ್ನರೀತಿಯ ವಿಚಾರಗಳನ್ನು ಗುರುತಿಸಬಹುದು. ಆದ್ದರಿಂದ ಈ ವಿವಿಧ ವೈಚಾರಿಕ, ತಾತ್ವಿಕ ನಿಲುವುಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿಕೊಳ್ಳುವುದು ಉಚಿತವೆನಿಸುತ್ತದೆ.

೧. ಆಂಗ್ಲ-ಅಮೇರಿಕದ ಸ್ತ್ರೀವಾದ

ಆಂಗ್ಲ-ಅಮೇರಿಕದ ಸ್ತ್ರೀವಾದಿ ಸಿದ್ಧಾಂತಗಳನ್ನು ರೂಪಿಸುವಲ್ಲಿ ಮಹತ್ವದ ಕೆಲಸ ಮಾಡಿರುವ ಎಲೈನ್ ಶೋವಾಲ್ಟರ್, ಪ್ರತಿಷ್ಠಿತ ಸಾಹಿತ್ಯ ಪರಂಪರೆಯನ್ನು ಸ್ತ್ರೀವಾದಿ ದೃಷ್ಟಿಯಿಂದ ಮರು ಓದಿಗೆ ಒಳಗುಮಾಡುವ ಪ್ರಕ್ರಿಯೆಯನ್ನು ಫೆಮಿನಿಸ್ಟ್ ಕ್ರಿಟಿಕ್ ಎಂದೂ, ಮಹಿಳಾ ಬರಹಗಳ ಅಧ್ಯಯನವನ್ನು ಗೈನೋಕ್ರಿಟಿಸಿಸಂ ಎಂದೂ ಕರೆದು, ಇವುಗಳಿಗೆ ತಾತ್ವಿಕ ನಿರ್ವಚನವನ್ನು ಒದಗಿಸಲು ಯತ್ನಿಸಿದ್ದಾಳೆ. ಸ್ತ್ರೀವಾದಿ ವಿಮರ್ಶೆ (Feminist Critique) ಎನ್ನುವುದನ್ನು ಪುರುಷರಚಿತ ಸಾಹಿತ್ಯದಲ್ಲಿರುವ ಸ್ತ್ರೀಪ್ರತೀಕಗಳು, ಸಿದ್ಧಮಾದರಿಗಳು,

ರೂಪಕಗಳು, ಸ್ತ್ರೀಯರಿಗೆ ಸಂಬಂಧಿಸಿದ ಆದರೆ ಕೈಬಿಟ್ಟ ಅಂಶಗಳು, ಸ್ತ್ರೀಕುರಿತ ಮಿಥ್ಯಾಕಲ್ಪನೆಗಳು, ಸಾಹಿತ್ಯ ಚರಿತ್ರೆಯಲ್ಲಿ ಕಾಣುವ ಕಂದರಗಳು, ಸಾಹಿತ್ಯದ ತಾತ್ವಿಕ ಪರಿಕಲ್ಪನೆಗಳು ಮೊದಲಾದವನ್ನು ಸಮಗ್ರವಾಗಿ ಮರುಪರೀಕ್ಷೆಗೆ ಗುರಿಪಡಿಸುವ ಚಾರಿತ್ರಿಕ ತನಿಖೆ ಎಂದು **ಶೋವಾಲ್ಟರ್ ವಿವರಿಸುತ್ತಾಳೆ.**

ಮಹಿಳಾ ಬರಹದ ವಿಶೇಷ ರೀತಿಯ ಅಧ್ಯಯನವನ್ನು ಸ್ತ್ರೀ ಸಾಹಿತ್ಯ ವಿಮರ್ಶೆ (Gyno Criticism) ಎಂದು ಆಕೆ ಕರೆದಿದ್ದು ಮಹಿಳೆಯರ ಬರಹಗಳ ಶೈಲಿ, ವಸ್ತು, ರೂಪಕ, ಸಂರಚನೆಗಳ ವಿಮರ್ಶೆ ಇದೆಂದೂ, ಇದು ಸ್ತ್ರೀವಾದಿ ವಿಮರ್ಶೆಗಿಂತ ಭಿನ್ನವಾದುದೆಂದೂ ಆಕೆ ಪ್ರತಿಪಾದಿಸುತ್ತಾಳೆ. ಸ್ತ್ರೀ ಸಾಹಿತ್ಯವಿಮರ್ಶೆಯನ್ನು 'ಸ್ತ್ರೀಯ ಸೃಜನಶೀಲತೆಯ ಮಾನಸಿಕ ಗತಿಧರ್ಮ'ವೆಂದೂ 'ಹೆಣ್ಣಿನ ವೈಯಕ್ತಿಕ/ಸಾಮೂಹಿಕ ಜೀವನಕ್ರಮಗಳ ಕಕ್ಷಾಪಂಥ'ವೆಂದೂ 'ಸ್ತ್ರೀ ಸಾಹಿತ್ಯ ಪರಂಪರೆಯ ನಿಯಮಗಳ ವಿಕಾಸದ ದಾಖಲೆ' ಎಂದು ಶೋವಾಲ್ಟರ್ ವರ್ಣಿಸುತ್ತಾಳೆ. ಗೆರ್ಡಾ ಲರ್ನರ್ ಪ್ರತಿಪಾದಿಸಿದ ಸ್ತ್ರೀಕೇಂದ್ರಿತ ಚರಿತ್ರೆ, ಮಹಿಳಾ ಸಂಸ್ಕೃತಿಯ ವಿಚಾರಗಳನ್ನೂ ಆರ್ಡನರ್ ಪ್ರತಿಪಾದಿಸಿದ 'ಮೌನದ ಉಪಸಂಸ್ಕೃತಿ'ಯ ಪರಿಕಲ್ಪನೆಯನ್ನೂ ಶೋವಾಲ್ಟರ್ ಬಳಸಿಕೊಂಡಿದ್ದು, ಸ್ತ್ರೀಸಾಹಿತ್ಯ ವಿಮರ್ಶೆಗೆ ಮಹಿಳೆಯರದೇ ಆದ ವಿಮರ್ಶೆಯ ಚೌಕಟ್ಟೊಂದನ್ನು, ಅವರದೇ ಆದ ಮಾನದಂಡ ವೊಂದನ್ನು ರೂಪಿಸಿಬೇಕಾದ್ದು ಅಗತ್ಯವೆಂದು ಒತ್ತಿಹೇಳುತ್ತಾಳೆ. ಮಹಿಳಾ ಅನುಭವದ ಅಧ್ಯಯನದ ಮೂಲಕವೇ ಬೆಳೆಯಬೇಕಾದ ಈ ವಿಮರ್ಶೆಯು ಸ್ತ್ರೀಯರ ಸಾಂಸ್ಕೃತಿಕ ಲೋಕವನ್ನು ಬೆಳಕಿಗೆ ತರುತ್ತದೆಂದು ಆಕೆಯ ಪ್ರತಿಪಾದನೆ.

ಮಹಿಳೆಯರ ಸಾಹಿತ್ಯ ಹೇಗೆ ಭಿನ್ನ ಮತ್ತು ವಿಶಿಷ್ಟವೆಂದು ಹೇಳಲು ಹೊರಡುವ ಮೊದಲು ಆ ಸಾಹಿತ್ಯದ ಗತಕಾಲವನ್ನು ನಾವು ಮತ್ತೆ ಕಟ್ಟಬೇಕು. ಕಾಲದ ಗತಿಯಲ್ಲಿ ಮಸುಕಾಗಿ ಹೋಗಿರುವ ಮಹಿಳಾ ಕಾದಂಬರಿಕಾರರು, ನಾಟಕಕಾರರು ಮತ್ತು ಕವಿಗಳ ಮೂಲ ಸಾಮಗ್ರಿಯನ್ನು ಮತ್ತೆ ಕಂಡುಕೊಳ್ಳಬೇಕು. ದಶಕದಿಂದ ದಶಕಕ್ಕೆ ನಿರಂತರವಾಗಿ ಸ್ತ್ರೀ ಪರಂಪರೆಯು ಹರಿದು ಬಂದಿರುವುದನ್ನು ಸ್ಥಾಪಿಸಬೇಕು. ಈ ಯತ್ನವು "ಶ್ರೇಷ್ಠ ಲೇಖಕಿಯಿಂದ ಶ್ರೇಷ್ಠ ಲೇಖಕಿಯವರೆಗೆ" ಎಂಬಂತೆ ಇರಬಾರದು ಎಂಬುದು ಸ್ತ್ರೀನಿಷ್ಠ ವಿಮರ್ಶೆಗೆ ಶೋವಾಲ್ಟರ್ ನೀಡಿರುವ ಚೌಕಟ್ಟು.

ಶೋವಾಲ್ಟರ್ ಒತ್ತಾಯಿಸುವಂತೆ ಈ ಸ್ತ್ರೀಸಾಹಿತ್ಯ ವಿಮರ್ಶೆಯು ಪುರುಷಪ್ರಧಾನ ಪರಂಪರೆಯ ಅಸಮತೋಲವನ್ನು ಸರಿದೂಗಿಸಲು ಅವಶ್ಯಕವಾದ ಒಂದು ಹಂತವೇ ಇದ್ದೀತು. ಆದರೆ ಸ್ತ್ರೀವಾದಿ ವಿಮರ್ಶೆಯನ್ನು ಆಕೆಯೇ 'ಸೈದ್ಧಾಂತಿಕವಾದ್ದು, ರಾಜಕೀಯವಾದದ್ದು, ಮಾರ್ಕ್ಸ್‌ವಾದಿ ಸಮಾಜಶಾಸ್ತ್ರ ಮತ್ತು ಸೌಂದರ್ಯ ಮೀಮಾಂಸೆಗೆ ಹೊಂದಿಕೊಂಡದ್ದು' ಎಂದು ಹೇಳುವಲ್ಲಿ ಹೇಗೋ ಒಂದು ರೀತಿ ಸ್ತ್ರೀಸಾಹಿತ್ಯ ವಿಮರ್ಶೆಯನ್ನು ಕಡಿಮೆ ತಾತ್ವಿಕತೆಯುಳ್ಳದ್ದು ಮತ್ತು ಆದ್ದರಿಂದಲೇ ಹೆಚ್ಚು ಮೌಲಿಕವಾದದ್ದೆಂದು ಸೂಚಿಸುವಂತೆ

ತೋರುತ್ತದೆ. ಶೋವಾಲ್ಟರಳ ಈ ದ್ವಂದ್ವವು ಅನೇಕರ ಆಕ್ಷೇಪಣೆಗಳಿಗೆ ಒಳಗಾಗಿದೆ. 'ಸೈದ್ಧಾಂತಿಕ ಬದ್ಧತೆ ಇಲ್ಲದಿರುವುದೆಂದರೆ ಪಕ್ಷನಿರಪೇಕ್ಷವಾದದ್ದು. ಅಂಥ ವಿಮರ್ಶೆ ಸ್ತ್ರೀವಾದಿ ರಾಜಕೀಯಕ್ಕೆ ಹೇಗೆ ಒದಗಲು ಸಾಧ್ಯ?– ಎನ್ನುವುದು ಒಂದು ಮುಖ್ಯ ಪ್ರಶ್ನೆ. ಅಲ್ಲದೆ 'ಮಹಿಳಾಸಂಸ್ಕೃತಿ' ಪ್ರತ್ಯೇಕವಾದ ಅಸ್ತಿತ್ವವುಳ್ಳದ್ದಲ್ಲ. ಅದು ಪ್ರಧಾನ ವಾಹಿನಿಯೊಂದಿಗೆ ಭಾಗಿಯಾಗಿ, ವಿರೋಧಿಯಾಗಿ ಸಂಕೀರ್ಣ ಸಂಬಂಧಗಳಲ್ಲಿ ತನ್ನ ಅಸ್ತಿತ್ವವನ್ನು ಪಡೆದಿರುವಂಥದು. ಮುಖ್ಯ ವಾಹಿನಿಯಿಂದ ಈ ಉಪಸಂಸ್ಕೃತಿಯನ್ನು ಪ್ರತ್ಯೇಕಿಸಿ ಪರ್ಯಾಯ ವ್ಯವಸ್ಥೆಯನ್ನು ಕಟ್ಟುವ ಪ್ರಯತ್ನವು ಹೆಣ್ಣು ಗಂಡಿಗೆ 'ಅನ್ಯ'ಳೆಂದು ಪ್ರತ್ಯೇಕಿಸಿ ಕಾಣುವ ತಾತ್ವಿಕತೆಯದೆ ಅನುಕರಣೆಯಾಗುತ್ತದೆ. ಸ್ಥಾಪಿತ ಪರಂಪರೆಯನ್ನು ಬುಡಮೇಲು ಮಾಡಿ, ಅದೇ ಸ್ಥಳದಲ್ಲಿ ಮತ್ತೊಂದನ್ನು ನೆಡುವುದರಿಂದ ಸ್ತ್ರೀವಾದವು ಯಾವುದನ್ನು ಪ್ರಶ್ನಿಸಲು ಹೊರಟಿದೆಯೋ ಅವೇ ಧೋರಣೆಗಳನ್ನು ಬಲಪಡಿಸಿ ಉಳಿಸಿಡುವಂತೆ ಆಗುತ್ತದೆ. ಮಹಿಳೆಯರದೇ ಪ್ರತ್ಯೇಕ ಲೋಕವೆಂದು ಸಾರಿ ಹೊರಟಾಗ ತೋರಿಕೆಗೆ ಅದು ಸ್ವಾಯತ್ತವೆಂದು ಅನ್ನಿಸಿದರೂ ಇಂಥ ಎಲ್ಲ ಬಗೆಯ ಪ್ರತ್ಯೇಕತೆಗಳು ಸಮಾನತೆಯ ಪರಿಕಲ್ಪನೆಯಿಂದ ದೂರವೇ ಆಗಿರುತ್ತವೆ. ಆದ್ದರಿಂದ ಹೊಸದಾಗಿ ಕಂಡುಕೊಂಡ ಮಹಿಳಾ ಪರಂಪರೆಯನ್ನು ಕೈಬಿಡದೆಯೇ ಮುಖ್ಯ ಕೃತಿಶ್ರೇಣಿಗೂ ಮುಖಾಮುಖಿಯಾಗುವುದು ಸ್ತ್ರೀವಾದಿ ವಿಮರ್ಶೆಯ ಇಂದಿನ ಅವಶ್ಯಕತೆಯಾಗಿದೆ. ಈ ಮಹತ್ವದ ಕಾರ್ಯವು ಹೆಣ್ತನದ ಕೇವಲ ವೈಭವೀಕರಣವಾಗದಂತೆ ಎಚ್ಚರ ಅವಶ್ಯಕ.

೨. ತೀವ್ರಗಾಮಿ ಮತ್ತು ಸಾಂಸ್ಕೃತಿಕ ಸ್ತ್ರೀವಾದ

ಶೋವಾಲ್ಟರ್ ಪ್ರತಿಪಾದಿಸುವ ಸ್ತ್ರೀನಿಷ್ಠ ಸಾಹಿತ್ಯವಿಮರ್ಶೆ ಮತ್ತು ಸ್ತ್ರೀಪರಂಪರೆಗಳ ಪರಿಕಲ್ಪನೆಗಳಿಗೆ ಸ್ತ್ರೀವಾದದ್ದೇ ಚಾರಿತ್ರಿಕ ಹಿನ್ನೆಲೆಯಿದೆ. ಹೆಣ್ಣುತನವನ್ನೂ, ಸ್ತ್ರೀಸಂಬಂಧಿಯಾದ ಎಲ್ಲವನ್ನೂ ತಿರಸ್ಕಾರ, ಅವಹೇಳನಕ್ಕೆ ಒಳಗಾಗಿಸಿದ ಪಿತೃಪ್ರಧಾನ ವ್ಯವಸ್ಥೆಯ ಧೋರಣೆಗೆ ಸ್ತ್ರೀವಾದಿಗಳಲ್ಲಿ ಹುಟ್ಟಿದ ಬಲವಾದ ಪ್ರತಿಕ್ರಿಯೆಯು 'ತೀವ್ರಗಾಮಿ' (Radical) ಸ್ತ್ರೀವಾದಕ್ಕೂ ಸಾಂಸ್ಕೃತಿಕ ಸ್ತ್ರೀವಾದಕ್ಕೂ (Cultural Feminism) ಅವಕಾಶ ಮಾಡಿಕೊಟ್ಟಿದೆ. ಸ್ತ್ರೀತ್ವದ ಗುಣಗಳನ್ನೇ ಬೇರೊಂದು ಉದ್ದೇಶದಿಂದ ಎತ್ತಿಹಿಡಿವ ಲೆಸ್ಬಿಯನ್ ಸ್ತ್ರೀವಾದಿಗಳೂ ಇದೇ ತಾತ್ವಿಕ ಮೂಲಕ್ಕೆ ಸೇರುತ್ತಾರೆನ್ನಬಹುದು.

ಜೀವಶಾಸ್ತ್ರೀಯ ಭಿನ್ನತೆಯೇ ಸ್ತ್ರೀಶೋಷಣೆಗೆ ಮೂಲನೆಲೆ ಎಂದು ಸಾರಿದ ಶುಲಾಮಿತ್ ಫೈರ್‌ಸ್ಟೋನಳನ್ನು ತಮ್ಮ ಮುಖ್ಯ ಮಾದರಿಯಾಗಿಟ್ಟುಕೊಳ್ಳುವ ತೀವ್ರಗಾಮಿಗಳು ಆಕೆಯ ವಿಚಾರಗಳನ್ನು ಅನುಸರಿಸಿ ಲಿಂಗಪ್ರಭೇದವನ್ನು ಚರಿತ್ರಾತೀತವಾದ ಸಾರ್ವತ್ರಿಕ ವಾಸ್ತವಾಂಶವೆಂದು ನಂಬುತ್ತಾರೆ. ಹಾಗೆಯೇ ಶ್ರಮವಿಭಜನೆ, ಆರ್ಥಿಕ ಮತ್ತು ಸಾಮಾಜಿಕ ವರ್ಗ ವಿಭಜನೆಗಳಿಗೂ ಸ್ತ್ರೀಯರ ಜೈವಿಕ ಭಿನ್ನತೆಗಳೇ ಮುಖ್ಯಕಾರಣವೆಂದು ಭಾವಿಸುತ್ತಾರೆ.

ಸ್ತ್ರೀಯನ್ನು ಪುರುಷನಿಂದ ಭಿನ್ನವಾಗಿಸುವುದು ಆಕೆಯ ಸಂತಾನೋತ್ಪಾದನಾ ಸಾಮರ್ಥ್ಯ. ಈ ಸಾಮರ್ಥ್ಯದ ಬಗ್ಗೆ ಆದಿಮಾನವನಲ್ಲಿ ಜನಿಸಿದ ಅಸೂಯೆ, ಭಯಗಳೇ ಮುಂದೆ

ದ್ವೇಷವಾಗಿ ಬೆಳೆಯಿತು. ಈ ಆದಿಮ ಸ್ತ್ರೀದ್ವೇಷವೇ ಸ್ತ್ರೀಯನ್ನು ಪುರುಷನು ಹತ್ತಿಕ್ಕುವಂತೆ ಮಾಡಿದೆ. ಲೈಂಗಿಕ ದಾಸ್ಯ, ಬಲವಂತದ ತಾಯ್ತನಗಳ ನೆಲೆಯಾದ ಕುಟುಂಬವೇ ಸ್ತ್ರೀಶೋಷಣೆಯ ಕೀಲಿಕೈ ಎಂಬುದು ಫೈರೋಸ್ಟೋನ್‌ಳ ಮುಖ್ಯ ವಿಚಾರ. ಪುರುಷಸಂಬಂಧವನ್ನು ಕಡ್ಡಾಯವಾಗಿ ಹೇರುವ ವಿವಾಹ, ಕುಟುಂಬ, ತಾಯ್ತನ ತನ್ನ ದೇಹ, ವ್ಯಕ್ತಿತ್ವಗಳ ಮೇಲೆ ಮರಳಿ ಮತ್ತೆ ಸ್ವಾಮ್ಯವನ್ನು ಪಡೆದುಕೊಳ್ಳುವುದೇ ಸ್ತ್ರೀ ವಿಮುಕ್ತಿಯ ಹಾದಿ ಎನ್ನುವುದು ಫೈರ್ ಸ್ಟೋನ್‌ಳ ವಿಚಾರ. ಮುಂದಿನ ತೀವ್ರಗಾಮಿಗಳೆಲ್ಲರೂ ಸ್ತ್ರೀಯರದೇ ಆದ ಪ್ರತ್ಯೇಕವಾದ ಸಾಮಾಜಿಕ ವ್ಯವಸ್ಥೆಗಾಗಿ ಆಶಿಸುತ್ತಾರೆ. ಆ ಹೊಸ ವ್ಯವಸ್ಥೆಯಲ್ಲಿ ಹೆಣ್ಣಾಗಲಿ, ಹೆಣ್ತನವಾಗಲಿ ಅವಮಾನಕ್ಕೆ ಒಳಗಾಗುವ ಸ್ಥಿತಿ ಇರಲಾರದೆಂದು ಭಾವಿಸುತ್ತಾರೆ.

ಸೈದ್ಧಾಂತಿಕತೆಗೆ ವಿರೋಧ :

ಎಲ್ಲಾ ಬಗೆಯ ತಾತ್ವಿಕತೆ ಮತ್ತು ಸೈದ್ಧಾಂತೀಕರಣವನ್ನು ವಿರೋಧಿಸುವುದು ಈ ಸ್ತ್ರೀವಾದದ ಒಂದು ಲಕ್ಷಣವೆನಿಸಿದೆ. ಸ್ತ್ರೀಯರ ಬದುಕನ್ನೂ, ಅದರ ಅರ್ಥವನ್ನೂ ಸ್ತ್ರೀಯರೇ ನಿರ್ಣಯಿಸುವ ಅಧಿಕಾರವನ್ನು ಹೊಂದಿರಬೇಕೆಂದು ಪ್ರತಿಪಾದಿಸುವ ತೀವ್ರಗಾಮಿಗಳ ಪೈಕಿ ಮೇರಿ ಡೇಲಿ ಮತ್ತು ಸೂಸನ್ ಗ್ರಿಫಿನ್ ಮುಖ್ಯರೆನಿಸಿದ್ದಾರೆ. ಸ್ತ್ರೀವಾದಕ್ಕೆ ಒಂದು 'ಸಿದ್ಧಾಂತ'ವನ್ನು ಸೃಷ್ಟಿಸುವುದನ್ನೇ ಇವರು ತೀವ್ರವಾಗಿ ವಿರೋಧಿಸುತ್ತಾರೆ. ಅವರ ಪ್ರಕಾರ 'ಸಿದ್ಧಾಂತ' ಎನ್ನುವುದು ಪುರುಷರ ಬೌದ್ಧಿಕ ಚರ್ಚೆಯದೇ ಇನ್ನೊಂದು ರೂಪ. ಆ ಚರ್ಚೆ/ಸಂವಾದದಲ್ಲಿ ಪ್ರವೇಶಿಸುವುದೆಂದರೆ ಸ್ತ್ರೀತ್ವವನ್ನು ದಮನಗೊಳಿಸುವ ಪುರುಷ ಪ್ರಾಬಲ್ಯವನ್ನೇ ಉಳಿಸಿಡುವ ಯತ್ನವಷ್ಟೇ. ಪಶ್ಚಿಮದ ಚಿಂತನಕ್ರಮವೆಲ್ಲ ಮಹಿಳೆ ಮತ್ತು ನಿಸರ್ಗಗಳನ್ನು ಹತ್ತಿಕ್ಕುವ ಮೂಲಕವೇ ಬೆಳೆದಿದೆ ಎಂಬುದರಿಂದ ಇವರು ಎಲ್ಲ ಬಗೆಯ ತಾತ್ವಿಕತೆಯನ್ನು ವಿರೋಧಿಸುತ್ತಾರೆ.

ಪುರುಷಚಿಂತನಾಕ್ರಮವು ಸ್ತ್ರೀಯ ಲೈಂಗಿಕತೆಯನ್ನು ವ್ಯಾಖ್ಯಾನಿಸುವ ಬಗೆಗಳಲ್ಲಿ ಕೇವಲ ಸ್ತ್ರೀದ್ವೇಷವೇ ಪ್ರಬಲವಾಗಿರುತ್ತದೆ. ಮಾಟಗಾತಿಯರೆಂದು ಸ್ತ್ರೀಯರನ್ನು ಚಿತ್ರಹಿಂಸೆಗೆ ಗುರಿಮಾಡಿ ಕೊಲ್ಲುವುದು, ಚೀನೀ ಮಹಿಳೆಯರ ಪಾದಬಂಧನ, ಆಫ್ರಿಕಾದ ಕೆಲವು ಜನಾಂಗಗಳಲ್ಲಿರುವ ಸ್ತ್ರೀಶಿಶ್ನಿಕಾಛೇದ. ಯೋನಿ ಬಂಧನ, ಭಾರತದ ಸತಿ ಪದ್ಧತಿಗಳು ಈ ರೀತಿಯ ಸ್ತ್ರೀದ್ವೇಷದ ಮಾದರಿಗಳೆಂದು ಮೇರಿ ಡೇಲಿ ಉಲ್ಲೇಖಿಸುತ್ತಾಳೆ. ಹಾಗೆಯೇ ಪರಿಸರ ವಿನಾಶ, ಪ್ರಕೃತಿಯ ಮೇಲಿನ ದುರಾಕ್ರಮಣಗಳೂ ಇದೇ ಬಗೆಯ ಪುರುಷಾಧಿಕಾರದ ಮೂಲದಿಂದ ಹುಟ್ಟುವ ಹಿಂಸೆಯದೇ ಅಭಿವ್ಯಕ್ತಿಗಳೆಂದು ಆಕೆ ತನ್ನ ಗ್ರಂಥ Gyn/Ecology (೧೯೭೮) ಎಂಬುದರಲ್ಲಿ ಪ್ರತಿಪಾದಿಸುತ್ತಾಳೆ.

೩. ಸ್ತ್ರೀಸಂಸ್ಕೃತಿವಾದ

ಪುರುಷಾಧಿಕಾರದ ವಿರುದ್ಧ ಪ್ರತಿಭಟಿಸುವ ಒಂದು ಮುಖ್ಯ ವಿಧಾನವಾಗಿ,

ತೀವ್ರಗಾಮಿಗಳು ಪಿತೃಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀಯರನ್ನು ಅವಹೇಳನಗೊಳಿಸುವಂಥ ಎಲ್ಲ ವರ್ತನೆ, ಸ್ವಭಾವ, ಗುಣಗಳನ್ನು ಧನಾತ್ಮಕವಾಗಿ, ಪ್ರಬಲಗೊಳಿಸಿ ಚಿತ್ರಿಸುವ ರೀತಿಯೊಂದನ್ನು ಆರಂಭಿಸಿದರು. ಮಾಟಗಾತಿಯರೆಂದು ಪಿತೃಪ್ರಧಾನ ವ್ಯವಸ್ಥೆಯ ವಿರುದ್ಧ ಬಂಡೆದ್ದವರು, ತಾಯ್ತನವೆಂಬುದು ಜೀವದಾಯಕ, ಜೀವರಕ್ಷಕ ಶಕ್ತಿ, ಶಿಶುಸಂಗೋಪನೆಯು ಹೆಣ್ಣಿಗೆ ವಿಶಿಷ್ಟವಾದ ವಾತ್ಸಲ್ಯಗುಣದ ಅಭಿವ್ಯಕ್ತಿ. ಎಂದು ಮುಂತಾಗಿ ಹೆಣ್ತನದ ವೈಭವೀಕರಣ, ಕೊಂಡಾಟಗಳಿಗೆ ತೊಡಗಿದರು. ಜೀವಶಾಸ್ತ್ರೀಯವಾದ ಹೆಣ್ತನವೇ ಬೇರೆ, ಸಾಂಸ್ಕೃತಿಕ ರಚನೆಯಾದ ಸ್ತ್ರೀಸ್ವಭಾವ (Femininity) ಎಂಬುದೇ ಬೇರೆ ಎಂದು ಎಣಿಸದೆ ಹೆಣ್ಣಿನ ಸಂತಾನೋತ್ಪಾದನ ಶಕ್ತಿಯನ್ನೂ ಅವಳ ಮಾನಸಿಕ ಗುಣಗಳನ್ನೂ ಸಮೀಕರಿಸಿ, ಎಲ್ಲ ಕಾಲ, ದೇಶಗಳಲ್ಲಿ, ಎಲ್ಲಾ ಮಹಿಳೆಯರಲ್ಲಿ ಇದ್ದೇ ತೀರುವ ಒಂದು ಸ್ತ್ರೀಸತ್ವವಿದು, ಅಂತಃಸಾರರೂಪಿಯೆಂದು ಗುರುತಿಸಲು ಇವರು ಯತ್ನಿಸಿದರು. ಈ ವಾದದ ಪ್ರಬಲ ಪ್ರತಿಪಾದಕಿ ಮೇರಿ ಡೇಲಿ.

ಈ ವಾದಗಳನ್ನು ಮೇರಿ ಡೇಲಿ ಸ್ವತಃ ತನ್ನ ಬರಹಗಳ ಮೂಲಕ ಎತ್ತಿ ಹಿಡಿದಳು. ಸ್ತ್ರೀಪ್ರತೀಕಗಳ ಕೊಂಡಾಟ, ಸ್ತ್ರೀಲಕ್ಷಣಗಳ ಆರಾಧನೆ, ಸ್ತ್ರೀಯರ ವಿಶಿಷ್ಟಭಾಷೆಯೊಂದನ್ನು ರೂಪಿಸುವ ಯತ್ನ, ಸ್ತ್ರೀಯರ ಅನುಭವ, ಬದುಕಿನ ಕ್ರಮ, ಕುಶಲ ಕಲೆಗಾರಿಕೆ, ಹಾಡು, ಹಬ್ಬ, ಜಾನಪದ ಮುಂತಾದ ಎಲ್ಲವನ್ನೂ ಮೌಲಿಕಗೊಳಿಸುವ ಮೂಲಕ ಪ್ರತ್ಯೇಕ ಸ್ತ್ರೀಸಂಸ್ಕೃತಿಯೊಂದನ್ನು ಪುನಾರಚಿಸುವ ಯತ್ನವನ್ನು ಈಕೆ ಹಾಗೂ ಇಂಥಹದೇ ದೃಷ್ಟಿಯುಳ್ಳ ಸ್ತ್ರೀವಾದಿಗಳು ಛಲದಿಂದ ನಿರ್ವಹಿಸುತ್ತಾರೆ. ಇದರಿಂದಾಗಿ ಮುಂದಿನವರು ಇವರನ್ನು 'ಸಾಂಸ್ಕೃತಿಕ ಸ್ತ್ರೀವಾದಿಗಳು' ಎಂದು ಕರೆಯುವುದು ರೂಢಿಗೆ ಬಂದಿತು. ಹೆಣ್ಣಿನ ದೇಹದ ಲೈಂಗಿಕತ್ವದ ಮೂಲದಿಂದಲೇ ಆಕೆಯ ಅನುಭವಗ್ರಹಿಕೆ ಮತ್ತು ಸಂವೇದನೆಗಳು ಹುಟ್ಟುತ್ತವೆಂದು ಇವರು ನಂಬುತ್ತಾರೆ. ಸ್ತ್ರೀದೇಹದ ಲೈಂಗಿಕಾನುಭೂತಿಯ ಬಹುಮುಖತ್ವ, ಅವಳ ಋತುಚಕ್ರ, ವಾರ್ಧಕ್ಯದ ಮಾನಸಿಕ ಅನುಭವಗಳು, ತಾಯಿ–ಮಗುವಿನ ಜೈವಿಕ ಬಾಂಧವ್ಯ, ಸ್ತ್ರೀಯರು ಪರಸ್ಪರ ಹೊಂದಿರುವ ಲೈಂಗಿಕ ಹಾಗೂ ಲೈಂಗಿಕೇತರ ಸಂಬಂಧಗಳು ತಾಯಿ ಮತ್ತು ಆಕೆಯ ಹೆಣ್ಣುಮಕ್ಕಳ ಸಂಬಂಧಗಳನ್ನು ದಟ್ಟವಾಗಿ ಚಿತ್ರಿಸಿ ಎತ್ತಿಹಿಡಿಯುವುದು ಇವರ ಬರಹದ ಮುಖ್ಯ ಕ್ರಮವಾಯಿತು. ಹಾಗೆಯೇ ಗರ್ಭಧಾರಣೆ, ಹೆರಿಗೆ, ಬೆದೆ, ಸ್ತನ್ಯಪಾನ, ಮುಟ್ಟು ಮುಂತಾದ ಸ್ತ್ರೀಯ ಅನುಭವಗಳ ಮೂಲಕ, ದೇಹದ ಸಂವೇದನೆಗಳ ಲಯ, ಮಿಡಿತಗಳನ್ನು ತುಡಿಸಬಲ್ಲಂಥ ಭಾಷೆಯೊಂದನ್ನು ಸೃಷ್ಟಿಸಲು ಈ ಸ್ತ್ರೀವಾದಿಗಳು ತೀವ್ರವಾದ ಯತ್ನಗಳನ್ನು ಮಾಡಿದ್ದಾರೆ. ಆಂಗ್ಲಭಾಷೆಗಿಂತಲೂ ಫ್ರೆಂಚ್‌ಭಾಷೆ ಈ ದೃಷ್ಟಿಯಿಂದ ಹೆಚ್ಚಿನ ಬನಿ, ಬಾಗು, ಲಾಲಿತ್ಯಗಳುಳ್ಳದ್ದು. ಆದ್ದರಿಂದ ಫ್ರೆಂಚ್ ಸ್ತ್ರೀವಾದಿಗಳ ಪೈಕಿ ತೀವ್ರಗಾಮಿಗಳು. ಸ್ತ್ರೀಸಂಸ್ಕೃತಿವಾದಿಗಳೆಂದು ಖ್ಯಾತರಾಗಿರುವ ಹೆಲೆನ್ ಸಿಕ್ಸೂ. ಆಡ್ರಿಯನ್ ರಿಚ್ ತಮ್ಮೆಲ್ಲಾ ಸೃಜನಶೀಲ, ಸೃಜನನೇತರ ಬರಹಗಳಲ್ಲಿ ಇಂತಹುದೇ ಭಾಷೆ ಮತ್ತು ಅಭಿವ್ಯಕ್ತಿಗಾಗಿ ಶ್ರಮಿಸಿ, ಗಮನಸೆಳೆದಿದ್ದಾರೆ.

ಮಹಿಳೆಯರದು ಎಂದು ಗುರುತಿಸಬಹುದಾದ ನಿರ್ದಿಷ್ಟ ಮಾನಸಿಕ ಗುಣಧರ್ಮಗಳು ಚಾರಿತ್ರಿಕವಾಗಿ, ಪಿತೃಪ್ರಧಾನ ವ್ಯವಸ್ಥೆಯ ಇಂದಿನ ಸ್ಥಿತಿಗತಿಗಳಿಂದಾಗಿ ರೂಪುಗೊಂಡವು ಎಂಬುದನ್ನು ಸ್ತ್ರೀಸಂಸ್ಕೃತಿವಾದಿಗಳು ಒಪ್ಪುವುದಿಲ್ಲ. ಬದಲಾಗಿ ಹೆಣ್ಣು ಗಂಡಿನ ನಡುವಿನ ಸ್ವಭಾವಭಿನ್ನತೆ ಜನ್ಮತಃ ಬಂದದ್ದು, ಆದ್ದರಿಂದ ಅದು ಶಾಶ್ವತ ವಾಸ್ತವಾಂಶವೆಂದು ಇವರು ನಂಬುತ್ತಾರೆ. ಹೀಗಾಗಿ ತನ್ನ ನಿಜವಾದ ಸ್ತ್ರೀತ್ವದ ನೆಲೆಯಲ್ಲಿ ಸ್ವಾಯತ್ತತೆಯನ್ನು ಸಾಧಿಸುವುದರ ಮೂಲಕ ಪುರುಷಾಧಿಕಾರದ ವಲಯವನ್ನು ಮೀರಲು ಮಹಿಳೆ ಯತ್ನಿಸಬೇಕು ಎನ್ನುವುದು ಇವರು ಸ್ತ್ರೀವಿಮುಕ್ತಿಯನ್ನು ಗ್ರಹಿಸುವ ರೀತಿಯಾಗಿದೆ. ಮಹಿಳೆ ತನ್ನ ಸಂತಾನಶಕ್ತಿ, ಲೈಂಗಿಕತೆಗಳನ್ನು ತೀವ್ರವಾಗಿ ಅನುಭವಕ್ಕೆ ತಂದುಕೊಳ್ಳುವುದೇ ಸ್ವಾಯತ್ತತೆಯತ್ತ ಸಾಗಲು ಮುಖ್ಯ ಸಾಧನ. ಈ ನೈಜವಾದ ಸ್ತ್ರೀತ್ವದ ನೆಲೆಯಲ್ಲಿ ತನ್ನತನವನ್ನು ಸಾಕ್ಷಾತ್ಕರಿಸಿಕೊಳ್ಳುವ ಅನುಭವದ ಸಾಹಿತ್ಯಾಭಿವ್ಯಕ್ತಿಯು ಆಕೆಗೆ ಬಿಡುಗಡೆಯನ್ನು ಒದಗಿಸಬಲ್ಲದು. ತನ್ನ ಬರಹದ ಮೂಲಕ ತನ್ನೊಳಗಿನ ಈ ನಿಜವನ್ನು ಗುರುತಿಸಿಕೊಳ್ಳುತ್ತ, ಆ ಅನುಭವವನ್ನು ಅದಕ್ಕೆ ವಿಶಿಷ್ಟವಾದ ಲಯವನ್ನು ಬಿತ್ತರಿಸುವಂಥ ನುಡಿಗಳಲ್ಲಿ ಕಟ್ಟಿಕೊಡುವುದರಿಂದ ಮಹಿಳೆಯು ಪುರುಷನದಕ್ಕಿಂತ ಭಿನ್ನವಾದ ಅಭಿವ್ಯಕ್ತಿಯನ್ನು ನೀಡುತ್ತಾಳೆ. ಈ ಸೃಜನಶೀಲ ಸ್ವಾತಂತ್ರ್ಯದಲ್ಲೇ ಆಕೆಯ ವಿಮುಕ್ತಿಯ ನೆಲೆ ಕೂಡ ಇರುತ್ತದೆಂಬುದು ಫ್ರೆಂಚ್ ಸಾಂಸ್ಕೃತಿಕ ಸ್ತ್ರೀವಾದಿಗಳ ಸಾಹಿತ್ಯತತ್ತ್ವ ಮತ್ತು ವಿಮರ್ಶಾತತ್ವ ಕೂಡ ಆಗಿದೆ.

ಎಪ್ಪತ್ತರ ದಶಕದಲ್ಲಿ ಪಾಶ್ಚಾತ್ಯ ಚಿಂತನಾವಲಯದಲ್ಲಿ ಲಿಂಗಭಿನ್ನತೆಯನ್ನು ಮೀರುವ ಅತೀತತೆಯ ವಾದ (Transcendentalism) ತುಂಬ ಪ್ರಭಾವಶಾಲಿಯಾಗಿತ್ತು. ಅಂತಹ ಪರಿಸರದಲ್ಲಿ ಮೇರಿ ಡೇಲಿ ಮತ್ತು ಆಡ್ರಿಯನ್ ರಿಚ್ ಸ್ತ್ರೀಯ ಅಂತಃಸತ್ವವೊಂದರ ಪ್ರತಿಪಾದನೆಗೆ ಯತ್ನಿಸಿದ್ದು ಸಹಜ. ಅಂದರೆ ಕಾಲ, ದೇಶ, ಜನಾಂಗ, ವರ್ಗ, ಸಾಂಸ್ಕೃತಿಕ ವ್ಯತ್ಯಾಸಗಳೆಲ್ಲದರಿಂದಲೂ ಅತೀತವಾಗಿರುವ 'ಸ್ತ್ರೀಸತ್ವ'ವೊಂದು ಇದೆ; ಸ್ತ್ರೀಯರ ಜೀವಸೃಷ್ಟಿಯೂ ಶಕ್ತಿ, ಅವರ ಜೀವಪರತೆ, ಸಂರಕ್ಷಕ ಗುಣಗಳೇ ಈ ಸತ್ವದ ಲಕ್ಷಣಗಳೆಂದು ಸಾರಿ ಒಂದು ರೀತಿಯ ಅಮೂರ್ತ ಆಧ್ಯಾತ್ಮಿಕ ಸ್ತ್ರೀಶಕ್ತಿಯನ್ನು ಅವರು ಪ್ರತಿಪಾದಿಸುತ್ತಾರೆ. ಇಂಥ ಸ್ತ್ರೀಶಕ್ತಿಯನ್ನು ಮತ್ತೆ ಗಳಿಸಿಕೊಳ್ಳುವುದೇ 'ಸ್ತ್ರೀ–ಪರಿಸರವಾದಿ' (Gyn-Ecology) ಹೋರಾಟವೆಂದು ಮೇರಿ ಡೇಲಿ ಕರೆದಿದ್ದಾಳೆ. ಆಡ್ರಿಯನ್ ರಿಚ್ ಹೆಣ್ಣಿನ ಸೃಜನ ಸಾಮರ್ಥ್ಯದ ಮೇಲೆ ಅಸೂಯೆ, ದ್ವೇಷ ಹಿಂಸಾಚಾರಗಳಿಂದ ನಿಯಂತ್ರಣ ಸಾಧಿಸಿರುವ ಪುರುಷಾಧಿಕಾರದಿಂದ ಪಾರಾಗಲು ಮಹಿಳೆ ತನ್ನ ಸಮಗ್ರ ಶಕ್ತಿಯನ್ನೂ ಕ್ರೋಢೀಕರಿಸಿ, ಅದಕ್ಕೆ ಭಾಷಿಕ ಅಭಿವ್ಯಕ್ತಿಯನ್ನು ನೀಡುವ ಮೂಲಕ ತನ್ನ ಮೇಲೆ ಸ್ವಯಂ ಅಧಿಕಾರವನ್ನು ಸಾಧಿಸಿಕೊಳ್ಳಬೇಕೆಂದು ಕರೆ ನೀಡುತ್ತಾಳೆ.

ತೀವ್ರಗಾಮಿಗಳೂ, ಸ್ತ್ರೀಸಂಸ್ಕೃತಿವಾದಿಗಳೂ ಸ್ತ್ರೀಸ್ವಭಾವ ಎಂಬುದನ್ನು ಕೇವಲ ದೈಹಿಕವೆಂದಾಗಲಿ ಅಥವಾ ಕೇವಲ ಚೈತನ್ಯವೆಂದಾಗಲೀ ಭಾವಿಸದೆ ಅವೆರಡನ್ನೂ ಒಳಗೊಂಡಿರುತ್ತದೆಂದು ಸೂಚಿಸುತ್ತಾರೆ. ಪಾಶ್ಚಾತ್ಯ ಬಿಳಿಯ ಜನಾಂಗದ ಮಹಿಳೆಯರ

ಸಾಂಸ್ಕೃತಿಕ ಅನುಭವಗಳ ಹಿನ್ನೆಲೆಯಿಂದ ಅವರು ಕಟ್ಟಿಕೊಡುವ ಸ್ತ್ರೀಸ್ವಭಾವ/ಸ್ತ್ರೀಸತ್ವದ ಪರಿಕಲ್ಪನೆಯು ಇವರಿಗಿಂತ ಭಿನ್ನವಾದ ಸಂಸ್ಕೃತಿಗಳಲ್ಲಿ ಸಮರ್ಪಕವೆನಿಸಬಲ್ಲದೆ– ಎಂಬುದು ಒಂದು ಮುಖ್ಯ ಪ್ರಶ್ನೆಯಾಗಿದೆ. ಉದಾಹರಣೆಗೆ, ಕರ್ನಾಟಕದ ವಚನಕಾರ್ತಿಯರು ದೇಹಲಿಂಗತ್ವದ ಎಲ್ಲಾ ಭಿನ್ನತೆಗಳಿಗೂ ಅತೀತವಾದ, ದ್ವಿಲಿಂಗತ್ವದ್ದೂ ಅಲ್ಲದ, ಲಿಂಗಾತೀತವೆನ್ನಬಹುದಾದ ಸ್ಥಿತಿಯೊಂದಕ್ಕಾಗಿ ತಮ್ಮೆಲ್ಲ ಆಧ್ಯಾತ್ಮಿಕ ಸಾಧನೆಯನ್ನು ಮಾಡಿದ್ದಾರೆ ಮತ್ತು ವಚನಗಳಲ್ಲಿ ಅಂಥ ಅನುಭಾವಕ್ಕೆ ಅಭಿವ್ಯಕ್ತಿ ನೀಡಲು ಯತ್ನಿಸಿದ್ದಾರೆ. ಬಿಡುಗಡೆ/ ವಿಮುಕ್ತಿಯ ಬಗೆಗೆ ವಚನಕಾರ್ತಿಯರ ನಿಲುವು ಸಾಂಸ್ಕೃತಿಕ ಸ್ತ್ರೀವಾದಿಗಳು ಮುಂದಿಡುವ ವಿಚಾರಕ್ಕೆ ನಿಸ್ಸಂದೇಹವಾಗಿ ಸವಾಲೊಡ್ಡುತ್ತದೆ. ಶೋಷಿತ ದೇಶಗಳ ಮಹಿಳೆಯರ ಬರಹಗಳಲ್ಲಿ ಲಿಂಗವಾದ (sexism), ಶೋಷಣೆಯ ಸ್ವರೂಪ, ಅಧಿಕಾರದ ಒಡೆತನ ಮುಂತಾದವು ಬಹುಸಂಕೀರ್ಣವಾಗಿದ್ದು ಅವುಗಳನ್ನು ಪಿತೃಪ್ರಧಾನ್ಯದ ಏಕಾಧಿಕಾರದ ಗ್ರಹಿಕೆಯಿಂದ ವಿವರಿಸಲು ಸಾಧ್ಯವಿಲ್ಲ. ಪ್ರಧಾನ ಜನಾಂಗಗಳ ಸ್ತ್ರೀಯರೂ, ಸ್ತ್ರೀಸಂಸ್ಕೃತಿಯೂ ಅಧೀನ ಜನಾಂಗಗಳ ಸ್ತ್ರೀಯರ ವಿಷಯದಲ್ಲಿ ಶೋಷಕ ನೆಲೆಯಲ್ಲೇ ಇರುವುದು ಸಾಧ್ಯ. ಹೀಗಿದ್ದಾಗ ಯಾರು ಶತ್ರು, ಯಾರು ಬಲಿಪಶುವೆಂದು ಪ್ರತ್ಯೇಕಿಸುವುದು ಸುಲಭವಲ್ಲ ಎಂದು ಚೆರ್ರಿ ಮೊರಾಗ ಎಂಬ ಕಪ್ಪು ಲೇಖಕಿ ಹೇಳುವ ಮಾತು ತುಂಬ ಮಹತ್ವದ್ದಾಗಿದೆ.

ಕುವೆಂಪು ಅವರ "ಕಾನೂರು ಹೆಗ್ಗಡತಿ"ಯ ಸುಬ್ಬಮ್ಮ ಪಿತೃಪ್ರಧಾನ್ಯದ ಸಂದರ್ಭದಲ್ಲಿ ಸ್ವತಃ ಶೋಷಿತಳು, ಆದರೆ ಜಾತಿ, ವರ್ಗಗಳ ಸಂದರ್ಭದಲ್ಲಿ ತನಗಿಂತ ದುರ್ಬಲ ಸ್ತರದ ಮಹಿಳೆಯರ ಶೋಷಕಿಯೂ ಆಗಿರುವುದು ಇದೇ ಬಗೆಯ ಸಾಂಸ್ಕೃತಿಕ ಸಂಕೀರ್ಣತೆಗೆ ನಿದರ್ಶನ. ಇಂಥ ಸಂದರ್ಭದಲ್ಲಿ ಮಹಿಳೆ ತನ್ನ ಅನನ್ಯ ಸೃಜನತೆಯ ಚೈತನ್ಯದ ಅರಿವನ್ನುಳ್ಳ ಬರಹದಿಂದ ಸ್ವತಃ ಬಿಡುಗಡೆ ಹೊಂದಬಲ್ಲಳು ಎಂಬುದಕ್ಕೆ ಏನರ್ಥ? ಸಾಂಸ್ಕೃತಿಕ ಸ್ತ್ರೀವಾದ ಎಡವಿರುವುದು ಇಲ್ಲೇ. ಅದು ಕಲ್ಪಿಸುವ ಬಿಡುಗಡೆ ಅನೇಕ ರೀತಿಯ ಸವಲತ್ತನ್ನು ಆಧುನಿಕ ಜಗತ್ತಿನಲ್ಲಿ ಈಗಾಗಲೇ ಪಡೆದಿರುವ ಮಹಿಳೆಯ ಮಾನಸಿಕ ಒಳತೋಟಿಗೆ ಸಂಬಂಧಿಸಿದೆಯೇ ಹೊರತು ಸಮಾಜದ ಎಲ್ಲಾ ಹೊರೆಯನ್ನೂ ತನ್ನ ಬೆನ್ನ ಮೇಲೆ ಹೇರಿಕೊಳ್ಳುವ ಅತ್ಯಂತ ಕೆಳಶ್ರೇಣಿಯ ಮಹಿಳೆಯರಿಗೆ ಅದು ಅರ್ಥವೇ ಆಗದೆ ಉಳಿಯಬಹುದು.

ವ್ಯಕ್ತಿತ್ವ, ಚಾರಿತ್ರ್ಯ, ಲಿಂಗವ್ಯತ್ಯಾಸಗಳೆಲ್ಲ ಜನ್ಮಸಿದ್ಧವೇ ಆಗಿರುತ್ತವೆ ಎಂಬುದು ವೈಜ್ಞಾನಿಕವಾಗಿ ಅಸಾಧುವಾದ ಪರಿಕಲ್ಪನೆ. ತಮ್ಮ ಸಂತಾನದ ಬಗ್ಗೆ ಸ್ತ್ರೀಯರು ತೋರುವ ಪ್ರೇಮವನ್ನು ಸಾರ್ವತ್ರಿಕವಾಗಿ ಸ್ತ್ರೀಸತ್ವವೆಂದು ಹಿಗ್ಗಿಸಿ, ಈ ಶಕ್ತಿಯನ್ನು ವೈಭವೀಕರಿಸಿದಲ್ಲಿ ಇಂಥ ನಿರೀಕ್ಷೆಯ ಚೌಕಟ್ಟಿನೊಳಗೆ ಸಲ್ಲಲಾರದ, ಇದಕ್ಕಿಂತ ಭಿನ್ನವಾದ ಲಕ್ಷಣಗಳುಳ್ಳ ಮಹಿಳೆಯರು ಸ್ತ್ರೀಯರೇ ಅಲ್ಲವೆನಿಸಿ, ದೂರವುಳಿಸಲ್ಪಡುವ ಸಂದರ್ಭ ಸೃಷ್ಟಿಯಾಗಬಲ್ಲದು. ಯಾವುದನ್ನು ಸ್ತ್ರೀ ವೈಶಿಷ್ಟ್ಯವೆಂದು ಪಿತೃಪ್ರಧಾನ ವ್ಯವಸ್ಥೆಯು ಪ್ರತಿಪಾದಿಸುತ್ತ ಬಂದಿದೆಯೋ ಅದೇ ಲಕ್ಷಣಗಳಿಗೆ ಆತುಕೊಂಡು ಅವುಗಳನ್ನು ಕೊಂಡಾಡುವುದು ಯಥಾಸ್ಥಿತಿಯ

ಲಿಂಗಪ್ರಭೇದವನ್ನು ಉಳಿಸಿಡುವುದಕ್ಕೆ ನೆರವಾಗಬಹುದೆಂದು ಹಲವು ಸ್ತ್ರೀವಾದಿಗಳು ಎಚ್ಚರಿಸುತ್ತಾರೆ.

ಸ್ತ್ರೀಸಂಸ್ಕೃತಿವಾದಿಗಳು ಪ್ರತಿಪಾದಿಸುವ ವಿಚಾರಗಳನ್ನು ಎಲ್ಲವನ್ನೂ ಸಾರಾಸಗಟಾಗಿ ತಳ್ಳಿಹಾಕಬೇಕಿಲ್ಲ. ಮಹಿಳಾಲೋಕವು ಹೆಚ್ಚು ಮೌಲಿಕ ಅನುಭವದಿಂದ ಸಂಪನ್ನವಾದದ್ದು, ಸ್ತ್ರೀಲೋಕದ ಮೌಲ್ಯಗಳು ಹೆಚ್ಚು ಮಾನವೀಯವೂ, ಜೀವಪರವೂ ಆದದ್ದು; ಆದ್ದರಿಂದ ಎಲ್ಲಾ ಮಾನವರಿಗೂ ಅವು ಅವಶ್ಯಕವೆಂದು ಈ ಸ್ತ್ರೀವಾದಿಗಳು ಸಾರುವುದು ಪೂರ್ತಿ ಸುಳ್ಳಲ್ಲ. ಏಕೆಂದರೆ ಕುಟುಂಬವನ್ನು ಉಳಿಸಿ ಬೆಳೆಸುವಲ್ಲಿ, ಮಾತೆಯರಾಗಿ ಮಹಿಳೆಯರು ತೋರುವ ರಕ್ಷಕ ಭಾವದಲ್ಲಿ, ಅವರ ಕರಕುಶಲತೆಯಲ್ಲಿ, ಅವರ ಕಥನ ಕಲೆಯಲ್ಲಿ, ಕಷ್ಟಗಳನ್ನು ದಿಟ್ಟವಾಗಿ ಎದುರಿಸುವ ಬಗೆಗಳಲ್ಲಿ ಮಹಿಳೆಯರ ಇತ್ಯಾತ್ಮಕ ಶಕ್ತಿ ಇಂದಿನ ವಾಸ್ತವ ಬದುಕಿನ ರಾಜಕೀಯ, ಸಾಮಾಜಿಕ, ಆರ್ಥಿಕ ನೆಲೆಗಳಲ್ಲಿ ನೇಯ್ದುಕೊಂಡಿರುವ ಲಿಂಗತಾರತಮ್ಯದ ಮೂಲದಿಂದಾದ ಶೋಷಣೆಗಳಿಗೆ ಈ ಸ್ತ್ರೀಸತ್ವವನ್ನು ಮೈಮೇಲೆ ಬರಿಸಿಕೊಳ್ಳುವುದು ಹೇಗೆ ಪರಿಹಾರವಾಗಬಲ್ಲದು – ಎಂಬ ಪ್ರಶ್ನೆಯನ್ನು ಪಾಶ್ಚಿಮಾತ್ಯ ಸ್ತ್ರೀಸಂಸ್ಕೃತಿವಾದಿಗಳು ಪರಿಗಣಿಸುವುದಿಲ್ಲ. ಆದ್ದರಿಂದ ಸಾಹಿತ್ಯಾಭಿವ್ಯಕ್ತಿಯ ಸ್ವಾಯತ್ತತೆಯೇ ಒಟ್ಟಾರೆಯಾಗಿ ಇವರು ಪ್ರತಿಪಾದಿಸುವ ವಿಮೋಚನೆಯಂತೆ ತೋರುತ್ತದೆ.

೪. ಕಪ್ಪು ಸ್ತ್ರೀವಾದ

ಬಿಳಿಯ ಜಗತ್ತಿನ ಸ್ಥಾಪಿತ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯ ಅಧೀನ ನೆಲೆಯ ಕಪ್ಪು ಮಹಿಳೆಯರ ಅನುಭವಗಳನ್ನು ಪುರುಷಪ್ರಧಾನ ವ್ಯವಸ್ಥೆಯಂತೆಯೇ ನಿರ್ಲಕ್ಷಿಸುತ್ತದೆ ಎಂಬ ಬಲವಾದ ಆರೋಪದೊಂದಿಗೆ ಕಪ್ಪು ಸ್ತ್ರೀವಾದಿಗಳ ಪಂಥವೊಂದು ಹುಟ್ಟಿಕೊಂಡಿತು. ಬಿಳಿಯ ಮಹಿಳೆ ಮಹಿಳೆಯಾಗಿ ತನ್ನ ಜನಾಂಗದ ಪಿತೃಪ್ರಾಧಾನ್ಯದಡಿಯಲ್ಲಿ ಶೋಷಿತಳೇ ಇರಬಹುದು. ಆದರೆ ಆ ಜನಾಂಗದ ಸಾಮ್ರಾಜ್ಯಶಾಹಿ ಹಿತಾಸಕ್ತಿಯಲ್ಲಿ ಆಕೆ ಬಿಳಿಯ ಪುರುಷನ ಸಹಭಾಗಿಯೇ ಆಗಿರುತ್ತಾಳೆ. ಕಪ್ಪು ಜನಾಂಗ ಮತ್ತು ಕಪ್ಪು ಮಹಿಳೆಯರ ವಿಷಯದಲ್ಲಿ ಅವಳು ಶೋಷಕ ನೆಲೆಯಲ್ಲೇ ಇರುತ್ತಾಳೆಂಬುದು ಕಪ್ಪು ಸ್ತ್ರೀವಾದಿಗಳು ಹೂಡುವ ವಾದವಾಗಿದೆ. ಸ್ತ್ರೀಬಾಂಧವ್ಯ, ಸೋದರಿಕೆಗಳ ಬಗ್ಗೆ ಆಡುವ ಅಲಂಕಾರಿಕ ಮಾತುಗಳು ಏನೇ ಇದ್ದರೂ, ಲೈಂಗಿಕ ದಬ್ಬಾಳಿಕೆಯ ವಿರುದ್ಧವಾಗಿ ಕಪ್ಪು ಮಹಿಳೆಯರು ಮಾಡುವ ಹೋರಾಟಗಳಲ್ಲಿ ಬಿಳಿಯ ಮಹಿಳೆಯರು ಪ್ರಾಮಾಣಿಕವಾಗಿ ತಮ್ಮ ಜೊತೆಗೂಡಲಾರರು ಎಂದು ಜಾಕಿ ಹಿಂಗಿನ್ಸ್ ಎಂಬಾಕೆ ವಾದಿಸುತ್ತಾಳೆ. ಒಂದೇ ವರ್ಗ, ಜನಾಂಗಗಳಿಗೆ ಸೇರಿರುವವರ ನಡುವೆ ಇರಬಹುದಾದ ಸಾಮ್ಯ, ಒಗ್ಗಟ್ಟುಗಳಿಗಿಂತ ಹೆಚ್ಚಿನ ಸಾಮ್ಯ ಒಂದೇ ಲಿಂಗಕ್ಕೆ ಸೇರಿರುವವರಲ್ಲಿ ಇರುತ್ತದೆಂದು ಈಕೆ ಒಪ್ಪುವುದಿಲ್ಲ. ಖಾಸಗಿ ಆಸ್ತಿ, ಲಾಭಗಾಳಿಕೆ, ಸೈನ್ಯಶಾಹಿ, ಜನಾಂಗವಾದಗಳಲ್ಲಿ ಮೇಲ್ವರ್ಗದ ಮಹಿಳೆಯರು(ಬಿಳಿಯರಿರಲಿ, ಕರಿಯರಿರಲಿ) ತಮ್ಮ ಪುರುಷರ ಸಹಕಾರಿಗಳೇ ಆಗಿ ಇತರ ಸ್ತ್ರೀಯರ ಶೋಷಣೆಯ ಸಮರ್ಥಕರೂ ಆಗಿರುತ್ತಾರೆ. ಇವರ ಬಂಡವಾಳಶಾಹಿ ಹಿತಾಸಕ್ತಿಗೆ,

ಇವರ ಅನುಕೂಲಗಳಿಗೆ ಧಕ್ಕೆ ತರಬಹುದಾದ ಕ್ರಾಂತಿಕಾರಿ ಹೋರಾಟಗಳಿಗೆ ಇವರ ಬೆಂಬಲವನ್ನು ನಿರೀಕ್ಷಿಸುವಂತಿಲ್ಲ. ಇದಕ್ಕೆ ಭಿನ್ನವಾಗಿ ಕಪ್ಪು ಮತ್ತು ಬಿಳಿಯ ಶ್ರಮಿಕವರ್ಗದ ಪುರುಷರು ಸ್ತ್ರೀವಿಮೋಚನಾ ಹೋರಾಟಗಳಲ್ಲೂ ಜೊತೆಗೂಡುವರು. ಆದ್ದರಿಂದ ಆಳುವ ಜನಾಂಗದ ಅಧಿಕಾರ, ಸವಲತ್ತುಗಳ ಪಾಲುದಾರರಾದ ಬಿಳಿಯ ಸ್ತ್ರೀವಾದಿಗಳು ಕಪ್ಪು ಜನರ ಶೋಷಿತಸ್ಥಿತಿಯೊಂದಿಗೆ ತಮ್ಮನ್ನು ಹೋಲಿಸಿಕೊಳ್ಳುವುದು ರಾಜಕೀಯ ಮುಗ್ಧತೆಯ ವಾದವಾದೀತು, ಅಷ್ಟೆ – ಎಂದು ಕಪ್ಪು ಸ್ತ್ರೀವಾದಿಗಳು ಪ್ರತಿಪಾದಿಸುತ್ತಾರೆ.

ಕಪ್ಪು ಸ್ತ್ರೀವಾದವು ಹೀಗೆ ಪಿತೃಪ್ರಧಾನ ವ್ಯವಸ್ಥೆಯುಳ್ಳ ಸಮಾಜದಲ್ಲಿ ಲಿಂಗಭೇದ ಮಾತ್ರವಲ್ಲ ಜನಾಂಗಭೇದವೂ ಇದ್ದಾಗ ಕಪ್ಪು ಮಹಿಳೆಯರು ತಮ್ಮ ಪುರುಷರಿಂದ ಮಾತ್ರವಲ್ಲ, ಬಿಳಿಯ ಜನಾಂಗದ ಪುರುಷರು ಮತ್ತು ಸ್ತ್ರೀಯರಿಬ್ಬರಿಂದಲೂ ದಮನಕ್ಕೊಳಗಾಗಿರುವುದನ್ನು ಬಿಳಿಯ ಸ್ತ್ರೀವಾದವು ನಿರ್ಲಕ್ಷಿಸಿದೆ ಎಂಬ ಅಸಮಾಧಾನದ ನೆಲೆಯಿಂದ ಪ್ರೇರಣೆ ಪಡೆದು ಹುಟ್ಟಿತು. ಕಪ್ಪು ಮಹಿಳಾ ಸಾಹಿತ್ಯಸೃಷ್ಟಿ, ಸಾಹಿತ್ಯವಿಮರ್ಶೆಗಳು ಕೂಡ ತಾವು ಬಹುಮುಖವಾಗಿ ನಿರ್ಲಕ್ಷಿತರೆಂಬ ಅಳಲಿನ ಮೂಲಕ ಹುಟ್ಟಿದ ಅತೃಪ್ತಿಯನ್ನೇ ಮೊದಲಲ್ಲಿ ಮುಖ್ಯ ಪ್ರೇರಣೆಯಾಗಿ ಹೊಂದಿದ್ದವು. ಮರ್ಯಾದೆಯಿಂದ ಮನುಷ್ಯರಾಗಿ ಬದುಕುವ ಕನಿಷ್ಠ ಸಾಧ್ಯತೆಯೂ ಇಲ್ಲವಾಗಿದ್ದ ಕಪ್ಪು ಜನರು ಅಕ್ಷರಸ್ತ ನೆಲೆಯಿಂದಲೂ ದೂರವೇ ಉಳಿದಿದ್ದವರು. ಸಾಕ್ಷರತೆಯ ಅಭಾವದಿಂದಾಗಿ ಬರಹರೂಪದ ಅಭಿವ್ಯಕ್ತಿ ಅವರಲ್ಲಿ ಕಾಣಿಸಿಕೊಂಡಿದ್ದೂ ತೀರ ತಡವಾಗಿ, ಬಿಳಿಯ ಪಿತೃಪ್ರಾಧಾನ್ಯ, ಬಿಳಿಯ ಸ್ತ್ರೀವಾದ, ಕಪ್ಪು ಪುರುಷ ವಿಮರ್ಶೆಗಳು ಹೊಸದಾಗಿ ಬರಹಕ್ಕೆ ತೊಡಗಿದ ಕಪ್ಪುಮಹಿಳೆಯರ ಸಾಹಿತ್ಯವನ್ನು ನಿರ್ಲಕ್ಷಿಸಿದ್ದು ಒಂದು ನೆಲೆ. ಗುಲಾಮಗಿರಿ, ಜನಾಂಗ ರಾಜಕಾರಣ, ಆರ್ಥಿಕ ಸಾಮಾಜಿಕ ನಿರ್ಬಂಧಗಳಿಂದ ಕಪ್ಪುಮಹಿಳೆಯರ ಸೃಜನಶೀಲ ಜೀವನ ಚಾರಿತ್ರಿಕವಾಗಿ ಕುಗ್ಗಿದ್ದು ಇನ್ನೊಂದು ನೆಲೆ. ಈ ಎರಡೂ ಸ್ಥಿತಿಗಳನ್ನು ಎಲಿಸ್ ವಾಕರ್ ತನ್ನ ಸುಪ್ರಸಿದ್ಧ ಕೃತಿ In Search of Our Mother's Gardens (೧೯೮೩) ಎಂಬುದರಲ್ಲಿ ವಿಸ್ತಾರವಾಗಿ ಚಿತ್ರಿಸಿದ್ದಾಳೆ.

ಕಪ್ಪುಮಹಿಳೆಯರ ಬದುಕು, ಅನುಭವಗಳ ಅನನ್ಯತೆ, ಅವರ ಕಲಾಸೃಷ್ಟಿ ಮೊದಲಾದವುಗಳನ್ನು ಶೋಧಿಸಿಕೊಡುವುದು ಕಪ್ಪು ಮಹಿಳಾ ಸಾಹಿತ್ಯದ ಮುಖ್ಯ ಲಕ್ಷಣವಾಯಿತು. ಈ ಲಕ್ಷಣಗಳನ್ನು ಗುರುತಿಸಿ, ಬೆಲೆಕಟ್ಟಿ ದಾಖಲಿಸುವುದು ಕಪ್ಪು ಸ್ತ್ರೀವಾದಿ ವಿಮರ್ಶೆಯ ಕಾರ್ಯವಾಯಿತು. ತಮ್ಮದೇ ಆದ ಪರಂಪರೆಯೊಂದನ್ನು ಕಟ್ಟಿಕೊಡುವ ಬಗ್ಗೆ ಕಪ್ಪು ಮಹಿಳಾ ಬರಹಗಾರರಲ್ಲಿ ಮೂಡಿದ ಆಸಕ್ತಿ ಮತ್ತು ಪ್ರಧಾನ ವಿಮರ್ಶಾಪಂಥಗಳಿಂದ ನಿರ್ಲಕ್ಷಿತವಾದ ತಮ್ಮ ನೆಲೆ – ಇವೆರಡೂ ಕಪ್ಪು ಸ್ತ್ರೀವಾದಿ ಸಾಹಿತ್ಯ ವಿಮರ್ಶೆಗೆ ಪ್ರೇರಕ ಅಂಶಗಳಾದವು. ತಮ್ಮ ಹಿಂದಿನ ಲೇಖಕಿಯರನ್ನು ತಿಳಿಯುವ ತಮ ಅನುಭವವನ್ನು ಅವರದರ ಜೊತೆ ಹೋಲಿಸಿಕೊಳ್ಳುವ ಆಸೆಯಿಂದ ಅವರು ಗತಕಾಲದ ಲೇಖಕಿಯರ ಶೋಧಕ್ಕೆ ತೊಡಗಿದರು. ಎಲಿಸ್ ವಾಕರಳ ಕೃತಿಯು ಇಂಥ ಶೋಧನೆ, ಅಧ್ಯಯನ ಮತ್ತು ವಿಮರ್ಶೆಯ ಪ್ರಥಮ ದಾಖಲೆಯಾಯಿತು.

ಸ್ಥಾಪಿತ ಸಾಹಿತ್ಯ ಪರಂಪರೆಯಲ್ಲಿ ಕಪ್ಪು ಮಹಿಳೆಯರನ್ನು ಚಿತ್ರಿಸಿರುವ ರೀತಿಗೂ ಅವರದೇ ನಿಜವಾದ ಅನುಭವಗಳಿಗೂ ಇರುವ ಅಂತರವನ್ನು ಕಪ್ಪುಸ್ತ್ರೀವಾದಿ ವಿಮರ್ಶೆಯು ಎತ್ತಿ ತೋರಿಸುತ್ತದೆ. ಕಪ್ಪು ಸಂಸ್ಕೃತಿ, ಅವರ ಜೀವನ ಸಂದರ್ಭಗಳ ಹಿನ್ನೆಲೆಯಲ್ಲಿ ಆ ಮಹಿಳೆಯರನ್ನು ಅರ್ಥೈಸುವುದು ಮತ್ತು ಕರಿಯರ ಹಾಗೂ ಬಿಳಿಯರ ಜಗತ್ತುಗಳ ಮೌಲ ಲೋಕಗಳಲ್ಲಿರುವ ಅಂತರಗಳನ್ನು ಎಚ್ಚರದಿಂದ ಪರಿಶೀಲಿಸುವುದು ಈ ವಿಮರ್ಶೆಯ ಮುಖ್ಯ ಆಸಕ್ತಿಗಳು. ಕಪ್ಪು ಸ್ತ್ರೀವಾದಿ ವಿಮರ್ಶಕರಿಗೆ ಕಪ್ಪುಜನರ ಸಂಸ್ಕೃತಿಯ ಪರಿಚಯವಿರಬೇಕು ಮತ್ತು ಆ ಜನರ ಭಾಷೆ, ಅಭಿವ್ಯಕ್ತಿ, ರೀತಿ, ನೀತಿ, ಆಚರಣೆಗಳ ಆಳವಾದ ಜ್ಞಾನವೂ ಬೇಕು ಎಂದು ಈ ವಿಮರ್ಶೆ ಸಾರಿ ಹೇಳುತ್ತದೆ.

ಹೀಗಿದ್ದರೂ ಪ್ರಚಲಿತ ವಿಮರ್ಶೆಯ ಉಪಕರಣಗಳನ್ನು ಇವರು ಬಿಳಿಯ ಪುರುಷಪ್ರಧಾನ ಚಿಂತನೆಯದೆಂದೇನೂ ತಳ್ಳಿಹಾಕುವುದಿಲ್ಲ. ಪಠ್ಯಕೇಂದ್ರಿತ ವಿಮರ್ಶೆ ಮತ್ತು ಪಠ್ಯದ ತೀವ್ರರೂಪದ ವಿಶ್ಲೇಷಣೆಗಳು ತಮಗೆ ಅವಶ್ಯಕವೆಂದೂ, ಇಂಥ ಅಧ್ಯಯನದ ಮೂಲಕ ಕರಿಯ ಮಹಿಳೆಯರ ಬದುಕಿನ ಸೂಕ್ಷ್ಮತೆಗಳನ್ನು ಹಿಡಿದಿಡುವ ಅವರ ಸಾಹಿತ್ಯದ ಸಮರ್ಪಕ ಅಧ್ಯಯನ ನಡೆಯಬೇಕಿದೆ ಎಂದೂ ಮೆಕ್‌ಡೊವೆಲ್ ಹೇಳುತ್ತಾರೆ. ಬಿಳಿಯ ಸ್ತ್ರೀವಾದದಿಂದ ಲಭ್ಯವಿರುವ ತಾತ್ವಿಕ ವಿಚಾರಗಳನ್ನು ಬಳಸಿಕೊಳ್ಳುವಲ್ಲಿಯೂ ಆರೋಗ್ಯಕರ ಆಯ್ಕೆಯನ್ನು ಇವರು ಮಾಡಿಕೊಳ್ಳುತ್ತಾರೆ.

ಕಪ್ಪುಮಹಿಳೆಯರ ಕೃತಿಗಳ ವಸ್ತು, ಶೈಲಿ, ಭಾಷೆಗಳಲ್ಲಿನ ಸಾಮ್ಯಾಂಶಗಳನ್ನು ಗುರುತಿಸಿ ವಿಶ್ಲೇಷಿಸುವುದು ಈ ಸ್ತ್ರೀವಾದಿ ವಿಮರ್ಶಕರ ಮುಖ್ಯ ಕಾಳಜಿಗಳಲ್ಲೊಂದು. ಕಲಾಕಾರರ ಭಗ್ನಚಿತ್ರ, ಉಡುಗೆ ತೊಡುಗೆಗಳ ಪ್ರತಿಮಾತ್ಮಕ ಬಳಕೆ, ವೈಯಕ್ತಿಕ ಪ್ರೇಮಾಕಾಂಕ್ಷೆ ಮನೆವೈದ್ಯರ ಕೌಶಲ, ಸೂಲಗಿತ್ತಿತನವೇ ಮುಂತಾದ ಅಂಶಗಳು ಕಪ್ಪು ಮಹಿಳಾ ಬರಹಗಾರರ ರಚನೆಗಳಲ್ಲಿ ಸಮಾನವಾಗಿರುವುದನ್ನು ಈ ವಿಮರ್ಶಕರು ಗುರುತಿಸಿದ್ದಾರೆ. ವಿವಿಧ ಜ್ಞಾನಪ್ರಕಾರಗಳಿಂದ ಬೆಳೆದಿರುವ ಸ್ತ್ರೀವಾದಿ ವಿದ್ವತ್ತಿನ ನೆರವಿನಿಂದ ಕಪ್ಪು ಮಹಿಳೆಯರದೇ ಆದ ಭಾಷೆಯ ಶೋಧನೆಗೂ ಅವರು ಶ್ರಮಿಸಿದ್ದಾರೆ. ಆರಂಭದ ಹಂತದಲ್ಲಿ ಮಹಿಳಾ ಸಾಹಿತ್ಯಕ್ಕೇ ಆದ್ಯತೆ ನೀಡುವುದು ಈ ಚಳವಳಿಯ ಒಂದು ಅವಶ್ಯಕತೆಯಾಗಿತ್ತು. ವಿಮರ್ಶೆ ಬೆಳೆದಂತೆ ಕಪ್ಪು ಪುರುಷ ಸಾಹಿತ್ಯದ ಸೂಕ್ಷ್ಮವಾದ ಅಧ್ಯಯನ ಕೂಡ ಆರಂಭವಾಯಿತು. ಮೊದಲಲ್ಲಿ ವ್ಯತ್ಯಾಸಗಳನ್ನು ಗುರುತಿಸಿಕೊಳ್ಳುವುದಕ್ಕೇ ಆದ್ಯತೆಯಿದ್ದರೆ, ಮುಂದೆ ಪರಸ್ಪರ ಸಾಮ್ಯಾಂಶಗಳನ್ನು ಕುರಿತ ಆಸಕ್ತಿ ತೀವ್ರವಾಯಿತು. ಮಹಿಳೆಯರ ಬಗ್ಗೆ ಪುರುಷಸಾಹಿತ್ಯದಲ್ಲಿ ಕಾಣಸಿಗುವ ನಕಾರಾತ್ಮಕ ಚರ್ಚೆಗೆ ಅತಿಯಾಗಿ ಆಸಕ್ತಿ ತೋರಿಸುವುದರಿಂದ ಈ ಇಡೀ ಚರ್ಚೆಯೇ ಬಹುಬೇಗ ಕ್ಲೀಷೆಯಾಗುವ ಸಾಧ್ಯತೆ ಇರುತ್ತವೆ ಎಂದು ಹೇಳುವ ಮೆಕ್‌ಡೊವೆಲ್ಲಳ ನುಡಿ ಸ್ತ್ರೀವಾದಿಗಳ ಎಚ್ಚರದ ಕುರುಹಾಗಿದೆ.

೫. ಲೆಸ್ಬಿಯನ್ ಸ್ತ್ರೀವಾದ

ಹೆಣ್ತನದ ಸತ್ವ ಮತ್ತು ಲೈಂಗಿಕ ವ್ಯತ್ಯಾಸಕ್ಕೆ ಅತಿಯಾಗಿ ಒತ್ತುಕೊಟ್ಟ ಸ್ತ್ರೀವಾದಿ ಪಂಥಗಳಲ್ಲಿ ಸ್ತ್ರೀವಾದಿಗಳ ನಡುವೆಯೂ ತಮ್ಮ ಅಸ್ತಿತ್ವ ಸ್ಥಾಪಿಸಲಿಕ್ಕಾಗಿ ಬಲವಾದ ಹಕ್ಕೊತ್ತಾಯ ಮಾಡಿ, ತಮ್ಮನ್ನು ಗುರುತಿಸುವಂತೆ ಮಾಡಿದ್ದು ಲೆಸ್ಬಿಯನ್ ಸ್ತ್ರೀವಾದಿಗಳ ವಿಶೇಷತೆ. ಸ್ತ್ರೀಯರ ನಡುವಿನ ಲೈಂಗಿಕ ಸಂಬಂಧಕ್ಕೆ ಆದ್ಯತೆ ನೀಡಿ, ಪುರುಷರ ಹೊರತಾಗಿಯೂ ತಮ್ಮ ವ್ಯಕ್ತಿತ್ವದ ಪರಿಪೂರ್ಣತೆ ಸಾಧ್ಯವೆಂದು ಸಮರ್ಥಿಸಿಕೊಳ್ಳುವುದಕ್ಕಾಗಿ ಲೆಸ್ಬಿಯನ್ ಸ್ತ್ರೀವಾದವು ಹುಟ್ಟಿತು, ಭಿನ್ನಲಿಂಗ ಸಂಬಂಧಕ್ಕೆ ಮಾತ್ರ ಗೌರವ ನೀಡುವ ಪಿತೃಪ್ರಧಾನ ವ್ಯವಸ್ಥೆಯ ಅಡಿಯಲ್ಲಿ, ಪುರುಷಾಧಿಕಾರ ಸಂಸ್ಕೃತಿಯನ್ನು ಧಿಕ್ಕರಿಸಿ ಮಹಿಳೆಯರೇ ಪ್ರತ್ಯೇಕ ಸಮಾಜವಾಗಿ ತಮ್ಮ ಸಂಬಂಧಗಳನ್ನು ಗಟ್ಟಿಗೊಳಿಸಿಕೊಳ್ಳುವುದು, ಆ ಸ್ತ್ರೀಸಂಬಂಧಗಳ ಅನುಭವ ದ್ರವ್ಯವನ್ನೇ ಆಧಾರವಾಗಿಟ್ಟುಕೊಂಡು ತಮ್ಮೊಳಗಿನ ನಿಜಸತ್ವವನ್ನು ಪ್ರಾಮಾಣಿಕವಾಗಿ ಸಾಹಿತ್ಯದಲ್ಲಿ ಅಭಿವ್ಯಕ್ತಿಸುವುದು ಲೆಸ್ಬಿಯನ್ ಸ್ತ್ರೀವಾದಿ ಬರಹಗಾರರ ದೃಷ್ಟಿ. ಈ ಸ್ತ್ರೀವಾದಕ್ಕೆ ಹಾಗೂ ಬರಹಕ್ಕೆ ಮಾನ್ಯತೆ ಗಳಿಸಿಕೊಳ್ಳಲು ಪ್ರಮುಖವಾಗಿ ಆಗ್ರಹಪಡಿಸಿದವರೂ ಮೇರಿ ಡೇಲಿ ಮತ್ತು ಆಡ್ರಿಯನ್ ರಿಚ್.

ಲಿಂಗಪ್ರಭೇದದ ವ್ಯವಸ್ಥೆಯಿಂದ ಅತ್ಯಂತ ನಿಕೃಷ್ಟವಾಗಿ ಹೀನೈಸಲ್ಪಟ್ಟ ಲೆಸ್ಬಿಯನ್ನರನ್ನು ಸ್ತ್ರೀವಾದಿಗಳೂ ಆರಂಭದಲ್ಲಿ ಅನುಮಾನದಿಂದ ಕಂಡು ನಿರ್ಲಕ್ಷಿಸುತ್ತಿದ್ದರೆಂಬುದು ಲೆಸ್ಬಿಯನ್ನರ ಆಕ್ಷೇಪ. ತಮ್ಮ ವಿಶಿಷ್ಟ ಲೈಂಗಿಕ ಅಭಿರುಚಿಯ ಕಾರಣಕ್ಕಾಗಿಯೆ ತೀವ್ರವಾದ ದ್ವೇಷ, ತಿರಸ್ಕಾರ, ತೇಜೋವಧೆಗಳಿಗೆ ಒಳಗಾದವರು ಇವರು. ಬೇರೆ ಮಹಿಳೆಯರಂತೆಯೇ ಶಿಕ್ಷಣ, ಉದ್ಯೋಗ, ವೇತನಗಳ ಸಮಾನ ಅವಕಾಶಗಳಿಗಾಗಿ, ತಮ್ಮ ಅಸ್ಮಿತೆಯನ್ನು ಸ್ಥಾಪಿಸುವುದಕ್ಕಾಗಿ ಲೆಸ್ಬಿಯನ್ನರೂ ಸ್ತ್ರೀವಾದಿ ಚಳವಳಿಯನ್ನು ಪ್ರವೇಶಿಸಿದರು. ಆದರೆ ಮಹಿಳಾ ಚಳವಳಿಯೊಳಗೂ ತಮ್ಮ ಬಗ್ಗೆ ಭೇದಭಾವವಿರುವುದನ್ನು ಕಂಡು ಬಹುಬೇಗ ಇವರ ಭ್ರಮೆನಿರಸನವಾಯಿತು. ತಮ್ಮನ್ನು ಪುರುಷರಂತೆ, ಸ್ತ್ರೀಯರಲ್ಲೂ ಹುದುಗಿರುವ ತಿರಸ್ಕಾರ, ಅವರು ತಮ್ಮನ್ನು ಕುರಿತಂತೆ ನಿಂದಿಸಲು ಬಳಸುವ ಬೈಗಳದ ಭಾಷೆಗಳನ್ನು ಅಸ್ತ್ರವಾಗಿಟ್ಟುಕೊಂಡು ಲೆಸ್ಬಿಯನ್ನರು ಸ್ತ್ರೀಪುರುಷರಿಬ್ಬರಲ್ಲೂ ಅಡಗಿರುವ ಲಿಂಗತಾರತಮ್ಯದ ವಿರುದ್ಧ ತಮ್ಮ ಹೋರಾಟವನ್ನು ಘೋಷಿಸಿಕೊಂಡರು. ಈ ಚಳವಳಿ ತೀವ್ರವಾದಾಗ ಪಾಶ್ಚಿಮಾತ್ಯ ಸ್ತ್ರೀವಾದಿ ಪಂಥಗಳೂ ಇವರ ಅಸ್ತಿತ್ವವನ್ನು ಮಾನ್ಯಮಾಡಬೇಕಾಯಿತು. ೧೯೭೧ರಲ್ಲಿ ಜರುಗಿದ ರಾಷ್ಟ್ರೀಯ ಮಹಿಳಾ ಸಂಘಟನೆಯ (NOW) ಅಂತಾರಾಷ್ಟ್ರೀಯ ಸಮಾವೇಶದಲ್ಲಿ 'ತನ್ನ ಲೆಂಗಿಕತೆಯನ್ನು ಅರ್ಥೈಸುವ, ಅಭಿವ್ಯಕ್ತಿಸುವ ಸ್ವಾತಂತ್ರ್ಯ, ತಾನು ಬದುಕುವ ರೀತಿಯನ್ನು ಆಯ್ದುಕೊಳ್ಳುವ ಹಕ್ಕು ಮಹಿಳೆಗಿರಬೇಕು' ಎಂಬ ನಿರ್ಣಯವನ್ನು ಸ್ವೀಕರಿಸಿದ್ದು ಲೆಸ್ಬಿಯನ್ನರಿಗೆ ದೊರೆತ ಮಾನ್ಯತೆಗೆ ಸಂಕೇತವಾಯಿತು.

ತೀವ್ರಗಾಮಿ ಸ್ತ್ರೀವಾದಿ ಚಿಂತನೆಯದೇ ಒಂದು ಕವಲಾಗಿದ್ದರೂ ಲೆಸ್ಬಿಯನ್ ಸ್ತ್ರೀವಾದವು ಮಹಿಳೆಯರ ಲೈಂಗಿಕಾಭಿರುಚಿ, ನಾಗರಿಕ ಹಕ್ಕುಗಳಿಗೆ ಮಾತ್ರ ಸೀಮಿತವಲ್ಲ. ಮಹಿಳೆಯರ ಮೇಲಿನ ದೌರ್ಜನ್ಯ, ದಬ್ಬಾಳಿಕೆಗಳಿಗೆ ಭಿನ್ನಲಿಂಗೀಯ (Heterosexual) ವ್ಯವಸ್ಥೆಯೇ

ಮೂಲವೆಂದು ಹೇಳಿ ತಮ್ಮ ಸಲಿಂಗಾಭಿರುಚಿಗಾಗಿ ತಮ್ಮನ್ನು ತುಚ್ಛೀಕರಿಸುವ ಸಮಾಜ, ಭಿನ್ನಲೈಂಗಿಕತೆಯ ಪಾಲಕರಾದ ಮಹಿಳೆಯರಿಗೆ ನಿರ್ಬಂಧಿತವಾದ ಗೌಣ, ಪರಾಧೀನ ಸ್ಥಾನವಲ್ಲದೆ ಬೇರೇನನ್ನು ನೀಡುತ್ತದೆ? ಎಂದು ಪ್ರಶ್ನಿಸುತ್ತಾರೆ. ಈ ವ್ಯವಸ್ಥೆ ಸ್ತ್ರೀಸ್ವಾತಂತ್ರ್ಯದ ಬಗ್ಗೆ ಅಸಹನೆ ತೋರುತ್ತಾ ಅವರ ಶೋಷಣೆ, ಮಾನಸಿಕ ಗೊಂದಲ, ಬೆಳವಣಿಗೆಗಳನ್ನು ಮೊಟಕುಗೊಳಿಸುವುದಕ್ಕೆ ಕಾರಣವಾಗಿದೆ. ಇಂಥ ಸ್ಥಿತಿಯಿಂದ ಬಿಡುಗಡೆ ಪಡೆಯಲು ಮಹಿಳೆಯರು ಪರಸ್ಪರ ಪ್ರೇಮದ ಸಂಬಂಧಗಳನ್ನು ಕಟ್ಟಿಕೊಳ್ಳುವುದಷ್ಟೇ ಅಲ್ಲ, ಅಪರಾಧಿ ಭಾವ, ಭೀತಿ, ಆತ್ಮದ್ವೇಷ, ಆತ್ಮದೂಷಣೆಯಿಂದಲೂ ಪಾರಾಗಬೇಕು ಎನ್ನುವ ತಾತ್ವಿಕತೆಯನ್ನು ಲೆಸ್ಬಿಯನ್ನರು ಪ್ರತಿಪಾದಿಸುತ್ತಾರೆ.

ಭಿನ್ನಲಿಂಗೀಯ ಸಂಬಂಧ ಲೈಂಗಿಕ ಸಂಬಂಧಗಳ ಅನೇಕ ಸಾಧ್ಯತೆಗಳಲ್ಲಿ ಒಂದು ಅಷ್ಟೆ. ಅದು ಜನಪ್ರಿಯ ಎಂಬುದಕ್ಕಾಗಿ ಅದೊಂದೇ ಸರಿಯಾದದ್ದು ಎಂಬುದು ತಪ್ಪು ಕಲ್ಪನೆ. ವ್ಯಕ್ತಿಯ ಆಯ್ಕೆಗೆ ಈ ಬಗ್ಗೆ ಸ್ವಾತಂತ್ರ್ಯವಿರಬೇಕು. ಬಂಧನಗಳಿಂದ ಹೊರಬಂದು ಮಹಿಳೆಯರು ತಮ್ಮ ಬದುಕಿಗೆ ತಾವೇ ಜವಾಬುದಾರರಾಗಲೆಂಬುದು ಲೆಸ್ಬಿಯನ್ನರ ವಾದವಾಗಿದೆ. ಸ್ತ್ರೀಯರ ನಡುವಿನ ಲೈಂಗಿಕ, ಲೈಂಗಿಕೇತರ ಸಂಬಂಧಗಳ ಬಲದಿಂದ ಸ್ವಂತವಾದ, ಸ್ವತಂತ್ರವಾದ ಬದುಕನ್ನು ಬಾಳನ್ನು ಜವಾಬ್ದಾರಿಯನ್ನು ಹೊತ್ತರೆ, ಸ್ತ್ರೀಯರು ಅವಲಂಬನೆ, ಶೋಷಣೆಗಳಿಂದ ಬಿಡುಗಡೆ ಹೊಂದಬಹುದೆಂಬುದು ಇವರ ನಿಲುವು.

ಸಾಹಿತ್ಯದಲ್ಲಿ ಲೆಸ್ಬಿಯನ್ನರ ಬಗ್ಗೆ ಬಿಂಬಿತವಾಗಿರುವ ಊಹಾಪೋಹ, ತಪ್ಪು ಕಲ್ಪನೆ ಮತ್ತು ಏಕರೂಪದ ಪ್ರತಿಪಾದನೆಗಳನ್ನು ವಿಶ್ಲೇಷಿಸುವುದರ ಮೂಲಕ ಇವರು ತಮ್ಮದೇ ಆದ ಸಾಹಿತ್ಯಮೀಮಾಂಸೆಯೊಂದನ್ನು ಮುಂದಿಡುತ್ತಾರೆ. ಕಪ್ಪು ಸ್ತ್ರೀವಾದಿಗಳಂತೆ ಇವರೂ ಪ್ರಧಾನ ಸ್ತ್ರೀವಾದಿ ವಿಮರ್ಶೆಯು ಲೆಸ್ಬಿಯನ್ನರ ಬರಹದ ಬಗ್ಗೆ ತೀವ್ರವಾದ ನಿರ್ಲಕ್ಷ್ಯ ಉದಾಸೀನತೆ ತೋರುವುದೆಂದೂ, ಉದ್ದೇಶಪೂರ್ವಕವಾಗಿ ಲೆಸ್ಬಿಯನ್ ಲೇಖಕಿಯನ್ನು ಸ್ತ್ರೀವಾದಿ ಸಾಹಿತ್ಯ ಚರಿತ್ರೆಯಿಂದ ಹೊರಗಿಡಲಾಗಿದೆ ಯೆಂದೂ ಆಕ್ಷೇಪವೆತ್ತಿದ್ದಾರೆ. ಎಲೆನ್ ಮೊಯರ್ಸ್ (Literary Women - ೧೯೭೭) ಸಾಂಡ್ರಾ ಗಿಲ್ಬರ್ಟ್ ಮತ್ತು ಸೂಸನ್ ಗುಬರ್ (The Mad Woman in the Attic - ೧೯೭೭) ಮುಂತಾದವರು ಸ್ತ್ರೀಯರ ಸಲಿಂಗರತಿಯ ಬಗ್ಗೆ ಭೀತಿಯನ್ನೂ, ಭಿನ್ನಲೈಂಗಿಕ ಸಂಬಂಧಗಳತ್ತ ಪಕ್ಷಪಾತವನ್ನೂ ತೋರಿರುವುದನ್ನು ಇವರು ಎತ್ತಿ ತೋರಿಸುತ್ತಾರೆ. ಸ್ತ್ರೀವಾದಿಗಳೇ ಮಾಡಿರುವ ಚಾರಿತ್ರಿಕ ಸಂಗ್ರಹಗಳಲ್ಲಿ ಪ್ರಮುಖ ಬರಹಗಾರ್ತಿಯರನ್ನು ಲೆಸ್ಬಿಯನ್ನರೆಂಬುದಕ್ಕಾಗಿ ಕೈ ಬಿಟ್ಟಿರುವುದರತ್ತ ಇವರು ಗಮನ ಸೆಳೆಯುತ್ತಾರೆ. ಲೆಸ್ಬಿಯನ್ನರ ಅಸ್ತಿತ್ವವನ್ನೇ ಇಲ್ಲವಾಗಿಸುವ ರಾಜಕೀಯ ಸಂಚನ್ನು ಇದರಲ್ಲಿ ಗುರುತಿಸುತ್ತಾರೆ. ಹೆಣ್ಣಿನ ಲೈಂಗಿಕ ಮತ್ತು ಭಾವನಾತ್ಮಕ ಸಂತೃಪ್ತಿಯು ಗಂಡಿನ ಮೂಲಕ ಮಾತ್ರ ಸಾಧ್ಯವೆಂಬ ಹುಸಿಸಿದ್ಧಾಂತದಿಂದ ನಡೆಸುವ ಹುನ್ನಾರವಿದೆಂದೂ ಇವರು ವಾದಿಸುತ್ತಾರೆ.

ಪ್ರಧಾನ ಸ್ತ್ರೀವಾದಿ ವಿಮರ್ಶೆಯ ತಾತ್ವಿಕತೆಯನ್ನೇ ಬಳಸಿಕೊಂಡು ಲೆಸ್ಬಿಯನ್ನರದೇ

ಅನುಭವದ ಚರಿತ್ರೆ, ತಮ್ಮದೇ ಸಾಹಿತ್ಯ ಪತ್ರಿಕೆಗಳು, ಪ್ರಕಾಶನ ಸಂಸ್ಥೆಗಳನ್ನು ರಚಿಸಿಕೊಂಡದ್ದಲ್ಲದೆ ತಮ್ಮ ವಿಶಿಷ್ಟಾನುಭವಗಳ ಕಲಾತ್ಮಕ ಅಭಿವ್ಯಕ್ತಿ, ತಮ್ಮದೇ ಆದ ಭಾಷೆಯ ಸೃಷ್ಟಿಗಾಗಿಯೂ ಶ್ರಮಿಸಿದ್ದಾರೆ. ಸಾಹಿತ್ಯ ಕೃತಿಗಳಿಗೆ ಏಕಾಕಾರದ ಅರ್ಥವನ್ನು ಇಟ್ಟುಕೊಂಡು ಓದುವುದನ್ನು ಒಪ್ಪದ ಇವರು ಸ್ಥಿರವಾದ ಅರ್ಥವ್ಯಾಖ್ಯಾನದ ಪದ್ಧತಿಯನ್ನು ನಿರಾಕರಿಸಿ ಬಹುವಿಧವಾದ ಅರ್ಥಸಾಧ್ಯತೆ, ಓದುಗರ ದೃಷ್ಟಿಕೋನಗಳನ್ನು ಆಶ್ರಯಿಸುತ್ತಾರೆ. ತಮ್ಮ ಅನನ್ಯತೆ, ತಮ್ಮತನವನ್ನು ಅಖಂಡವಾಗಿ ಸಾಹಿತ್ಯದಲ್ಲಿ ಕಟ್ಟಿಕೊಡುವುದು ಅವರ ಪ್ರಮುಖ ಕಾಳಜಿಯಾಗಿದೆ.

ತೀವ್ರಗಾಮಿಗಳು, ಸ್ತ್ರೀಸಂಸ್ಕೃತಿವಾದಿಗಳು, ಕಪ್ಪು ಸ್ತ್ರೀವಾದಿಗಳು ಮತ್ತು ಲೆಸ್ಬಿಯನ್ನರು ಸ್ತ್ರೀತ್ವದ ಸಮಗ್ರತೆ, ಅನನ್ಯತೆ, ಅಸ್ಮಿತೆಯ ಶೋಧನೆಗಳನ್ನು ಕುರಿತು ಮಾಡಿರುವ ಪ್ರಯತ್ನಗಳೆಲ್ಲ ಮುಖ್ಯವಾಗಿ ಆಂಗ್ಲ-ಅಮೇರಿಕಾದ ಸ್ತ್ರೀವಾದಿ ಚಿಂತನೆಗಳಿಂದಲೇ ಪ್ರೇರಿತವಾಗಿದ್ದು, ಅವುಗಳಿಗೆ ಸೇರಿಸಲಾದ ಟಿಪ್ಪಣಿ, ಅನುಬಂಧಗಳಾಗಿವೆಯೇ ಹೊರತು ತೀರ ಸ್ವತಂತ್ರ ಚಿಂತನೆಯನ್ನೇನೂ ಈ ಪಂಥಗಳು ತೋರಿಲ್ಲ. ಉದಾಹರಣೆಗೆ, ಗತಕಾಲದ ಅಜ್ಞಾತ/ಮರೆತು ಹೋದ ಲೇಖಕಿಯರ ಪರಂಪರೆಗಾಗಿ ಹುಡುಕಾಟ, ಪುರುಷ ಸಾಹಿತ್ಯದ ಸ್ತ್ರೀಪ್ರತೀಕಗಳ ವಿಶ್ಲೇಷಣೆಗಳು ಈ ಎಲ್ಲ ಪಂಥಗಳಿಗೂ ಇರುವ ಮುಖ್ಯ ಕಾಳಜಿಗಳು. ಆದರೆ ಆಂಗ್ಲ-ಅಮೇರಿಕದ ಸ್ತ್ರೀವಾದಿ ಚಿಂತನೆಯೊಂದಿಗೆ ಸಮಸ್ಯಾತ್ಮಕ ಸಂಬಂಧಗಳಲ್ಲಿ ಈ ಪಂಥಗಳು ತಮ್ಮನ್ನು ಜೋಡಿಸಿಕೊಂಡಿವೆ ಎನ್ನಬಹುದು.

ಸ್ತ್ರೀಸಾಹಿತ್ಯ ವಿಮರ್ಶೆಯೆನ್ನುವುದು ಸ್ತ್ರೀವಾದಿ ವಿಮರ್ಶೆಯ ಚರಿತ್ರೆಯ ಒಂದು ನಿರ್ದಿಷ್ಟ ಹಂತದಲ್ಲಿ ತಲೆದೋರಿದ ಅವಶ್ಯಕತೆಯಾಗಿತ್ತು. ಆಗಿದ್ದ ಮುಖ್ಯ ಕಾಳಜಿಯು ಸ್ತ್ರೀ-ಪುರುಷರ ಸಾಹಿತ್ಯ ಪರಂಪರೆಗಳ ಪರಸ್ಪರ ಕ್ರಿಯೆ-ಪ್ರತಿಕ್ರಿಯೆಗಳ ಗಂಭೀರ ಪರಿಗಣನೆಗೆ ಸಂಬಂಧಿಸಿದ್ದಂಥದು. ಆದರೆ ಎಂಭತ್ತರ ದಶಕದ ನಂತರ ಮಹಿಳಾ ಸಾಹಿತ್ಯವನ್ನು ಅಧೀನರಾದವರ 'ಶೋಷಣೆಯ ಮಾದರಿ'ಯೆಂದು ನೋಡುವುದರ ಬದಲಾಗಿ ಮಹಿಳೆಯರತ್ತ ಬೆಳಕುಬೀರಬಲ್ಲ ಕೃತಿಗಳನ್ನು ಗುರುತಿಸುವುದರ ಕಡೆಗೆ ಸ್ತ್ರೀವಾದಿಗಳ ಆಸಕ್ತಿಯು ಬೆಳೆದಿದೆ. ಈ ಹಂತದಿಂದಲ್ಲೂ ಮುಂದುವರೆದು ಮುಖ್ಯ ವಾಹಿನಿಯೊಂದಿಗೆ ಮುಖಾಮುಖಿಯಾಗುತ್ತಲೇ ಸ್ತ್ರೀಪರಂಪರೆಯ ಅಸ್ತಿತ್ವವನ್ನೂ ವಿಶ್ಲೇಷಿಸುವ ಆಯಾಮದ ಕಡೆಗೆ ಈ ವಿಮರ್ಶೆ ಬೆಳೆಯಬೇಕಾಗಿದೆ.

ಆಂಗ್ಲ-ಅಮೇರಿಕದ ಸ್ತ್ರೀವಾದಿ ಚಿಂತನೆಯಲ್ಲಿ ಸ್ತ್ರೀಸಾಹಿತ್ಯ ವಿಮರ್ಶೆಗೆ ಪ್ರೇರಣೆ ನೀಡಿದಂತಹ ಒಂದು ಮುಖ್ಯ ತತ್ವವು ಸಾಹಿತ್ಯಕೃತಿಯನ್ನು ಅನುಭವದ ಪ್ರತಿಬಿಂಬವಾಗಿರುತ್ತದೆ ಎಂಬ ನಂಬಿಕೆಗೆ ಹೊಂದಿಕೊಂಡದ್ದು. ಇದೇ ನಿಟ್ಟಿನಿಂದ ಸ್ತ್ರೀವಾದಿಗಳು ಮಹಿಳೆಯರೇ ಬರೆದಾಗ ಅವರ ಎಲ್ಲ ಅನುಭವಗಳೂ ನೇರವಾಗಿ, ಪ್ರಾಮಾಣಿಕವಾಗಿ, ಸತ್ಯಕ್ಕೆ ಹತ್ತಿರವಾಗಿ, ಅಧಿಕೃತ ರೀತಿಯಲ್ಲಿ ಹೊಮ್ಮಬಲ್ಲವು – ಎಂದು ಭಾವಿಸುತ್ತಾರೆ. ಈ ಮಹಿಳಾ ಅನುಭವವನ್ನು, ಅದರ ಅಧಿಕೃತತೆಯನ್ನು ಎಷ್ಟೆಷ್ಟು ಗುರುತಿಸಿದರೆ, ಅಷ್ಟಷ್ಟು ಆ ಕೃತಿಯ ಮೌಲ್ಯ ಹೆಚ್ಚುತ್ತದೆಂಬ

ಪರಿಕಲ್ಪನೆಯೊಂದು ಸ್ತ್ರೀಸಾಹಿತ್ಯ ವಿಮರ್ಶೆಗೆ ತಳಹದಿಯಾಯಿತು. ಪಠ್ಯ ಹಾಗೂ ಅದರ ಭಾಷೆ ಪಾರದರ್ಶಕವಾದ ಮಾಧ್ಯಮಗಳೆಂದೂ, ಸ್ತ್ರೀವಾದಿ ಓದುವಿಕೆಗೆ ತೆರೆದುಕೊಳ್ಳಬಹುದಾದ ಅರ್ಥವೊಂದು ಅವುಗಳಲ್ಲಿ ಕಾಯ್ದು ಕುಳಿತಿರುತ್ತದೆಂದೂ ಭಾವಿಸುವ ಈ ವಿಮರ್ಶಕರು ಭಾಷೆ ಕೂಡ ಸಂಸ್ಕೃತಿಯದೇ ಒಂದು ಉತ್ಪಾದನೆಯಾಗಿರುವುದನ್ನು ಗಮನಿಸದೇ ಹೋಗುತ್ತಾರೆ. ಪಿತೃಪ್ರಧಾನ ಚಿಂತನೆಯು ಸಾಂಕೇತಿಕ ವ್ಯವಸ್ಥೆಯ ಮೂಲಕ ಭಾಷೆಯೊಳಗೆ ತನ್ನದೇ ತಾತ್ವಿಕತೆಯನ್ನು ಕೊರೆದಿಟ್ಟಿರುತ್ತದೆ. ಈ ಸಂಕೇತ, ಮತ್ತು ತಾತ್ವಿಕತೆಗಳ ಮೂಲಕವೇ ಪ್ರತಿಷ್ಠಿತ ಮೇರುಕೃತಿಗಳ ಶ್ರೇಣಿಯನ್ನು ಕಟ್ಟಲಾಗಿರುತ್ತದೆ. ಆದ್ದರಿಂದ ಪಠ್ಯವನ್ನಾಗಲಿ, ಸಾಹಿತ್ಯದ ಭಾಷೆಯನ್ನಾಗಲಿ ಮೌಲ್ಯಮುಕ್ತವಾದ ಉಪಕರಣಗಳೆಂದು ಭಾವಿಸುವುದು ಮುಗ್ಧತೆಯಾಗುತ್ತದೆ. ಈ ಕಾರಣದಿಂದಲೇ ಸ್ತ್ರೀನಿಷ್ಠ ವಿಮರ್ಶೆಯು ಹುಟ್ಟಿಸಿದ ಸೀಮಿತತೆಗಳಿಂದ ಬಿಡುಗಡೆ ಪಡೆಯಲು, ತಮ್ಮ ದೃಷ್ಟಿ, ಚಿಂತನೆಗಳನ್ನು ವಿಸ್ತರಿಸಿಕೊಳ್ಳಲು ಎಂಭತ್ತರ ದಶಕದಿಂದ ಈಚೆಗೆ ಬೇರೆ ಬೇರೆ ಜ್ಞಾನ ಪ್ರಕಾರಗಳತ್ತ ಸ್ತ್ರೀವಾದಿಗಳ ಗಮನ ಹರಿದಿದೆ.

ಸೊಸ್ಯೂರ್ (Saussure) ನಂತರದ ಭಾಷಾಶಾಸ್ತ್ರದಲ್ಲಿ ಸಂಜ್ಞಾಸಿದ್ಧಾಂತವು ಬೆಳೆದಿದ್ದು ಅದು ಭಾಷೆಯನ್ನು ಸಂಜ್ಞೆಗಳ ಮೊತ್ತವೆಂದು ಪ್ರತಿಪಾದಿಸುತ್ತದೆ. ರೂಲಾನ್ ಬಾರ್ತ್ ಎಂಬ ಭಾಷಾಶಾಸ್ತ್ರಜ್ಞನು ಪಶ್ಚಿಮದ ತಾತ್ವಿಕ ಚಿಂತನೆಯು ಒಬ್ಬ ಲೋಕಕರ್ತೃವಿನ, ನಿರ್ದೇಶಕನ ಇರವನ್ನು ಸದಾ ಬಲಗೊಳಿಸುವಂಥ ಅಧ್ಯಾತ್ಮತತ್ವವನ್ನು ಹೊಂದಿದೆಯೆಂದು ಹೇಳಿ ಈ ಕರ್ತೃವಿನ ಅಧಿಕಾರ ಮತ್ತು ಉಪಸ್ಥಿತಿಗಳನ್ನು ಪಠ್ಯ ಮತ್ತು ಅದರ ಕರ್ತೃವಿನ ಸಂಬಂಧಕ್ಕೆ ಹೋಲಿಸುತ್ತಾನೆ. ಏಕ ದೃಷ್ಟಿಯ ಅಥವಾ ಒಂದೇ ಅರ್ಥವನ್ನಿಟ್ಟು ಓದುವ ಕ್ರಮವು ಪಠ್ಯದ ಕರ್ತೃವಿನ ಅಧಿಕಾರವನ್ನು ಬಲಪಡಿಸುವ ಕ್ರಮ. ಆದ್ದರಿಂದ ಕರ್ತೃವಿನ ಉಪಸ್ಥಿತಿಯಿಂದ ಪಠ್ಯವೊಂದನ್ನು ಬಿಡುಗಡೆಗೊಳಿಸುವುದು, ಏಕಾಕಾರದ ಅಧಿಕಾರದಿಂದ ಬಿಡುಗಡೆ ಪಡೆವ ಯತ್ನವೂ ಆಗಿರುತ್ತದೆಂದು ಬಾರ್ತ್ ಪ್ರತಿಪಾದಿಸುತ್ತಾನೆ.

ಬಾರ್ತ್‌ನ ಪ್ರಕಾರ ಪಠ್ಯವೆನ್ನುವುದು ಉತ್ಪಾದಿಸಲು ಸಾಧ್ಯವಾಗುವ, ಬಹುಮುಖವಾದ ಅರ್ಥಸಾಧ್ಯತೆಗಳಿರುವ, ಅನೇಕ ಒಳವಿರೋಧಗಳುಳ್ಳ ಒಂದು ಮಾಧ್ಯಮ. ಓದುಗರ ಭಿನ್ನತೆಗೆ ತಕ್ಕಂತೆ ಭಿನ್ನ ಅರ್ಥಗಳನ್ನು ಪಡೆಯಬಹುದಾದ ಒಂದು ಸಾಧನ. ಓದುಗನಿಷ್ಠ ದೃಷ್ಟಿಯಿಂದ ನೋಡಿದಾಗ ಸಾಹಿತ್ಯಕೃತಿಯೊಂದನ್ನು ಬರೆದಿದ್ದು ಮಹಿಳೆಯೋ ಅಲ್ಲವೋ, ಅದರಲ್ಲಿ ಆಕೆಯ ಅನುಭವದ ಅಧಿಕೃತ ಪ್ರತಿಪಾದನೆ ಇದೆಯೋ ಇಲ್ಲವೋ, ಬೇರೆ ಮಹಿಳೆಯರ ಕೃತಿಗಳೊಂದಿಗೆ ಅದು ಹೊಂದಿರುವ ಹೋಲಿಕೆಯ ಸಂಬಂಧವೇನು – ಎಂಬಂಥ ಪ್ರಶ್ನೆಗಳೆಲ್ಲ ಅಮುಖ್ಯವಾಗುತ್ತವೆ. ಬದಲಾಗಿ ಪಿತೃಪ್ರಧಾನ ತಾತ್ವಿಕತೆಯನ್ನು ಕೆತ್ತುವ ಸಂಜ್ಞಾಪ್ರಕ್ರಿಯೆಯಲ್ಲಿ ಆ ಪಠ್ಯವು ಯಾವ ರೀತಿ ಕೆಲಸಮಾಡುತ್ತದೆ ಎಂಬುದು ಮುಖ್ಯವಾದ ಪ್ರಶ್ನೆಯಾಗುತ್ತದೆ. ಈ ಅಂಶಗಳು ಸಮಕಾಲೀನ ಫ್ರೆಂಚ್ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯನ್ನು ಪ್ರಭಾವಿಸಿವೆ.

೬. ಫ್ರೆಂಚ್ ಸ್ತ್ರೀವಾದಿ ಸಾಹಿತ್ಯ ವಿಮರ್ಶೆ

ಫ್ರೆಂಚ್ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯು ಮುಖ್ಯವಾಗಿ ಇಬ್ಬರು ಚಿಂತಕರು ವಿಚಾರಗಳಿಂದ ಹೆಚ್ಚು ಪ್ರಭಾವಿತವಾಗಿದೆ. ದೆರ್ರಿದನ ನಿರಚನವಾದ (Deconstruction Theory) ಮತ್ತು ಝಕ್ ಲಕಾನನ ಮನೋವಿಶ್ಲೇಷಣಾ ತತ್ವಗಳು ಈ ಸ್ತ್ರೀವಾದಿಗಳ ಮುಖ್ಯ ತಾತ್ವಿಕತೆಗೆ ಬೆನ್ನೆಲುಬಾಗಿವೆ. ಪಾಶ್ಚಿಮಾತ್ಯ ತತ್ವಚಿಂತನೆಯು ಸದಾ ವಿರೋಧಿದ್ವಂದ್ವಗಳ ಮೂಲಕವೇ ಸಾಗುತ್ತದೆ ಮತ್ತು ಈ ದ್ವಂದ್ವತತ್ವಗಳಲ್ಲಿ ಎರಡನೆಯದನ್ನು ಮೊದಲಿನದಕ್ಕೆ ಅಧೀನವಾಗಿರುವಂತೆ ಪ್ರತಿಪಾದಿಸಲಾಗುತ್ತದೆ ಎಂದು ದೆರ್ರಿದನು ಪ್ರತಿಪಾದಿಸಿದ್ದಾನೆ. ಉದಾಹರಣೆಗೆ : ಜ್ಞಾನ/ಅಜ್ಞಾನ, ಹಗಲು/ಕತ್ತಲು, ಬೆಳಕು/ನೆರಳು, ವಿಚಾರ/ಭಾವ, ಪುರುಷ/ಸ್ತ್ರೀ ಇತ್ಯಾದಿಗಳಲ್ಲಿ ಮೊದಲಿನ ತತ್ವವು ಪ್ರಧಾನವಾಗಿ, ಎರಡನೆಯದು ಅದಕ್ಕಿಂತ ಕೆಳಗಿನದಾಗಿಯೇ ಪ್ರತಿಪಾದಿತವಾಗುತ್ತಿರುತ್ತದೆ. ಇಂಥ ದ್ವಂದ್ವಗಳನ್ನು ತಿರುವು ಮುರುವು ಮಾಡಿದರೆ ಅವು ಪ್ರತಿನಿಧಿಸುವಂಥ ಮೌಲ್ಯಗಳೂ ಮತ್ತೆ ನಿರ್ವಚನಗೊಳ್ಳಬೇಕಾದ ಸ್ಥಿತಿಯು ಏರ್ಪಡುತ್ತದೆ. ಸಾಹಿತ್ಯಕೃತಿಗಳ ಶ್ರೇಣಿ ಕೂಡ ಇದೇ ರೀತಿ ಪರ್ಯಾಯ ಸಾಧ್ಯತೆಯನ್ನು ಒಳಗೊಂಡಿರುತ್ತದೆ. ಆದರೆ ಒಂದು ಶ್ರೇಣಿಗೆ ಬದಲಾಗಿ ಮತ್ತೊಂದು ಶ್ರೇಣಿಯನ್ನು ತಂದು ಸ್ಥಾಪಿಸಿದರೆ ಮೊದಲ ಮೌಲ್ಯವ್ಯವಸ್ಥೆಯನ್ನೇ ಮರುಕಳಿಸಿದಂತೆ ಆಗುತ್ತದೆ. ಪುರುಷನನ್ನು ಜ್ಞಾನದ ಕೇಂದ್ರಬಿಂದುವಾಗಿಟ್ಟು ಆತನ ಸುತ್ತಲೂ ಶ್ರೇಣಿಕೃತ ದ್ವಂದ್ವಗಳನ್ನು ಪಾಶ್ಚಿಮಾತ್ಯ ತತ್ವಚಿಂತನೆಯು ಬೆಳೆಸಿಟ್ಟಿದೆ. ಈ ವಿರೋಧಿ ಘಟಕಗಳಲ್ಲಿ ಯಾವಾಗಲೂ ಪುರುಷನೇ ಸವಲತ್ತುಳ್ಳ ನೆಲೆಯಲ್ಲಿರುತ್ತಾನೆ. ಇಂಥ ವಿರೋಧಗಳನ್ನು ಒಡೆದು ನಿರಚಿಸುವ ಮೂಲಕ ಅವು ಸ್ಥಾಪಿಸುವ ವ್ಯವಸ್ಥೆಯನ್ನೇ ಬುಡಮೇಲು ಮಾಡಲು ಸಾಧ್ಯ. ಹೀಗೆ ಮಾಡಿದಾಗ ಪುರುಷ x ಸ್ತ್ರೀ ಎಂಬ ವಿರೋಧಿ ದ್ವಂದ್ವದಲ್ಲಿನ ಶ್ರೇಣೀಕೃತ ವೈರುದ್ಧ್ಯವನ್ನು ಇಲ್ಲವಾಗಿಸಬಹುದೆಂದು ದೆರ್ರಿದನು ಪ್ರತಿಪಾದಿಸುತ್ತಾನೆ.

ಫ್ರೆಂಚ್ ಸ್ತ್ರೀವಾದಿ ವಿಮರ್ಶಕರು ಸಾಹಿತ್ಯ ಮತ್ತು ಪಿತೃಪ್ರಧಾನ ತಾತ್ವಿಕತೆಗಳಿಗೆ ಇರುವ ಒಳಸಂಚಿನ ಸಂಬಂಧವನ್ನು ಅರ್ಥಮಾಡಿಕೊಳ್ಳಲು, ಪುರಾಣವನ್ನು ಒಡೆದು ಓದಲು, ಮಹಿಳೆಯರನ್ನು ಮೂಕವಾಗಿಸಿ ಅಂಚಿಗೆ ಒತ್ತರಿಸಿದ ಪರಂಪರೆಯನ್ನು ಬುಡಮೇಲು ಮಾಡಲು ದೆರ್ರಿದನ ನಿರಚನವಾದವನ್ನು ಬಳಸಿಕೊಳ್ಳುತ್ತಾರೆ. ನಿರಚನವಾದಿ ಸಾಹಿತ್ಯ ವಿಮರ್ಶೆಯು ಕೃತಿಯೊಂದರ ಘೋಷಿತ ಉದ್ದೇಶಕ್ಕೂ, ಓದುಗರಿಗೆ ಒಂದು ಪಠ್ಯವಾಗಿ ಅದು ಬಿಟ್ಟುಕೊಡುವ ಅರ್ಥಗಳಿಗೂ ಮಧ್ಯ ಇರುವ ಅಂತರಗಳನ್ನು ಗುರುತಿಸುತ್ತದೆ. ಪಠ್ಯದಲ್ಲಿನ ಮೌನಗಳು, ಬಿರುಕುಗಳು, ಹೇಳದೆ ಬಿಟ್ಟ ಸಂಗತಿಗಳನ್ನು ಹುಡುಕಲು ಯತ್ನಿಸುತ್ತದೆ. ಈ ವಿಮರ್ಶೆಯನ್ನು 'ಮೌನವನ್ನು ಮಾತನಾಡಿಸುವ, ಮೌನಗಳನ್ನು ಆಲಿಸುವ' ಕೆಲಸವೆಂದು ಕರೆಯುವ ಫ್ರೆಂಚ್ ಸ್ತ್ರೀವಾದಿ ಆಡ್ರಿಯನ್ ರಿಚ್ ಮಹಿಳೆಯರ ಅನುಭವವನ್ನು ಅರ್ಥಮಾಡಿಕೊಳ್ಳಲು ಇದು ಅವಶ್ಯಕವೆನ್ನುತ್ತಾಳೆ. ''ಕಲೆ ಮತ್ತು ಸಾಹಿತ್ಯದಲ್ಲಿ, ಸಾಮಾಜಿಕ ವಿಜ್ಞಾನಗಳಲ್ಲಿ ಈ ಲೋಕದ

ಬಗ್ಗೆ ನೀಡಲಾಗುವ ವಿವರಣೆಗಳೆಲ್ಲದರಲ್ಲೂ ಮೌನಗಳನ್ನು, ಗೈರು ಹಾಜರಿಗಳನ್ನು ಹೇಳದೆ ಬಿಟ್ಟಿದ್ದನ್ನು, ಶಬ್ದಗಳ ಸಂಕೇತರೂಪಗಳನ್ನು ಆಲಿಸುವುದರಿಂದ, ಎಚ್ಚರದಿಂದ ನೋಡುವುದರಿಂದ ಅವುಗಳಲ್ಲಿ ಹುದುಗಿರುವ ಸ್ತ್ರೀ ಕುರಿತ ಅರಿವನ್ನು ನಾವು ಕಂಡುಕೊಳ್ಳಬಹುದು. ಆ ಮೌನಗಳನ್ನು ಮುರಿದು ನಮ್ಮನ್ನು ನಾವೇ ಹೆಸರಿಸಿಕೊಳ್ಳುವುದು ಗುಪ್ತವಾದುದನ್ನು ಬಯಲಿಗೆಳೆಯುವುದೇ ಮುಂತಾದ ಹೆಸರಿಸಿಕೊಳ್ಳುವುದು ಗುಪ್ತವಾದುದನ್ನು ಬಯಲಿಗೆಳೆಯುವುದೇ ಮುಂತಾದ ರೀತಿಗಳಿಂದ ನಮ್ಮ ಉಪಸ್ಥಿತಿಯನ್ನು ಅನುರಣಿಸುವಂತಹ ವಾಸ್ತವತೆಯೊಂದನ್ನು ನಾವು ನಿರ್ವಚಿಸಲು ಆರಂಭಿಸಿರುತ್ತೇವೆ" ಎಂದು ರಿಚ್ ಪ್ರತಿಪಾದಿಸುತ್ತಾಳೆ.

ಪಠ್ಯವೊಂದಕ್ಕೆ ಅಂತಿಮ ಅರ್ಥವಿಷ್ಟೇ ಎಂದು ತೀರ್ಮಾನಿಸಲು ನಿರಾಕರಿಸುವುದೆಂದರೆ ಅದು ಕರ್ತೃವಿನ ಉದ್ದೇಶಕ್ಕೆ ವಿರುದ್ಧವಾದ ಕ್ರಿಯೆಯನ್ನು ಹೊಮ್ಮಿಸಿದಂತೆ. ಆದ್ದರಿಂದ ಒಬ್ಬ ಕರ್ತೃವಿನ ಅಧಿಕಾರದ ಸವಲತ್ತನ್ನು ನಿವಾರಿಸುವುದು ಮತ್ತು ಓದುಗನಿಷ್ಠ ವಿಮರ್ಶೆಯನ್ನು ಸಾಧ್ಯವಾಗಿಸುವುದರಿಂದ ನಿರಂಕುಶಾಧಿಕಾರದ ನಿರಾಕರಣೆಯನ್ನು ಮಾಡಿದಂತಾಗುತ್ತದೆ ಎಂಬ ರೊಲಾನ್ ಬಾರ್ತ್‌ನ ವಿಚಾರವನ್ನು ಬಳಸಿಕೊಂಡು ಫ್ರೆಂಚ್ ಸ್ತ್ರೀವಾದಿಗಳು ಪಿತೃಪ್ರಧಾನ್ಯದ ಯಜಮಾನಿಕೆಯನ್ನೂ, ನಿರಂಕುಶಾಧಿಕಾರವನ್ನೂ ಬಯಲು ಮಾಡಲು ಸಾಹಿತ್ಯವನ್ನು ಒಂದು ಪಠ್ಯವಾಗಿ ಓದಲು ಯತ್ನಿಸುತ್ತಾರೆ. ಪಠ್ಯದ ಓದುವಿಕೆಯಲ್ಲಿ ಲೇಖಕರು ಘೋಷಿಸಿಕೊಂಡಂಥ ಉದ್ದೇಶ, ಊಹಿತಾರ್ಥಗಳನ್ನೂ ನಿರಂತರವಾಗಿ ನಿರ್ಲಕ್ಷಿಸಲಾಗುತ್ತದೆ. ಈ ಬಗೆಯಲ್ಲಿ ಪೂರ್ವನಿರ್ಧರಿತ ಅರ್ಥವನ್ನು ನಿರಾಕರಿಸುವ ಕ್ರಿಯೆಯು ಕರ್ತೃವಿನ ಅಧಿಕೃತತೆಯನ್ನು ಪ್ರಶ್ನೆಗೀಡು ಮಾಡುತ್ತದೆ. ಕರ್ತೃವಿಗೆ ಸವಲತ್ತು ನೀಡುವ ವಿಮರ್ಶೆಯ ನಿಯಮಗಳನ್ನು ಉಲ್ಲಂಘಿಸುವ ಮೂಲಕ ಓದುಗರು ನಿಷ್ಠಾರಹಿತ, ಸ್ವಾಮಿದ್ರೋಹದ ನೆಲೆಯಲ್ಲಿ ಸೇರುತ್ತಾರೆ. ಸ್ಥಾಪಿತ ಅರ್ಥದ ನಿರಾಕರಣೆಯೇ ಪಿತೃಪ್ರಧಾನ್ಯದ ಕಟ್ಟನ್ನು ಕಳಚುವ ಕ್ರಿಯೆ ಕೂಡ ಆಗಿರುತ್ತದೆ. ಇಂಥ ಓದುವಿಕೆ ಭಾಷೆಯ ಸಾಂಕೇತಿಕತೆಯ ಒಳಗಿನಿಂದ ಆ ಸಾಂಕೇತಿಕತೆಯನ್ನೇ ಪೊಳ್ಳುಮಾಡಿ, ನಾಶಗೊಳಿಸುವ ರೀತಿಯದು ಎಂಬುದು ಈ ನಿರಚನವಾದಿ ಸ್ತ್ರೀವಾದಿ ವಿಮರ್ಶೆಯ ತಾತ್ವಿಕ ನೆಲೆಯಾಗಿದೆ.

ಫ್ರೆಂಚ್ ಸ್ತ್ರೀವಾದಿಗಳಲ್ಲಿ ಪ್ರಮುಖಳಾದ ಯೂಲಿಯಾ ಕ್ರಿಸ್ತೇವ ಈ ವಿಚಾರದಲ್ಲಿ ತನ್ನದೇ ಆದ ನಿಲುವನ್ನು ಪ್ರಕಟಿಸಿರುವಾಕೆ. ಆಕೆಯ ಪ್ರಕಾರ ಸ್ತ್ರೀವಾದಿ ನಿಲುವು ಎನ್ನುವುದು ಸಾಮಾನ್ಯವಾಗಿ ಭಾವಿಸಲಾಗುವಂತೆ ಪಿತೃಪ್ರಧಾನ ವ್ಯವಸ್ಥೆಯ ಚೌಕಟ್ಟಿನ ಆಚೆಗಿರುವ ಪ್ರತ್ಯೇಕ ಜಾಗವೇನಲ್ಲ. ಬದಲಾಗಿ ಪಿತೃಪ್ರಧಾನ ಚಿಂತನೆಯ ಅಡಿಯಲ್ಲಿ.ಅದರ ಪರಿಣಾಮವಾಗಿಯೇ ವ್ಯಕ್ತಿಗಳಲ್ಲಿ ಹುಟ್ಟಬಹುದಾದ ಒಂದು ನಿಲುವು ಅದು. ಈ ನಿಲುವು ಕೇವಲ ಸ್ತ್ರೀಯರದಷ್ಟೇ ಆಗಿರಬೇಕೆಂದಿಲ್ಲ. ಇಂಥ ನಿಲುವನ್ನು ಪುರುಷರೂ ತಳೆಯಲು ಸಾಧ್ಯ – ಎಂದು ಹೇಳುವ ಕ್ರಿಸ್ತೇವ, ಇದರ ಸಮರ್ಥನೆಗಾಗಿ ಫ್ರೆಂಚ್ ಸಾಹಿತ್ಯದಲ್ಲಿ ಹೊಸ

ಪಂಥಗಳನ್ನು ಸ್ಥಾಪಿಸಿ ಖ್ಯಾತರಾದ ಪುರುಷ ಬರಹಗಾರರ ರಚನೆಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸುತ್ತಾಳೆ. ಅವರ ರಚನೆಯಗಳ ಭಾಷೆಯಲ್ಲಿ ಶಬ್ದರಚನೆ, ಉಚ್ಚಾರಣೆ, ವಾಕ್ಯಾನ್ವಯ ಮುಂತಾದ ಭಾಷಾನಿಯಮಗಳ ಉಲ್ಲಂಘನೆಯಿಂದ ಆ ಲೇಖಕರು ಸ್ಥಾಪಿತ ಚಿಂತನೆಯನ್ನು ಪ್ರತಿನಿಧಿಸುವ ಸಾಂಕೇತಿಕ ಕ್ರಮವನ್ನೇ ಬುಡಮೇಲಾಗಿಸುವುದನ್ನು ಆಕೆ ಗುರುತಿಸುತ್ತಾಳೆ. ಸಾಂಕೇತಿಕ ಭಾಷಾಕ್ರಮವು ಹತ್ತಿಕ್ಕುವ ಅಸ್ಪಷ್ಟ ಶಬ್ದಗಳು, ಧ್ವನಿಗಳು ಮತ್ತು ಸಂದಿಗ್ಧ ಭಾವಗಳಿಗೂ ಅಭಿವ್ಯಕ್ತಿಯ ಅವಕಾಶ ನೀಡುವ ಕ್ರಮವನ್ನು ಗುರುತಿಸುವುದೇ ಸ್ತ್ರೀವಾದಕ್ಕೆ ಯೋಗ್ಯವಾದ ವಿಮರ್ಶಾ ಕ್ರಮ ಎಂಬುದು ಕ್ರಿಸ್ತೇವ ಅಭಿಮತ.

ಪಠ್ಯವೊಂದರ ಭಾಷಾಕ್ರಮದೊಳಕ್ಕೆ ಪ್ರವೇಶಿಸಿ, ಆ ಬರಹವು ಸಂವಾದದ ಸ್ವೀಕೃತ ಮಾದರಿಗಳನ್ನು ಹೇಗೆ ಒಡೆಯಬಲ್ಲದೆಂದು ಗುರುತಿಸುವ ನಿರಚನಾತ್ಮಕ ಸ್ತ್ರೀವಾದಿ ವಿಮರ್ಶೆಯು ಮುಖ್ಯವಾಗಿ ಹುಡುಕುವುದು ಸಾಂಕೇತಿಕ ಕ್ರಮಕ್ಕೆ ತಡೆಯೊಡ್ಡಿ, ಅದನ್ನು ಬುಡಮೇಲು ಮಾಡಬಲ್ಲ ಭಾಷಿಕ ಶಕ್ತಿಯನ್ನು. ಈ ಭಾಷಿಕ ಶಕ್ತಿಯು ವ್ಯಕ್ತಿಗಳೊಳಗೆ ಅಂತಸ್ಥವಾಗಿರುವ ಮಾತೃತ್ವದ ನೆಲೆಯತ್ತ ಒಯ್ಯುವಂಥದಾಗಿರುತ್ತದೆ. ಅಡೆತಡೆಯಿಲ್ಲದ ಭಾವನಾತ್ಮಕತೆ, ತರ್ಕರಾಹಿತ್ಯಗಳ ಈ ನೆಲೆಯು ತರ್ಕವನ್ನೇ ಆಧರಿಸಿ ಭಾಷಾವ್ಯವಸ್ಥೆಗಿಂತ ಭಿನ್ನವಾದದ್ದನ್ನು ಮೌಲಿಕಗೊಳಿಸುವಂಥದು. ತಾಯ್ತನವು ಪುರುಷನ ಪರಮಾಧಿಕಾರ ತತ್ವಕ್ಕೆ (Phalicism) ಒಂದು ಸವಾಲೊಡ್ಡಬಲ್ಲ ಪರಿಕಲ್ಪನೆ. ಗರ್ಭಸ್ಥ ಸ್ಥಿತಿಯಲ್ಲಿ ತಾಯಿ–ಮಗುವಿನ ನಡುವಿನ ಸಾಯುಜ್ಯದ ಸಂಬಂಧದ ಸ್ಥಿತಿಯಲ್ಲಿ, ಭಾಷೆಗೆ ಮುಂಚಿನ ಅಭಿವ್ಯಕ್ತಿ ರೂಪಗಳು ವ್ಯಕ್ತಿಯಲ್ಲಿ ಬೆಳೆಯುತ್ತವೆ. ಕೇಕೆ, ಅಳು, ನಗು, ಅರ್ಥರಹಿತ ಶಬ್ದೋಚ್ಚಾರಣೆ, ಅಂಗಾಂಗಳ ಚೇಷ್ಟೆ, ಕಿರಿಚುವಿಕೆ ಮುಂತಾದ ಮಗುವಿನ ಅಭಿವ್ಯಕ್ತಿ ವಿಧಾನಗಳು ಈ ಮಾತೃ–ಶಿಶು ಸಂಯುಕ್ತ ಸ್ಥಿತಿಯಿಂದ ಪಡೆದುಕೊಂಡಂಥವು. ಮಾತೃಮೂಲೀಯವಾದ ಈ ಎಲ್ಲ ರೀತಿಯ ಅಭಿವ್ಯಕ್ತಿಯೂ ಸ್ಥಾಪಿತ ಭಾಷೆಯ ರೂಢಿಗತ ಸಂಕೇತಾರ್ಥಗಳನ್ನು ನಿರಾಕರಿಸಲು, ತಡೆಯೊಡ್ಡಲು ಸಹಾಯಕವಾಗುತ್ತದೆ ಎನ್ನುವ ಕ್ರಿಸ್ತೇವ ಈ ಭಾಷಿಕಶಕ್ತಿಗೆ ಪುರುಷರ ರಚನೆಗಳಿಂದ ಮಾದರಿಗಳನ್ನು ಸೂಚಿಸುತ್ತಾಳೆ. ಭಾಷೆಯ ಸಾಂಕೇತಿಕ ಕ್ರಮವನ್ನು ಪ್ರತಿಭಟಿಸಲು ಮಹಿಳೆಯರು ನಡೆಸಬಹುದಾದ ಪ್ರಯತ್ನ ಕೂಡ ನೇತ್ಯಾತ್ಮಕವೇ ಆಗಿರಲು ಸಾಧ್ಯ ಎನ್ನುತ್ತಾಳೆ. ಸಂಕ್ಷೇಪಿಸಿ ಹೇಳುವುದಾದರೆ ಖಚಿತತೆ, ಸಂರಚನೆ, ಅರ್ಥವಂತಿಕೆಯಂಥ ಲಕ್ಷಣಗಳನ್ನು ನಿರಾಕರಿಸುವುದು ಈಕೆ ಪ್ರತಿಪಾದಿಸುವ ಸ್ತ್ರೀವಾದಿ ನಿಲುವು.

ರೊಲಾನ್ ಬಾರ್ತ್ ಮತ್ತು ಝುಕ್ ಲಕಾನನ ಸಿದ್ಧಾಂತಗಳೆರಡನ್ನೂ ಬಳಸಿಕೊಳ್ಳುವ ಲ್ಯೂಸ್ ಈರಿಗರೆ ಮತ್ತು ಹೆಲೆನ್ ಸಿಕ್ಸೂ ಎಂಬ ಇನ್ನಿಬ್ಬರು ಪ್ರಮುಖ ಫ್ರೆಂಚ್ ಸ್ತ್ರೀವಾದಿಗಳು ಮಹಿಳೆಯ ದೈಹಿಕ ಹೆಣ್ತನದ ಅಂತಃಸತ್ವದ ತತ್ವವನ್ನೂ, ಸ್ಪರ್ಶಮೂಲವಾದ ಸ್ತ್ರೀಶರೀರದ ಸೂಕ್ಷ್ಮ ಸಂವೇದನೆಗಳನ್ನೂ ಮುಂದೆಮಾಡಿ ತಮ್ಮ ತಾತ್ವಿಕ ನಿಲುವನ್ನು ಪ್ರತಿಪಾದಿಸುತ್ತಾರೆ. ಹೆಣ್ಣಿನ ಲೈಂಗಿಕಾಭಿವ್ಯಕ್ತಿ ಬಹುಕೇಂದ್ರಿತವಾದದ್ದು. ಈ ಬಹುಮುಖಿ ನೆಲೆಗಳನ್ನು ಆಧರಿಸಿ

ಭಾಷೆ, ಶೈಲಿ, ಅಭಿವ್ಯಕ್ತಿಗಳಲ್ಲಿ ತಮ್ಮ ಅನುಭವ ವೈವಿಧ್ಯವನ್ನು ಹಿಡಿದಿಡುವುದಕ್ಕೆ ಇವರು ಯತ್ನಿಸುತ್ತಾರೆ. ಸ್ತ್ರೀದೇಹದ ಪ್ರವೃತ್ತಿಗಳಿಂದಲೇ ಚೋದಿತವಾದ ಬರಹವು ಮಾತೃತ್ವದ ಸಮೃದ್ಧತೆಯ ಗುಣಗಳನ್ನು ಹೊಂದಿದ್ದು ಹೆಣ್ಣಿನ ಬಹುಕೇಂದ್ರಿತ ಲೈಂಗಿಕಾನುಭೂತಿಯನ್ನು ಮಿಡಿಸುವಂಥ ಹೆಣ್ಣಿನದೇ ಭಾಷೆ ಇದಾಗಿರುತ್ತದೆಂದು ಬಲವಾಗಿ ನಂಬುವ ಈ ಸ್ತ್ರೀವಾದಿಗಳು ತಮ್ಮದೇ ಬರಹಗಳಲ್ಲಿ ಅಂತಹ ಸೃಜನಶೀಲ ಲಕ್ಷಣಗಳನ್ನು ಪ್ರಾಯೋಗಿಕವಾಗಿ ಸೃಷ್ಟಿಸಿದ್ದಾರೆ.

ಈ ಫ್ರೆಂಚ್ ಸ್ತ್ರೀವಾದಿ ವಿಮರ್ಶೆಯು ಒಟ್ಟಾರೆಯಾಗಿ ಎತ್ತಿರುವ ಪ್ರಶ್ನೆಗಳನ್ನು ಗಮನಿಸಿದರೆ, ಹೆಣ್ತನದ ಮೂಲ ದೈಹಿಕಲಕ್ಷಣಗಳ ಸಾರ್ವತ್ರೀಕೃತ ನಿರ್ವಚನದ ಮೇಲೆ ಬೆಳೆಸಿರುವ ಭಾಷಿಕ ಅಭಿವ್ಯಕ್ತಿಯಲ್ಲಿ ಹೆಣ್ಣಿನ ಅನನ್ಯತೆಯನ್ನು ಈ ಸ್ತ್ರೀವಾದಿಗಳು ಕಾಣಲು ಯತ್ನಿಸುತ್ತಾರೆನಿಸುತ್ತದೆ. ಕ್ರಿಸ್ತೇವ ಹೇಳುವ ಲಿಂಗಾತೀತ, ಭಾಷಾತ್ಮಕ ನೆಲೆಯಾಗಲಿ, ಸಾಂಕೇತಿಕ ವ್ಯವಸ್ಥೆಯ ನೇತ್ಯಾತ್ಮಕ ಪ್ರತಿಭಟನೆ ಎಂಬುದಾಗಲೀ, ತಾಯಿ–ಮಗುವಿನ ಸಾಯುಜ್ಯದ ಮೂಲಸ್ಥಿತಿಯ ಗ್ರಹಿಕೆಯಾಗಲಿ ಎಲ್ಲವೂ ಪ್ರಕಟವಾಗ ಬೇಕಾಗಿರುವುದು ಸಾಹಿತ್ಯ ಪಠ್ಯದಲ್ಲಿಯೇ. ಪಠ್ಯಾಂತರ್ಗತವಾದ ಈ ಬೌದ್ಧಿಕ, ಮಾನಸಿಕ ಸಂವಾದಗಳಿಂದ ಸೃಷ್ಟಿಶೀಲ ಅನನ್ಯತೆಯನ್ನು ಸಾಧಿಸಬೇಕೆಂಬುದು ಒಂದು ಸವಲತ್ತಿನ ನೆಲೆ ಮಾತ್ರ ಆಗಿದೆ. ರಾಜಕೀಯ, ಆರ್ಥಿಕ, ಸಾಮಾಜಿಕ ದಮನಗಳಿಂದ ಮೂಕವಾಗಿಯೇ ಉಳಿದಿದ್ದು, ಈಗಷ್ಟೆ ಮೌನದ ಲೋಕದಿಂದ ಹೊರಬಂದು, ಮಾನವೀಯ ಸಮಾನತೆಗಾಗಿ ಇನ್ನೂ ಹಕ್ಕೊತ್ತಾಯ ಮಾಡಬೇಕಾಗಿರುವ ಸ್ಥಿತಿಯಲ್ಲೇ ಜಗತ್ತಿನ ಬಹು ಸಂಖ್ಯಾತ ಮಹಿಳೆಯರಿದ್ದಾರೆ. ಇಂಥ ಬಂಧಿತರಿಗೆ ಯಾವ ವಿಮುಕ್ತಿಯ ಹಾದಿಯನ್ನು ಫ್ರೆಂಚ್ ಸ್ತ್ರೀವಾದವು ತೋರಲು ಸಾಧ್ಯ? ಎಂಬುದು ಸ್ವತಃ ಅನೇಕ ಸ್ತ್ರೀವಾದಿಗಳು ಕೇಳುವ ಪ್ರಶ್ನೆ.

೭. ಮಾರ್ಕ್ಸ್‌ವಾದಿ ಸ್ತ್ರೀವಾದ

ಸಾಮಾಜಿಕ ವ್ಯವಸ್ಥೆಯ ಸಮಗ್ರ ಪರಿವರ್ತನೆಯ ಮೂಲಕ ಮಾತ್ರ ಸಮಾನತೆಯನ್ನು ಆಧರಿಸಿದ ಸಮಾಜವನ್ನು ಕಟ್ಟಲು ಸಾಧ್ಯವೆಂದು ದೃಢವಾಗಿ ನಂಬುವ ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ಮಾರ್ಕ್ಸ್, ಏಂಗೆಲ್ಸರ ವರ್ಗ ವಿಶ್ಲೇಷಣಾ ತಾತ್ವಿಕತೆಯನ್ನು ಮಹಿಳೆಯ ಆರ್ಥಿಕ/ ಭೌತಿಕ ಶೋಷಣೆಯ ಚರಿತ್ರೆಗೂ ವಿಸ್ತರಿಸಲು ಯತ್ನಿಸುತ್ತಾರೆ. ಲಿಂಗಾಧರಿತ ಶ್ರಮ ವಿಭಜನೆ ಮತ್ತು ಅದರಿಂದ ಉಂಟಾಗಿರುವ ಸ್ತ್ರೀ–ಪುರುಷರೊಳಗಿನ ಸಾಮಾಜಿಕ ಅಸಮಾನತೆಗಳು ಇವರ ಚರ್ಚೆಯ ಕೇಂದ್ರವಿಷಯಗಳು. ಕುಟುಂಬದ ಸ್ವರೂಪ, ಹೆಣ್ಣಿನ ಮನೆಗೆಲಸದ ದುಡಿಮೆಯ ಸ್ವರೂಪ, ಅದಕ್ಕೂ ಸಂತಾನೋತ್ಪಾದನೆಗೂ ಇರುವ ಸಂಬಂಧಗಳು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳ ಮುಖ್ಯ ಕಾಳಜಿಗಳು. ಬ್ರಿಟನ್ನಿನ ಜೂಲಿಯೆಟ್ ಮಿಚೆಲ್, ಶೀಲಾ ರೋಬೋತಮ್, ಮಿಶೆಲ್ ಬ್ಯಾರಟ್ ಮುಂತಾದವರು ಸಾಂಪ್ರದಾಯಿಕ ಮಾರ್ಕ್ಸ್‌ವಾದದ ಚಿಂತನೆಯು ಮಹಿಳೆಯರ ಗೃಹಕೃತ್ಯವೂ ಸೇರಿದಂತೆ ಹಲವು ಕಾರ್ಯಚಟುವಟಿಕೆಗಳನ್ನು ನಿರ್ಲಕ್ಷಿಸಿರುವುದೆಂದು ಗಮನ ಸೆಳೆದರು. ಮನೆಗೆಲಸ, ಸಂತಾನ ಸಂಗೋಪನೆಗಳಿಗೆ

ದುಡಿಮೆಯ ಬೆಲೆಯಾಗಲಿ, ಮಿಗುತಾಯ ಮೌಲ್ಯವಾಗಲಿ ಇಲ್ಲವಾಗಿರುವುದನ್ನು ಇವರು ಗುರುತಿಸಿದರು. ಸಂತಾನೋತ್ಪಾದನೆ, ತತ್ಸಂಬಂಧಿತ ಮನೆಗೆ ಅಂಟಿಕೊಂಡ ಚಟುವಟಿಕೆಗಳು, ಜವಾಬ್ದಾರಿಗಳೆಲ್ಲ ಮಹಿಳೆಯರು ಸಾರ್ವಜನಿಕ ವಲಯದಲ್ಲಿ ದುಡಿಯಗೊಡದಂತೆ ಅಡ್ಡಿಮಾಡುತ್ತವೆ. ಈ ಖಾಸಗಿ ವಲಯದ ಹೊರೆಹೊತ್ತ ಸ್ತ್ರೀಯರು ಹೊರಗೂ ದುಡಿಯಬೇಕಾದಾಗ ಅನಿವಾರ್ಯವಾಗಿ ಅರೆಕಾಲಿಕ ಕೆಲಸಗಳನ್ನು, ಕಡಿಮೆ ಕೌಶಲವನ್ನು ಅಪೇಕ್ಷಿಸುವಂಥ ಉದ್ಯೋಗಗಳತ್ತ ಹೊರಳಿಕೊಳ್ಳುತ್ತಾರೆ. ಒಳಗಿನ ಮತ್ತು ಹೊರಗಿನ ಇಬ್ಬಗೆಯ ದುಡಿಮೆಗಳಿಂದ ಹೆಣ್ಣು ಅಧಿಕ ಶ್ರಮಜೀವಿಯಾಗಿದ್ದು ಹೆಚ್ಚು ಜರ್ಜರಿತಳಾಗುತ್ತಾಳೆ ಎಂಬುದರತ್ತ ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ಒತ್ತುಕೊಡುತ್ತಾರೆ.

ಜೂಲಿಯೆಟ್ ಮಿಚೆಲ್ ಉತ್ಪಾದನೆಯ ನಾಲ್ಕು ಹಂತಗಳನ್ನು ಕುರಿತು ಹೇಳುತ್ತಾಳೆ. ೧. ಸಂತಾನೋತ್ಪಾದನೆ ೨. ಆರ್ಥಿಕ ಉತ್ಪಾದನಾ ವ್ಯವಸ್ಥೆ ೩. ಮಕ್ಕಳ ಸಾಮಾಜೀಕರಣ ಮತ್ತು ೪. ಲೈಂಗಿಕತೆ – ಇವು ಈ ನಾಲ್ಕು ಹಂತಗಳಾಗಿದ್ದು ಕುಟುಂಬ ರಚನೆಯಲ್ಲಿ ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತವೆಂದು ಮಿಚೆಲ್ ಪ್ರತಿಪಾದಿಸುತ್ತಾಳೆ. ಒಂದು ವೇಳೆ ಪಿತೃಪ್ರಧಾನ ವ್ಯವಸ್ಥೆಯನ್ನು ಕಿತ್ತೊಗೆದರೂ ಬಂಡವಾಳಶಾಹಿಯು ನಿರ್ಮೂಲನವಾಗುವುದಿಲ್ಲ. ಏಕೆಂದರೆ ಅದರ ಸಂಬಂಧಗಳು ಆರ್ಥಿಕ ಮೂಲದ್ದು. ಅಲ್ಲದೆ ಸಂಸ್ಕೃತಿಯ ಉತ್ಪಾದನೆಯಾದ ಪಿತೃಪ್ರಾಧಾನ್ಯವು ಅಪ್ರಜ್ಞಾಪೂರ್ವಕವಾದ ನೆಲೆಯಿಂದ ಕೆಲಸಮಾಡುವಂಥದು. ಆದ್ದರಿಂದ ಉತ್ಪಾದನೆಯ ನಾಲ್ಕು ಹಂತದ ರಚನೆಗಳು ಕ್ರಾಂತಿಕಾರಕವಾಗಿ ಬದಲಾದರೆ ಮಾತ್ರ ಮಹಿಳೆಯರ ಬಿಡುಗಡೆ ಸಾಧ್ಯ ಎಂಬುದು ಈಕೆಯ ವಾದವಾಗಿದೆ.

ಪಿತೃಪ್ರಧಾನ ವ್ಯವಸ್ಥೆಯ ಲಿಂಗಪ್ರಭೇದವು ಸಾಂಸ್ಕೃತಿಕ ಶಕ್ತಿಯಾಗಿ ಸಾಹಿತ್ಯದ ಮೂಲಕ ಮಹಿಳೆಯರ ಅಧೀನತೆಯನ್ನು ಶಾಶ್ವತಗೊಳಿಸುತ್ತದೆಂದು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳೂ ಒಪ್ಪುತ್ತಾರೆ. ಆದರೆ ಈ ತಾತ್ವಿಕತೆಯ ವಿಶ್ಲೇಷಣೆಗೆ ಪಠ್ಯವೊಂದೇ ಸಾಮಗ್ರಿಯೆಂದು ಅವರು ಭಾವಿಸುವುದಿಲ್ಲ. ರಾಚನಿಕವಾದ (Structuralism) ಪ್ರತಿಪಾದಿಸುವ ಪಠ್ಯಕೇಂದ್ರಿತ ವಿಮರ್ಶೆಯು ಸಾಂಸ್ಕೃತಿಕ ಪ್ರಶ್ನೆಯನ್ನು ನಿರ್ಲಕ್ಷಿಸುತ್ತದೆ; ಆದ್ದರಿಂದ ಒಂದು ಕೃತಿಯ ವಿಶ್ಲೇಷಣೆಗೆ ಅದು ಹುಟ್ಟಿರುವ ವ್ಯವಸ್ಥೆಯ ಉತ್ಪಾದನಾ ವಿಧಾನ, ಸಾಹಿತ್ಯೋತ್ಪಾದನೆ ರೀತಿ, ಅದರ ತಾತ್ವಿಕತೆ, ಬರಹಗಾರರ ತಾತ್ವಿಕ ನಿಲುವು, ಸೌಂದರ್ಯ ಮೀಮಾಂಸಾ ತತ್ವಗಳನ್ನು ಹಿನ್ನೆಲೆಯಾಗಿಟ್ಟುಕೊಳ್ಳಬೇಕು ಎಂಬುದು ಮಾರ್ಕ್ಸ್‌ವಾದಿ ವಿಮರ್ಶಾ ದೃಷ್ಟಿ. ಇದನ್ನು ಸ್ವೀಕರಿಸುವ ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ಪಶ್ಚಿಮದ ಉದಾರ ಮಾನವತಾವಾದಿ ಸ್ತ್ರೀವಾದಿ ವಿಮರ್ಶೆಯು ಶಾರೀರಿಕ, ಮಾನಸಿಕ, ಲೈಂಗಿಕ ಅನುಭವಗಳಿಗೆ ಮಾತ್ರ ಒತ್ತು ಕೊಡುತ್ತಾ ರಾಜಕೀಯ, ಆರ್ಥಿಕಾದಿ ಭೌತಿಕ ನೆಲೆಗಳ ಸ್ತ್ರೀಶೋಷಣೆಗಳನ್ನು ಗೌಣವಾಗಿಸಿದೆಯೆಂದು ಆಕ್ಷೇಪವೆತ್ತಿದ್ದಾರೆ. ಇದಕ್ಕೆ ಭಿನ್ನವಾಗಿ ಸಮಾಜವಾದಿ (ಮಾರ್ಕ್ಸ್‌ವಾದಿ) ಸ್ತ್ರೀವಾದಿಗಳು ಪಠ್ಯದಲ್ಲಿನ ಸಾಮಾಜಿಕ

ಆರ್ಥಿಕಾದಿ ಅಂಶಗಳನ್ನು ಗುರುತಿಸುವುದು ಮಾತ್ರವಲ್ಲ, ಕಲ್ಪನೆ, ಬಯಕೆಗಳ ಮೂಲದ ಅರಾಜಕತೆ, ಹಿನ್ನೆಡೆಯ ಅಂಶಗಳನ್ನೂ ಗುರುತಿಸುತ್ತಾರೆಂದು ಕೋರಾ ಕಾಪ್ಲಾನ್ ಸೂಚಿಸುತ್ತಾಳೆ.

ಆಂಗ್ಲ-ಅಮೇರಿಕದ ಮತ್ತು ಐರೋಪ್ಯ ದೇಶಗಳ ಉದಾರ ಮಾನವತಾವಾದಿ ಚಿಂತನೆಯ ಮೂಲದಿಂದ ಹುಟ್ಟಿರುವ ಸ್ತ್ರೀವಾದಿ ತಾತ್ವಿಕತೆಯಲ್ಲಿ ಲೈಂಗಿಕತೆ ಮತ್ತು ಮನೋ ವಿಶ್ಲೇಷಣೆಗಳೇ ಬಲವಾಗಿದ್ದು, ಲಿಂಗಪ್ರಭೇದದ ಬಗ್ಗೆ ತೀವ್ರಗಾಮಿಗಳು ತಳೆವ ದೃಷ್ಟಿಯೇ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಗೆ ನಿಜವಾದ ಅಪಾಯವನ್ನು ಒಡ್ಡುವಂಥದೆಂದು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ವಾದಿಸುತ್ತಾರೆ. ಸಾಮಾಜಿಕ ಶ್ರೇಣೀಕರಣವನ್ನು ಹೆಣ್ಣಿನ ವಿಭಿನ್ನ ಲೈಂಗಿಕತೆ ಎಂಬುದಕ್ಕೆ ಸಂಕುಚಿತಗೊಳಿಸುವ ತೀವ್ರಗಾಮಿ ಸ್ತ್ರೀವಾದಿಗಳು ವಿಭಿನ್ನ ಲೈಂಗಿಕತೆಯ ಮೂಲದ ಸಾಪೇಕ್ಷ ಅನುಭವಗಳನ್ನೇ ಮಹಿಳೆಯ ಸಾರ್ವತ್ರಿಕ, ಸಾರ್ವಕಾಲಿಕ ಅನುಭವಗಳ ಸತ್ಯರೂಪವೆಂದು ಸಾಧಿಸಲು ಹೊರಡುತ್ತಾರೆ. ಮಹಿಳೆಯ ವ್ಯಕ್ತಿತ್ವದತ್ತ ಗಮನಕೊಡದಿರುವ ಮೂಲಕ ಶೋಷಣೆಯ ಬಹುಸ್ತರೀಯ ರೂಪಗಳನ್ನೇ ನಿರ್ಲಕ್ಷಿಸುತ್ತಾರೆ. ಸ್ತ್ರೀವಾದಿ ಚಿಂತನೆಯೊಳಗೇ ಇರುವ ಈ ಪ್ರತಿಗಾಮಿ ವಿಚಾರಗಳು ತುಂಬ ಅಪಾಯಕಾರಿ ಪರಿಣಾಮಗಳನ್ನು ಬೀರುತ್ತವೆಂದು ಗುರುತಿಸಿ, ಇವುಗಳನ್ನು ತಡೆಗಟ್ಟುವುದು ಮತ್ತು ವಿಶಾಲವಾದ ಸಮಾಜವಾದಿ ಚೌಕಟ್ಟಿನಲ್ಲಿ ಸ್ತ್ರೀವಾದಿ ವಿಮರ್ಶೆಯನ್ನು ಜೋಡಿಸುವುದು ಮಾರ್ಕ್ಸ್‌ವಾದಿ ಸ್ತ್ರೀವಾದದ ಉದ್ದೇಶವೆಂದು ಕಾಪ್ಲಾನ್ ಸೂಚಿಸುತ್ತಾಳೆ. ಆದರೆ ಮಾರ್ಕ್ಸ್‌ವಾದಿ ಸ್ತ್ರೀವಾದದ ಸಮಕಾಲೀನ ಚಿಂತಕರು, ಈ ರೀತಿ ತೀವ್ರಗಾಮಿಗಳನ್ನು ವಿಮರ್ಶಿಸುವಷ್ಟಕ್ಕೆ ತಮ್ಮ ಯತ್ನಗಳನ್ನು ಸೀಮಿತಗೊಳಿಸಿಲ್ಲ. ಅವರು ಸಾಹಿತ್ಯದ ಪಠ್ಯದೊಳಗಿನ ಭಿನ್ನಲಿಂಗೀಯ (Heterosexual) ಸಂಬಂಧಗಳು ಹೊಮ್ಮಿಸುವ ಸಾಮಾಜಿಕ, ಮನಶಾಸ್ತ್ರೀಯ ಅರ್ಥಗಳನ್ನು ಗುರುತಿಸುವುದರಲ್ಲಿ, ಪಠ್ಯದ ಭಾಷಿಕ ಪ್ರಕ್ರಿಯೆಯಲ್ಲಿ ಶಬ್ದಗಳ ನಡುವೆ, ಸಾಲುಗಳ ಮಧ್ಯೆ ಹುದುಗಿರುವ ಅರ್ಥವೈವಿಧ್ಯದ ಸಂರಚನೆಗಳನ್ನು ಗುರುತಿಸುವುದರಲ್ಲಿ ಹೆಚ್ಚು ಕಾಳಜಿವಹಿಸುತ್ತಾರೆ. ಕಥಾಸಾಹಿತ್ಯದ ಶೈಲಿಯ ಸಾಮಾಜಿಕಾರ್ಥಿಕ ಅಂಶಗಳತ್ತ ಗಮನಹರಿಸಿ ಮಾನಸಿಕ ಅಂಶಗಳ ಸಾಮಾಜೀಕರಣಕ್ಕೆ ಸಮಾಜವಾದಿ ಸ್ತ್ರೀವಾದಿಗಳು ಯತ್ನಿಸುತ್ತಾರೆ.

ಬರಹಗಾರರು ಹಾಗೂ ಪಠ್ಯಗಳು ಎಲ್ಲಾ ಬಗೆಯ ತಾತ್ವಿಕತೆಗಳಿಂದ ಮುಕ್ತವಾಗಿರುವ 'ವಸ್ತುನಿಷ್ಠ'ವಾದ ನೆಲೆಯಿಂದ ಮಾತನಾಡಬಹುದು ಎಂಬುದು ಒಂದು ಮಿಥ್ಯಾಕಲ್ಪನೆ. ಒಂದು ತಾತ್ವಿಕತೆಯಿಂದ ಮುಕ್ತವೆಂದುಕೊಂಡರೂ, ಅದರ ವಿರುದ್ಧವಾದ ತಾತ್ವಿಕ ನೆಲೆಯನ್ನು ಅವು ಸಮರ್ಥಿಸುತ್ತಿರುತ್ತವೆ. ಆದ್ದರಿಂದ 'ಮಹಿಳಾ ಪ್ರಶ್ನೆ'ಯಂಥ ಸಂಕೀರ್ಣವಾದ ವಿಷಯವನ್ನು ವಿಶ್ಲೇಷಿಸಲು ಬಂಧುತ್ವ, ಲೈಂಗಿಕತೆ, ಉತ್ಪಾದನಾ ಕ್ರಮ, ಶ್ರಮದ ಸ್ವರೂಪ, ವೈಯಕ್ತಿಕ ಬದುಕು, ಸಂತಾನೋತ್ಪಾದನೆ ಮತ್ತು ಲಿಂಗವಾದಿ ಚಿಂತನಾ ಪರಂಪರೆಗಳ ಅರಿವು ಅಗತ್ಯ. ಅಷ್ಟು ಮಾತ್ರವಲ್ಲ, ಎಲ್ಲ ಬಗೆಯ ಶೋಷಣೆಯ ವಿರುದ್ಧವಾದ ಸಾಮೂಹಿಕ ಹೋರಾಟಕ್ಕೂ ಮಹಿಳಾ ಚಳವಳಿಗೂ ಇರುವ ಸಂಬಂಧವೂ ಮುಖ್ಯವೆಂಬುದು ಈ ಸ್ತ್ರೀವಾದಿಗಳ ನಿಲುವು.

ಪಶ್ಚಿಮದ ಸ್ತ್ರೀವಾದದ ವಿವಿಧ ಪಂಥಗಳವರು ಈ ರೀತಿಯಲ್ಲಿ ಲೈಂಗಿಕ, ಸಾಮಾಜಿಕ ಅಂಶಗಳಿಗೂ, ಸಾಹಿತ್ಯ, ಸಂಸ್ಕೃತಿಗಳಿಗೂ ಇರುವ ಸಂಬಂಧವನ್ನು ಆಧರಿಸಿ ತಮ್ಮ ವಿವಿಧ ತಾತ್ವಿಕ ವಿಚಾರಗಳನ್ನೂ ಬೆಳೆಸುತ್ತ ಬಂದಿದ್ದಾರೆ. ಈ ತಾತ್ವಿಕತೆಗಳ ಹಿಂದೆ ಪಂಥೀಯ ಹಾಗೂ ಜನಾಂಗೀಯ ಅಂಶಗಳು ಪ್ರಬಲವಾಗಿ ಕೆಲಸಮಾಡಿರುವುದು ಸಾಧ್ಯ. ಸಾಂಸ್ಕೃತಿಕ ಕಾರಣಗಳಿಂದ ಈ ದೇಶಗಳಿಗಿಂತ ತೀರ ಭಿನ್ನವಾದ ಭಾರತದಂಥ ಉಪಖಂಡದ ಬಹುರೂಪದ ಸಾಂಸ್ಕೃತಿಕ ಪರಿಸರದಲ್ಲಿ ಈ ಸ್ತ್ರೀವಾದಿ ತತ್ವಗಳಿಗೆ ಎಷ್ಟು ಅರ್ಥವಿರುತ್ತದೆ ಎಂಬ ಪ್ರಶ್ನೆಯನ್ನು ಗಾಯತ್ರಿ ಸ್ಪಿವಾಕ್ ಎತ್ತಿದ್ದಾಳೆ. ಮಹಿಳೆಯರ ನಡುವಿನ ಸಂವಾದ, ವಿಚಾರ ವಿನಿಮಯ, ಸೋದರಿತ್ವದ ಬಗೆಗಿನ ಪರಿಕಲ್ಪನೆಗಳನ್ನು ಹೇಳುವ ಪಶ್ಚಿಮದ ಸ್ತ್ರೀವಾದವು ಭಾರತದಂಥ ಹಿಂದುಳಿದ ದೇಶದ ಗ್ರಾಮೀಣ ನಿರಕ್ಷರಸ್ತ ಮಹಿಳೆಯರನ್ನು ಸಂಬೋಧಿಸುವುದು, ತಲುಪುವುದು ಹೇಗೆ ಸಾಧ್ಯ? ಪಾಶ್ಚಾತ್ಯ ಸ್ತ್ರೀವಾದಿಗಳು ಹೆಣ್ತನದ ಪರಮಾರ್ಥವೆಂದು ಎತ್ತಿಹಿಡಿಯುವ 'ಮಾತೃತ್ವ'ದಂಥ ಒಂದು ತತ್ವ ಕೂಡ ಭಾರತದ ಸಂದರ್ಭದಲ್ಲಿ ತೀರ ಸಂಕೀರ್ಣ ಸಮಸ್ಯೆಗಳನ್ನು ಆ ಸ್ತ್ರೀವಾದಕ್ಕೆ ಒಡ್ಡಬಲ್ಲದೆಂದು ಸ್ಪಿವಾಕ್ ಪ್ರತಿಪಾದಿಸುವುದು ಸ್ತ್ರೀವಾದದ ಅಂತಾರಾಷ್ಟ್ರೀಯ ಸ್ವರೂಪ ಏನೆಂಬ ಬಗ್ಗೆ ಜಿಜ್ಞಾಸೆ ನಡೆಯಬೇಕಾಗಿರುವುದಕ್ಕೆ ಸೂಚನೆ ನೀಡುತ್ತದೆ.

೪. ಸ್ತ್ರೀವಾದದ ಮುಖ್ಯ ತಾತ್ವಿಕ ಘಟಕಗಳು ಮತ್ತು ಅವುಗಳ ಇಂದಿನ ಪ್ರಸ್ತುತತೆ

ಸ್ತ್ರೀವಾದಿ ತಾತ್ವಿಕತೆ ಬಹುರೂಪಿಯಾದದ್ದು. ಆದರೂ ಎಲ್ಲ ಸ್ತ್ರೀವಾದಿ ಪಂಥಗಳಲ್ಲೂ ಕಂಡುಬರುವ, ಮತ್ತೆ ಮತ್ತೆ ಚರ್ಚೆಗೆ ಒಳಗಾಗುವ ಕೆಲವು ತಾತ್ವಿಕಾಂಶಗಳು ಇವೆ. ಉದಾ: ಮಹಿಳೆ, ಮಹಿಳೆಯ ಅನುಭವ, ವೈಯಕ್ತಿಕ ರಾಜಕಾರಣ, ಲಿಂಗಪ್ರಭೇದ, ಅಧಿಕಾರ ಮುಂತಾದ ತಾತ್ವಿಕ ಘಟಕಗಳು ಈ ಎಲ್ಲ ಪಂಥಗಳಿಗೂ ಅವಶ್ಯಕ ಸೈದ್ಧಾಂತಿಕತೆಯ ಮೂಲವಾಗಿವೆ. ಆದ್ದರಿಂದ ಬೇರೆ ಬೇರೆ ಪಂಥಗಳ ಸ್ತ್ರೀವಾದಿಗಳು ಈ ತಾತ್ವಿಕ ಘಟಕಗಳಿಗೆ ನೀಡುವ ಅರ್ಥ, ನಿರ್ವಚನಗಳ ಪೈಕಿ ಯಾವುದು ನಮಗೆ ಹೆಚ್ಚು ಪ್ರಸ್ತುತವೆಂದು ನೋಡುವುದು ಅವಶ್ಯಕ.

ಆರಂಭದ ಹಂತದಲ್ಲಿ ಸ್ತ್ರೀವಾದಿ ತೀವ್ರಗಾಮಿಗಳು, ಮಾರ್ಕ್ಸ್‌ವಾದಿ ಹಾಗೂ ಎಲ್ಲ ಎಡ ಪಂಥೀಯ ಚಳವಳಿಗಳಿಗಿಂತ ತಮ್ಮ ಚಳವಳಿಯು ಭಿನ್ನವಾಗಿರುವುದನ್ನು ಸಾರಿಹೇಳಲೆಂದು 'ಮಹಿಳೆ' ಎಂಬ ಘಟಕವನ್ನು ಒಂದು ಅವಶ್ಯಕ ತಾತ್ವಿಕ ಬಿಂದುವನ್ನಾಗಿ ಸ್ವೀಕರಿಸಿದರು. ಮಹಿಳೆ ಹೆಣ್ಣಾಗಿರುವುದೇ ಅವಳ ಶೋಷಣೆಯ ಮೂಲ; ಮಹಿಳೆಯರೆಲ್ಲ ಹೀಗೆ ಜೈವಿಕ ವಿಭಿನ್ನತೆಯ ನೆಲೆಯಿಂದ ಶೋಷಿತರಾಗಿರುವ ಒಂದು ಪ್ರತ್ಯೇಕ ಮಾನವ ಸಮುದಾಯವಾಗಿದ್ದಾರೆ; ಅವರ ಸಮಸ್ಯೆಗಳು ಕೇವಲ ಮಾನಸಿಕವಲ್ಲ; ಅವುಗಳ ಹಿಂದೆ ವ್ಯವಸ್ಥಿತವಾದ ಲಿಂಗರಾಜಕೀಯವಿದೆ; ಒಬ್ಬ ಮಹಿಳೆಯ ಅನುಭವ ಎಲ್ಲಾ ಮಹಿಳೆಯರದೂ ಆಗಬಹುದು ಎಂಬ ರಾಜಕೀಯ ಗ್ರಹಿಕೆಗಳಿಂದ ಈ ಸ್ತ್ರೀವಾದಿಗಳು ಸ್ತ್ರೀತ್ವ/ಸ್ತ್ರೀಸ್ವಭಾವಕ್ಕೆ ಅತಿಯಾಗಿ ಒತ್ತು ನೀಡಿದರು. ಸ್ತ್ರೀ ಸಂಬಂಧಿತವಾದ ಎಲ್ಲಾ ಲಕ್ಷಣಗಳನ್ನೂ ಕೊಂಡಾಡಿ, ವೈಭವೀಕರಿಸುವುದರ ಮೂಲಕ ಪುರುಷಶ್ರೇಷ್ಠತೆಯ ವ್ಯವಸ್ಥೆಗೆ ಪರ್ಯಾಯವೊಂದನ್ನು ಕಟ್ಟುವುದು ಇಂದಿನ ಸ್ತ್ರೀಸಮೃದ್ಧತಾವಾದಿಗಳ ಆಶಯವೂ ಆಗಿದೆ.

ಜೀವಶಾಸ್ತ್ರೀಯ ಹೆಣ್ಣುತನ ಮತ್ತು ಸಾಂಸ್ಕೃತಿಕವಾಗಿ ರೂಪಿತವಾಗುವ ಸ್ತ್ರೀಸ್ವಭಾವಗಳನ್ನು ಒಂದೇ ಎಂದು ನಂಬಿ, ಎಲ್ಲಾ ಸ್ತ್ರೀಯರಲ್ಲೂ ಸ್ತ್ರೀಸತ್ವವೊಂದು ಹುದುಗಿರುವುದೆಂದು ಇವರು ಹೇಳುತ್ತಾರೆ. ಆದರೆ ಜೀವಶಾಸ್ತ್ರದ ನೆಲೆಯಿಂದ ಸ್ತ್ರೀಯರೆನಿಸುವ ಎಲ್ಲರೂ ಬೇರೆ ಬೇರೆ ಕಾಲ ದೇಶ, ವರ್ಗ, ಜನಾಂಗ, ಜಾತಿ, ಸಂಸ್ಕೃತಿಗಳ ಭೇದವಿಲ್ಲದಂತೆ ಒಂದೇ ರೀತಿಯ ಸ್ತ್ರೀಸ್ವಭಾವವನ್ನು ಹೊಂದಿರುವುದು ಸಾಧ್ಯವಿಲ್ಲ. ಭಾರತದಲ್ಲಿ ಪಿತೃಪ್ರಧಾನ ಸಮಾಜಗಳ ಉಚ್ಚ ಜಾತಿ, ವರ್ಗ, ಕುಲಗಳ ಸ್ತ್ರೀಯರು ಅಬಲೆಯರಾಗಿ, ಅಸಹಾಯಕರಾಗಿ, ಭೀರು

ಸ್ವಭಾವದವರಾಗಿರುವುದೇ ಒಂದು ಸ್ತ್ರೀತ್ವದ ಲಕ್ಷಣ ಎನಿಸಿದ್ದರೆ. ಗ್ರಾಮೀಣ ಕೆಳಜಾತಿ, ಕೆಳಸ್ತರಗಳ ಅಥವಾ ಬುಡಕಟ್ಟುಗಳ ಸ್ತ್ರೀಯರು ದೈಹಿಕವಾಗಿ ಮಾನಸಿಕವಾಗಿ 'ಅಬಲತ್ವ'ವನ್ನು ರೂಢಿಸಿಕೊಂಡಿರುವುದೇ ಅಪರೂಪ. ಇನ್ನು ಜಾಗತಿಕ ಮಟ್ಟದಲ್ಲಿ ಈ ರೀತಿ ಏಕರೂಪದ, ಏಕಾಕೃತಿಯ 'ಸ್ತ್ರೀಸತ್ವ'ವೊಂದನ್ನು ಕುರಿತು ಮಾತನಾಡುವುದು ಹೇಗೆ ಸಾಧ್ಯ?

ಆದರೆ 'ಸ್ತ್ರೀಸತ್ವ' ಎಂಬ ಅಂತಃಸತ್ಯವಾದ (Essentialism) ವನ್ನು ಮುಂದಿಡುವವರು ಹೆರಿಗೆ, ಗರ್ಭಧಾರಣೆ, ಶಿಶುಸಂಗೋಪನೆಗಳಂಥ, ಜೈವಿಕ ಚಟುವಟಿಕೆಗಳಲ್ಲಿ ಹೆಣ್ಣಿನ ವಾತ್ಸಲ್ಯ, ಜೀವದಾಯಕ ಸಾಮರ್ಥ್ಯ, ಜೀವಪರ ದೃಷ್ಟಿ, ರಕ್ಷಕಭಾವ ಮುಂತಾದ ಭಾವನೆಗಳಿರುತ್ತವೆಂದು ಆದರ್ಶೀಕರಿಸಿ, ಇವೇ ಸ್ತ್ರೀಯರ ಹಿರಿಮೆ, ಶ್ರೇಷ್ಠತೆಯ ಕುರುಹುಗಳು ಎಂದು ವ್ಯಾಖ್ಯಾನಿಸುತ್ತಾರೆ. ಈ ಆದರ್ಶೀಕೃತ ಸ್ತ್ರೀಮೌಲ್ಯಗಳನ್ನು ಸ್ತ್ರೀಸಮೃದ್ಧತೆಯೆಂದು ಎತ್ತಿಹಿಡಿಯುವುದರ ಇನ್ನೊಂದು ಮುಖವೆಂದರೆ ಸ್ತ್ರೀಯರ ಯಾವುದೇ ಗುಣಾವಗುಣಗಳ ವಿಮರ್ಶೆಯನ್ನೂ ಸ್ತ್ರೀದ್ವೇಷದ ಲಕ್ಷಣವೆಂದು ಆರೋಪಿಸುವುದು. ಈ ಕಾರಣದಿಂದಲೇ ಶೋಷಣೆಗೆ ಬಲಿಪಶುವಾಗುವುದನ್ನು ಹೆಣ್ಣಿನ ಮುಗ್ಧತೆಯೆಂದೂ ಸ್ತ್ರೀಯರಲ್ಲಿ ದುಷ್ಟತನವಿದ್ದರೆ, ಅವೂ ಧನಾತ್ಮಕ ಗುಣಗಳೇ ಎಂದೂ ಪ್ರತಿಪಾದಿಸುವ ಅತಿರೇಕವೂ ಹುಟ್ಟಿಕೊಂಡಿತು. ಗಂಡಿನ ಶ್ರೇಷ್ಠತೆಯನ್ನು ಕೊಂಡಾಡುವ ವ್ಯವಸ್ಥೆಗೆ ಒಂದು ಪ್ರತಿಕ್ರಿಯೆಯಾಗಿ ಈ ಹೆಣ್ಣಿನ ಕೊಂಡಾಟದ ತಾತ್ವಿಕತೆಯನ್ನು ಕಟ್ಟಲಾಯಿತು. ಆದರೆ ಸ್ತ್ರೀತ್ವ x ಪುರುಷತ್ವ ಎಂದು ಎರಡು ಧ್ರುವಗಳಲ್ಲಿ ಮಾನವರ ಸ್ವಭಾವವನ್ನು ಒಡೆದಿಡುವ ವ್ಯವಸ್ಥೆಯೇ ಅಸಮರ್ಪಕ ಹಾಗೂ ಅಸಮಾನತೆಯ ಮೂಲ. ಇದನ್ನು ಗಮನಿಸದೆ ಈ ಬಗೆಯ ಮೌಲ್ಯಗಳ ಧ್ರುವೀಕರಣವನ್ನು ಇರುವಂತೆಯೇ ಸ್ವೀಕರಿಸಿ, ಇವುಗಳನ್ನು ಮೇಲು ಕೀಳೆಂದು ನೋಡುವ ಸಾಂಸ್ಕೃತಿಕ ರೂಢಿಯನ್ನು ಮಾತ್ರವೇ ಪ್ರಶ್ನಿಸುವವರಲ್ಲಿ ಪಶ್ಚಿಮದ ತೀವ್ರಗಾಮಿಗಳು, ಸ್ತ್ರೀಸಂಸ್ಕೃತಿವಾದಿಗಳು, ಆಂಗ್ಲ-ಅಮೇರಿಕದ ಸ್ತ್ರೀವಾದಿಗಳು, ಕಪ್ಪು ಮತ್ತು ಲೆಸ್ಬಿಯನ್ ಸ್ತ್ರೀವಾದಿಗಳು ಹಾಗೂ ಫ್ರೆಂಚ್ ಲೆಸ್ಬಿಯನ್ನರೂ ಸೇರುತ್ತಾರೆ. ಇವರೆಲ್ಲರೂ ಹೆಣ್ಣಿನ ಮೂಲಸತ್ವವೊಂದು ಇದೆಯೆಂದು ವಾದಿಸುವವರೇ. ಒಟ್ಟಾರೆಯಾಗಿ ಇವರೆಲ್ಲರನ್ನೂ ಸ್ತ್ರೀಸಮೃದ್ಧಿವಾದಿಗಳೆಂದು ಹೇಳಬಹುದು.

ಈ ಮೂಲಸತ್ವವಾದದ ಮುಖ್ಯ ದೋಷವೆಂದರೆ ಒಬ್ಬರ ಅಥವಾ ಒಂದು ಗುಂಪಿನ ಮಹಿಳೆಯರ ಅನುಭವ ಎಲ್ಲ ಕಾಲದ ಎಲ್ಲಾ ಮಹಿಳೆಯರಿಗೂ ಸಮಾನವಾಗಿರಬಲ್ಲದು ಎಂದು ಭಾವಿಸಿಕೊಳ್ಳುವುದು. ಮೊದಲಲ್ಲಿ ಪಾಶ್ಚಾತ್ಯ ಬಿಳಿಯ ಜನಾಂಗದ ಸ್ತ್ರೀವಾದಿಗಳಷ್ಟೇ ಬರೆಯುತ್ತಿದ್ದಾಗ, ಅವರು ತಮ್ಮ ಸಾಂಸ್ಕೃತಿಕ ಹಿನ್ನೆಲೆಯಿಂದ ದೊರೆತ ಅನುಭವವನ್ನೇ ಸಮಗ್ರವಾದ ಮಹಿಳಾ ಅನುಭವವೆಂದು ಭಾವಿಸಿದ್ದರು. ಸಂಸ್ಕೃತಿಯ ಒಳಗಿರುವ ತಮಗೂ ಅದರ ಅಂಚಿನಲ್ಲಿರುವ ಕರಿಯ ಮಹಿಳೆಯರಿಗೂ ಒಂದೇ ರೀತಿಯ ಅನುಭವಗಳು ಇರಲಾರವು ಎನ್ನುವ ಅರಿವು ಆ ಕಾಲದಲ್ಲಿ ಮೂಡಿರಲಿಲ್ಲ. ಆದ್ದರಿಂದಲೆ ಒಬ್ಬರ ವ್ಯಕ್ತಿಗತ ಅನುಭವವು

ಸಾರ್ವತ್ರಿಕವಾಗಿ ಎಲ್ಲಾ ಮಹಿಳೆಯರದೂ ಆಗಿರುತ್ತದೆಂಬ ಗ್ರಹಿಕೆಯಿಂದ 'Personal is political' ಎಂಬ ವೈಯಕ್ತಿಕ ರಾಜಕಾರಣದ ತತ್ವವು ಹುಟ್ಟಿಕೊಂಡಿತು.

ಸ್ತ್ರೀಯರು ಇಂದು ನಿರ್ವಹಿಸುತ್ತಿರುವ ಕೌಟುಂಬಿಕವಾದ ಸಾಂಪ್ರಾದಾಯಿಕ ಪಾತ್ರಗಳು ಪತ್ನಿ, ತಾಯಿ, ಗೃಹಿಣಿ ಮುಂತಾದವು, ಚರಿತ್ರೆಯ ಯಾವುದೋ ಒಂದು ಘಟ್ಟದಲ್ಲಿ ಹುಟ್ಟಿಕೊಂಡವು. ಆದ್ದರಿಂದ ಅವು ಮುಂದೆ ಭೌತಿಕ ಪರಿಸ್ಥಿತಿಗಳು ಬದಲಾದಾಗ ತಾವೂ ಬದಲಾಗಬಲ್ಲವು. ಈ ಸ್ಥಿತಿಗಳು, ಮೌಲ್ಯಗಳು ಎಂದಿನಿಂದಲೂ ಹೀಗೇ ಇವೆ, ಇರುತ್ತವೆ, ಇವು ಚರಿತ್ರಾತೀತ ಸಂಗತಿಗಳೆಂಬಂತೆ ಒಪ್ಪಿ ಚರ್ಚಿಸುವ ಸ್ತ್ರೀಸಮೃದ್ಧಿವಾದಿಗಳ ವಿಚಾರಗಳನ್ನು ತೀವ್ರವಾದ ಚರ್ಚೆಗೆ ವಿಮರ್ಶೆಗೆ ಒಳಗಾಗಿಸಿದವರು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು. ಉತ್ಪಾದನೆಯ ವ್ಯವಸ್ಥೆಗೂ ಸಂತಾನೋತ್ಪಾದನೆಗೂ, ಮಹಿಳೆಯ ಶೋಷಣೆಗೂ ಪರಸ್ಪರ ಚಾರಿತ್ರಿಕ ಸಂಬಂಧವಿದೆ ಎಂದು ಈ ಮಾರ್ಕ್ಸ್‌ವಾದಿಗಳು ಗುರುತಿಸಿದರು.

'ರಾಜಕೀಯ' ಎನ್ನುವುದು ಒಂದು ವೈಚಾರಿಕ ಡಿಸ್ಕೋರ್ಸ್ ಎಂದೂ, ನ್ಯಾಯ, ಶೋಷಣೆ, ದಮನ ಮತ್ತು ವಿಮೋಚನೆಗಳ ಅರ್ಥವನ್ನು ಇತ್ಯಾತ್ಮಕವಾಗಿ ಆ ಚರ್ಚೆಯು ತೀರ್ಮಾನಿಸಬಲ್ಲದೆಂದೂ ನಂಬುವ ಎಡಪಂಥದಲ್ಲಿ 'ಶೋಷಣೆ' ಎಂಬುದನ್ನು ನಿರ್ವಚಿಸಲು ವಸ್ತುನಿಷ್ಠವಾದ, ನಿರ್ಧಾರಿತವಾದ ಮಾನದಂಡಗಳಿರುತ್ತವೆ. ಉದಾ: ಕಾರ್ಮಿಕರು ವೈಯಕ್ತಿಕವಾಗಿ ತಮ್ಮ ಶೋಷಣೆಯ ಬಗ್ಗೆ ತಮ್ಮ ನೆಲೆಯ ಬಗ್ಗೆ ಪ್ರಜ್ಞಾಪೂರ್ವಕವಾದ ತಿಳುವಳಿಕೆಯನ್ನು ಪಡೆದಿರಲಿ, ಇಲ್ಲದಿರಲಿ, ಅವರು ಅನ್ಯಾಯಕ್ಕೆ ಒಳಗಾದವರೆಂದು ಭೌತಿಕ, ವಾಸ್ತವಿಕ ಮಾನದಂಡಗಳಿಂದ ಮಾರ್ಕ್ಸ್‌ವಾದವು ಭಾವಿಸುತ್ತದೆ. ಅಂದರೆ ಪ್ರಜ್ಞಾಜಾಗೃತಿ ಇರಲಿ, ಇಲ್ಲದಿರಲಿ, ಕಾರ್ಮಿಕರು ಕ್ರಾಂತಿಯ ಸಾಧನವೇ ಆಗಿರುತ್ತಾರೆ. ಆದರೆ ಸ್ತ್ರೀವಾದಿ ಸಿದ್ಧಾಂತಕಾರರಲ್ಲಿ ಬಹಳ ಜನ ದುಡಿಯುವ ವರ್ಗದವರಾಗಲೀ, ಚರ್ಮದ ಬಣ್ಣದಿಂದಾಗಿ ಶೋಷಿತರಾಗುವ ವರ್ಣೀಯ ಜನಾಂಗದವರಾಗಲಿ ಆಗಿರಲಿಲ್ಲ. ಆದ್ದರಿಂದ ತಮ್ಮ ಶೋಷಣೆಯ ಆಕೃತಿಗೆ ಸಮರ್ಥನೆ ಒದಗಿಸಬಲ್ಲ, ಸ್ತ್ರೀಯರು ಸುಶಿಕ್ಷಿತರೂ, ಉದ್ಯೋಗಸ್ಥರೂ, ಆಳುವ ವರ್ಗದವರಾಗಿದ್ದಾಗಲೂ 'ಸೆಕ್ಸ್-ವರ್ಗ'ದ ಮೂಲಕ ಶೋಷಿತರಾಗಿರುತ್ತಾರೆ ಎನ್ನುವುದನ್ನು ತಾರ್ಕಿಕವಾಗಿ ರಾಜಕೀಯವಾಗಿ ಸಮರ್ಥಿಸಿಕೊಳ್ಳುವುದು ಅವರಿಗೆ ಅನಿವಾರ್ಯವಾಯಿತು.

ಮಹಿಳೆಯರು ಪ್ರತಿಯೊಂದು ಶೋಷಿತ ಗುಂಪಿನಲ್ಲಿ ಇರುವಂತೆಯೇ, 'ಶೋಷಕ' ಗುಂಪುಗಳೊಳಗೂ ಇರುವುದೇ ಮುಖ್ಯ ಸಮಸ್ಯೆಯಾಗಿತ್ತು. ಬಿಳಿಯ ಮಧ್ಯಮ ವರ್ಗದ ಮಹಿಳೆಯರು ಹಲವು ಮಾನದಂಡಗಳಿಂದ ಅನೇಕ ಪುರುಷರಿಗಿಂತ ಹೆಚ್ಚು ಸ್ವತಂತ್ರರೇ ಆಗಿದ್ದರು. ಆಳುವ ವರ್ಗದ ಮಹಿಳೆಯರು ಶ್ರಮಿಕ ವರ್ಗದ ಪುರುಷರಿಗಿಂತ ಹೆಚ್ಚು ಸ್ವತಂತ್ರರೇ ಆಗಿದ್ದರು. ಆಳುವ ವರ್ಗದ ಮಹಿಳೆಯರು ಪುರುಷಗಿಂತ ಹೆಚ್ಚು ಸ್ವತಂತ್ರರಿದ್ದರೆ ಕರಿಯ ಮಹಿಳೆಯರು, ಕರಿಯ ಪುರುಷರಿಗಿಂತ ಹೆಚ್ಚು ಬಿಳಿಯ ಸಮಾಜಕ್ಕೆ ಸ್ವೀಕಾರಾರ್ಹರೆನಿಸುತ್ತಿದ್ದರು. ಈ ವ್ಯತ್ಯಾಸಗಳಿಗೆಲ್ಲಕ್ಕೂ ವಿರುದ್ಧವಾಗಿ ತೀವ್ರಗಾಮಿಗಳು ಎಲ್ಲಾ

ಸ್ತ್ರೀಯರನ್ನೂ ಶೋಷಿತರೆಂದು ಸಾರಿ, 'ದುಡಿಯಗೊಡದೆ ಪೀಠದ ಮೇಲೆ ಕೂರಿಸಿ ಆರಾಧಿಸುವುದೂ' ಸ್ತ್ರೀ ಶೋಷಣೆಯ ಒಂದು ರೀತಿಯೇ ಎಂದು ಕರೆದರು. ಮಹಿಳೆಯರ ಅನುಭವದ ಮಾನದಂಡದಿಂದ ಅವರ ಯಾತನೆಗಳನ್ನು ಅಳೆಯಬೇಕೆಂದು ಪ್ರತಿಪಾದಿಸಲಾಯಿತು.

ಹೊರಗಿನ ಭೌತಿಕ ಮಾನದಂಡಗಳಿಂದ ಸ್ತ್ರೀಶೋಷಣೆಯನ್ನು ಸಮರ್ಥಿಸಲು ಸಾಧ್ಯವಾಗದಿದ್ದಾಗ ಇವರು ಎಲ್ಲಾ ಸ್ತ್ರೀಯರನ್ನೂ ಶೋಷಿತರೆಂದು ತೋರಿಸಲು 'ಶೋಷಣೆ' ಎಂಬುದನ್ನು ಪ್ರತಿಯೊಬ್ಬರ ವೈಯಕ್ತಿಕ ನೆಲೆಯಿಂದ ನಿರ್ವಚಿಸಲು ಯತ್ನಿಸಿದರು. ಪ್ರಚಲಿತ ಪಿತೃಪ್ರಧಾನದ ಸ್ತ್ರೀತ್ವ x ಪುರುಷತ್ವದ ಘಟಕಗಳನ್ನು ಬದಲಾಯಿಸದೆಯೇ ಅವುಗಳನ್ನೇ ಅದಲು ಬದಲು ಮಾಡಿದರು. ವ್ಯಕ್ತಿಗತ ಶೋಷಣೆಯನ್ನು 'ಖಾಸಗಿ'ಯೆಂದೂ 'ಅರ್ಥಹೀನ'ವೆಂದೂ ಒತ್ತರಿಸುವ ಮತ್ತು 'ವಸ್ತುನಿಷ್ಠ' ವೈಚಾರಿಕತೆಯನ್ನು ಎತ್ತಿಹಿಡಿಯುವ ಎಡಪಂಥೀಯರ ಧೋರಣೆಗಳಿಗೆ ವಿರುದ್ಧವಾಗಿ ಹೆಣ್ಣಿನ 'ಖಾಸಗಿ' ಅನುಭವವೇ ಶೋಷಣೆಯದೆಂದು ಮೌಲಿಕಗೊಳಿಸಿ, ವಿರೋಧಿಗಳನ್ನು ತೆಪ್ಪಗಾಗಿಸುವುದು ಸಾಧ್ಯವಾಯಿತು. ಹೀಗೆ ಎರಡನೆಯ ಹಂತದ ಸ್ತ್ರೀವಾದಕ್ಕೆ ವ್ಯಕ್ತಿಗತ ಅನುಭವ ಎನ್ನುವುದು ಪರ್ಯಾಯ ಪದವಾಯಿತು.

ಆದರೆ 'ಮಹಿಳೆಯ ಅನುಭವ' ಎಂಬುದನ್ನು ಸಾರ್ವತ್ರಿಕ ಪರಿಕಲ್ಪನೆಯಾಗಿ ಬೆಳೆಸಲು ಸಮಸ್ಯೆಗಳಿವೆ. ಮಹಿಳೆಯರ ವ್ಯಯಕ್ತಿಕ ಹಿತಾಸಕ್ತಿಗಳು ಹಲವು ಸಲ ಭಿನ್ನವೂ, ಪರಸ್ಪರ ವಿರುದ್ಧವೂ ಆಗಿರುತ್ತವೆ. ವರ್ಗ, ಜನಾಂಗ, ಮತ್ತಿತರ ರಾಜಕೀಯಗಳ ಮೂಲದಿಂದ ಈ ಹಿತಾಸಕ್ತಿಗಳು ಹುಟ್ಟಿರುತ್ತವೆ. ಮಾತ್ರವಲ್ಲ, ಬಹಳಷ್ಟು ಮಹಿಳೆಯರು ತಮ್ಮನ್ನು ಶೋಷಿತರು ಎಂದು ಭಾವಿಸಲು, ಒಪ್ಪಲು ಸಿದ್ಧರಿಲ್ಲ. ಶೋಷತರೆಂದು ತಮ್ಮನ್ನು ಗುರುತಿಸಿಕೊಳ್ಳದ ಮಹಿಳೆಯರೆಲ್ಲರೂ ಒಂದು ಬಗೆಯ 'ಮಿಥ್ಯಾಪ್ರಜ್ಞೆ'ಗೆ ಬಯಲಿಯಾಗಿದ್ದು ಪುರುಷರೊಂದಿಗೇ ತಮ್ಮನ್ನು ಗುರುತಿಸಿಕೊಂಡಿರುವವರೆಂದು ಹೇಳಿ, ಅವರ ಅನುಭವದ ತಥ್ಯವನ್ನು ಪುರುಷಹಿತಾಸಕ್ತಿಯಿಂದ ಪ್ರೇರಿತವಾದದ್ದೆಂದೂ, ಆದ್ದರಿಂದ ಮಹಿಳೆಯರ 'ಸತ್ಯ'ವನ್ನು ಗುರುತಿಸಲು ಅದು ಅಸಮರ್ಥವೆಂದೂ ಸಾರಲಾಯಿತು. ವಸ್ತುನಿಷ್ಠತೆ ಎಂಬುದು ಪುರುಷತ್ವಕ್ಕೆ ಹೊಂದಿಕೊಂಡಿದೆ, ಅದು ಸ್ತ್ರೀಯರನ್ನು ಹೊರಗಿಡುವ ಸಾಧನ. ಇಂಥ ವಸ್ತುನಿಷ್ಠತೆಯನ್ನು ಆಧರಿಸಿದ ಎಲ್ಲಾ ಸಿದ್ಧಾಂತಗಳೂ, ಸಂಸ್ಥೆಗಳೂ ಪುರುಷ ಪಕ್ಷಪಾತಿಗಳೇ. ಅವರವರ ವ್ಯಕ್ತಿಗತ ನಂಬಿಕೆ, ಹಿತಾಸಕ್ತಿಗಳ ಮೇಲೆ ಕಟ್ಟಿದ ಪರಿಕಲ್ಪನೆ ಈ ವಸ್ತುನಿಷ್ಠತೆ ಎಂಬುದು. ಆದ್ದರಿಂದ ಅದು ನಂಬಲು ಅರ್ಹವಲ್ಲ. ಬದಲಾಗಿ ವೈಯಕ್ತಿಕವಾದ ಅನುಭವಜನ್ಯವಾದ ಜ್ಞಾನವೊಂದೇ ಮಹಿಳೆ ನಂಬಬಹುದಾದ ಜ್ಞಾನ–ಎಂಬ ವಿಚಾರದ ತಳಹದಿಯ ಮೇಲೆ ವೈಯಕ್ತಿಕ ರಾಜಕಾರಣದ ಪರಿಕಲ್ಪನೆ ಬೆಳೆದಿದೆ. ಲಿಂಗಪ್ರಭೇಧವು ಒಂದು ಪ್ರಬಲವಾದರಾಜಕೀಯ ವ್ಯವಸ್ಥೆಯಾಗಿದ್ದು, ಅದರಲ್ಲಿ ವೈಯಕ್ತಿಕವಾದ್ದೂ ರಾಜಕೀಯವೇ ಆಗಿರುತ್ತದೆ ಎಂಬ ಹೊಸ

ಸೂತ್ರೀಕರಣದೊಂದಿಗೆ ಆವರೆಗೆ ಮಹಿಳಾ ವಿಮೋಚನಾ ಚಳವಳಿಯು ಎತ್ತಿದ್ದ ವಿವಾದಾತ್ಮಕ ಸಮಸ್ಯೆಗಳೆಲ್ಲವೂ ರಾಜಕೀಯ ಸಮಸ್ಯೆಗಳೆನಿಸಿದವು.

ಲಿಂಗರಾಜಕೀಯದ ಈ ತಾತ್ವಿಕತೆಯನ್ನು ರೂಪಿಸಿದ ಕೇಟ್ ಮಿಲೆಟ್ ಹೇಳುವಂತೆ 'ಒಂದು ಗುಂಪು ಇನ್ನೊಂದನ್ನು ಆಳುವಾಗ, ಅವರೆಡರ ನಡುವಿನ ಸಂಬಂಧವು ರಾಜಕೀಯ ಸ್ವರೂಪದ್ದಾಗಿರುತ್ತದೆ. ಈ ವ್ಯವಸ್ಥೆ ದೀರ್ಘಕಾಲದವರೆಗೆ ಮುಂದುವರೆದಾಗ ಅದು ತನ್ನದೇ ಆದ ವಿಚಾರಧಾರೆಯೊಂದನ್ನು ಬೆಳೆಯಿಸುತ್ತದೆ. (ಊಳಿಗಮಾನ್ಯ, ಜನಾಂಗವಾದ ಇತ್ಯಾದಿ). ಚಾರಿತ್ರಿಕವಾದ ಎಲ್ಲಾ ನಾಗರಿಕತೆಗಳೂ ಪಿತೃಪ್ರಧಾನವೇ ಆಗಿವೆ. ಅವುಗಳ ವಿಚಾರಧಾರೆಯು ಪುರುಷಪಾರಮ್ಯವನ್ನೇ ಸಾರುತ್ತಿರುತ್ತದೆ. (ಚರ್ಚೆಗಾಗಿ ನೋಡಿ : Judith Grant: 1993. p. 1-74) ರಾಜಕೀಯ ಎನ್ನುವುದು ಅಧಿಕಾರ ಸಂಬಂಧವನ್ನು ಒಳಗೊಂಡಿರುತ್ತದೆ. ಆ ಅಧಿಕಾರವು ಸಾರ್ವಜನಿಕ ವಲಯಕ್ಕೆ ಸಂಬಂಧಿಸಿರಬಹುದು, ಇಲ್ಲದಿರಬಹುದು ಎಂಬ ಕೇಟ್ ಮಿಲೆಟ್ಟಳ ವಿಚಾರವನ್ನು ಅನುಸರಿಸಿ, ಸ್ತ್ರೀವಾದಿಗಳು ಅಧಿಕಾರವನ್ನು ಬೆಂಬಲಿಸುವ ಸಂಸ್ಥೆಗಳಿಗಾಗಿ ಶೋಧನೆ ನಡೆಸತೊಡಗಿದರು. ಲೈಂಗಿಕ ಸಂಭೋಗ ಕೂಡ ಅನೇಕ ಸಾಮಾಜಿಕ ರೂಢಿಗಳು, ಪದ್ಧತಿಗಳು ಮತ್ತು ಸಂಪ್ರದಾಯಗಳಿಂದ ನಿರ್ಬಂಧಿತವಾಗಿದ್ದು, ಅದೂ ಪಿತೃಪ್ರಧಾನ ರಾಜಕೀಯದ ಒಂದು ಸಂಸ್ಥೆಯೇ ಎಂದು ಸಾರಲಾಯಿತು. ಸ್ತ್ರೀಯರ ಲೈಂಗಿಕಾನುಭೂತಿ ಯೋನಿಕೇಂದ್ರಿತವೆಂಬುದು ಪಿತೃಪ್ರಧಾನ ವಿವಾಹ ಸಂಸ್ಥೆಯು ಸೃಷ್ಟಿಸಿರುವ ಪುರಾಣವೆಂದೂ, ಪ್ರೇಮ ಮತ್ತು ಭಾವನಾತ್ಮಕ ಸಂತೃಪ್ತಿಗಾಗಿ ಸ್ತ್ರೀಯರು ಪುರುಷರನ್ನೇ ಅವಲಂಬಿಸಿರುವಂತೆ ಈ ಪುರಾಣವನ್ನು ಕಟ್ಟಲಾಗಿದೆಯೆಂದೂ ಹೇಳಲಾಯಿತು.

ಪ್ರೇಮ ಎಂಬುದು ಮಾನಸಿಕ ಅಸ್ವಸ್ಥತೆಯ ಸ್ಥಿತಿ. ಅದಕ್ಕೆ ಬಲಿಯಾದ ಮಹಿಳೆ ತನ್ನ ಶೋಷಕನನ್ನೇ ತನ್ನ ಉದ್ಧಾರಕನೆಂದು ಭ್ರಮಿಸುತ್ತಾಳೆ. ಪ್ರೇಮ, ಕಾಮ, ಕುಟುಂಬಗಳು ಮಹಿಳೆಯರನ್ನು ಪುರುಷಾಧೀನವಾಗಿ ಉಳಿಸಿಟ್ಟಿರುವ ಪರಂಪರಾಗತ ಸಂಸ್ಥೆಗಳು. ಸ್ತ್ರೀಯರು ಪರಸ್ಪರ ಆತ್ಮೀಯತೆ, ಭಾವನಾತ್ಮಕ ಸಂಬಂಧಗಳಲ್ಲಿ ತೊಡಗಿ, ಪುರುಷ ಸಂಬಂಧದಿಂದ ಹೆಚ್ಚು ಹೆಚ್ಚು ಸ್ವತಂತ್ರರಾದಲ್ಲಿ, ಅವರ ಪುರುಷಾಸಕ್ತಿ ಕುಗ್ಗುತ್ತದೆ, ಆದ್ದರಿಂದ ವಿವಾಹ ಸಂಸ್ಥೆಯ ವಿನಾಶ. ಸ್ತ್ರೀಸೋದರಿಕೆಯ ಹೆಚ್ಚಳಗಳೇ ಸ್ತ್ರೀವಿಮುಕ್ತಿಯ ಹಾದಿಯೆಂದು 'Feminism is the theory, Lesbianism is the practice' ಎಂಬ ಗಾದೆಯನ್ನೂ ಹುಟ್ಟಿಹಾಕಲಾಯಿತು.

ವೈಯಕ್ತಿಕ ರಾಜಕೀಯದ ಈ ಹೊಸ ನಿರ್ವಚನವು ರಾಜಕೀಯವೆನ್ನುವುದು ಪುರುಷಪ್ರಾಬಲ್ಯದ ಒಂದು ವ್ಯವಸ್ಥೆಯೆನ್ನುತ್ತದೆ. ಸ್ತ್ರೀಯರು ಪ್ರೇಮದ ರೂಪದಲ್ಲಿ ಅಲ್ಪಸಂತೃಪ್ತರಾಗಿ, ಭೀತಿಯಲ್ಲಿ ಬದುಕುವಂತೆ ಮಾಡುವ ಈ ರಾಜಕೀಯ ವ್ಯವಸ್ಥೆಯಲ್ಲಿ ಮಾನಭಂಗ ಕೂಡ ಪುರುಷನಲ್ಲೂ, ಅವನ ಸಮೂಹದಲ್ಲೂ 'ಪೌರುಷ'ದ ಬಗ್ಗೆ ಇರುವ ಭಾವನೆಗೆ ಆತ್ಮಸಮರ್ಥನೆ, ಬೆಂಬಲ ದೊರಕಿಸಿಕೊಳ್ಳಲು ನಡೆಸುವ ಕ್ರಿಯೆಯೇ ಆಗಿರುತ್ತದೆ. ಪುರುಷ ದಬ್ಬಾಳಿಕೆ ಅಥವಾ ಪಿತೃಪ್ರಧಾನ ವ್ಯವಸ್ಥೆ ಬದುಕಿನ ಎಲ್ಲಾ ಸ್ತರಗಳಲ್ಲೂ

ಹರಡಿರುವುದರಿಂದ ಆ ವ್ಯವಸ್ಥೆಯ ಸಂದರ್ಭ, ಶೈಲಿ, ಆಕಾರ, ಪರಿಣಾಮಗಳಲ್ಲಿ ಬೆಳೆದಿರುವ ಸಂಸ್ಥೆಗಳೆಲ್ಲ ಪಿತೃಪ್ರಧಾನ ಸಂಸ್ಥೆಗಳೇ ಆಗಿರುತ್ತವೆಂದು ಪ್ರತಿಪಾದಿಸಲಾಯಿತು. ಈ ವಿಚಾರಕ್ರಮದಲ್ಲಿ ಈ ಪುರುಷಪ್ರಾಬಲ್ಯವೆಂಬುದು ಒಂದು ರೀತಿಯ ಅಮೂರ್ತ ಶಕ್ತಿಯಾಗಿ, ಕಾಲ, ದೇಶ, ಸಂಸ್ಕೃತಿ, ಪರಿಸರಗಳೆಲ್ಲವನ್ನೂ ಮೀರಿ ಎಲ್ಲಾ ಕಡೆ ವ್ಯಾಪಿಸಿರುವುದೆಂಬ ಪರಿಕಲ್ಪನೆ ಬೆಳೆಯಿತು. ಚರಿತ್ರೆ, ತತ್ವಶಾಸ್ತ್ರ ರಾಜಕೀಯ ಮತ್ತು ವಾಸ್ತವದ ಬಗ್ಗೆ ಪ್ರಚಲಿತವಿರುವ ಎಲ್ಲಾ ವ್ಯಾಖ್ಯಾನಗಳೂ ಸ್ತ್ರೀಯರನ್ನು ದೂರವಿಟ್ಟಿವೆ ಎಂದು ಭಾವಿಸಲಾಯಿತು. ಈ ರೀತಿಯಲ್ಲಿ 'ಮಹಿಳೆ' ಎಂಬ ತಾತ್ವಿಕ ಘಟಕಕ್ಕೆ 'ಮಹಿಳಾ ಅನುಭವ' ಎಂಬುದೂ, 'ಮಹಿಳಾ ಅನುಭವ' ಎಂಬುದಕ್ಕೆ 'ವೈಯಕ್ತಿಕ ರಾಜಕಾರಣ' ಎಂಬುದೂ ಬೆಂಬಲದ ಘಟಕಗಳಾಗಿ ಸ್ತ್ರೀವಾದಿ ಸಿದ್ಧಾಂತದ ಮೂರು ಮುಖ್ಯ ಬಿಂದುಗಳಾದವು.

ಸ್ತ್ರೀ–ಪುರುಷರ ಅನುಭವಗಳು ಬೇರೆ ಬೇರೆ, ಅವು ಸೂಚಿಸುವ ಅರ್ಥಗಳೂ ಬೇರೆಯೇ. 'ಜ್ಞಾನ'ವು ಲಿಂಗಪ್ರಭೇಧಿತ ಅನುಭವಗಳಿಂದ ನೇರವಾಗಿ ಗ್ರಹಿಸಲು ಬರುವಂಥಾದ್ದು. ಇದುವರೆಗೆ ನಾವು 'ಸತ್ಯ' ಎಂದು ಕಾಣುತ್ತಾ ಬಂದಿರುವುದೆಲ್ಲ ವಾಸ್ತವದಲ್ಲಿ ಹೆಚ್ಚು ಕಡಿಮೆ ಪುರುಷನ ಅಭಿಪ್ರಾಯವಷ್ಟೇ. ವಸ್ತುನಿಷ್ಠತೆ ಎನ್ನುವುದು ಜಗತ್ತನ್ನು ಪುರುಷನು ನೋಡುವ ರೀತಿಯಲ್ಲಿ ನೋಡುವ, ಅವನು ಅನುಭವಿಸುವಂತೆ ಅನುಭವಿಸುವುದಷ್ಟೇ ಎನ್ನುವುದಾದರೆ ಅದೊಂದು ಮಿಥ್ಯಾನಾಮ ಮಾತ್ರವಾಗಿರುತ್ತದೆ. ಮಹಿಳೆಯರ ಅನುಭವದ ಒಳಗಿನ ಸತ್ಯ ಹಾಗೂ ಅದರ ವಾಸ್ತವ ಪುರುಷರದಕ್ಕಿಂತ ಯಾವಾಗಲೂ ಭಿನ್ನವೇ ಆಗಿದ್ದು, ಅಂತಹ ಸತ್ಯವನ್ನೂ ಅದನ್ನು ಕಲಾತ್ಮಕವಾಗಿ ಹೇಳುವಂಥ ಕೃತಿಗಳ ಉತ್ಪಾದನೆಯನ್ನೂ, ಪಿತೃಪ್ರಾಧಾನ್ಯವು ಸದಾ ಅಪಮೌಲ್ಯಕ್ಕೆ ಒಳಗುಮಾಡುತ್ತಲೇ ಬಂದಿದೆ. ಇಂಥ ಸ್ತ್ರೀಸಾಂಸ್ಕೃತಿಕ ಉತ್ಪಾದನೆಗಳು ಪಿತೃಪ್ರಧಾನ ಸಂಸ್ಕೃತಿಯೊಳಗೆ ಹುಟ್ಟುವಾಗಲೇ ತಮ್ಮ ನ್ಯಾಯವಾದ ಹಕ್ಕಿನಿಂದ ವಂಚಿತವಾಗಿರುತ್ತವೆ ಎಂಬುದು ಸ್ತ್ರೀವಾದದ ಸೈದ್ಧಾಂತಿಕ ಹಾಗೂ ವಿಮರ್ಶಾತ್ಮಕ ತತ್ವಗಳ ಸಾರಾಂಶ.

ಮಹಿಳೆಯ ಅನುಭವ ಎಂಬುದರೊಳಗೆ ಆಕೆಯ ಲೈಂಗಿಕತೆ, ಜೀವನಚಕ್ರ ಮತ್ತು ತಾಯ್ತನದ ಅನುಭವಗಳೆಲ್ಲವೂ ಸೇರುತ್ತವೆ. ಇವೆಲ್ಲ ಎಲ್ಲ ಮಹಿಳೆಯರಲ್ಲಿ ಏಕರೂಪದಲ್ಲಿ ಒದಗಿರುವುದಿಲ್ಲ. ಆದರೆ ಮಹಿಳಾ ಶೋಷಣೆಯು ಸಾರ್ವತ್ರಿಕವಾದದ್ದು ಎಂಬುದನ್ನು ಸ್ಥಾಪಿಸಲು ಸ್ತ್ರೀವಾದಿಗಳು ಹೆಣ್ಣಿನ ಜೀವದಾಯಕ ಶಕ್ತಿಯನ್ನು ಮುಖ್ಯ ಆಧಾರವಾಗಿಟ್ಟುಕೊಂಡು 'ಮಾತೃತ್ವ ಸಿದ್ಧಾಂತ' (Motherhood Theory)ವನ್ನು ಮುಂದಿಡುತ್ತಾರೆ. ಪಿತೃಪ್ರಧಾನ ವ್ಯವಸ್ಥೆಯ ಒಂದು ಮುಖ್ಯ ಸಾಮಾಜಿಕ ಸಂಸ್ಥೆಯಾಗಿ, 'ಮಾತೃತ್ವ'ವು ಮಹಿಳೆಯನ್ನೂ, ಲಿಂಗಪ್ರಬೇಧವನ್ನೂ ನಿರ್ವಚಿಸುವ ಸಾಧನವಾಗಿರುತ್ತದೆ. ಅದೇ ಹೊತ್ತಿನಲ್ಲಿ ಸ್ತ್ರೀತ್ವ/ಸ್ತ್ರೀ ಸ್ವಭಾವಗಳ ಸಮರ್ಥ ತಿಳುವಳಿಕೆಗೆ ಇದನ್ನು ಆಕರವೆಂದೂ ಭಾವಿಸಲಾಗುತ್ತದೆ.

'ಮಾತೃತ್ವ'ಕ್ಕೆ ಹಿಂದಿರುಗಬೇಕೆ?

ಸ್ತ್ರೀಯನ್ನು ಪುರುಷನಿಗಿಂತ ಭಿನ್ನವಾಗಿ ಗುರುತಿಸಲು ಒಂದು ಮುಖ್ಯ ಸ್ಥಾನ ತಾಯ್ತನ. ಆದರೆ ಅದೇ ಲಿಂಗಪ್ರಭೇದ, ಶ್ರೇಣೀಕರಣ, ಯಜಮಾನಿಕೆ ಮತ್ತು ಶೋಷಣೆಗಳಿಗೂ ಮೂಲನೆಲೆಯಾಗಿದೆ. ನೇತ್ಯಾತ್ಮಕ ನೆಲೆಯನ್ನು ಹೆಣ್ಣಿನ ನೈತಿಕ ಹಿರಿಮೆಯ ನೆಲೆಯೆಂದು ಪ್ರತಿಪಾದಿಸುವ ಯತ್ನವಾಗಿ 'ಮಾತೃತ್ವ ಸಿದ್ಧಾಂತ' (Motherhood Theory)ವನ್ನು ಸ್ತ್ರೀವಾದಿಗಳೂ ಬಲವಾಗಿ ಎತ್ತಿಹಿಡಿಯುತ್ತಾರೆ. ಹೆಣ್ಣಿನ ಭಿನ್ನತೆ, ಆಕೆಯ ರಕ್ಷಕಗುಣ, ಸಂವೇದನಾಸೂಕ್ಷ್ಮತೆ, ಸಂತೈಸುವ ಉಪಶಾಮಕಶಕ್ತಿ ಮತ್ತು ಜವಾಬ್ದಾರಿತನಗಳು, ಅವಳ ನೈತಿಕ ಹಿರಿಮೆಯ ಜೊತೆಗೂಡಿ ಸ್ತ್ರೀವಿಶಿಷ್ಟವಾದ ಧ್ವನಿಯೊಂದನ್ನು ಹೆಣ್ಣಿಗೆ ನೀಡುತ್ತವೆ– ಎಂದು ಹೇಳುವ ಕೆರೋಲ್ ಗಿಲ್ಲಗಾನ್ ಸಾಹಿತ್ಯದ ಮಾದರಿಗಳಿಂದ ತನ್ನ ವಿಚಾರವನ್ನು ಸಮರ್ಥಿಸಿಕೊಳ್ಳುತ್ತಾಳೆ. ನ್ಯಾನ್ಸಿ ಖೊಡೊರೋವ್ ಸಂತಾನ ಸಂಗೋಪನವು ಲಿಂಗಪ್ರಭೇದಕ್ಕೆ ಒಳಗಾದದ್ದೇ ಸ್ತ್ರೀಶೋಷಣೆಯ ಮೂಲವೆಂದು ಹೇಳಿ, ತಮ್ಮ ಹೆಣ್ಣುಮಕ್ಕಳಲ್ಲಿ ಸ್ತ್ರೀಸ್ವಭಾವವನ್ನೇ ಬಿತ್ತಿ ತಾಯಂದಿರು ಅವರನ್ನು ಸಾಮಾಜೀಕರಿಸುತ್ತಾರೆಂದೂ, ಮಾತೃತ್ವವು ಹೆಣ್ತನದ ಇತ್ಯಾತ್ಮಕ ಗುಣಗಳನ್ನು ಮೌಲಿಕಗೊಳಿಸುವ ಕೇಂದ್ರವೆಂದೂ ಪ್ರತಿಪಾದಿಸುತ್ತಾಳೆ.

ಆದರೆ ಈ ಸ್ತ್ರೀತ್ವದ ಸಿದ್ಧಮಾದರಿಗಳು ಸ್ವಯಂ ಉದ್ಭವಿಸಿದ ಶಾಶ್ವತ ಸತ್ಯಗಳಲ್ಲ. ಅವು ಸಾಮಾಜಿಕವಾಗಿ ರಚಿತವಾಗಿರುತ್ತವೆ ಎನ್ನುವ ಡೊರತಿ ಡಿನ್ನರ್‌ಸ್ಟೇಯ್ನ್ ವಿಚಾರಗಳು ಗಮನಾರ್ಹವಾಗಿವೆ. ಫ್ರಾಯ್ಡ್ ಪ್ರಕಾರ 'ದೇವರು' ಎಂಬುದು ಮಾನವ ಮನಸ್ಸಿನಲ್ಲಿ ಗಾಢವಾಗಿ ಮೂಡಿದ್ದ ತಂದೆಯ ಪ್ರತೀಕದ ಮೂರ್ತಪರಿಕಲ್ಪನೆ. ಅಂದರೆ ಅದು ಭೀತಿಗ್ರಸ್ತ ಮನಸ್ಸಿನದೇ ಒಂದು ಮಿಥ್ ಅಷ್ಟೆ. ಹಾಗೆಯೇ ಸಮೂಹಪ್ರಜ್ಞೆಯಲ್ಲಿ ಬೇರೂರಿರುವ ಮತ್ತೊಂದು ಆದಿಪ್ರತೀಕವೇ 'ಮಾತೆ'ಯದು. ಕೆಲವರು ಮಾತೃಪ್ರಧಾನ ವ್ಯವಸ್ಥೆಯಲ್ಲಿ ಇತ್ತು ಎಂದು ಊಹಿಸಲಾಗುವ ಸ್ತ್ರೀ ಬಗೆಗಿನ ವೈಭವೀಕೃತ ಕಲ್ಪನೆಗಳನ್ನೇ ನಿಜವಾದ ಚರಿತ್ರೆಯೆಂದು ನಂಬಿ ಈ 'ಮಾತೆ' ಎಂಬ ಆದಿ ಪ್ರತೀಕದ ಸುತ್ತ ಬಲವಾದ ಪುರಾಣ ಪ್ರಭಾವಳಿಯನ್ನು ಕಟ್ಟಲು ಯತ್ನಿಸುತ್ತಾರೆ. ಈ 'ಮಾತೃ' ಪುರಾಣದ ಪ್ರಭಾವಳಿಯನ್ನು ಕಳಚಿದಲ್ಲಿ ಉಳಿಯುವುದು ಸ್ತ್ರೀಯನ್ನು ಕುರಿತು ಆದಿಮಾನವನಲ್ಲಿ ಹುಟ್ಟಿದ ಭೀತಿ, ದ್ವೇಷಗಳದ್ದೇ ಇನ್ನೊಂದು ಮುಖವಷ್ಟೇ ಆಗಿರುತ್ತದೆ. 'ಮಾತೆ'ಯೆಂಬ ಮಿಥ್‌ನ ನೆಲೆಯನ್ನು ಕೊಂಡಾಡುವವರು, ಸ್ತ್ರೀಯರು ಈಗಿರುವ ರೀತಿಯಲ್ಲಿ ತಮ್ಮಷ್ಟಕ್ಕೇ ಶ್ರೇಷ್ಠರಾಗಿರುತ್ತಾರೆಂದೂ, ಈ ಶ್ರೇಷ್ಠ ನೆಲೆ ತಾಯ್ತನದಿಂದ ಅವರಿಗೆ ದೊರಕುತ್ತದೆಂದೂ ಪ್ರತಿಪಾದಿಸುತ್ತಾರೆ. ಇದರಿಂದ ಹೊರಡುವ ತೀರ್ಮಾನವೆಂದರೆ ಸ್ತ್ರೀಯರು ಪುರುಷರಂತೆ ಉತ್ಪಾದನೆ, ಸ್ಪರ್ಧೆ, ಸೃಜನಶೀಲತೆಗಾಗಿ ಕೃತಕವಾಗಿ ಶ್ರಮಿಸಬೇಕಾಗಿಲ್ಲ ಎಂಬುದೇ ಆಗಿದೆ– ಎಂದು ಈ ಮಾತೃತ್ವಸಿದ್ಧಾಂತಕಾರರ ನಿಲುವನ್ನು ಡಿನ್ನರ್‌ಸ್ಟೇಯ್ನ್ ವಿಮರ್ಶೆ ಮಾಡುತ್ತಾಳೆ.

'ಮಾತೃತ್ವ' ಸಿದ್ಧಾಂತ'ವೆಂದು ಪಶ್ಚಿಮದ ಸ್ತ್ರೀವಾದವು ಪ್ರತಿಪಾದಿಸುವ ವಿಚಾರಗಳು

ಭಾರತಕ್ಕಂತೂ ಏನೂ ಹೊಸತಲ್ಲ. ಭಾರತೀಯ ಸಂಸ್ಕೃತಿಯ ಅತ್ಯಂತ ಪುರಾತನವೆನಿಸಿದ ಮುಖ್ಯನೆಲೆಯೊಂದು ಮಾತೃತ್ವವನ್ನು ಕೊಂಡಾಡುವಂಥದೇ ಆಗಿದೆ. ತಾಯಿಯನ್ನು ದೇವರೆಂದು ಗೌರವಿಸುವ ಪರಂಪರಾಗತ ಚಿಂತನೆಯು ಭಾರತೀಯರ ಜೀವನದ ಬಹುಮುಖ ಸ್ತರಗಳಲ್ಲಿ ಬೇರೆ ಬೇರೆ ರೀತಿಯಿಂದ ಇಂದಿಗೂ ಕೆಲಸ ಮಾಡುತ್ತಿದೆ. ಭಾರತೀಯರ ಪ್ರಜ್ಞೆ ಮತ್ತು ಸುಪ್ತಪ್ರಜ್ಞೆಗಳನ್ನು ಈ ಮಾತೆಯ ಆದಿಪ್ರತೀಕವು ಎಷ್ಟು ಗಾಢವಾಗಿ ಆವರಿಸಿಕೊಂಡಿದೆ ಎಂಬುದನ್ನು ಪ್ರಾಯೋಗಿಕ ಮನೋವಿಶ್ಲೇಷಕ ಸುಧೀರ್ ಕಾಕರ್ ಅವರು ವಿಶ್ಲೇಷಿಸಿ ತೋರಿಸಿದ್ದಾರೆ. ಸ್ತ್ರೀವಾದಿಗಳು ಹೇಳುವ ಲೈಂಗಿಕ ಸಮಾನತೆಯ ಪರಿಕಲ್ಪನೆಯು ಭಾರತದಲ್ಲಿ ವಿಫಲವಾಗುವುದರ ಹಿನ್ನೆಲೆಯನ್ನು ಪ್ರಸ್ತಾಪಿಸುತ್ತಾ ಕಾಕರ್ ಅವರು ನಮ್ಮಲ್ಲಿ ವ್ಯಕ್ತಿತ್ವದಲ್ಲಿ ಬೇರೂರಿರುವ ತಾಯಿ–ಮಗನ ಸಂಬಂಧದಿಂದಾಗಿ ಸ್ತ್ರೀ–ಪುರುಷರ ಲೈಂಗಿಕ ಸರಿಸಮಾನತೆಯ ಗ್ರಹಿಕೆ ಇಲ್ಲಿ ತಲುಪುವುದಿಲ್ಲ. ಹೆಣ್ಣು ತನ್ನ ಸ್ನೇಹಿತನೊಂದಿಗೆ ಸಮಾನತೆಗಾಗಿ ಹಕ್ಕೊತ್ತಾಯಿಸಬಹುದೇ ಹೊರತು ತಾಯಿ ಮಗನೊಂದಿಗೆ ಎಂಥ ಸಮಾನತೆ ಬಯಸಿಯಾಳು?–ಎಂದು ಅವರು ಸೂಚಿಸುತ್ತಾರೆ. ವ್ಯಕ್ತಿವಾದಿ ಚಿಂತನೆ ಪಶ್ಚಿಮದಂತೆ ನಮ್ಮಲ್ಲಿ ಬೆಳೆಯದಿರುವುದರಿಂದ ಪಶ್ಚಿಮದವರು ಹೇಳುವ ಸಮಾನತೆ ಕೂಡ ಅಗ್ರಾಹ್ಯವಾಗಿದೆ ಎನ್ನುವುದು ಕಾಕರ್ ಅವರ ಅಭಿಮತ.

ಜೈವಿಕ ಸೃಜನಶೀಲ ಸಾಮರ್ಥ್ಯವುಳ್ಳ ಮಹಿಳೆ ಬೇರೆ ಕಲಾಸೃಷ್ಟಿಗಾಗಿ ಶ್ರಮಿಸದೆಯೂ ಶ್ರೇಷ್ಠತೆಯನ್ನು ಅನುಭವಿಸಬಹುದು ಎಂಬ ವಾದವೂ ಭಾರತೀಯರಿಗೆ ಹೊಸತಲ್ಲ. ಲೋಕಾಧಿಪತಿಗಳಾದ ಹರಿ, ಹರ, ಬ್ರಹ್ಮರನ್ನೂ ಶಿಶುಗಳನ್ನಾಗಿ ಮಾಡಿ, ಗೆದ್ದು ಪ್ರಸಿದ್ಧಳಾದ ಅನಸೂಯೆಯೆಂಬ ಮಹಾಸತಿಯ ಪುರಾಣವೇ ಇಲ್ಲಿದೆ. ಆದರೆ ಆಧುನಿಕ ಯುಗದ ಮಹಿಳೆಯರು ಪ್ರಶ್ನಿಸುತ್ತಿರುವ ಅಸಮಾನತೆ, ಶೋಷಣೆಗಳುಳ್ಳ ಲಿಂಗಪ್ರಭೇಧಗಳ ವಿನಾಶಕ್ಕೆ, ಈ ಸ್ವಯಂ–ವಿಸ್ಮಿತರಾದ ಮಹಿಳೆಯರ ಸ್ಥಿತಿಯು ಯಾವ ಪರಿಹಾರವನ್ನು ನೀಡಬಲ್ಲದೆಂಬುದು ಅರ್ಥವಾಗದ ಸಂಗತಿ. 'ಮಾತೃತ್ವದ ತತ್ವವನ್ನೇ ಕೇಂದ್ರವಾಗಿಟ್ಟು ಮಹಾಶ್ವೇತಾದೇವಿ ಬರೆದಿರುವ 'ಸ್ತನದಾಯಿನಿ' ಕಥೆಯು ಎತ್ತುವಂಥ ಪ್ರಶ್ನೆಗಳು ಹೆಣ್ಣಿನ ಜೀವದಾಯಕ ಶಕ್ತಿ ಎಂಬುದು ಕೇವಲ ಕೊಂಡಾಟದ ತಾಣವಾಗಿರದೆ ಅದೂ ದಾರುಣ ಶೋಷಣೆಗೆ ಉಪಕರಣವಾಗಿ ಹೇಗೆ ಬಳಕೆ ಆಗಬಹುದೆಂಬುದರ ಕಡೆಗೆ ನಮ್ಮ ಗಮನ ಸೆಳೆಯುತ್ತದೆ. ಆ ಕಥೆಯ ಕೇಂದ್ರ ವ್ಯಕ್ತಿ ಯಶೋದೆಗೆ (ಪಾಲಕ–ಮಾತೆಗೆ ಅರ್ಥಪೂರ್ಣ ಹೆಸರು!) ಆರ್ಥಿಕ ಬಡತನದೆದುರು ಸೆಣಿಸಿ, ಗಂಡ ಮಕ್ಕಳನ್ನು ಕಾಪಾಡಲು ಹಾಲೂಡುವ ಸ್ತನಗಳನ್ನೇ ದುಡಿಮೆಯ ಸಾಧನವಾಗಿಸಿಕೊಳ್ಳುವ ಅನಿವಾರ್ಯತೆ. ಶ್ರೀಮಂತ ಸ್ತ್ರೀಯರ ಮೈಮಾಟ ಕಪಾಡುವುದಕ್ಕಾಗಿ, ಅವರ ಮಕ್ಕಳಿಗೆ ಹಾಲೂಡಿಸಿ ಗಳಿಸಬೇಕಾದ ತುರ್ತಿನಲ್ಲಿ ಯಶೋದೆ ನಿರಂತರವಾಗಿ ತಾನೂ ಮಕ್ಕಳನ್ನು ಹೆರುತ್ತಿರುವುದು, ಹಾಲು ಕುಡಿಸಿ ತನ್ನ ಮತ್ತು ಪರರ ಅಸಂಖ್ಯ ಮಕ್ಕಳನ್ನು ಬೆಳೆಸಿದರೂ. ಕೊನೆಗೆ ಸ್ತನಗಳಿಗೆ ಕ್ಯಾನ್ಸರ್ ಬಡಿದಾಗ ಹೆತ್ತಮಗನಿರಲಿ, ಸಾಕಿದವನಿರಲಿ–ಯಾರೂ ಅವಳ ರಕ್ಷಣೆಗೆ ಒದಗದಿರುವ ಸ್ಥಿತಿಯು ತಾಯಿತನದ, ಗೃಹಿಣೀತ್ವದ, ತಾಯಿ–

ಮಕ್ಕಳ ನಡುವಿನ ಸಂಬಂಧಗಳ ಬಗ್ಗೆ ಅತ್ಯಂತ ಮಾರ್ಮಿಕ ಪ್ರಶ್ನೆಗಳನ್ನು ಹುಟ್ಟಿಸುತ್ತದೆ. ಈ ಕಥೆಯು ಎತ್ತಿ ತೋರಿಸುವ ಸಾಮಾನ್ಯ ಭಾರತೀಯ ಹೆಣ್ಣಿನ ವಾಸ್ತವ ಸ್ಥಿತಿಯು ನಮ್ಮ 'ದೇವಿಭಾಗವತ'ಗಳು ಕಟ್ಟಿಕೊಡುವ 'ಮಾತೆಯ' ರೊಮ್ಯಾಂಟಿಕ್ ಚಿತ್ರವೂ ಅಲ್ಲ; ಪಾಶ್ಚಾತ್ಯ ತೀವ್ರಗಾಮಿ ಸ್ತ್ರೀವಾದಿಗಳು ಕಟ್ಟಿಕೊಡುವ 'ಮಾತೆ'ಯ ರೊಮ್ಯಾಂಟಿಕ್ ಚಿತ್ರವೂ ಅಲ್ಲ. ಇವೆರಡನ್ನೂ, ಒಟ್ಟಾರೆ 'ಮಾತೃತ್ವ'ದ ಪರಿಕಲ್ಪನೆಯನ್ನೂ ಮಹಾಶ್ವೇತಾದೇವಿ ಪ್ರಶ್ನೆಗೀಡು ಮಾಡುತ್ತಾರೆನಿಸುತ್ತದೆ.

ಈ ಹಿನ್ನೆಲೆಯಿಂದ ನೋಡಿದಾಗ ಡಿನ್ನರ್‌ಸ್ಟೇಯ್ನ್ ಈ ಮಾತೃತ್ವ ಸಿದ್ಧಾಂತದ ಬಗ್ಗೆ ಮಾಡಿರುವ ವಿಮರ್ಶೆಯು ನಿಜಕ್ಕೂ ಮಹತ್ವದ್ದೂ, ಮಾರ್ಗದರ್ಶಕವೂ ಆಗಬಲ್ಲದು. ಹೆಣ್ಣಿನ ತಾಯ್ತನವನ್ನು ವೈಭವೀಕರಿಸುವ, ತನಗೆ ತಾನೇ ಶ್ರೇಷ್ಠಳೆಂದು ವಿಸ್ಮಿತವಾಗುವ ದೃಷ್ಟಿಕೋನಕ್ಕೆ ಪುರುಷರಿಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲೂ ಏನೋ ಕೊರತೆ, ಅರಕೆ, ಅಪೂರ್ಣತೆ, ಕ್ಷುದ್ರತೆ, ದುಃಖಕಾರಕ ಗುಣಗಳೇ ಇರುವಂತೆ ತೋರುತ್ತದೆ. ಆದರೆ ಇದು ಒಂದು ರೀತಿಯ ಮಾನಸಿಕ ಹಪಾಹಪಿ ಹುಟ್ಟಿಸುವ ಅವಶ್ಯಕಭಾವವಾಗಿರುತ್ತದೆ. ಈ ಮಾನಸಿಕ ಒತ್ತಡಗಳು ಪುರುಷರಲ್ಲಿ 'ಮಾತೆ'ಯ ಬಗೆಗಿನ ನಿರೀಕ್ಷೆಗಳನ್ನೂ ಸ್ತ್ರೀಯರಲ್ಲಿ ಆ ಗುಣದ ಅಭಾವದ ಅರಿವಿನಿಂದ ಹುಟ್ಟುವ ಅಪರಾಧಿ ಪ್ರಜ್ಞೆಯನ್ನೂ ಸೃಷ್ಟಿಸುತ್ತವೆಂಬುದನ್ನು ಡಿನ್ನರ್ ಸ್ಟೇಯ್ನ್ ಗುರುತಿಸುತ್ತಾಳೆ. ಹುಟ್ಟಿದಾಗ ಆಕಾರದಿಂದಷ್ಟೇ 'ಮನುಷ್ಯ' ಎನಿಸುವ ಶಿಶುವನ್ನು ಸಾಮಾಜಿಕವಾಗಿ ಮನುಷ್ಯತ್ವವನ್ನು ಪಡೆಯುವಂತೆ ಮಾಡುವ ಮಹಿಳೆಯು ತಾಯ್ತನದ ಪ್ರಕ್ರಿಯೆಯಿಂದಾಗಿಯೇ ಪ್ರತಿಯೊಬ್ಬರ ಮನಸ್ಸಿನಲ್ಲೂ, ಪ್ರಜ್ಞೆಯು ಹುಟ್ಟುವ ಮುಂಚಿನ ಸ್ಥಿತಿಯಲ್ಲೇ ತನ್ನ ತಾಯ್ತನದ ಪ್ರಬಲವಾದ ಬಿಂಬವೊಂದನ್ನು ಮೂಡಿಸಿರುತ್ತಾಳೆ. ಮಗುವಿನ ಸುಪ್ತಪ್ರಜ್ಞೆಯಲ್ಲಿ ಬೇರೂರಿರುವ ಈ ಬಗೆಯ ಮಾತೆಯ ಆದಿಪ್ರತೀಕದ ಮೂಲಕ ಮಹಿಳೆಯು ತಾನು ತಾಯಿಯಾದಾಗ ಸಹನೆ, ರಕ್ಷಕಭಾವ, ವಾತ್ಸಲ್ಯಗಳನ್ನು ತಳೆಯಬೇಕೆಂಬ ಪ್ರೇರಣೆಯನ್ನು ಪಡೆದುಕೊಳ್ಳುತ್ತಾಳೆ. ಅಂತಹ ಗುಣಗಳು ತನ್ನಲ್ಲಿ ಇಲ್ಲವಾಗಿದ್ದರೆ, ಆ ಅಭಾವದ ಎದುರಲ್ಲಿ ಈಕೆ ತನ್ನೊಳಗಿನಿಂದಲೇ ನಿರಾಕರಣೆ, ಪಶ್ಚಾತ್ತಾಪಗಳಿಗೆ ಬಲಿಬೀಳುವಂತಾಗುತ್ತದೆ. ವಾಸ್ತವದಲ್ಲಿ ಯಾವ ತಾಯಿಯೂ ದುಷ್ಟೆ ಅಲ್ಲದಿರಬಹುದು. ಆದರೆ ಸಮೂಹ ಪ್ರಜ್ಞೆಯಲ್ಲಿ ಬೇರೂರಿರುವ ಮಾತೃಪ್ರತೀಕದ ಒತ್ತಡದಿಂದಾಗಿ ಜನರು ನಿರೀಕ್ಷಿಸುವ ಗುಣಗಳೇ 'ಮಾತೃಸಹಜ' ಎನಿಸಿಕೊಳ್ಳುತ್ತವೆ. ಅಂಥ ಗುಣಗಳನ್ನು ಹೊಂದಿರದಿದ್ದರೆ ಮಹಿಳೆಯರು ಸಮಾಜಿಕವಾಗಿ ದುಷ್ಟೆಯರೆನಿಸುವ ಸ್ಥಿತಿ ಏರ್ಪಡುತ್ತದೆ– ಎನ್ನುವುದು ಡಿನ್ನರ್‌ಸ್ಟೇಯ್ನ್ ಮುಂದಿಟ್ಟಿರುವ ವಾದವಾಗಿದೆ. ಈ ವಾದದಲ್ಲಿ ಪಿತೃಪ್ರಧಾನ ವ್ಯವಸ್ಥೆ ಮತ್ತು ಮಾತೃಪ್ರಧಾನ ವ್ಯವಸ್ಥೆಗಳೆರಡರ 'ಮಾತೃತ್ವ'ದ ವೈಭವೀಕರಣಗಳೂ ಪ್ರಶ್ನಾರ್ಹವೆಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಮಹಿಳೆಯರು ತಾವು ಮರೆತಿರುವ ಮಾತೃತ್ವ ಮೂಲದ ಸಬಲತೆಯ ನೆಲೆಗೆ ಹಿಂದಿರುಗಬೇಕು ಎಂದು ಮುಂತಾಗಿ ಕೆಲವು ವಿಮರ್ಶಕರು ನೀಡುವ ಕರೆಯನ್ನು ಚಿಕಿತ್ಸಕವಾಗಿ

ನೋಡಬೇಕಾಗುತ್ತದೆಯೇ ಹೊರತು ಅವುಗಳನ್ನು ಮುಖಬೆಲೆಯಲ್ಲೇ ಸ್ವೀಕರಿಸುವುದು ಅಪಾಯಕಾರಿಯಾಗಬಲ್ಲದು.

ನಿರ್ದಿಷ್ಟವಾದ (ಸಂಗೋಪನೆಗೆ ಬದ್ಧವಾದ) ಸ್ತ್ರೀಗುಣಗಳನ್ನೇ ಮಹಿಳೆಯ 'ಸರಿಯಾದ ನಡವಳಿಕೆ ಎಂದು ಸಾರುವ ಚಿಂತನೆಯು ಹಲವು ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಉದಾಹರಣೆಗೆ, 'ಮಾತೃಸಹಜ ಚಿಂತನಾಕ್ರಮ' ಎಂಬ ಒಂದು ಪರಿಕಲ್ಪನೆಯನ್ನು ನಿಜವೆಂದು ಒಪ್ಪಿದಲ್ಲಿ ಮಕ್ಕಳಿಲ್ಲದವರೂ ಬಂಜೆಸ್ತ್ರೀಯರೂ ಎಂದೂ ಅಂಥ 'ಸಹಜ' ನೆಲೆಗೆ ಏರಲಾರರು, ಮಾತ್ರವಲ್ಲ, ಅವರನ್ನು ಸ್ವಾರ್ಥಿಗಳು, ಕ್ರೂರಿಗಳು, ಅನುಕಂಪಕ್ಕೆ ಅನರ್ಹರೆಂದು ನೇತ್ಯಾತ್ಮಕವಾಗಿ ಕಾಣುವಂತಹ ಸಾಮಾಜಿಕ ನಡವಳಿಕೆಗಳು ಏರ್ಪಡಬಹುದು. ಅಂದರೆ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹುಟ್ಟುವಂಥ ಹೆಣ್ಣಿನ ಅವಹೇಳನವನ್ನು ಮಾತೃತ್ವ ಸಿದ್ಧಾಂತದಂತಹ ಸ್ತ್ರೀವಾದಿ ಪರಿಕಲ್ಪನೆಗಳೂ ಮುಂದುವರೆಸುತ್ತವೆ ಎನ್ನಬೇಕಾಗುತ್ತದೆ. ಈ ಅವಹೇಳನಾಂಶಗಳನ್ನು ಆಡ್ರಿಯನ್ ರಿಚ್‌ಳಂಥ ಸ್ತ್ರೀಸಂಸ್ಕೃತಿವಾದಿಗಳು ಹೇಗೆ ಅಪ್ರಜ್ಞಾಪೂರ್ವಕವಾಗಿ ಹುಟ್ಟುಹಾಕಬಲ್ಲರೆಂದು ನೋಡಬೇಕು. ಆಕೆ, ಮಗುವನ್ನು ಹೆತ್ತು, ಸಾಕುವ ಹಂಬಲ ಎಲ್ಲ ಸ್ತ್ರೀಯರಿಗೂ ಸ್ವಭಾವದಲ್ಲೇ ಇರುತ್ತದೆಂದೂ, ತಾಯಿ–ಮಗುವಿನ ಅನನ್ಯತೆಯು ಹೆತ್ತ ನಂತರವೂ ಬೇರೆಯಾಗುವುದಿಲ್ಲವೆಂದೂ, ಗರ್ಭಪಾತವೆಂಬುದು ಶಿಶುಹತ್ಯೆ ಅಥವಾ ಅತ್ಯಾಚಾರಕ್ಕೆ ಸಮನಾದ ಕ್ರೌರ್ಯವೆಂದೂ ಪ್ರತಿಪಾದಿಸುತ್ತಾಳೆ.

ಸ್ತ್ರೀತ್ವ ಮತ್ತು ಮಾತೃತ್ವದ ಬಗೆಗಿನ ಈ ಬಗೆಯ ಗ್ರಹಿಕೆಗಳು ಪಿತೃಪ್ರಧಾನ ವ್ಯವಸ್ಥೆ ರೂಢಿಸಿರುವ ಸ್ತ್ರೀಮೌಲ್ಯಗಳನ್ನೇ ತಾತ್ವಿಕವಾಗಿ ಎತ್ತಿಹಿಡಿಯುತ್ತವೆ. ಮಹಿಳೆಯರನ್ನು ಮಾತೃಭಾವವುಳ್ಳವರು ಮತ್ತು ಇಲ್ಲದಿರುವವರು ಎಂದು ಇವು ಶ್ರೇಣೀಕರಿಸುತ್ತವೆ. ಇದರಿಂದಾಗಿ ಹೆಣ್ತನದ ಈ ಶ್ರೇಷ್ಠ ನೆಲೆಯಲ್ಲಿ ಪ್ರವೇಶ ಪಡೆಯಲಿಕ್ಕಾಗಿಯೇ ಮಹಿಳೆಯರು ಹೋರಾಟ ಮಾಡಬೇಕಾದಂಥ ರಾಜಕೀಯವನ್ನು ಇವು ಹುಟ್ಟುಹಾಕುತ್ತವೆ. ಹೆಣ್ತನವೇ ರಾಜಕಾರಣದ ಕೇಂದ್ರವಾಗುವ ಈ ಗದ್ದಲದಲ್ಲಿ ಸ್ತ್ರೀವಾದದ ಮೂಲ ಕಾಳಜಿಯಾಗಿರುವ ಲಿಂಗಪ್ರಭೇದದ ವಿರುದ್ಧವಾದ ಹೋರಾಟವೇ ಮಸುಕಾಗಬಹುದೆಂದು ಜೂಡಿತ್ ಗ್ರ್ಯಾಂಟ್ ನೀಡುವ ಎಚ್ಚರಿಕೆ ಮನನೀಯವಾಗಿದೆ.

ಸ್ತ್ರೀವಾದಿ ನ್ಯಾಯಸಿದ್ಧಾಂತ :

ಹೆಣ್ಣಿನ ಒಳಚೈತನ್ಯವು ತಾಯ್ತನಕ್ಕೆ ಹೊಂದಿಕೊಂಡಿದ್ದೆಂದೂ, ಆ ಅನುಭವವು ಪಿತೃಪ್ರಧಾನ ವ್ಯವಸ್ಥೆಯ ಹಂಗಿಲ್ಲದ ಸ್ವಾಯತ್ತ ನೆಲೆಯನ್ನು ಹೆಣ್ಣಿಗೆ ಮಾತ್ರವೇ ದೊರಕಿಸಿಕೊಡುತ್ತದೆಂದು ಹೇಳುವ ಆಡ್ರಿನಲ್ ರಿಚ್ ತಾಯ್ತನ ಮತ್ತು ಸೃಜನಶೀಲತೆಗಳೆರಡೂ ಸಂಯೋಗವಾಗುವುದು ಒಂದು ಭಯಂಕರ ಅಧಿಕಾರವಾಗಿರುತ್ತದೆಂದೂ ಆ ಅಧಿಕಾರದಿಂದ ವಿಶಿಷ್ಟವಾದ ಜ್ಞಾನವನ್ನು ಸ್ತ್ರೀಯರು ತಮ್ಮಿಂದ ತಾವೇ ಪಡೆಯುತ್ತಾರೆಂದೂ ಭಾವಿಸುತ್ತಾಳೆ. ಮಾತೃತ್ವದ ಧನಾತ್ಮಕ ಗುಣಗಳೇ ಒಂದು ಸಾಮಾಜಿಕ ನೀತಿಸಂಹಿತೆಯಾಗಿ ಕೆಲವರಿಗೆ ತೋರಿವೆ. ಮಾತೃಸಹಜ

ಚಿಂತನೆ ಒಂದು ಸಾಮಾಜಿಕ ಘಟಕವಾಗಿದ್ದು, ಅದನ್ನು ಪಡೆಯಲು ಎಲ್ಲರೂ ತಾಯಿಯರೋ ಅಥವಾ ತಾಯಿಯಿಂದಲೇ ಪ್ರೋಷಿತರೋ ಆಗಿರಬೇಕಿಲ್ಲ. ಸ್ತ್ರೀವಾದಿ ಪ್ರಜ್ಞೆಯೊಂದಿಗೆ ಸೇರಿ ಈ ಮಾತೃಸಹಜ ಚಿಂತನೆ ಸ್ವತಃ ಸ್ತ್ರೀವಾದಿ ನ್ಯಾಯಸಿದ್ಧಾಂತವಾಗಬಲ್ಲದೆಂದು ಸಾರಾ ರೂಡಿಕ್ಸ್ ಹೇಳುತ್ತಾಳೆ.

ಸ್ತ್ರೀವಿಶಿಷ್ಟವಾದ ಭಾಷೆ :

ಈ ಮಾತೃತ್ವದ ಸಿದ್ಧಾಂತವು ಈಗಿರುವ ಲಿಂಗಪ್ರಭೇದ ವ್ಯವಸ್ಥೆಯಲ್ಲೇ ಸ್ತ್ರೀಸಂಬಂಧಿತ ಮೌಲ್ಯಗಳನ್ನೇ ಬಲಿಷ್ಠಗೊಳಿಸಿ ಇತ್ಯಾತ್ಮಕ ತಾತ್ವಿಕತೆಯನ್ನಾಗಿ ಅದನ್ನು ಬೆಳೆಸಲು ಯತ್ನಿಸುತ್ತದೆ. ಅಂದರೆ ವ್ಯಕ್ತಿನಿಷ್ಠೆ, ಭಾವನಾಪರತೆ, ಅಂತಃಸ್ಫೂರ್ತತೆ, ಲೈಂಗಿಕ ಬಹುರೂಪತೆ, ಐಹಿಕ ಬದುಕಿಗಂಟಿದ ಯೋಚನಾಕ್ರಮ ಮುಂತಾದುವನ್ನು ಸ್ತ್ರೀಚೈತನ್ಯದ ಉನ್ನತ ಸಂವೇದನಾಶೀಲತೆಯ ಲಕ್ಷಣಗಳೆಂದು ಕೆಲವರು ಮುಂದಿಡುತ್ತಾರೆ. ಭೂಮಿ, ಪ್ರಕೃತಿ ಮತ್ತು ಹೆಣ್ಣನ್ನು ಸಮೀಕರಿಸುವ ಸೂಸನ್ ಗ್ರಿಫಿನ್ ಮತ್ತು ಮೇರಿ ಡೇಲಿಯರ ವಾದಗಳು ಬಹು ಆಕರ್ಷಕವಾಗಿವೆ.

ಗಂಡಸರ ಭಾಷೆ, ಪುರುಷರ ಚಿಂತನಾಕ್ರಮಗಳನ್ನು ನಿರಾಕರಿಸುವುದು, ಸ್ತ್ರೀಯರ ಭಾಷೆ ಮತ್ತು ಅವರು ಅರಿವನ್ನು ಗಳಿಸಿಕೊಳ್ಳುವ ಕ್ರಮಗಳು ಪುರುಷರದಕ್ಕಿಂತ ಭಿನ್ನವೆಂದು ಸಾಧಿಸುವುದು ಈ ಸ್ತ್ರೀವಾದಿಗಳ ಬಹುಮುಖ್ಯ ಕಳಕಳಿಯಾಗಿದೆ. ಹೆಣ್ಣಿನ ನುಡಿ, ಮಾತು, 'ಪದ' ಗಂಡಿನ 'ಭಾಷೆ'ಗಿಂತ ಭಿನ್ನ. ಸಾಹಿತ್ಯ ಪಠ್ಯವು ಈ ಭಾಷೆ ಮತ್ತು ಪದಗಳೆರಡರ ನಡುವಿನ ಧ್ವನಿಗಳಲ್ಲಿನ ಸಂವಾದದ ಸಂಯುಕ್ತ ಹಾಗೂ ವಿಸ್ತೃತ ರೂಪವಾಗಿರುತ್ತದೆ. ಭಾಷೆಯ ಧ್ವನಿ ಏಕಾಕಾರದ, ವಸ್ತುನಿಷ್ಠವಾದ, ಅಧಿಕಾರಭಾರವುಳ್ಳ ತಣ್ಣನೆಯ ಧ್ವನಿಯಾಗಿದ್ದರೆ, ಪದಗಳ ಧ್ವನಿಯು ಭಾವನಾತ್ಮಕ, ಪ್ರಾಣಿಸದೃಶ, ಶರೀರ ಗುಣಗಳ ವೈವಿಧ್ಯವನ್ನು ಪಡೆದಿರುತ್ತದೆ. ಇವೆರಡರ ತಾಕಲಾಟದಿಂದಾಗಿ ಪಠ್ಯವೊಂದು ತಾನು ಉದ್ದೇಶಿಸಿರುವುದಕ್ಕಿಂತಲೂ ಹೆಚ್ಚಿನದನ್ನು ಹಾಡುತ್ತಿರುತ್ತದೆಂದು ಗ್ರಿಫಿನ್ ಹೇಳುತ್ತಾಳೆ.

ಮೇರಿ ಡೇಲಿಯಂತೂ ಪುರುಷರೂಪಿತ ಭಾಷೆಯನ್ನೇ ಬಿಟ್ಟು, ಹೆಣ್ತನ ಮತ್ತು ಪ್ರಕೃತಿಯ ನಡುವಿನ ಸಂಬಂಧಕ್ಕೆ ಒತ್ತು ನೀಡಿ ಸ್ತ್ರೀವಿಶಿಷ್ಟ ಭಾಷೆಯೊಂದನ್ನು ಸೃಷ್ಟಿಸುವತ್ತ ಗಾಢವಾದ ಒಲವನ್ನು ತೋರಿದ್ದಾಳೆ. ಜಗತ್ತೆಲ್ಲಾ ತನ್ನದೇ ಸಾಮ್ರಾಜ್ಯವೆಂದು ಆಳುತ್ತಿರುವ ಪಿತೃಪ್ರಧಾನ ವ್ಯವಸ್ಥೆಯು ಇಲ್ಲಿನ ಪದಾರ್ಥಗಳ ಮೂಲಹೆಸರನ್ನು ಮಸುಕುಮಾಡಿ, ಕೃತಕವಾಗಿ ತನ್ನ ಅಂಕಿತವುಳ್ಳ ನಾಮಕರಣ ಮಾಡಿದೆ. ಈ ವಸ್ತುಗಳನ್ನೆಲ್ಲ ಸ್ತ್ರೀದೃಷ್ಟಿಯಿಂದ ಮರುನಾಮಕರಣ ಮಾಡಬೇಕಾಗಿದೆ. ಈ ರೀತಿ ತಮ್ಮದೇ ಆದ ಹೆಸರನ್ನು ಮತ್ತೆ ಸ್ಥಾಪಿಸುವುದೇ ಸ್ತ್ರೀಯರು ಜಗತ್ತಿನ ಮೇಲೆ, ತಮ್ಮ ಮೇಲೆ ಮತ್ತೆ ಸ್ವಾಮ್ಯವನ್ನು ಪಡೆಯುವ ದಾರಿಯೆಂದು ಡೇಲಿ ವಾದಿಸುತ್ತಾಳೆ. ಪ್ರಕೃತಿಗೆ ತೀರ ಹತ್ತಿರವಾದ ಹೆಣ್ಣಿನ ಚಿಂತನೆಯು ಅಂತಃಸ್ಫುರಣೆಯನ್ನೇ ವೈಶಿಷ್ಟ್ಯವಾಗಿ ಹೊಂದಿರುವಂಥದು. ಈ ಗುಣದ ಮೇಲೆ ಗಾಢವಾದ ಹಿಡಿತ ಸಾಧಿಸುವುದು

ಸ್ತ್ರೀವಿಶಿಷ್ಟ ಭಾಷೆಯನ್ನು ನಿರ್ಮಿಸುವ ಸ್ತ್ರೀವಾದಿ ಹೋರಾಟದ ಮುಖ್ಯ ಉದ್ದೇಶವೆಂಬುದು ಡೇಲಿಯ ನಿಲುವು.

ಮಾತೃತ್ವ ಮತ್ತು ಸ್ತ್ರೀತ್ವದ ಪರಿಕಲ್ಪನೆಗಳನ್ನು ಸಶಕ್ತಗೊಳಿಸುವುದರ ಮತ್ತು ಈ ಅಂಶಗಳನ್ನು ಹೊಮ್ಮಿಸುವಂಥ ಭಾಷಾಪ್ರಯೋಗಗಳನ್ನು ಸೃಷ್ಟಿಸುವುದರ ಮೂಲಕ ಸ್ತ್ರೀಸಂಸ್ಕೃತಿಯ ಕಟ್ಟೋಣ ಸಾಧ್ಯವೆಂಬುದರ ಬಗ್ಗೆ ಪಶ್ಚಿಮದಲ್ಲೇ ತೀವ್ರ ವಿರೋಧ ವ್ಯಕ್ತವಾಗಿದೆ. ೧೯೭೮ರ ಒಂದು ಸಂದರ್ಶನದಲ್ಲಿ ಸಿಮೋನ್‌ದ ಬೋವಾ ಫ್ರೆಂಚ್ ತೀವ್ರಗಾಮಿ ಸ್ತ್ರೀವಾದಿಗಳ ವಿಚಾರಗಳಿಗೆ ಹೀಗೆ ಪ್ರತಿಕ್ರಿಯಿಸಿದ್ದಾಳೆ: "...... ಒಂದಿಷ್ಟು ಸ್ತ್ರೀಯರು ಮುಟ್ಟು, ತಾಯ್ತನ-ಮುಂತಾದುವನ್ನೇ ವೈಭವೀಕರಿಸುತ್ತ ಅವುಗಳಲ್ಲಿ ಬೇರೆ ರೀತಿಯ ಬರಹದ ತಳಹದಿಯೊಂದನ್ನು ಕಾಣಬಹುದೆಂದು ನಂಬುತ್ತಾರೆ. ಈ ಬಗ್ಗೆ ನಾನು ಪೂರ್ತಿ ವಿರೋಧಿಸುತ್ತೇನೆ. ಏಕೆಂದರೆ ನನ್ನ ದೃಷ್ಟಿಯಲ್ಲಿ, ಅದು ಪುರುಷರು ರಚಿಸಿದ ಬಲೆಯಲ್ಲೇ ಬೀಳುವಂಥದ್ದಾಗಿದೆ. .... ಅವುಗಳ ಬಗ್ಗೆ ಅತಿರೇಕದ ಆತ್ಮರತಿಯಲ್ಲಿ ಮುಳುಗಿ, ದತ್ತ ಸಂಗತಿಗಳ ತಳಪಾಯದ ಮೇಲೆ ಒಂದು ವ್ಯವಸ್ಥೆಯನ್ನು ಕಟ್ಟಿದಲ್ಲಿ ಅದು ಸ್ತ್ರೀವಿಶಿಷ್ಟ ಬದುಕಿನ ಕ್ರಮವುಳ್ಳ ಸ್ತ್ರೀಸಂಸ್ಕೃತಿ ಆಗಬಲ್ಲದೆಂದು ಹೇಳಲು ಯಾವ ಆಧಾರವೂ ಇಲ್ಲ". (Jessica Benjamin & Lilly Rivlin: The de Beuvoir Challenge: A Crisis in Feminist Policies, Jan 1980, P. 50)

ಸ್ತ್ರೀತ್ವದ ವೈಭವೀಕರಣವು ಈಗಿರುವ ಸಿದ್ಧಮಾದರಿಗಳನ್ನು ಕೆಳಗಿನ ನೆಲೆಯಿಂದ ಮೇಲಕ್ಕೆ ಎತ್ತಿ ಹಿಡಿಯುತ್ತದೆ. ಆದರೆ ಅಷ್ಟು ಮಾತ್ರಕ್ಕೆ ಸ್ತ್ರೀಯರು ಜೀವಸಂರಕ್ಷಣೆಯ ಉದಾತ್ತವಾದ ನೀತಿಯೊಂದನ್ನು ಜಗತ್ತಿಗೆ ಬೋಧಿಸಬಲ್ಲವರು ಎಂದು ಭಾವಿಸುವುದು ಅಸಂಗತವಾಗುತ್ತದೆ. ಸ್ತ್ರೀಯರನ್ನು ಸದಾ ಸಹನಶೀಲರು, ಜೀವದಾಯಿನಿಯರು, ಜೀವಪರರು ಎಂಬುದಾಗಿಯೂ ಪುರುಷರನ್ನು ಜೀವಘಾತಕರು, ಕಟುಕರು, ಯೋಧರು ಎಂದೂ ವರ್ಣಿಸಲಾಗುತ್ತದೆ. ಹಾಗಿದ್ದಾಗ ಸದಾ ಮಕ್ಕಳನ್ನು ಹೆತ್ತು, ಪಾಲಿಸುವ ಪಾತ್ರಗಳಲ್ಲೇ ಮುಳುಗಿರುವ 'ಮಾತೆ'ಯರು ತಮ್ಮ ಮಕ್ಕಳಲ್ಲಿ ತಮ್ಮದೇ ಆದ ಜೀವಪರತೆಯನ್ನು ಕಲಿಸುವುದಕ್ಕೆ ಬದಲಾಗಿ 'ಬಲವಿದ್ದಲ್ಲೇ ನ್ಯಾಯವೂ ಇರುತ್ತದೆಂದು ಏಕೆ ಪೌರುಷವನ್ನು ಬಿತ್ತಲು ಯತ್ನಿಸುತ್ತಾರೆ?' ಎಂದು ಬೆಲ್ ಹುಕ್ಸ್ ಪ್ರಶ್ನಿಸುತ್ತಾಳೆ.

ಸ್ತ್ರೀವಾದಿ ದೃಷ್ಟಿಕೋನ; ಸ್ತ್ರೀವಾದಿ ನಿಲುಬಿಂದು:

ಸ್ತ್ರೀವಾದವು ವಾಸ್ತವ ಬದುಕಿನ ತಾರತಮ್ಯಗಳೇ ಸಾಂಸ್ಕೃತಿಕವಾಗಿ ಸಾಹಿತ್ಯದಲ್ಲೂ ಪ್ರತಿನಿಧೀಕರಣಗೊಳ್ಳುತ್ತವೆಂದು ಗುರುತಿಸಿ, ಸಾಹಿತ್ಯವನ್ನು ಈ ನಿಟ್ಟಿನಿಂದ ವಿಶ್ಲೇಷಿಸಿ, ವಿಮರ್ಶಿಸುವ ಮೂಲಕವಾಗಿ ಪ್ರಜ್ಞಾಜಾಗೃತಿಗೆ ಪ್ರಯತ್ನಿಸುತ್ತದೆ. ಪ್ರಜ್ಞೆ, ಸುಪ್ತಪ್ರಜ್ಞೆಗಳ ಸಂಯುಕ್ತ ಅಭಿವ್ಯಕ್ತಿಯಾದ ಸಾಹಿತ್ಯದ ಭಾಷೆಯೊಳಗೆ ಸ್ತ್ರೀವಿಶಿಷ್ಟ ಲಕ್ಷಣವೊಂದನ್ನು ಸೃಷ್ಟಿಸಿದ್ದಾದರೆ ವಾಸ್ತವ ಬದುಕಿನ ನೆಲೆಯಿಂದ ಸ್ತ್ರೀಯರು ಎತ್ತಿರುವ ತಾರತಮ್ಯಗಳ ಪ್ರಶ್ನೆಗೂ ಉತ್ತರ ಸಿಗಬಹುದೆ?- ಎಂಬುದು ಇಂದಿನ ಸ್ತ್ರೀವಾದಿಗಳನ್ನು ಕಾಡುತ್ತಿರುವ ಪ್ರಶ್ನೆಯಾಗಿದೆ.

ಮಹಿಳೆಯರ ವಿಶಿಷ್ಟ ಅನುಭವಗಳ ತಳಹದಿಯ ಮೇಲೆ ಸ್ವತಂತ್ರ ತಾತ್ವಿಕತೆಯೊಂದನ್ನು ಕಟ್ಟಬೇಕು, ಅ ತಾತ್ವಿಕತೆಯ ಮೂಲಕ ಸ್ತ್ರೀಸಂಸ್ಕೃತಿಯ ನೆಲೆಯನ್ನು ಗುರುತಿಸಿಕೊಳ್ಳಬೇಕು– ಎಂಬ ಆಕಾಂಕ್ಷೆಯಿಂದ ಸ್ತ್ರೀವಾದಿಗಳು ಏಕಾಕಾರದ ತಾತ್ವಿಕ ಮಾದರಿಗಳನ್ನು ನಿರಾಕರಿಸಿ, ಬಹುರೂಪಿ ಸ್ತ್ರೀತ್ವದ ದೃಷ್ಟಿಕೋನಗಳನ್ನು ಸ್ವೀಕರಿಸುವುದುಂಟು. ಮಹಿಳೆಯರ ಅನುಭವವು ತನ್ನಷ್ಟಕ್ಕೆ ಒಂದು ಜ್ಞಾನವಾಗಲಾರದು. ಅವರ ಅನುಭವವನ್ನು ಕ್ರಮಬದ್ಧವಾಗಿಸಿ, ಜ್ಞಾನವನ್ನಾಗಿ ಅದನ್ನು ಪರಿವರ್ತಿಸುವ ವಿಧಾನವೇ 'ಸ್ತ್ರೀವಾದಿ ದೃಷ್ಟಿಕೋನ (Feminist perspective) ಎಂದು ಈ ಚಿಂತಕರು ಪ್ರತಿಪಾದಿಸುತ್ತಾರೆ. ಇದಕ್ಕಿಂತ ಭಿನ್ನವಾದ ಒಂದು ವಿಚಾರ "ಸ್ತ್ರೀವಾದಿ ನಿಲುಬಿಂದು"ವಾದಿಗಳದು.

ಪಿತೃಪ್ರಧಾನ ವ್ಯವಸ್ಥೆಯಡಿಯಲ್ಲಿ ವ್ಯಕ್ತಿಗಳಾಗಿ ತಮ್ಮಷ್ಟಕ್ಕೆ ಮಹಿಳೆಯರು ತಮ್ಮೆಲ್ಲರ ಹಿತಾಸಕ್ತಿಗಾಗಿ ಕಾರ್ಯಪ್ರವೃತ್ತರಾಗುವುದು ಅಸಾಧ್ಯ. ತಮ್ಮ ಅನುಭವದ ಸ್ವರೂಪವೇನು, ತಮ್ಮ ಅಸ್ತಿತ್ವದ ನಿಜಸ್ಥಿತಿ ಏನು– ಎಂಬ ಬಗ್ಗೆ ಅವರಲ್ಲಿ ಅರಿವು ಮೂಡಬೇಕಿದ್ದರೆ ಅದಕ್ಕೆ ಸ್ತ್ರೀವಾದಿ ಪ್ರಜ್ಞೆಯು ಅವಶ್ಯಕ. ಅಂಥ ಪ್ರಜ್ಞೆಯನ್ನು ಜಾಗೃತಗೊಳಿಸಲು ಈವರೆಗೆ ಸ್ತ್ರೀವಾದಿಗಳು ನಡೆಸಿರುವ ಪ್ರಯತ್ನಗಳ ಫಲವಾಗಿಯೇ 'ಮಹಿಳೆ', 'ಮಹಿಳಾ ಅನುಭವ'ಗಳೆಂಬುದಕ್ಕೆ ವಿಶಿಷ್ಟ ಅರ್ಥ ನೀಡುವ ಯತ್ನ ಪ್ರಾರಂಭವಾಗಿದೆ. ತಮ್ಮ ಬಗ್ಗೆ ತಿಳಿದುಕೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರು ಈಚೆಗಷ್ಟೇ ಪಾಲುದಾರರಾಗುತ್ತಿದ್ದಾರೆ. ಇಂಥ ಪ್ರಜ್ಞೆಯು ಸರ್ವವ್ಯಾಪಿಯಾದಾಗ ಮಾತ್ರ ಅವರದೇ ಆದ, ತಾತ್ವಿಕವಾಗಿ ಮಹತ್ವವುಳ್ಳ ಸಿದ್ಧಾಂತವೊಂದು ಹೊಮ್ಮಿಬರಲು ಸಾಧ್ಯ. ಅಲ್ಲಿಯವರೆಗೂ ಈಗಿರುವ ಪಿತೃಪ್ರಧಾನ ತಾತ್ವಿಕತೆ, ಸಾಮಾಜಿಕ ಸಂಸ್ಥೆಗಳು, ಭಾಷೆ, ವ್ಯವಸ್ಥೆಗಳ ಒಳಗೇ ಸ್ತ್ರೀವಾದಿ ತಾತ್ವಿಕತೆಯೂ ಪ್ರಕಟವಾಗುತ್ತಿರುತ್ತದೆ. ಈ ಸ್ತ್ರೀವಾದಿ ತಾತ್ವಿಕತೆ ಹೆಣ್ಣಿನ ಅನುಭವಗಳ ಕೇವಲ ಕಥನವಲ್ಲ. ಆ ಅನುಭವವನ್ನು ನೋಡುವ ಒಂದು ವಿಧಾನ ಅದು. ಹಾಗೆ ನೋಡುವ ಪ್ರಕ್ರಿಯೆಯೇ ಸ್ತ್ರೀವಾದಿ ದೃಷ್ಟಿಕೋನ. ಈ ನೋಡುವ ಪ್ರಕ್ರಿಯೆಯ ಒಳಗಿಂದಲೇ ಸಿದ್ಧವಾಗುವ ನಿಲುವು ಅದು –ಎಂಬುದು 'ಸ್ತ್ರೀವಾದಿ ನಿಲುಬಿಂದು' (Feminist Standpoint) ಪರಿಕಲ್ಪನೆಯನ್ನು ಪ್ರತಿಪಾದಿಸುವವರ ವಿಚಾರ.

ಮಹಿಳಾ ಅನುಭವ, ಮಹಿಳಾ ಕಾಳಜಿಗಳನ್ನು ಅರ್ಥೈಸಲು, ಅದರ ಬಹುಮುಖತೆಯನ್ನು ಸ್ಥಾಪಿಸಲು ಕೆಲವರು ಹೆಣ್ಣಿನ ಬದುಕಿನ ಮತ್ತು ಪರಿಸರದ ಪ್ರತಿಯೊಂದು ವಿವರವನ್ನೂ ಒಂದೇ ರೀತಿ ಮುಖ್ಯವೆಂಬಂತೆ ದಾಖಲಿಸುವುದಕ್ಕೆ ಹೊರಡುತ್ತಾರೆ. ಇದರಿಂದ ಕ್ಷುಲ್ಲಕವಾದದ್ದು ಮತ್ತು ಮಹತ್ವದ್ದು ಎಂಬ ವ್ಯತ್ಯಾಸಗಳು ಅನುಭವಕ್ಕೆ ಇಲ್ಲವಾಗಿ ಈ ಅನುಭವ ಕಥನ ಎಂಬುದು ಕೇವಲ ದೈನಂದಿನ ವಿವರಗಳಲ್ಲೇ ಮುಳುಗುವ ಅಪಾಯವಿರುತ್ತದೆ. ಹಾಗೆಯೇ ಮಹಿಳಾ ಕಾಳಜಿ ಎಂದು ಸಾರ್ವತ್ರೀಕೃತ ಒಂದು ಪರಿಕಲ್ಪನೆಯನ್ನು ಹೇಳಹೊರಟರೆ ಬೇರೆ ಬೇರೆ ಮಹಿಳೆಯರ ಕಾಳಜಿಗಳು ವಿಭಿನ್ನವಾಗಿರಬಹುದು– ಎಂಬುದನ್ನು ಅದು ಗುರುತಿಸದೆ ಹೋಗಬಹುದು. ಕುಟುಂಬ

ವ್ಯವಸ್ಥೆಯಿಂದ ಹೊರಹೋಗಿ ಪಾರಾಗುವುದು ಕೆಲವು ಮಹಿಳೆಯರ ಕಾಳಜಿಯಾಗಿದ್ದರೆ, ಕೌಟುಂಬಿಕ ಮರ್ಯಾದೆಯ ಬದುಕಿಗೆ ತಮಗೂ ಪ್ರವೇಶ ಬೇಕೆಂಬುದು ಬೇರೆ ಕೆಲವು ಮಹಿಳೆಯರ ಕಾಳಜಿ ಆಗಿರಲು ಸಾಧ್ಯ. ಗರ್ಭಪಾತದ ಹಕ್ಕಿಗಾಗಿ ಕೆಲವರು ಆಗ್ರಹಪಡಿಸುವಾಗಲೆ ಬೇರೆ ಕೆಲವರು ಭ್ರೂಣದ ಬದುಕಿನ ಹಕ್ಕಿಗಾಗಿ ಒತ್ತಾಯಿಸುತ್ತಾರೆ. ಹಾಗೆಯೇ ಸ್ತ್ರೀಯರ ಶಾಂತಸ್ವಭಾವ, ಮಾತೃಗುಣಗಳನ್ನು ಎತ್ತಿಹಿಡಿಯುವುದು ಕೆಲವರಿಗೆ ಮುಖ್ಯವಾಗಿದ್ದರೆ, ಮಿಲಿಟರಿ ಕ್ಷೇತ್ರಕ್ಕೆ ಪ್ರವೇಶಿಸಲು, ಯುದ್ಧಗಳಲ್ಲಿ ಪಾಲು ಪಡೆಯಲು ಹಕ್ಕೊತ್ತಾಯಿಸುವವರೂ ಇರುತ್ತಾರೆ. ಆದ್ದರಿಂದ ಸಂತಾನೋತ್ಪಾದನಾ ಮೂಲದ ಸ್ತ್ರೀಸತ್ವದ ಪರಿಕಲ್ಪನೆಯೊಂದನ್ನೇ ಕೇಂದ್ರವಾಗಿ ಇಟ್ಟುಕೊಂಡು, ಬದುಕಿನ ಎಲ್ಲಾ ವಿಭಿನ್ನ ಅನುಭವ, ಸಾಮರ್ಥ್ಯಗಳನ್ನೂ ಅದಕ್ಕೆ ತಂದು ಜೋಡಿಸಿ ವಿವರಿಸುವ ಪ್ರಯತ್ನ ಅಸಂಗತವಾಗುತ್ತದೆ. ಇಂಥ ಯತ್ನವನ್ನು ಬಿಟ್ಟು, ಈಗಿರುವ ವ್ಯವಸ್ಥೆಯಲ್ಲಿ ಸ್ತ್ರೀಪುರುಷರ ನೆಲೆಗಳು ಅಸಮಾನವಾಗಿರುವುದರಿಂದ ಅವರಿಬ್ಬರ ಬದುಕು, ವ್ಯಕ್ತಿತ್ವಗಳು ಕುಂಠಿತವಾಗಿಯೇ ಉಳಿಯುವ ಸಾಮಾಜಿಕ ಸ್ಥಿತಿ ಏರ್ಪಟ್ಟಿದೆ–ಎಂಬುದನ್ನು ಗುರುತಿಸುವುದು ಹೆಚ್ಚು ಉಚಿತವೆನಿಸುತ್ತದೆ. ಈ ಲಿಂಗಪ್ರಭೇಧದ ವಿರುದ್ಧವಾದ ಪ್ರಜ್ಞಾವಂತಿಕೆಯನ್ನು ಮೂಡಿಸುವುದೇ ಸ್ತ್ರೀವಾದದ ವಿಶಾಲ ಕಾಳಜಿಯೆಂದು ಗುರುತಿಸಲ್ಪಡಬೇಕು. ಈ ಪ್ರಜ್ಞಾವಂತಿಕೆ ಸ್ತ್ರೀಯರದಷ್ಟೇ ಅಲ್ಲದೆ ಪುರುಷರಲ್ಲಿಯೂ ಎಚ್ಚರಗೊಳ್ಳಬೇಕಿದೆ. ಆದ್ದರಿಂದ ಸ್ತ್ರೀಪುರುಷರಿಬ್ಬರಿಗೂ ಸಮಾನವಾಗಿ ತಮ್ಮ ವ್ಯಕ್ತಿತ್ವದ ಸಮಗ್ರತೆಗೇರುವ ಅವಕಾಶ ಬೇಕೆನ್ನುವ ಈ ವಿಶಾಲ ಕಾಳಜಿಯು ಸ್ತ್ರೀಪುರುಷರಿಬ್ಬರದೂ ಆಗಬೇಕು.

ಈ ಬದಲಾವಣೆ ಆಗಬೇಕಾದರೆ ಸ್ತ್ರೀಪುರುಷರ ರೂಢಿಗತ ಬದುಕಿನ ಪಾತ್ರಗಳು ಬದಲಾಗಿ, ಹೊಸ ಪಾತ್ರಗಳು ಸಾಧ್ಯವಾಗಬೇಕು. ಈ ಹೊಸ ಪಾತ್ರಗಳಲ್ಲಿ ಬದುಕುವ, ಅವುಗಳನ್ನು ಅನುಭವಿಸುವ ಕ್ರಿಯೆಯ ಮೂಲಕ ಜೀವನದ ಹೊಸ ಸಾಧ್ಯತೆಗಳ ಚಿಂತನೆ ನಡೆಯಬೇಕಾಗಿದೆ. ಇವತ್ತಿನ ಸ್ಥಿತಿಯಲ್ಲಿ ಸ್ತ್ರೀಯರ ವ್ಯಕ್ತಿತ್ವ, ಚಿಂತನಾಕ್ರಮಗಳು ಪುರುಷರದಕ್ಕಿಂತ ಬೇರೆಯದಾಗಿ ಕಾಣುತ್ತಿದ್ದರೆ, ಆ ಭಿನ್ನತೆಗೆ ಪಿತೃಪ್ರಧಾನ ಲಿಂಗಪ್ರಭೇದ ವ್ಯವಸ್ಥೆ ಮತ್ತು ಅದರ ತಾತ್ವಿಕತೆಗಳೇ ಮೂಲಕಾರಣ. ಇಂಥ ಭಿನ್ನತೆ ಸಂಸ್ಕೃತಿಯೇ ಸೃಷ್ಟಿಸಿದ್ದೆಂದು ತಿಳಿದುಕೊಳ್ಳದೆ ಹೆಣ್ಣಿಗೆ ಇದು ಜನ್ಮಸಿದ್ಧವಾದದ್ದೆಂದು ಹೇಳುವುದರಿಂದ ಸ್ತ್ರೀಯರನ್ನೂ ಪುರುಷರನ್ನೂ ಯಥಾಸ್ಥಿತಿಗಳಲ್ಲೇ ಉಳಿಸಿಡಲು ಬಯಸುವ ಹಿತಾಸಕ್ತಿಗಳಿಗೇ ಒತ್ತಾಸೆ ನೀಡಿದಂತಾಗುತ್ತದೆ–ಎಂಬ ಅರಿವು ನಮ್ಮನ್ನು ಎಚ್ಚರಿಸಬೇಕು. ಸ್ವಂತಿಕೆಯ ಸೃಜನಶೀಲ ಹುಡುಕಾಟವಾಗಿ ಮಹಿಳೆ ತನ್ನೊಳಗಿನ ಅನುಭವದ್ರವ್ಯವನ್ನೇ ಶೋಧಿಸಿ ಹೊಸ ಭಾಷೆಯಲ್ಲಿ ಹಿಡಿದಿಡಲು ಖಾಸಗಿಯಾಗಿ ಯತ್ನಿಸುವುದು ಬೇರೆ. ಈ ಪ್ರಕ್ರಿಯೆಯನ್ನು ಎಲ್ಲ ಮಹಿಳೆಯರಿಗೂ ವಿಸ್ತರಿಸಬಹುದಾದ ಸಿದ್ಧಾಂತವೆಂಬಂತೆ ಹೇಳಲು ಯತ್ನಿಸುವುದು ಬೇರೆ. ಲಿಂಗಾಧರಿತ ತಾರತಮ್ಯವನ್ನುಳ್ಳ ಪ್ರತ್ಯೇಕತೆಗಳು ಎಲ್ಲಿಯವರೆಗೆ ಎತ್ತಿಹಿಡಿಯಲ್ಪಡುತ್ತವೆಯೋ ಅಲ್ಲಿಯವರೆಗೆ ಸ್ತ್ರೀವಿಮೋಚನೆಯ ಪ್ರಶ್ನೆ ಹಾಗೆಯೇ ಉಳಿಯುತ್ತದೆ.

ಈ ಪ್ರತ್ಯೇಕೀಕರಣದಲ್ಲಿಯೇ ಸ್ತ್ರೀಪುರುಷ ಸಂಬಂಧಗಳು ಶ್ರೇಣೀಕರಣದ, ಯಾಜಮಾನ್ಯದ, ಅಧಿಕಾರ ಸಂಬಂಧಗಳಾಗಿರುವುದನ್ನು ರಾಚನಿಕೋತ್ತರ ತಾತ್ವಿಕ ಚಿಂತನಾಕಾರರು ಗುರುತಿಸುತ್ತಾರೆ. ಅವರ ವಿಚಾರಗಳನ್ನು ಆಧರಿಸಿ ಸ್ತ್ರೀವಾದಿಗಳು 'ಅಧಿಕಾರ' ಎಂಬುದಕ್ಕೆ ಪರ್ಯಾಯಗಳನ್ನು ಹುಡುಕುತ್ತಿದ್ದಾರೆ.

ಅಧಿಕಾರದ ಮರುವ್ಯಾಖ್ಯಾನ ಮತ್ತು ಮಹಿಳಾ ಸಬಲೀಕರಣ :

ಪಿತೃಪ್ರಧಾನ ಚಿಂತನೆಯ ಅಧಿಕಾರ (Power) ಎಂಬುದನ್ನು 'ಆಳುವಿಕೆ' ಎಂಬುದಾಗಿ ಅರ್ಥೈಸುತ್ತ ಬಂದಿದೆ. ಸ್ಪರ್ಧೆ, ಆಳುವ ಗುಣಗಳು ಮಾನವರ ಅವಶ್ಯಕತೆಗಳೆಂದು ಅದು ಸಾರುತ್ತದೆ. ಒಬ್ಬ ವ್ಯಕ್ತಿ ಹಲವರ ಮೇಲೆ ಅಧಿಕಾರ ಹೊಂದಿರುವುದನ್ನು ಪ್ರತಿಪಾದಿಸುವ ಈ ಪರಿಕಲ್ಪನೆಯು ಸಹಕಾರದ ವರ್ತನೆ, ಸಾಮೂಹಿಕ ವರ್ತನೆಗಳನ್ನೂ ಒಳಗೊಂಡ ಪರ್ಯಾಯ ಸಾಧ್ಯತೆಗಳನ್ನು ವಿವರಿಸಲು ಅಸಮರ್ಥವಾಗಿರುತ್ತದೆ. ಈ ಪಿತೃಪ್ರಧಾನ ಸಂಸ್ಕೃತಿಯೊಳಗೆ ಅಧೀನ ಸಾಂಸ್ಕೃತಿಕ ನೆಲೆಯನ್ನು ಹೊಂದಿರುವ ಮಹಿಳೆಯರು 'ಅಧಿಕಾರ' ಎಂಬುದನ್ನು ಪುರುಷರಂತೆ ಸ್ಪರ್ಧೆ, ಆಳುವಿಕೆಗಳಂತೆ ಗ್ರಹಿಸುವುದಿಲ್ಲ. ಬದಲಾಗಿ ತಮ್ಮೊಳಗಿನ ಶಕ್ತಿ, ಸಾಮರ್ಥ್ಯ, ಏನನ್ನಾದರೂ ಮಾಡಬಲ್ಲ ದಕ್ಷತೆಯರೂಪದಲ್ಲಿ ಅವರು ಅದನ್ನು ಭಾವಿಸುತ್ತಾರೆ. ನ್ಯಾನ್ಸಿ ಹಾರ್ಟ್‌ಸ್ಯಾಕ್, ಮಹಿಳೆಯರು ಅಧಿಕಾರವನ್ನು ಅರ್ಥೈಸಿಕೊಳ್ಳುವ ಬಗೆಯನ್ನು ಸಶಕ್ತೀಕರಣ/ಸಬಲೀಕರಣ (Empowerment) ಎಂದು ಕರೆದಿದ್ದಾಳೆ. ಪುರುಷರ 'ಅಧಿಕಾರ' ಪರಿಕಲ್ಪನೆ ಸಮೂಹದ ಮೇಲಿನ ಸ್ವಾಮ್ಯವನ್ನು ಸೂಚಿಸುವಂತಿದ್ದು, ಅವರ ಬಯಕೆಗಳ ಆಕೃತಿಯೇ ಅದಾಗಿದ್ದು, ಅದರ ತಳಹದಿಯಲ್ಲಿ ಅತ್ಯಾಚಾರ, ಲೈಂಗಿಕ ಕೊಲೆ, ಅಶ್ಲೀಲ ಸಂಸ್ಕೃತಿ ಹುದುಗಿರುತ್ತದೆ. ತದ್ವಿರುದ್ಧವಾಗಿ ಮಹಿಳೆಯರು ಶಕ್ತಿ, ಸಾಮರ್ಥ್ಯ, ಅಂತಶ್ಶಕ್ತಿಗಳಲ್ಲಿ, ದಕ್ಷತೆಯಲ್ಲಿ ತಮ್ಮ ಅಧಿಕಾರವನ್ನು ಕಂಡುಕೊಳ್ಳುತ್ತಾರೆಂದು ಹಾರ್ಟ್‌ಸ್ಯಾಕ್ ವಾದಿಸುತ್ತಾಳೆ.

ಆದರೆ ಈ ದೃಷ್ಟಿ ಕೂಡ ಲಿಂಗಪ್ರಬೇಧಿತ ಸ್ತ್ರೀತ್ವ/ಪುರುಷತ್ವ ಘಟಕಗಳಿಂದಲೇ ಪ್ರೇರಿತವಾದದ್ದು. ಏಕೆಂದರೆ ಆಳುವ ಭಾವನೆಯಾಗಲಿ, ದಕ್ಷತೆ, ಅಂತಶ್ಶಕ್ತಿಗಳಾಗಲಿ ಸ್ತ್ರೀ ಇಲ್ಲವೆ ಪುರುಷನಲ್ಲಿ ಮಾತ್ರವೇ ಇರಬೇಕೆಂದಿಲ್ಲ. ಅರ್ಥಾತ್ ಅಧಿಕಾರ ರಚನೆಯು ಒಂದೇ ಲಿಂಗಪ್ರಭೇದಕ್ಕೆ ಬೆಸೆದುಕೊಂಡಿರುವುದಿಲ್ಲ. ಅಧಿಕಾರ, ಆಳುವಿಕೆ, ಕೊನೆಗೆ ಶ್ರೇಣೀಕರಣ ಕೂಡ ಎಲ್ಲಾ ಸಂದರ್ಭದಲ್ಲೂ ಕೆಡುಕಿನದೇ ಆಗಿರಬೇಕಿಲ್ಲ. ಅಧಿಕಾರ ಮತ್ತು ಅಂತಃಶ್ಶಕ್ತಿಗಳು ಯಾರಲ್ಲಾದರೂ ಇರಬಹುದಾದ, ಬದಲಾಗಬಹುದಾದ ಚಲನಶೀಲ ಆಚರಣೆಗಳು ಎಂದಾದರೆ ಹೆಣ್ತನದ ನಿರ್ವಚನದಲ್ಲಿ ಪೂರ್ಣವಾಗಿ ಅಧಿಕಾರದ ಗೈರುಹಾಜರಿಯನ್ನು ಹೇಳುವುದೂ, ಅಧಿಕಾರವೇ ತಿರಸ್ಕಾರವೆಂದು ವಾದಿಸುವುದೂ ಪ್ರಶ್ನಾರ್ಹವೆನಿಸುತ್ತವೆ. ಮಕ್ಕಳ ಮೇಲೆ ತಾಯಿಯು ಹೊಂದಿರುವ (ಅಧಿಕೃತತೆ)ಗಳು ಯಾವ ಸಾಮಾಜಿಕ ನಿರ್ಬಂಧಗಳಿದ್ದರೂ ತಮ್ಮಷ್ಟಕ್ಕೆ ಪ್ರಬಲವಾದ ಸ್ಥಾನಗಳೇ ಆಗಿರುತ್ತವೆ. ಮಹಿಳೆಯರ ಸಶಕ್ತೀಕರಣಕ್ಕೆ ಆದಿಮಾತೆಯ ಪ್ರತೀಕವು ಮಾದರಿಯಾಗಿ ಕಾಣುವುದು ಈ ಕಾರಣಕ್ಕಾಗಿಯೇ.

ಮಿಶೆಲ್ ಫುಕೋ ಪ್ರತಿಪಾದಿಸಿದ 'ಅಧಿಕಾರ ಸಿದ್ಧಾಂತ'ವನ್ನು ಅವಲಂಬಿಸಿ, ಸಮಕಾಲೀನ ಸ್ತ್ರೀವಾದಿಗಳು ಅಧಿಕಾರವನ್ನು ಪ್ರತಿಭಟಿಸುವ ಹಾಗೂ ಸ್ವಾತಂತ್ರ್ಯವನ್ನು ಹೆಚ್ಚಿಸುವ ವಿಧಾನಗಳಿಗಾಗಿ ಶೋಧನೆ ನಡೆಸುತ್ತಿದ್ದಾರೆ. ಸತ್ಯವೆಂಬುದು ಅಧಿಕಾರದ ಹೊರಗಿರುವುದಿಲ್ಲ. ಅದು ಈ ಜಗತ್ತಿನ ಒಳಗೇ ಅಧಿಕಾರ ವ್ಯವಸ್ಥೆಯ ಚೌಕಟ್ಟಿನ ಒಳಗೇ ಅನೇಕ ಬಗೆಯ ನಿರ್ಬಂಧಗಳ ಮೂಲಕ ಉತ್ಪಾದಿತವಾಗುತ್ತದೆ. ಅಧಿಕಾರದ ಕ್ರಮಬದ್ಧ ಪರಿಣಾಮಗಳು ಈ 'ಸತ್ಯ'ದೊಳಗೂ ಸೇರಿರುತ್ತವೆ. ಸತ್ಯವನ್ನು ತಲುಪಲು ನ್ಯಾಯಕ್ಕೆ ಮೊರೆಹೋಗುವುದಾಗಲಿ, ಮತ್ತೊಂದನ್ನು ನಂಬುವುದಾಗಲಿ ಸಾಧ್ಯವಿಲ್ಲ. ಏಕೆಂದರೆ ಅದೂ ಅಧಿಕಾರ ಸಂಬಂಧಗಳಲ್ಲೇ ತನ್ನ ಅಸ್ತಿತ್ವ ಪಡೆದಿರುತ್ತದೆ. ಆದ್ದರಿಂದ ಸ್ವಾತಂತ್ರ್ಯ ಎಂಬುದು ಯಾವುದೇ ಅಂಕಿತ, ಗುರುತುಗಳನ್ನೂ ಹೊಂದದೇ ಇರುವುದೇ ಆಗಿದೆ. ಘಟಕವಾಗುವುದರ ವಿರುದ್ಧವಾದ ಪ್ರತಿಭಟನೆಯೇ ಸ್ವಾತಂತ್ರ್ಯ ಎನ್ನುತ್ತಾನೆ ಫುಕೋ.

ಝಾಕ್ ದೆರ್ರಿದನ ಪ್ರಕಾರ ಅಧಿಕಾರದ ವ್ಯಾಪ್ತಿ ಒಬ್ಬ ಹಲವರನ್ನು ಆಳುವಷ್ಟಕ್ಕೆ ಸೀಮಿತವಲ್ಲ. ತಾನೊಬ್ಬನೇ ಕೇಂದ್ರವಾಗಿ ಇತರರನ್ನು ನಿಯಂತ್ರಿಸುವ ಬಯಕೆಯೇ ಅಧಿಕಾರ ಪ್ರವೃತ್ತಿ. ಈ ಪ್ರವೃತ್ತಿ ತನಗಿಂತ ಭಿನ್ನವಾದುದನ್ನೆಲ್ಲ ಕಳಪೆಯೆಂದು ತಿರಸ್ಕರಿಸುತ್ತಿರುತ್ತದೆ. ಅಧಿಕಾರ, ಶ್ರೇಣೀಕರಣ, ವೈಚಾರಿಕತೆ ಮತ್ತು ಸತ್ಯಗಳು ಏಕಾಕಾರದ ಅಧಿಕಾರ ಸಂರಚನೆಗಳನ್ನು ಸೃಷ್ಟಿಸುತ್ತ ತನ್ನನ್ನೇ/ತಾನೊಂದೇ ಸತ್ಯವೆಂದೂ, ವಾಸ್ತವವೆಂದೂ ಸ್ಥಾಪಿಸಿಕೊಳ್ಳುತ್ತದೆ. ಈ ಏಕಾಕೃತಿಯ ಸತ್ಯದೃಷ್ಟಿಯಲ್ಲಿ ಬದಿಗೆ ಒತ್ತರಿಸಲ್ಪಡುವ, ದಮನಗೊಳ್ಳುವ ಇತರ ಎಲ್ಲ ಚರ್ಚೆಗಳೂ ಇದರಷ್ಟೇ ನಿಜವಾಗಿರುತ್ತವೆಂಬುದು ದೆರಿದ್ರನ ಮತ.

ಈ ಇಬ್ಬರ ತಾತ್ವಿಕ ಚಿಂತನೆಗಳನ್ನು ಬಳಸಿಕೊಳ್ಳುವ ಸ್ತ್ರೀವಾದಿಗಳು ಮಹಿಳೆ ಏನು? ಏನಾಗಿದ್ದಾಳೆ? ಅವಳ ಜ್ಞಾನದ ಸ್ವರೂಪವೇನು?– ಮುಂತಾದ ಪ್ರಶ್ನೆಗಳು ಕೇವಲ ಶೋಷಕ ರೀತಿಯವು; ಪಿತೃಪ್ರಧಾನ ವ್ಯವಸ್ಥೆಯು ಕಲ್ಪಿಸಿರುವ "ಮಹಿಳೆ" ಎಂಬ ತಾತ್ವಿಕ ಘಟಕಕ್ಕೆ ಆ ವ್ಯವಸ್ಥೆಯಾಚೆಗೆ ಯಾವ ಅರ್ಥವೂ ಇಲ್ಲ– ಎಂದು ಭಾವಿಸುತ್ತಾರೆ. ಆದ್ದರಿಂದ ಭಾಷೆ, ಶಬ್ದಗಳ ಲೋಕದಲ್ಲಿನ ರೂಪಕ, ಸಂಕೇತಗಳ ಅರ್ಥಗಳ ಕಟ್ಟುಕಳಚುವುದು, ಸ್ತ್ರೀತ್ವ/ಪುರುಷತ್ವಗಳ ಸಾಂಕೇತಿಕತೆಗಳನ್ನು ಚರ್ಚಿಸುವುದು ಈ ರಾಚನಿಕೋತ್ತರ ಸ್ತ್ರೀವಾದಿಗಳ ಮುಖ್ಯ ಕಾಳಜಿಗಳಾಗಿವೆ.

ಲಿಂಗಪ್ರಭೇದ ಶ್ರೇಣೀಕರಣವೆಂಬುದು ಯಜಮಾನಿಕೆಯು ತನ್ನನ್ನು ಚಲಾವಣೆಗೆ ತಂದುಕೊಳ್ಳುವ ವಿಧಾನಗಳಲ್ಲೊಂದು. ಈ ಶ್ರೇಣಿಯ ಮೇಲಿರುವ ಪುರುಷರು ಜ್ಞಾನದ ಎಲ್ಲಾ ಅಧಿಕಾರ ತಮ್ಮದೇ ಎಂದು ನಿರ್ವಚಿಸಿಕೊಳ್ಳುವುದು ಸಾಧ್ಯ. ಈ ಶ್ರೇಣಿಯ ಕೆಳಗಿನ ನೆಲೆಯಲ್ಲಿರುವ ಮಹಿಳೆಯರು ಇತರ ಶೋಷಿತರೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವುದರಿಂದ ಅವರ ಸ್ವತಂತ್ರ ನೆಲೆಯೇನೂ ಸಿದ್ಧವಾಗದು. ಬದಲಾಗಿ ಅಂತಹ ಎಲ್ಲಾ ಗುರುತು/ಅಂಕಿಗಳನ್ನೂ ಪ್ರತಿಭಟಿಸುವುದರಲ್ಲೇ ಅವರ ಸ್ವಾತಂತ್ರ್ಯವಿದೆ. ಗುಂಪು ಗುರುತುಗಳೇನೇ ಆಗಿದ್ದರೂ ಅವೆಲ್ಲವೂ ಒಂದಲ್ಲ ಒಂದು ಶ್ರೇಣೀಕರಣಗಳಿಂದಲೇ ಹುಟ್ಟಿರುತ್ತವೆ. ಅಂಥ ಶ್ರೇಣೀಕರಣವನ್ನು

ವಿರೋಧಿಸಲೆಂದು ಪರ್ಯಾಯ ಗುಂಪುಗುರುತುಗಳನ್ನು ಸೃಷ್ಟಿಸುವುದು ಮೂಲದ ಶ್ರೇಣೀಕರಣದ್ದೇ ಮರುಸೃಷ್ಟಿಯಾಗಿರುತ್ತದೆ. ಆದ್ದರಿಂದ ಶೋಷಕ ವ್ಯವಸ್ಥೆಯು ನೀಡುವ ಗುರುತನ್ನು ವಿರೋಧಿಸಲು ಶೋಷಿತರ ಗುಂಪಿನಲ್ಲಿ ಗುರುತಿಸಿಕೊಳ್ಳುವ ರಾಜಕೀಯ ಕೇವಲ ಅಧಿಕಾರ ಗಳಿಕೆಯ ರಾಜಕಾರಣವಾಗಿ ಯಶಸ್ವಿಯಾಗಬಹುದು. ಆದರೆ ಅದು ಸ್ವಾತಂತ್ರ್ಯದ ಕಡೆಗೆ ಒಯ್ಯಲಾರದು ಎನ್ನುವ ಈ ಸ್ತ್ರೀವಾದಿಗಳು ಆಲ್ತೂಸರ್, ಗ್ರಾಮ್‌ಷಿ ಹಾಗೂ ರೋಲಾನ್ ಬಾರ್ತ್‌ರ ವಿಚಾರಗಳಿಂದ ಪ್ರಭಾವಿತರಾಗಿದ್ದಾರೆ. ಈ ಮೂವರ ಒಟ್ಟು ವಿಚಾರಗಳಲ್ಲಿ ಸ್ತ್ರೀವಾದಕ್ಕೆ ಉಪಯುಕ್ತವಾಗಿ ಕಂಡಿರುವಂಥವನ್ನು ಹೀಗೆ ಸಂಕ್ಷೇಪಿಸಬಹುದು:

೧. ಪಿತೃಪ್ರಧಾನ ವ್ಯವಸ್ಥೆಯ ಪುರುಷಾಧಿಕಾರದ ತಾತ್ವಿಕತೆಯು ಅಪ್ರಜ್ಞಾಪೂರ್ವಕ ನೆಲೆಯಲ್ಲಿದ್ದು ಪ್ರತಿನಿಧೀಕರಣದ ಮೂಲಕ ಅದು ಜನರ ಮೇಲೆ ಹೇರಲ್ಪಡುತ್ತದೆ. ಜನರಲ್ಲಿ ರೂಢಿಗತವಾಗಿ, ಧಾರ್ಮಿಕ ಆಚರಣೆಗಳು, ವಿಧ್ಯುಕ್ತ ಕ್ರಿಯೆಗಳ ಮೂಲಕ ಅದು ಸಾಂಸ್ಕೃತಿಕವಾಗಿ ಪುನರುತ್ಪಾದಿತವಾಗುತ್ತಿರುತ್ತದೆ. ಈ ಯಜಮಾನಿಕೆಯದೇ ಒಂದು ಅಂಗ ಲಿಂಗಪ್ರಭೇದ. ಅದು ಗಂಡು/ಹೆಣ್ಣು ಸ್ವಭಾವಗಳೆಂದು ಜನರನ್ನು ವಿಭಜಿಸಿ ಶ್ರೇಣೀಕರಿಸುತ್ತದೆ. ತಾನು ರೂಪಿಸಿರುವ ನಿಯಮಗಳು, ದಂಡನೆಗಳ ಮೂಲಕ ವ್ಯವಸ್ಥೆಯ ಎಲ್ಲಾ ಸ್ತರಗಳೊಳಗೂ ಈ ಯಜಮಾನಿಕೆಯು ತನ್ನನ್ನು ಬಲಪಡಿಸಿಕೊಳ್ಳುತ್ತಿರುತ್ತದೆ ಎಂದು ಆಲ್ತೂಸರ್ ಪ್ರತಿಪಾದಿಸುತ್ತಾನೆ.

೨. ಆಂಟೋನಿಯೋ ಗ್ರಾಮ್‌ಷಿ ಪ್ರಕಾರ ಲಿಂಗಪ್ರಭೇದದ ಅಧಿಕಾರ ಮತ್ತು ತಾತ್ವಿಕತೆಗಳು ಯಾಜಮಾನ್ಯದ ಸ್ವರೂಪದ್ದಾಗಿದ್ದು ಅದು ಸಮಗ್ರವಾಗಿ ವ್ಯಕ್ತಿಗಳನ್ನು ನಿಯಂತ್ರಿಸುವುದರಿಂದ ಜನರು ಅದನ್ನೇ ಸಹಜವೆಂದು ತಿಳಿಯುವಂತೆ ಆಗಿರುತ್ತದೆ. ಹಾಗಾಗಿ ಗಂಡು–ಹೆಣ್ಣುಗಳನ್ನು ಎರಡು ಪ್ರತ್ಯೇಕ ವಿಭಾಗಗಳಾಗಿಸಿ ಬೆಲೆಕಟ್ಟುವ ಜೀವನಕ್ರಮವನ್ನು ಸಹಜವೆಂದೇ ತಿಳಿಯಲಾಗುತ್ತದೆ ಎನ್ನುತ್ತಾನೆ ಗ್ರಾಮ್‌ಷಿ.

೩. ಲಿಂಗಪ್ರಭೇದವು ಪಿತೃಪ್ರಧಾನ ತಾತ್ವಿಕತೆಗೆ ಅರ್ಥನೀಡುವ ಒಂದು ಮಿಥ್ ಎಂದು ರೋಲಾನ್ ಬಾರ್ತ್ ಹೇಳುತ್ತಾನೆ. ಈ ಮಿಥ್ ಭಾಷೆಯದೆ ಒಂದು ವಿಧಾನವಾಗಿದ್ದು, ಅದು ಚಾರಿತ್ರಿಕ ಸಂದರ್ಭವೊಂದರಿಂದ ಅದರ ಅರ್ಥವನ್ನು ಬೇರೆ ಮಾಡಿ, ಆ ಅರ್ಥವೇ ಶಾಶ್ವತ ನಿಜವೋ ಎಂಬಂತೆ ತೋರಿಸುತ್ತಿರುತ್ತದೆ. ಮರುಕಳಿಕೆಯ ಮೂಲಕ ಈ ಮಿಥ್ ಗಟ್ಟಿಯಾಗುತ್ತಾ ಹೋಗುವುದರಿಂದ ಜನರಿಗೆ ಅದು ಚರಿತ್ರೆ, ರಾಜಕೀಯಗಳಿಗೆ ಅತೀತವಾದ, ತನ್ನಿಂದ ತಾನೇ ಉದ್ಭವಿಸಿದ ಸತ್ಯವೆಂಬಂತೆ ತೋರುತ್ತದೆ. ಈ ಪುರಾಣದ ಸಂಕೇತಾರ್ಥವನ್ನು ಒಡೆಯುವುದೆಂದರೆ ಅದು ಸಾಮಾಜಿಕ ಮೂಲದಿಂದ ಹುಟ್ಟಿದ್ದು ಎಂಬುದನ್ನು ತೋರಿಸಿಕೊಡುವುದೇ ಆಗಿದೆ– ಎಂದು ಬಾರ್ತ್ ಸೂಚಿಸುತ್ತಾನೆ.

ಈ ವಿಚಾರಗಳನ್ನು ಅಳವಡಿಸಿಕೊಳ್ಳುವ ಸ್ತ್ರೀವಾದಿಗಳು ಲಿಂಗಪ್ರಭೇದದ ಈ ಸಂರಚನೆಯನ್ನು ಒಡೆಯಲು ಭಾಷೆಯ ನೆಲೆಯಲ್ಲಿ ಜಿಜ್ಞಾಸೆ ನಡೆಸುತ್ತಾರೆ. ಆದರೆ ಸ್ತ್ರೀತ್ವ/

ಪುರುಷತ್ವದ ಈ ಮೌಲ್ಯ ರಚನೆಗಳು ಎಲ್ಲಾ ವರ್ಗ, ಜನಾಂಗಗಳಿಗೆ ಒಂದೇ ರೀತಿ ಇರುತ್ತವೆಂದು ಭಾವಿಸುವುದು ತಪ್ಪು. ಪುರುಷರೆಲ್ಲರೂ ಎಲ್ಲಾ ಕಾಲಗಳಲ್ಲೂ ಎಲ್ಲಾ ಸ್ತ್ರೀಯರನ್ನು ಆಳುತ್ತಿರುತ್ತಾರೆಂಬುದು ಅಸಂಭವ. ಪುರುಷಕೇಂದ್ರಿತವಲ್ಲದ ಚಿಂತನೆಯು ಯಜಮಾನ ತಾತ್ವಿಕತೆಗೆ ಭಿನ್ನ ಸ್ತರಗಳಲ್ಲಿ ಸಮಸ್ಯೆಯನ್ನು ಒಡ್ಡುವಂತಾದಾಗ, ಈ ಚಿಂತಕರು ಹೇಳುವ ಯಜಮಾನಿಕೆ ಮತ್ತು ಅಧಿಕಾರದ ಸ್ವರೂಪಗಳೂ ಬೇರೆಯಾಗಬೇಕಾಗುತ್ತದೆ. ಉದಾಹರಣೆಗೆ, ಮಾತೃಪ್ರಧಾನ ತಾತ್ವಿಕತೆಯ ಅಂಶಗಳು ಭಾರತದ ಮುಖ್ಯ ತಾತ್ವಿಕ ವಾಹಿನಿಯೊಳಗೂ, ಕೆಳಸ್ತರದ ಜಾತಿ, ವರ್ಗ, ಬುಡಕಟ್ಟುಗಳ ಸಾಮಾಜಿಕ, ಧಾರ್ಮಿಕ, ಜಾನಪದ ಆಚರಣೆಗಳ ಒಳಗೂ ಬೇರೆ ಬೇರೆ ರೀತಿಗಳಲ್ಲಿ ಕೆಲಸ ಮಾಡುತ್ತಿದ್ದು, ಪಿತೃಪ್ರಧಾನ ತಾತ್ವಿಕತೆಯೊಂದೇ ತನ್ನ ನಿರಂಕುಶಾಧಿಕಾರವನ್ನು ಸ್ಥಾಪಿಸಗೊಡದಂತೆ ಸಮಸ್ಯಾತ್ಮಕವಾಗಿ ಉಳಿದು ಬರುತ್ತಿವೆ. ಆದ್ದರಿಂದ ದೇಶೀಯ ಬಹುಸಾಂಸ್ಕೃತಿಕ ನೆಲೆಯನ್ನು ಲೆಕ್ಕದಲ್ಲಿಟ್ಟುಕೊಂಡೇ 'ಸ್ತ್ರೀ ಅಧೀನತೆಯ ಸಾರ್ವತ್ರಿಕತೆ'ಯ ವಿಚಾರವನ್ನು ಪರಿಶೀಲಿಸಬೇಕಾಗುತ್ತದೆ.

○

೫. ಕನ್ನಡ(ಕರ್ನಾಟಕ)ದ ಸಂದರ್ಭ ಮತ್ತು ಸ್ತ್ರೀವಾದಿ ತಾತ್ವಿಕತೆ

ಪಾಶ್ಚಾತ್ಯ ಸ್ತ್ರೀವಾದದ ಸಿದ್ಧಾಂತಗಳಿಗೆ ತಳಹದಿಯನ್ನು ಒದಗಿಸಿರುವ ಎರಡು ಪ್ರಮುಖ ಸಾಂಸ್ಕೃತಿಕ ಲಕ್ಷಣಗಳೆಂದರೆ ೧. ಪಿತೃಪ್ರಧಾನ್ಯವೇ ಪರಮಾಧಿಕಾರ ಹೊಂದಿರುವ ತಾತ್ವಿಕ ಚಿಂತನೆ ಮತ್ತು ೨. ಬಹು ಉನ್ನತ ರಾಜಕೀಯ ಆದರ್ಶವಾಗಿ ಆ ದೇಶಗಳು ಎತ್ತಿಹಿಡಿದಿರುವ ವ್ಯಕ್ತಿಸ್ವಾತಂತ್ರ್ಯದ ಪರಿಕಲ್ಪನೆ. ಭಾರತದಲ್ಲಾಗಲೀ ಕರ್ನಾಟಕದಲ್ಲಾಗಲೀ, ಸ್ತ್ರೀವಾದಕ್ಕೆ ಮುಖ್ಯವಾಗಿ ಎದುರಾಗುವ ಸಮಸ್ಯೆಗಳೂ ಈ ಎರಡು ಲಕ್ಷಣಗಳಿಗೆ ಸಂಬಂಧಿಸಿವೆ. ನಮ್ಮ ನಾಡಿನ ಬಹುಸಾಂಸ್ಕೃತಿಕ ಪರಿಸರವು ಏಕಾಕಾರದ ಪಿತೃಪ್ರಧಾನ್ಯದ ಸಂರಚನೆಗಳನ್ನು ಕೆಲಮಟ್ಟಿಗೆ ಮಸುಕುಗೊಳಿಸುವಂತಿದೆ. ಇನ್ನು ವ್ಯಕ್ತಿಯ ವೈಯಕ್ತಿಕ ಸ್ವಾತಂತ್ರ್ಯ ಪರಿಕಲ್ಪನೆ ವಸಾಹತು ಅನುಭವದ ಫಲವಾಗಿ ನಮ್ಮ ನಾಡಿನೊಳಕ್ಕೆ ಬಂದರೂ, ಇಂದಿಗೂ ದೇಶದ ಬಹುಸಂಖ್ಯಾತ ಜನಕ್ಕೆ ಅಪರಿಚಿತವೇ ಆಗಿರುವ ವಿಚಾರವಾಗಿದೆ. ವ್ಯಕ್ತಿಸ್ವಾತಂತ್ರ್ಯದ ಒಂದು ನಿಯಮವು ದೇಶದ ಸಂವಿಧಾನದಲ್ಲಷ್ಟೇ ಅರ್ಹತೆ ಪಡೆದಿದೆ ಅಷ್ಟೆ.

ಕರ್ನಾಟಕದ ಇಂದಿನ ಸಾಂಸ್ಕೃತಿಕ ಪರಿಸರವು ಊಳಿಗಮಾನ್ಯ ಕೃಷಿಪ್ರಧಾನ ಆರ್ಥಿಕ ವ್ಯವಸ್ಥೆ, ವಸಾಹತು ಆಳ್ವಿಕೆಯ ಫಲವಾದ ಬಂಡವಾಳಶಾಹಿ ಮತ್ತು ಸ್ವಾತಂತ್ರ್ಯೋತ್ತರ ಜನತಾಂತ್ರಿಕ ಬಂಡವಾಳಶಾಹಿಗಳೆಲ್ಲವನ್ನೂ ಒಟ್ಟೊಟ್ಟಾಗಿಯೇ ಪ್ರದರ್ಶಿಸುತ್ತಿರುವಂಥದು. ಇಲ್ಲಿನ ಪ್ರಧಾನ ಚಿಂತನೆಯು ಲಿಂಗಪ್ರಭೇದ ಲಕ್ಷಣವನ್ನೇ ಹೊಂದಿದ್ದರೂ ಇಲ್ಲಿನ ಬಲವಾದ ಜಾತಿವ್ಯವಸ್ಥೆ, ವರ್ಗವ್ಯವಸ್ಥೆ, ಗ್ರಾಮೀಣ ನೆಲೆಯ ಊಳಿಗಮಾನ್ಯ ಶಕ್ತಿಗಳೂ ಜನಜೀವನದ ಬಲವಾದ ರೂವಾರಿಗಳೆನ್ನಬಹುದು. ಪುರೋಹಿತಶಾಹಿ, ಶ್ರೇಣೀಕೃತ ಧಾರ್ಮಿಕ ವ್ಯವಸ್ಥೆಗಳಿದ್ದರೂ, ಭೂಮಿಯ ಒಡೆತನ, ಸಂಖ್ಯಾಬಲ, ರಾಜಕೀಯ ಅಧಿಕಾರದ ಒಡೆತನಗಳು ಮಧ್ಯಮಜಾತಿಗಳ ಯಾಜಮಾನ್ಯಕ್ಕೆ ಸೇರಿವೆ. ವರ್ತಮಾನದ ಸಾಂಸ್ಕೃತಿಕ ಪರಿಸರ ಹೀಗಿದ್ದರೆ ಗತಿಸಿದ ಕಾಲದ ಮಾತೃಪ್ರಧಾನ ಸಾಂಸ್ಕೃತಿಕ ಅಂಶಗಳು ಪಳೆಯುಳಿಕೆಯ ರೀತಿಯಲ್ಲಿ ಈ ಮುಖ್ಯವ್ಯವಸ್ಥೆಯ ಅಧೀನ ನೆಲೆಗಳಲ್ಲಿ ಉಸಿರಾಡುತ್ತಿವೆ. ಅಂದರೆ ಇಲ್ಲಿನ ಕೆಳಜಾತಿ, ಕೆಳವರ್ಗದ ಜನರ ಸಾಮಾಜಿಕ, ಧಾರ್ಮಿಕ, ವಿಧ್ಯುಕ್ತ ಆಚರಣೆಗಳಲ್ಲಿ ನಾಡಿನ ಜಾನಪದ ಹಬ್ಬ, ಉತ್ಸವ, ಹಾಡು, ಕಥೆ, ಕುಣಿತಗಳಲ್ಲಿ ಸ್ತ್ರೀಸಬಲತೆಯ ಲಕ್ಷಣಗಳು ಮುಖ್ಯವಾಗಿ ಕಾಣಿಸುತ್ತವೆ.

ಸಾಂಸ್ಕೃತಿಕ ಸ್ತರಗಳ ವೈವಿಧ್ಯ ಇಲ್ಲಿರುವುದರಿಂದ ಶ್ರೇಣೀಕರಣ, ಶೋಷಣೆ, ಅಸಮಾನತೆ,

ದಮನಕಾರಿ ತತ್ವಗಳು ಈ ನಾಡಿನಲ್ಲಿ ಕೇವಲ ಲಿಂಗತಾರತಮ್ಯಕ್ಕಷ್ಟೇ ಸೀಮಿತವಲ್ಲ. ಅಂದರೆ ಮಹಿಳೆಯರು ಶೋಷಿತರಾಗಿದ್ದರೆ, ಅದಕ್ಕೆ ಲಿಂಗಪ್ರಭೇದವು ಕಾರಣವಾಗಿರುವಷ್ಟೇ, ಜಾತಿ, ವರ್ಗ ಭೇದಗಳೂ ಕಾರಣವಾಗಿವೆ. ಅದೇ ಹೊತ್ತಿನಲ್ಲಿ ಅಧೀನ ನೆಲೆಗಳಲ್ಲಿ ಸ್ತ್ರೀಸಬಲತೆಯ ಲಕ್ಷಣಗಳಿರುವುದರಿಂದ ಲಿಂಗಪ್ರಭೇದದ ಶೋಷಣೆಯ ತಾತ್ವಿಕತೆ ಎಂಬುದನ್ನೂ ಏಕಾಕಾರದಲ್ಲಿ ಗ್ರಹಿಸುವುದು ಅಸಾಧ್ಯವಾಗುತ್ತದೆ. ಆದ್ದರಿಂದ ಕರ್ನಾಟಕ ಈ ಸಂದರ್ಭಕ್ಕೆ ಸ್ತ್ರೀವಾದಿ ತತ್ವಗಳು ಪ್ರವೇಶಿಸುವುದರಿಂದ, ಇಲ್ಲಿರುವ ಬಹುಮುಖ ಶ್ರೇಣಿಗಳಲ್ಲಿ ಸ್ತ್ರೀಪುರುಷ ಸಂಬಂಧಗಳಲ್ಲಿ ಎಲ್ಲಿ ಯಜಮಾನಿಕೆ, ಅಧಿಕಾರಗಳು ತಲೆತೂರಿಸುತ್ತವೆ ಎಂಬುದನ್ನು ವಿಶ್ಲೇಷಿಸಲು ಸಾಧ್ಯವಿದೆ. ಅದೇ ಹೊತ್ತಿನಲ್ಲಿ ಸ್ತ್ರೀಯರು ಎಲ್ಲಿ ನಿಜವಾಗಿ ದಮನಕ್ಕೆ ಒಳಗಾಗಿದ್ದಾರೆ ಹಾಗೂ ಎಲ್ಲಿ ಅವರದೇ ಪ್ರಾಬಲ್ಯದ ಅವಕಾಶಗಳಿವೆ ಎಂಬುದನ್ನು ಇದೇ ಸಂಸ್ಕೃತಿಯಿಂದ ಹುಡುಕಿ ಇಲ್ಲಿಗೆ ಹೊಂದುವಂಥ ಸ್ತ್ರೀವಾದದ ತಾತ್ವಿಕತೆಯನ್ನು ಕಟ್ಟಬೇಕಾಗಿದೆ.

ಕನ್ನಡದ ಪ್ರಾಚೀನ ಸಾಹಿತ್ಯ ಘಟ್ಟಗಳಲ್ಲಿ ಪ್ರಧಾನ ಶಿಷ್ಟ ಸಾಂಸ್ಕೃತಿಕ ವಾಹಿನಿಯು ಪಿತೃಪ್ರಧಾನ ಲಕ್ಷಣಗಳನ್ನೇ ಬಿಂಬಿಸುವುದನ್ನು ಕಾಣಬಹುದು. ಈ ನೆಲದ ಮೂಲದ ಸಂಸ್ಕೃತಿ ಮಾತೃಪ್ರಧಾನವಾಗಿತ್ತು ಎನ್ನಲಾಗುವ ದ್ರಾವಿಡ ಸಂಸ್ಕೃತಿಯೇ ಎಂದು ಭಾವಿಸಲಾಗುತ್ತದೆ. ಹಾಗಿದ್ದರೂ ಇಂದಿನ ಜನಜೀವನದ ಪ್ರಬಲ ಧೋರಣೆಗಳು ಪಿತೃಪ್ರಧಾನ ಮೌಲ್ಯಗಳಿಂದಲೇ ರೂಪುಗೊಳ್ಳುತ್ತಿರುವುದು, ಸ್ತ್ರೀಪ್ರಾಬಲ್ಯದ ಸೂಚಕ ಎನ್ನುವಂಥ ಅಂಶಗಳನ್ನೆಲ್ಲ ಈ ವ್ಯವಸ್ಥೆಯ ಅಪ್ರಧಾನ ಸ್ತರಗಳಲ್ಲಿ ಸೇರಿಹೋಗಿರುವುದನ್ನು ಗಮನಿಸಬೇಕು.

ಧಾರ್ಮಿಕ ವಿಧಿ, ಆಚರಣೆಗಳಲ್ಲಿ ದೇವಿಯರ ಆರಾಧಕರಾಗಿ, ಭಕ್ತರಾಗಿ ಮೈದುಂಬಿಕೊಂಡು ಆವೇಶ ತಳೆಯಬಲ್ಲ ಜನಸಾಮಾನ್ಯರು ವಾಸ್ತವದ ದೈನಂದಿನ ಜೀವನದಲ್ಲಿ ಆ ದೇವಿಯ ಮೂರ್ತ ರೂಪಗಳಾದ ಸ್ತ್ರೀಯರೊಂದಿಗೆ ತೀರಾ ಭಿನ್ನವಾಗಿ ಬದುಕುವವರು. ಅವರಲ್ಲಿಯೇ ಸ್ತ್ರೀಭ್ರೂಣ ಹಂತಕರಿದ್ದಾರೆ. ವರದಕ್ಷಿಣೆಗಾಗಿ ಹೆಣ್ಣನ್ನು ಹಿಂಸಿಸಿ ಸುಡಬಲ್ಲವರಿದ್ದಾರೆ. ಜನರ ಸಾಮೂಹಿಕ ಸುಪ್ತಪ್ರಜ್ಞೆಯಲ್ಲಿ 'ಮಾತೃದೇವೋಭವ' ಎಂಬ ಆಜ್ಞೆ ಮಂತ್ರವಾಗಿ ಕೆಲಸ ಮಾಡುವುದರಿಂದ ಅದು ಬಹಿರಂಗದ ಮಾತೃದೇವತೆಗಳ ಆರಾಧನೆಯಾಗಿ ಬಿಡುಗಡೆ ಹೊಂದಬಹುದು. ಆದರೆ ಅನಂತರ ಹೆಂಡತಿಯನ್ನು ಬಡಿಯುವುದು, ಬಹುಪತ್ನಿತ್ವದ ಮೂಲಕ ಆಕೆಗೆ ಅನ್ಯಾಯ ಮಾಡುವುದು, ಆಕೆಯನ್ನು ಕೇವಲ ದುಡಿಯುವ, ಲೈಂಗಿಕ ತೊತ್ತಿನಂತೆ ಕಾಣುವುದು– ಮುಂತಾದವೂ ಇಲ್ಲಿಯ ಜನಜೀವನದಲ್ಲಿ ಹಾಸುಹೊಕ್ಕಾದ ಸಂಗತಿಗಳೇ. ಈ ಹಿಂಸೆ, ದೌರ್ಜನ್ಯದ ಅಂಶ ಜಾತಿ ವ್ಯವಸ್ಥೆ, ವರ್ಗಭೇದಗಳಿಂದ ಇನ್ನಷ್ಟು ಕ್ರೂರವೂ, ಅಮಾನುಷವೂ ಆಗುವುದುಂಟು.

ನಿರಕ್ಷರತೆ, ಬಡತನಗಳ ಫಲವಾಗಿ ನಾಡಿನ ಸ್ತ್ರೀಯರು ಲಿಂಗತಾರತಮ್ಯ ಮೂಲದ ಅಸಂಖ್ಯ ದುಃಖ, ನೋವುಗಳನ್ನೇ ಉಂಡು, ಹಾಸಿ, ಹೊದ್ದು ಬದುಕಲು ಅನಿವಾರ್ಯವಾಗಿ ಕಲಿತರು. ಅದರರ್ಥ, ಅವರ ಸ್ಥಿತಿಗತಿಗಳು ಪಶ್ಚಿಮದ ಸ್ತ್ರೀವಾದಿಗಳು ಹೇಳುವ 'ಸ್ತ್ರೀ ಶೋಷಣೆ'ಯ

ನೆಲೆಗಿಂತ ಉತ್ತಮವಾಗಿವೆ ಎಂದೇನೂ ಅಲ್ಲ. ತಮ್ಮ ನೋವಿನ ಅನುಭವಗಳ ಬಗ್ಗೆ ಅವರು ಹೊಂದಿರುವ ಮನೋಧರ್ಮ ಎಚ್ಚೆತ್ತವರ ಪ್ರತಿಭಟನೆಯ ರೂಪದ್ದಲ್ಲ ಎಂದು ಅದರರ್ಥ. ಇಂಥ ಮಹಿಳೆಯರ ಬಗ್ಗೆ ಪ್ರಧಾನ ಶಿಷ್ಟ ಸಾಹಿತ್ಯ ಪರಂಪರೆಯು ಏನು ಹೇಳುತ್ತದೆ ಎಂಬುದನ್ನೂ ಈ ಪರಂಪರೆಗೆ ಪ್ರವೇಶವೇ ಇಲ್ಲದ ನಿರಕ್ಷರಿ ಗ್ರಾಮೀಣ ಹೆಣ್ಣುಮಕ್ಕಳು ಜಾನಪದದ ಮೌಖಿಕ ಪರಂಪರೆಯಲ್ಲಿ ತಮ್ಮ ಬಗ್ಗೆ ತಾವೇ ಏನು ಹೇಳಿಕೊಳ್ಳುತ್ತಾರೆ ಎಂಬುದನ್ನೂ ತುಲನೆ ಮಾಡಿದರೆ ಕರ್ನಾಟಕದ ಪ್ರಾಚೀನ ಕಾಲದ ಹೆಣ್ಣುಮಕ್ಕಳ ಅನುಭವದ ಸ್ವರೂಪ ಹೇಗಿತ್ತು ಎಂದು ಅರಿಯಲು ಸಾಧ್ಯ.

ಪ್ರಾಚೀನ ಕಾಲದ ಕನ್ನಡದ ಧಾರ್ಮಿಕ ಸಾಹಿತ್ಯ ಮತ್ತು ವೀರಕಾವ್ಯಗಳು ಮುಖ್ಯವಾಗಿ ಪುರುಷರ ಧಾರ್ಮಿಕ, ತಾತ್ವಿಕ, ಸಾಮಾಜಿಕ ಮತ್ತು ರಾಜಕೀಯ ಚಿಂತನೆಗಳನ್ನು ಪ್ರತಿಬಿಂಬಿಸುತ್ತವೆ. ಆದ್ದರಿಂದಲೇ ತೀರ್ಥಂಕರರ ಮಾತೆಯರಾದ ಇಲ್ಲವೆ ವೀರರ ಮಾತೆ/ಪತ್ನಿ/ಮಗಳಾಗಿರುವ ಸ್ತ್ರೀಯರು ತಾತ್ಕಾಲಿಕವಾಗಿ ಕವಿಗಳ ಗಮನ ಪಡೆದರೂ, ಅವಶ್ಯಕತೆ ಮುಗಿದ ಕೂಡಲೆ ಗೌಣವಾಗುತ್ತಾರೆ. ಭವಾಂತರಗಳ ಪಾಪಕರ್ಮಗಳ ಫಲವಾಗಿ ಸ್ತ್ರೀಜನ್ಮವುಂಟಾಗುವುದೆಂದು ಇಂಥ ಕಾವ್ಯಗಳು ಚಿತ್ರಿಸುತ್ತವೆ. ಪಶು, ಪಕ್ಷಿ, ಮಾನವರಾದಿಯಾಗಿ ಎಲ್ಲಾ ಜೀವಜಂತುಗಳಲ್ಲೂ ಹೆಣ್ಣು ಹುಟ್ಟು ಪಾಪಸಂಚಯದ ಫಲವೆಂದೂ, ಸ್ತ್ರೀಜನ್ಮಕ್ಕೆ ಮೋಕ್ಷವಿಲ್ಲವೆಂದು ಹೇಳುತ್ತವೆ.

ಶೃಂಗಾರರಸವನ್ನು ಸೃಷ್ಟಿಸುವುದಕ್ಕಾಗಿ ಸ್ತ್ರೀಯ ದೇಹಸಮೃದ್ಧಿಯನ್ನು ವರ್ಣಿಸುವುದು, ರಾಜಶೇಖರರ ವಿಲಾಸದ ಬದುಕಿನ ವೈಭವ, ಆಡಂಬರ, ಸುಖದ ಕಲ್ಪನೆಗಳಿಗೆ ಸ್ತ್ರೀಯರನ್ನು ಅಲಂಕರಣದ ವಸ್ತುಗಳಾಗಿ ಬಳಸುವುದು, ವಿರಕ್ತಿಧರ್ಮದ ಕೊಂಡಾಟಕ್ಕಾಗಿ ಸ್ತ್ರೀನಿಂದನೆ, ಸ್ತ್ರೀಯ ಅವಹೇಳನವನ್ನು ಢಾಳಾಗಿ ಪ್ರತಿಪಾದಿಸುವುದು, ಪತಿವ್ರತೆ–ಪತಿತೆಯೆಂಬ ಎರಡು ಧ್ರುವೀಕೃತ ಮಾದರಿಗಳನ್ನೇ ಮಹಿಳೆಯರ ಒಳ್ಳೆಯ–ಕೆಟ್ಟ ಸ್ವಭಾವಗಳೆಂದು ಸಾವಿರಾರು ಬಗೆಗಳಿಂದ ಸಾರುವುದು– ಮುಂತಾದುವು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಕುರಿತಂತೆ ಪ್ರಕಟವಾಗುವ ಲಕ್ಷಣಗಳು. ಇವೆಲ್ಲವೂ ಒಂದು ಪದಾರ್ಥವಾಗಿ, ಭೋಗವಸ್ತುವಾಗಿ, ಇಲ್ಲವೇ ಹೀನಜನ್ಮವಾಗಿ ಹೆಣ್ಣನ್ನು ಕೀಳೈಸಲು ಯತ್ನಿಸುವ ಪಿತೃಪ್ರಧಾನ ಧೋರಣೆಗಳನ್ನೇ ಪ್ರತಿನಿಧಿಸುತ್ತವೆ ಎನ್ನುವುದನ್ನು ಗಮನಿಸಬೇಕು. ಏಕೆಂದರೆ ಸಂಸ್ಕೃತದ ವೈದಿಕ ಪರಂಪರೆಗೆ ಮುಖಾಮುಖಿಯಾದ ಕನ್ನಡದ ಕವಿಗಳು ತಮ್ಮದೇ ನಾಡ ಸಂಸ್ಕೃತಿಯನ್ನು ಮತ್ತೆ ಕಟ್ಟಲು ದೇಶೀ ನೆಲೆಯಿಂದ ಹಲವು ಬಗೆಯಲ್ಲಿ ಪ್ರತಿಭಟನೆಗಳನ್ನು ಹೂಡಿ, ಕನ್ನಡ ಪರಂಪರೆಯನ್ನು ಕಟ್ಟಿದರೆಂದು ಚರಿತ್ರೆ ತಿಳಿಸುತ್ತದೆ. ಆದರೆ ಹೆಣ್ಣಿನ ವಿಷಯವಾಗಿ ಈ ನಾಡ ಪರಂಪರೆ ಏಕೆ ಏನನ್ನೂ ತನ್ನದರ ಕುರುಹಾಗಿ ಕಟ್ಟದೆ ಕೇವಲ ಮಾರ್ಗ ಪರಂಪರೆಯನ್ನೇ ಅನುಸರಿಸಿತು ಎಂಬುದು ಕುತೂಹಲಕರ. ಈ ಕಾರಣದಿಂದಲೇ ನಮ್ಮ ಪರಂಪರೆ ಆರಂಭಕಾಲದಲ್ಲಿ ಏಕೆ ನಿರ್ದಿಷ್ಟ ಮಾದರಿಗಳಷ್ಟನ್ನೇ ಎತ್ತಿಹಿಡಿದಿದೆ? ಅದರ ಹಿಂದೆ ಯಾವ ಹಿತಾಸಕ್ತಿಗಳಿವೆ?

ಅಲ್ಲಲ್ಲಿ ಕೆಲವು ಬಿಡಿ ಅಪವಾದಗಳನ್ನು ಬಿಟ್ಟರೆ ಈ ಪತಿವ್ರತೆಯ ಮಾದರಿಗೆ ಒಗ್ಗಲಾರದ ಸ್ತ್ರೀಯರು ಏಕೆ ಅಪಮೌಲ್ಯಕ್ಕೆ ಒಳಗಾಗುತ್ತಾರೆ ಎಂಬುದನ್ನು ಶೋಧಿಸಲಿಕ್ಕೆ ಅಂದರೆ ಸ್ತ್ರೀವಾದವು ಕೇಳುತ್ತಿರುವ ಪ್ರಶ್ನೆಗಳಿಗೆ, ಇಲ್ಲಿ ಸಾಕಷ್ಟು ಸಾಮಗ್ರಿಯಿದೆ.

ಕೆಲವು ಬಿಡಿ ಪ್ರಸಂಗಗಳಲ್ಲಿ ಕವಿಯು ಭಿನ್ನ ನಿಲುವನ್ನು ತಳೆದಂಥ ಚಿತ್ರಗಳು ಕಾಣುವುದುಂಟು. ಉದಾಹರಣೆಗೆ, ಪಂಪನ ಆದಿಪುರಾಣದಲ್ಲಿ ಬರುವ ಶ್ರೀಮತಿ–ವಜ್ರಜಂಘರ ಜನ್ಮಜನ್ಮಾಂತರದ ಅನ್ಯೋನ್ಯ ಪ್ರೇಮ ಎಷ್ಟು ಆದರ್ಶೀಕೃತವೆಂದರೆ, ಸಂಭೋಗನಿರತ ದಂಪತಿಗಳು ಕಾಲಾಗುರು ಧೂಪದಿಂದ ಉಸಿರುಕಟ್ಟಿ, ಒಬ್ಬರೊಬ್ಬರ ತೆಕ್ಕೆಯಲ್ಲೇ ಒಟ್ಟಾಗಿ ಸಾಯುವಂಥ ಸ್ಥಿತಿಯನ್ನು ಮೆಚ್ಚುಗೆಯ ಧ್ವನಿಯಿಂದ ಕವಿ ಚಿತ್ರಿಸುತ್ತಾನೆ. ಹಾಗೆಯೇ ಹರಿಹರನ ಗಿರಿಜಾಕಲ್ಯಾಣದ ನಾಯಕಿ ತುಂಬ ದಿಟ್ಟತನ, ಮಾತಿನ ಪ್ರಾಗಲ್ಭ್ಯಗಳನ್ನು ತೋರಿಸುವಳು. ಆದರೆ ಈ ಇಬ್ಬರು ಕವಿಗಳಿಗೆ ಮಾದರಿಯಾಗಿ ಕಾಳಿದಾಸನಿದ್ದಾನೆ, ಅಜ–ಇಂದುಮತಿಯರ ಅನ್ಯೋನ್ಯ ಪ್ರೇಮದ ಹಾಗೂ ಪಾರ್ವತಿಯನ್ನು ದೇವಿಯಾಗಿ ಭಾವಿಸಿದ ಸಶಕ್ತ ಚಿತ್ರಕಾರ ಆತ ಎಂಬುದನ್ನು ಗಮನಕ್ಕೆ ತೆಗೆದುಕೊಂಡಾಗ ಕರ್ನಾಟಕದ ನೆಲದ್ದು ಎನಿಸುವ ಸ್ತ್ರೀಸಬಲತೆಯ ಲಕ್ಷಣ ಕನ್ನಡದ ಶಿಷ್ಟಕವಿಗಳ ಮೇಲೆ ಏಕೆ ಅಷ್ಟಾಗಿ ಪ್ರಭಾವ ಬೀರಿಲ್ಲ ಎಂಬುದು ಸ್ತ್ರೀವಾದಿ ವಿಮರ್ಶೆಗೆ ಸಂಶೋಧನೀಯವಾದ ಅಂಶವಾಗಬಲ್ಲದು.

ಹಲವು ಸಂದರ್ಭಗಳಲ್ಲಿ ನಿರ್ದಿಷ್ಟ ಉದ್ದೇಶ/ಆಶಯಗಳಿಗಾಗಿ ಕವಿಗಳು ಸ್ತ್ರೀಪಾತ್ರಗಳನ್ನು ಅವಹೇಳನಕರವಾಗಿ, ವಿಕೃತವಾಗಿ ಚಿತ್ರಿಸುವುದುಂಟು. ಭೀಷ್ಮನ ಬ್ರಹ್ಮಚರ್ಯನಿಷ್ಠೆ, ಅವನ ಶೀಲಪಾವಿತ್ರ್ಯಗಳನ್ನು ಎತ್ತಿಹಿಡಿಯಲೆಂದೇ ಅಂಬೆಯು ಗಂಡಾದರೂ ಪುರುಷತ್ವವಿಲ್ಲದವಳಾಗಿ ಬಂದು, ಅದಕ್ಕಾಗಿ ಅವಹೇಳನಗೊಳ್ಳುವುದನ್ನು ಪಂಪ ಚಿತ್ರಿಸುವ ರೀತಿ, ಜನ್ನನು ಅಮೃತಮತಿಯನ್ನು ಆಕೆಯ ಲೈಂಗಿಕ ಅಭಿರುಚಿಗಾಗಿ ಅವಹೇಳನಕರವಾಗಿಸಿ ಯಶೋಧರನ ಹಿರಿಮೆಯನ್ನು ಸಾಧಿಸುವ ರೀತಿಗಳನ್ನು ಇದಕ್ಕೆ ಉದಾಹರಣೆಗಳಾಗಿ ನೋಡಬಹುದು. ಸ್ತ್ರೀವಾದಿ ವಿಮರ್ಶೆಯು ಇಂಥ ವೈದೃಶ್ಯಗಳನ್ನು ವಿಶ್ಲೇಷಿಸಿ, ಆ ಪಾತ್ರಗಳ ಸಂಕೇತಾರ್ಥವನ್ನು ಬಯಲಿಗೆ ತಂದು ಆ ಪಾತ್ರಗಳು ಸೂಚಿಸುವ ಬದುಕಿನ ಸ್ಥಿತಿಗತಿಗಳನ್ನು ಲಿಂಗಭೇದವಿಲ್ಲದೆ ಮಾನವೀಯವಾಗಿ ನೋಡುವಂತೆ ಪ್ರೇರೇಪಿಸುತ್ತದೆ.

ಲಿಂಗಭೇದ ವ್ಯವಸ್ಥೆಯ ವಿರುದ್ಧವಾಗಿ ಗಮನಾರ್ಹ ತಾತ್ವಿಕ ಪ್ರತಿಭಟನೆಯನ್ನು ತೋರಿ, ಮಹಿಳೆಯರ ಸ್ವಾಭಿವ್ಯಕ್ತಿಯ ಪರಂಪರೆಯನ್ನು ಆರಂಭಿಸಿದ ವಚನಸಾಹಿತ್ಯವು ಇಂದಿನ ಸ್ತ್ರೀವಾದಿ ಕಾಳಜಿಗೆ ತುಂಬ ಉಪಯುಕ್ತವಾದ ಇತ್ಯಾತ್ಮಕ ಮಾದರಿಯೊಂದನ್ನು ಕಟ್ಟಿಕೊಡುತ್ತದೆ. ಜಾತಿ, ಮತ, ವೃತ್ತಿ, ಲಿಂಗ, ವರ್ಗ ಮುಂತಾದ ಎಲ್ಲಾ ಸಾಮಾಜಿಕ ಭೇದಗಳನ್ನೂ ವ್ಯಕ್ತಿಗಳ ಬಹಿರಂಗದ ಭಿನ್ನತ್ವದ ಸಂಕೇತಗಳೆಂದು ನಿರಾಕರಿಸುವ ಶಿವಶರಣರು. ಈ ಭೇದಗಳು ಬಾಧಿಸದ ಅಂತರಂಗದ/ಆತ್ಮದ ನೆಲೆಯಲ್ಲಿ ಸರ್ವಸಮಾನತೆಯನ್ನು ಪ್ರತಿಪಾದಿಸಿದರು. ಅಂಥ ಶರಣರ ನೇತೃತ್ವದ ಧಾರ್ಮಿಕ ಚಳವಳಿಯು ಸ್ತ್ರೀಯರಿಗೂ ಮೋಕ್ಷದ ಬಾಗಿಲನ್ನು

ತೆರೆಯಿತು. ಅದರ ಫಲವಾಗಿ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲೇ ಅನನ್ಯವೆನ್ನಬಹುದಾದ ಸ್ತ್ರೀಯರ ಪ್ರಗತಿಯ ಆಯಾಮವೊಂದು ನಮಗೆ ದಕ್ಕುವಂತಾಗಿದೆ.

ಈ ವಚನಯುಗದ ಮಹಿಳೆಯರು ಸಮಾಜದ ವಿವಿಧ ಜಾತಿ, ವೃತ್ತಿ, ವರ್ಗಗಳೆಲ್ಲವನ್ನು ದಾಟಿ ಬಂದವರು. ಆತ್ಮಸಾಧನೆ ಮತ್ತು ಕಾಯಕ ತತ್ವಗಳ ಮೂಲಕ ಶಿವತತ್ವದಡಿಯಲ್ಲಿ ಸಮಾನತೆಯಲ್ಲಿ ತಮ್ಮನ್ನು ಕಂಡುಕೊಂಡವರು. ಶಿಕ್ಷಣ, ಕಲೆಗಾರಿಕೆ, ಮಾನಸಿಕ ಸಂಸ್ಕಾರಗಳ ಅವಕಾಶವಿದ್ದ ಉಚ್ಚಕುಲಗಳ ಮಹಿಳೆಯರಂತೆಯೇ, ಅದೇ ತಾನೆ ಅಕ್ಷರದ ಹಕ್ಕು ಪಡೆವ ಅವಕಾಶ ದಕ್ಕಿಸಿಕೊಂಡ ಮಹಿಳೆಯರೂ, ಈ ಸಾಂಸ್ಕೃತಿಕ ಸಂದರ್ಭದಲ್ಲಿ ತಮ್ಮೊಳಗಿನ ಅನುಭವವನ್ನು ಹೇಳಿಕೊಳ್ಳುವ ಯತ್ನ ಮಾಡಿದರು. ಕೆಲವರು ಪಾರಮಾರ್ಥಿಕ ಚಿಂತನೆಯಲ್ಲಿ ಪುರುಷರ ಸರಿಸರಿಯಾಗಿ ಗೌರವ ಪಡೆದು, ಅವರೊಂದಿಗೆ ಜಿಜ್ಞಾಸೆಗೂ ತೊಡಗುವಂಥ ಸಾಧ್ಯತೆಯೊಂದು ಹನ್ನೆರಡನೆಯ ಶತಮಾನದಲ್ಲಿ ಸೃಷ್ಟಿಯಾಗಿತ್ತು. ಹಲವಾರು ಸ್ಥಾಪಿತ ಮೌಲ್ಯಗಳನ್ನೂ, ದಬ್ಬಾಳಿಕೆಗಳನ್ನೂ ಧಿಕ್ಕರಿಸಿದ ಅನನ್ಯ ಕ್ರಾಂತಿಕಾರಕ ಮಹಿಳೆ ಅಕ್ಕಮಹಾದೇವಿಯು ಕಾಣಿಸಿಕೊಂಡ ಕಾಲವೂ ಅದೇ. ಆಕೆಯ ಜೀವನದ ಬಗ್ಗೆ ಪರಂಪರೆಯು ಕಟ್ಟಿಕೊಡುವ ವಿವರಗಳನ್ನು ಗಮನಿಸಿದಲ್ಲಿ ಮದುವೆ, ಕುಟುಂಬ, ಪತಿಯ ಯಜಮಾನಿಕೆ, ಆಳುವ ಪ್ರಭುತ್ವದ ನಿರಂಕುಶತೆ, ಪುರುಷ ವರ್ಗದವರ ದುರಾಗ್ರಹ ಮುಂತಾದ ಅನೇಕ ಸ್ಥಾಪಿತ ಮೌಲ್ಯಗಳನ್ನು ಆಕೆ ಧಿಕ್ಕರಿಸಿದ್ದು ಮಾತ್ರವಲ್ಲ, ಹೆಣ್ಣಿಗೆ ಆ ಕಾಲಕ್ಕೆ ಅಲಭ್ಯವಿದ್ದ ಸ್ವತಂತ ಬದುಕಿನ ವಿಧಾನವನ್ನು ಆರಿಸಿಕೊಂಡು ಬದುಕುವ, ಸಾಧಿಸುವ ಛಲವನ್ನು ತೋರಿದಳು. ಮಹತ್ವದ, ಹೊಚ್ಚಹೊಸರೀತಿಯ ಆಧ್ಯಾತ್ಮಿಕ ತುಡಿತ, ಅನುಭವಗಳಿಗೆ ಹೆಣ್ಣಿನ ನೆಲೆಯಿಂದ ಕಾವ್ಯಾತ್ಮಕ ಅಭಿವ್ಯಕ್ತಿಯನ್ನು ನೀಡಿದಳು. ಕರ್ನಾಟಕದ ಇಂದಿನ ಸ್ತ್ರೀವಾದವು ಕೂಡ ಗ್ರಹಿಸಲು ಸಿದ್ಧವಿಲ್ಲದಷ್ಟು ಅಪರೂಪದ ವ್ಯಕ್ತಿಸ್ವಾತಂತ್ರ್ಯವನ್ನು ಬದುಕಿನಲ್ಲೇ ಆಚರಿಸಿದ್ದ ಅಕ್ಕಮಹಾದೇವಿಯಲ್ಲಿ ಆಕೆಯ ಸಮಕಾಲೀನ ವಚನಕಾರ್ತಿಯರು ಯಾರೂ ಆದರ್ಶದ ಮಾದರಿಯೊಂದನ್ನು ಕಾಣದಿರುವುದು ಆಶ್ಚರ್ಯದ ಸಂಗತಿಯಲ್ಲ. ಆದರೆ ಲಭ್ಯವಿರುವ ಯಾವೊಬ್ಬ ವಚನಕಾರ್ತಿಯೂ ಅಕ್ಕನ ಮಾದರಿಯನ್ನು ಕೊಂಡಾಡಿಲ್ಲವಾದರೂ ಶಿವಶರಣರು ಮಾತ್ರ ಅತ್ಯುಚ್ಚ ಸ್ಥಾನದಲ್ಲಿ ಆಕೆಯನ್ನು ಗುರುತಿಸಿದ್ದು ಮುಖ್ಯಸಂಗತಿ. ಲಿಂಗಾತೀತ ನೆಲೆಗಾಗಿ ಹಂಬಲಿಸಿಯೂ, ತನ್ನೆಲ್ಲ ಅನುಭವಗಳಿಗೆ ಹೆಣ್ಣಾಗಿಯೇ ನುಡಿಗೊಟ್ಟ ವಚನಕಾರ್ತಿಯರು ನಿಜವಾಗಿ ಕರ್ನಾಟಕದ ಸ್ತ್ರೀಪರ ಚಿಂತನೆಯತ್ತ ಬೆಳಕು ತೋರಬಲ್ಲ ಶರಣದೀವಿಗೆಗಳು.

ಮಹಿಳೆಯರ ಅನಕ್ಷರತೆಯಿಂದ, ಅಕ್ಷರ ಪರಂಪರೆಯಲ್ಲಿ ಅವರ ಅಭಿವ್ಯಕ್ತಿ ಕುಂಠಿತವಾಯಿತು. ಆದರೆ ಅವರ ಕಲ್ಪನೆ, ಕಲಾಪ್ರತಿಭೆಗಳ ಅಸಾಧಾರಣ ಮಾದರಿಗಳು ಜಾನಪದದ ಮೌಖಿಕ ಪರಂಪರೆಯಿಂದ ಲಭ್ಯವಾಗುತ್ತದೆ. ಕನ್ನಡ ಜಾನಪದದ ಪ್ರಾಚೀನತೆ ಎಷ್ಟೆಂಬುದು ಅಸ್ಪಷ್ಟ. ಆದರೆ ಪಿತೃಪ್ರಧಾನ ಮೌಲ್ಯವ್ಯವಸ್ಥೆಯ ಒಳಗಿನಿಂದಲೇ ಹುಟ್ಟಿಕೊಂಡ ಮಹಿಳಾ ಜಾನಪದದಲ್ಲಿ ಹೆಣ್ಣು ತನ್ನ ಸಂಕಟ, ಬೇನೆ, ಸಂತಸಗಳ ಬದುಕನ್ನು ತಾನೇ

ಕಾಣುವಂತೆ ಹೇಳಿಕೊಂಡಿದ್ದಾಳೆ. ಆ ಅನುಭವ ಮಕ್ಕಳನ್ನು ಹಡೆದು ಪಾಲಿಸುವ ತಾಯಿಯದಾಗಬಹುದು; ಗಂಡಿನ ಮನೆಯಲ್ಲಿ ಸವತಿ, ಓರಗಿತ್ತಿ, ಅತ್ತೆ, ನಾದಿನಿಯಂಥ 'ಪರಕೀಯ' ಮಹಿಳೆಯರೊಂದಿಗಿನ ತನ್ನ ವಿಷಮ ಸಂಬಂಧಗಳ ಅನುಭವ ಗಳಾಗಿರಬಹುದು; ಇಲ್ಲವೆ ಜನಪದ ಕಥೆಗಳಲ್ಲಿ ಕಂಡುಬರುವಂತೆ, ತನ್ನ ನಿಜದ ಬದುಕಿನ ಸತ್ಯಗಳ ಕಹಿಯನ್ನು ಮರೆಮಾಚುವ, ಕಾಲ್ಪನಿಕ ನೆಲೆಯ ಪರ್ಯಾಯ ಜೀವನಸಾಧ್ಯತೆಗಳನ್ನು ಆಕೆ ಕಟ್ಟಿಕೊಡಬಹುದು.

ಸಮಗ್ರವಾಗಿ ಕುಟುಂಬದ ಇತರರ ಸುಖಕ್ಕಾಗಿ ಬದುಕನ್ನು ಮೀಸಲಿಡಲು ಹೆಣ್ಣು ತನ್ನತನವನ್ನೇ ಮೊದಲು ಹತ್ತಿಕ್ಕಿಕೊಳ್ಳಬೇಕು. ಈ ಸ್ಥಿತಿ ಎಲ್ಲರಿಗೂ, ಯಾವಾಗಲೂ ಸುಲಭವಲ್ಲ, ಸಾಧ್ಯವೂ ಅಲ್ಲ. ಆ ರೀತಿ ತಮ್ಮನ್ನು ಹತ್ತಿಕ್ಕಿಕೊಳ್ಳಲು ಆಗದವರು/ಸಿದ್ಧರಿಲ್ಲದವರು ಮಾನಸಿಕವಾಗಿ ಹೆಚ್ಚು ತಳಮಳ, ಕುದಿತ, ತಾಕಲಾಟಕ್ಕೆ ಒಳಗಾದವರು. ಇಂಥ ಹೆಣ್ಣುಮಕ್ಕಳ ಅಂತರಂಗದ ಒಳತೋಟಿಗಳನ್ನು ಕಟ್ಟಿಕೊಡುವ ಜಾನಪದ ಸಾಮಗ್ರಿಯ ಬೇರಿನ ನೆಲೆಯ ಮಹಿಳೆಯರ ಸಾಮಾಜಿಕ ಸ್ಥಿತಿಗತಿಗಳ ದಾಖಲೆಯಾಗಿ ಸ್ತ್ರೀವಾದಿ ವಿಮರ್ಶೆಗೆ ತುಂಬ ಉಪಯುಕ್ತ ಸಾಧನವಾಗುತ್ತದೆ. 'ಹೆಣ್ಣು ಆಗುದಕ್ಕಿಂತ ಮಣ್ಣು ಆಗುದು ಲೇಸು', 'ಬಂಜಿ ನಿನ ಬದುಕು ಹೆರವರಿಗಿ' ಎನ್ನುತ್ತಾ ನಿಟ್ಟುಸಿರು ಬಿಡುವವರು, 'ಕೂಸು ಕಂದಯ್ಯ ಒಳಹೊರಗೆ ಆಡಿದರೆ ಬೀಸಣಿಗಿ ಗಾಳಿ ಸುಳಿದಾವು' ಎಂದು ಗಂಡುಕೂಸಿನ ತಾಯಿಯಾದಾಗ ದೊರೆವ ಸಂತಸವನ್ನು ಬಿಂಬಿಸಿರುವವರೂ ಸ್ತ್ರೀತ್ವದ ಒಪ್ಪಿತ ಮಾದರಿಗಳು. ಆದರೆ ಇವರೇ ಕಟ್ಟಿಹೇಳುವ ಕಥೆಗಳ ಒಳಲೋಕಗಳಲ್ಲಿ ಇಂಥ ಸ್ಥಿರವಾದ ಸ್ವೀಕೃತ ಬದುಕಿನ ಮಾದರಿಗಳನ್ನು ಕಲ್ಪನೆಯಿಂದ ಬದಲಾಯಿಸಿ, ಇಲ್ಲಿರದಂಥ ಸುಖ, ಸ್ವಾತಂತ್ರ್ಯ, ಘನತೆ, ಗೌರವಗಳನ್ನು ತಮ್ಮ ಕಥಾನಾಯಕಿಯರು ಸಾಧಿಸಿದಂತೆ ಕಲ್ಪಿಸುವ ಕನಸುಗಾರ್ತಿಯರು ಪರ್ಯಾಯ ವ್ಯವಸ್ಥೆಯ ಚಿಂತಕರೂ ಆಗಿ ತೋರುತ್ತಾರೆ.

ಮಹಿಳೆಯರೇ ಕಟ್ಟಿಹೇಳುವ ಜಾನಪದ ಕಥೆಗಳಲ್ಲಿ ಮತ್ತು ಮಹಿಳೆಯರೇ ಪ್ರಮುಖ ಪಾತ್ರವನ್ನು ನಿರ್ವಹಿಸುವ ಜಾನಪದ ಆಚರಣೆಗಳಲ್ಲಿ ವ್ಯಂಗ್ಯಾತ್ಮಕವಾಗಿ ವಿರುದ್ಧ ವಸ್ತುಗಳನ್ನು ಅಕ್ಕಪಕ್ಕದಲ್ಲೇ ಜೋಡಿಸುವ ತಂತ್ರ, ಅಂಗಾಂಗ ಸಂಜ್ಞೆಗಳ ಭಾಷೆ, ಗದ್ದಲ, ಅಬ್ಬರ, ಪಲ್ಲಟ ಮತ್ತು ನಿಷಿದ್ಧ ನಡವಳಿಕೆಯನ್ನು ರೂಪಕವಾಗಿ ಬಳಸುವಿಕೆ ಮೊದಲಾದ ಅಭಿವ್ಯಕ್ತಿಗಳ ಕ್ರಮಗಳನ್ನು ಸ್ತ್ರೀವಾದಿ ಅಧ್ಯಯನಕಾರರು ಮುಖ್ಯವಾಗಿ ಪರಿಶೀಲಿಸುತ್ತಾರೆ. ನೇರವಾಗಿ ಮಾತನಾಡಲು ಆಸ್ಪದವಿರದ, ಧ್ವನಿಯನ್ನು ಎತ್ತದಂತೆ ಬಾಯಿ ಮುಚ್ಚಿಸುವ ವ್ಯವಸ್ಥೆಯೊಳಗೆ ಮಹಿಳೆ ತನ್ನೊಳಗಿನ ತುಡಿತಗಳಿಗೆ ನೇರವಾಗಿ ಅಭಿವ್ಯಕ್ತಿ ನೀಡದೆ. ಪರೋಕ್ಷವಾದ. ಬಳಸುಮಾರ್ಗಗಳಿಂದ ಹೇಳುವ ಕಲೆಯನ್ನು ರೂಢಿಸಿಕೊಂಡಿರುತ್ತಾಳೆ. ಇಂಥ ಬಳಸು ಮಾರ್ಗದ ಅಭಿವ್ಯಕ್ತಿಯ ಮೂಲಕ ಮಹಿಳೆ ಹೇಗೆ ಸ್ವಾಭಿವ್ಯಕ್ತಿಯನ್ನು ಸಾಧಿಸುತ್ತಾಳೆಂದು ಗುರುತಿಸುವುದು ಸ್ತ್ರೀವಾದಿ ವಿಶ್ಲೇಷಣೆಯ ಮುಖ್ಯ ಕಾಳಜಿಗಳಲ್ಲಿ ಒಂದು. ಈ ಮೌಖಿಕ ಪರಂಪರೆಯಲ್ಲೇ ಬಿತ್ತರವಾಗುತ್ತ ಉಳಿದಿರುವ ಸ್ತ್ರೀಕಥಾನಾಯಕಿಯರ ಚರಿತ್ರೆಗಳ ಮೂಲಕ

ಸ್ತ್ರೀಯರ ಪ್ರತಿಭಟನೆ, ಸಶಕ್ತತೆಗಳ ಮಾದರಿಗಳನ್ನು ಕಟ್ಟಲೂ ಸ್ತ್ರೀವಾದಿ ಅಧ್ಯಯನ ಯತ್ನಿಸುತ್ತದೆ.

ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪಂಥಗಳು ಕಟ್ಟಿಕೊಡುತ್ತ ಬಂದಿರುವ ಮಹಿಳಾ ಜಗತ್ತನ್ನು ಅಧ್ಯಯನ, ವಿಶ್ಲೇಷಣೆಗೆ ಒಳಗು ಮಾಡುವುದು ಇಲ್ಲಿನ ಸ್ತ್ರೀವಾದಿ ವಿಮರ್ಶೆಯ ಇನ್ನೊಂದು ಮುಖ್ಯ ಆಸಕ್ತಿಯಾಗಿದೆ. ಸಾಹಿತ್ಯದ ಬಗೆಗಿನ ತತ್ವಗಳು, ವಿಮರ್ಶಾ ಧೋರಣೆಗಳು, ಹಾಗೂ ಸಾಹಿತ್ಯ ಚರಿತ್ರೆಗಳನ್ನು ರೂಪಿಸುವಲ್ಲಿ ಆಧುನಿಕ ಸಾಹಿತ್ಯ ಪಂಥಗಳಲ್ಲಿ ಮಹಿಳೆಯರ ಇರವನ್ನು, ಅವರ ಅಭಿವ್ಯಕ್ತಿಯ ಮಾದರಿಗಳನ್ನು, ಅವರ ಜೀವನ ದೃಷ್ಟಿ ಮತ್ತು ಮೌಲ್ಯಗಳನ್ನು ಅವರ ಸಾಹಿತ್ಯಕ ಕಾಣಿಕೆಯನ್ನು ಗಂಭೀರವಾಗಿ ಪರಿಗಣಿಸಿರುವುದನ್ನು ಎಪ್ಪತ್ತರ ದಶಕದವರೆಗೂ ಕಾಣುವುದಿಲ್ಲ. ಸಾಹಿತ್ಯ ಚರಿತ್ರಾಕಾರರು ಆನುಷಂಗಿಕವಾಗಿ ಮಹಿಳೆಯರ ಕೃತಿಗಳ ಬಗ್ಗೆ ಬರೆಯುವುದು, ಅವರ ರಚನೆಗಳನ್ನು ಸ್ಥಾಪಿತ ಸಾಹಿತ್ಯ ಮೌಲ್ಯಗಳಿಗಿಂತ ಕಳಪೆಯದೆಂದು ವಿಮರ್ಶಕರು ಪ್ರತಿಪಾದಿಸುವುದು ಸಾಕಷ್ಟು ಕಂಡುಬರುತ್ತದೆ. ಆದರೆ ಎಂಬತ್ತರ ದಶಕದಲ್ಲಿ ಸ್ತ್ರೀವಾದಿ ಚಿಂತನೆಯು ಸಾಹಿತ್ಯವನ್ನು ಅಧ್ಯಯನ ಮಾಡಬಹುದಾದ ಹೊಸತೊಂದು ದೃಷ್ಟಿಯನ್ನು ರೂಪಿಸತೊಡಗಿದಾಗಲೇ ಮಹಿಳೆಯರು ಕಾವ್ಯಕ್ಕೂ ಕೈಹಾಕಿದ ಚಾರಿತ್ರಿಕ ಸಂದರ್ಭವುಂಟಾಯಿತು. ಮಹಿಳಾ ಕಾವ್ಯ, ಕಥಾಸಾಹಿತ್ಯಗಳ ವೈಶಿಷ್ಟ್ಯಗಳನ್ನು ಗುರುತಿಸಿಕೊಡುವ ಯತ್ನಗಳು ಆರಂಭವಾದವು. ಪ್ರಧಾನ ಸಾಹಿತ್ಯ ಪರಂಪರೆಯ ಪ್ರಮುಖ ಮಾದರಿಗಳನ್ನು ಹೊಸರೀತಿಯಿಂದ ಮರುಓದಿಗೆ ಒಳಗುಮಾಡುವ ಯತ್ನವೂ ಆರಂಭವಾಯಿತು.

ಸ್ತ್ರೀವಾದಿ ಚಿಂತನೆಯು ಮೂಡಿಸಿರುವ ಹೊಸಬಗೆಯ ಸಾಹಿತ್ಯಾಧ್ಯಯನದಲ್ಲಿ ಸಾಹಿತ್ಯ ಪಠ್ಯಗಳು ಸಾಂಸ್ಕೃತಿಕ ಉತ್ಪಾದನೆಗಳೆಂದು, ಪ್ರಚಲಿತ ವ್ಯವಸ್ಥೆಯನ್ನು ಅವು ತಮ್ಮ ರೂಪಕ, ಸಂಕೇತಗಳಿಂದ ಪ್ರತಿನಿಧಿಸುತ್ತಿರುತ್ತವೆಂದೂ ನಂಬಲಾಗುತ್ತದೆ. ಈ ರೀತಿ ಸಾಂಸ್ಕೃತಿಕ ಪರಿಸರವನ್ನು ಹಿನ್ನೆಲೆಯ ಅರಿವನ್ನಾಗಿ ಬಳಸುವ, ಯಾವುದೇ ಸಂಸ್ಕೃತಿ ವಿಮರ್ಶೆಯಂತೆ, ಸ್ತ್ರೀವಾದಿ ವಿಮರ್ಶೆಯೂ ಕೃತಿಯೊಂದು ತನ್ನ ಆಶಯದ ವಸ್ತುವನ್ನು ಹೇಗೆ ಹೇಳುತ್ತದೆ, ಯಾವ ಭಾಷೆ, ಎಂಥ ತಂತ್ರ, ಏನು ಆಕೃತಿ/ಶಿಲ್ಪ ಎಂಬ ಸಾಹಿತ್ಯ ಲಕ್ಷಣಗಳಿಗೇ ಒತ್ತುಕೊಡುವ ಕೃತಿನಿಷ್ಠ ಓದುವಿಕೆಗಿಂತ ಭಿನ್ನವಾಗಿರಲು ಯತ್ನಿಸುತ್ತದೆ. ವಿಷಯವನ್ನು ಹೇಗೆ ಹೇಳಲಾಗುತ್ತಿದೆ ಎಂಬುದರಷ್ಟೇ ಏನು ವಿಷಯವನ್ನು ಪಠ್ಯದಲ್ಲಿ ಹೇಳಲಾಗುತ್ತಿದೆ, ಹಾಗೆ ಹೇಳುವುದರ ಹಿಂದಿನ ಉದ್ದೇಶಗಳೇನು, ಹಿತಾಸಕ್ತಿಗಳೇನು ಎಂಬುದನ್ನು ಈ ವಿಮರ್ಶೆಯು ಗಮನಿಸುತ್ತದೆ. ಈ ದೃಷ್ಟಿಯಿಂದ ನಮ್ಮ ಆಧುನಿಕ ಸಾಹಿತ್ಯ ಪಂಥಗಳತ್ತ ನೋಡಿದಾಗ, ಪ್ರಚಲಿತ ವಿಮರ್ಶಾ ತೀರ್ಮಾನಗಳು ಬೇರೆಯಾಗಿ ತೋರಲೂ ಸಾಧ್ಯ.

ಉದಾಹರಣೆಗೆ, ನವ್ಯ, ಪ್ರಗತಿಶೀಲ ಪಂಥಗಳವರು ನವೋದಯದ ವಿರುದ್ಧವಾಗಿ ಇಲ್ಲವೆ ಅದಕ್ಕಿಂತ ಭಿನ್ನವಾಗುವುದಕ್ಕಾಗಿ ಕೆಲವು ತಾತ್ವಿಕ ವಾಗ್ವಾದಗಳನ್ನು ಬೆಳೆಸಿದರು.

ನವೋದಯದ ವ್ಯಕ್ತಿನಿಷ್ಠ ಅಭಿವ್ಯಕ್ತಿ ಕ್ರಮ, ಭಾವುಕತೆ, ಭಾಷೆ ಮತ್ತು ತಂತ್ರಗಳ ಸಡಿಲತೆ, ಅದರ ಬರಹಗಳ ಸರಳ ರೊಮ್ಯಾಂಟಿಕ್ ತಾತ್ವಿಕತೆ ಮುಂತಾದವುಗಳನ್ನು ನವ್ಯ ಪಂಥದವರು ಆಕ್ಷೇಪಾರ್ಹವೆಂದು ಕರೆದರು. ಪ್ರಗತಿಶೀಲರು ಮಾರ್ಕ್ಸ್‌ವಾದಿ ತಾತ್ವಿಕತೆ ಮತ್ತು ರಷ್ಯಾಕ್ರಾಂತಿಯ ಪ್ರಭಾವದಿಂದ ಹರಡಿದ್ದ ಸಮಾಜವಾದಿ ವಿಚಾರಗಳ ನೆಲೆಯಿಂದ ನವೋದಯದವರ ಉದಾರ ಮಾನವತಾವಾದಿ ಧೋರಣೆಗಳನ್ನು, ತಾತ್ವಿಕ ನಿಲುವಿನ ಕೊರತೆಯನ್ನು, ಸುಧಾರಣಾವಾದದ ಭಾವುಕತೆ, ಹುಸಿತನಗಳನ್ನೂ ಕಟುವಾಗಿ ಟೀಕಿಸಿದರು. ಆದರೆ ಈ ಮೂರು ಪಂಥಗಳ ಪ್ರತಿಷ್ಠಿತ/ಪ್ರಾತಿನಿಧಿಕ ಸಾಹಿತ್ಯ ಪಠ್ಯಗಳೊಳಗೆ ಬಿತ್ತರಗೊಳ್ಳುವ ಸ್ತ್ರೀಪಾತ್ರ, ಸ್ತ್ರೀಸ್ವಭಾವ, ಸ್ತ್ರೀ ಸಮಸ್ಯೆ ಮತ್ತು ಸ್ತ್ರೀಸಂವೇದನೆಗಳನ್ನು ವಿಶ್ಲೇಷಿಸಿ ನೋಡುವಾಗ ಘೋಷಿತ ಪ್ರಗತಿಪರತೆ, ಸಮಾನತಾತತ್ವ, ಜನತಾಂತ್ರಿಕತೆಗಳಿಗೆ ತೀರ ಭಿನ್ನವೂ ಕೆಲವು ಸಲ ವಿರುದ್ಧವೂ ಆಗಿರುವ ಧೋರಣೆಗಳನ್ನು ಕಾಣಲು ಸಾಧ್ಯವಿದೆ. ಪ್ರಗತಿಶೀಲರೆಂದು ಘೋಷಿಸಿಕೊಂಡವರು ಸಾಂಪ್ರದಾಯಿಕ ಸ್ತ್ರೀಮಾದರಿಗಳನ್ನೇ ಕೊಂಡಾಡುವುದು, ಭಾಷೆ, ತಂತ್ರ, ವೈಚಾರಿಕ ವಿಸ್ತಾರ, ವಸ್ತುನಿಷ್ಠತೆಯಲ್ಲಿ ಪ್ರಬಲವಾಗಿ ಬೆಳೆದ ನವ್ಯಪಂಥವು ಬಹುಮಟ್ಟಿಗೆ ಸ್ತ್ರೀ ಚಿತ್ರಣದಲ್ಲಿ ಹೆಣ್ಣನ್ನು ಪುರುಷನ ಲೈಂಗಿಕಾನುಭವದ ಶೋಧನೆಗೆ ಸಾಧನವಾಗಿ ಮಾತ್ರವೇ ಕಾಣಿಸಿರುವುದು– ಅಷ್ಟೇನೂ ಆರೋಗ್ಯಕರ, ಸ್ವಸ್ಥ ಸಂಸ್ಕೃತಿಯ ಲಕ್ಷಣವೆನ್ನಲಾಗದು. ಈ ಎರಡೂ ಗುಂಪಿನವರಿಗಿಂತ ಭಿನ್ನವಾದ ರೀತಿಯಲ್ಲಿ ಸ್ತ್ರೀತ್ವ–ಪುರುಷತ್ವಗಳೆರಡರ ಒಳಗೂ ಪ್ರವೇಶ ಮಾಡಬಲ್ಲಂಥ ಸಮಗ್ರ ಕಲಾದೃಷ್ಟಿಯಿಂದ ಹೆಣ್ಣಿನ ಅನುಭವವನ್ನು ಗುರುತಿಸುವ ಪ್ರಯತ್ನ ನವೋದಯದ ಮುಖ್ಯ ಲೇಖಕರಲ್ಲೇ ಗಮನಾರ್ಹ ರೀತಿಯಲ್ಲಿ ಕಾಣಸಿಗುತ್ತದೆ. ಕುವೆಂಪು, ಕಾರಂತ, ಮಾಸ್ತಿ, ಚದುರಂಗ, ನಿರಂಜನ, ಬಲ್ಲಾಳರಂಥ ಹಳಬರು ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ದಿಗ್ಬಂಧನಗಳ ಮಿತಿಯನ್ನು ಸೃಜನಶೀಲ ನೆಲೆಯಲ್ಲಿ ಮೀರಬಲ್ಲವರಾಗಿ, ಮಾನವರ ಸಮಗ್ರತೆಯನ್ನು ಹಿಡಿದುಕೊಡುವ ಕಾರಣದಿಂದಾಗಿ ಸ್ತ್ರೀವಾದಿ ವಿಮರ್ಶೆಯ ದೃಷ್ಟಿಯಿಂದ ತುಂಬ ಮಹತ್ವದವರಾಗುತ್ತಾರೆ.

ಪ್ರತಿಷ್ಠಿತ ನವೋದಯದ ಕವಿಗಳಾದ ಬೇಂದ್ರೆ, ಕುವೆಂಪು, ಪು.ತಿ.ನ., ಕೆ.ಎಸ್. ನರಸಿಂಹಸ್ವಾಮಿ, ಜಿ.ಎಸ್. ಶಿವರುದ್ರಪ್ಪ ಮುಂತಾದವರ ಸಾಹಿತ್ಯವನ್ನು ಅಡಿಗರು ಮತ್ತು ಅಡಿಗೋತ್ತರ ಕಾವ್ಯ ಮಾದರಿಗಳನ್ನು ಮಾತೃ ಕೇಂದ್ರಿತ ಸಾಂಸ್ಕೃತಿಕ ತತ್ವದ ಹಿನ್ನೆಲೆಯಿಂದ ಅಧ್ಯಯನ ಮಾಡುವುದರಿಂದ ಕನ್ನಡ ಕಾವ್ಯದ ಮುಖ್ಯವಾದ ನೆಲೆಯೊಂದು ಶೋಧಿತವಾಗಲು ಸಾಧ್ಯ.

ಸ್ತ್ರೀನಿಷ್ಠ ವಿಮರ್ಶೆಯಿಂದ ಪರಂಪರೆಯನ್ನು ಪಾಸು–ಫೇಲು ಮಾಡಿಬಿಡಬಹುದೆ? ಎಂಬುದು ಒಂದು ಪ್ರಚಲಿತ ಪ್ರಶ್ನೆ. ಇಂಥ ಪ್ರಶ್ನೆಗಳಿಗೆ ಹೇಳಬಹುದಾದ ಉತ್ತರವಿಷ್ಟೆ: ಪ್ರತಿಯೊಂದು ಹೊಸ ತಾತ್ವಿಕತೆಯೂ ಸಂಸ್ಕೃತಿಯ ವಿಭಿನ್ನ ಆಯಾಮಗಳತ್ತ ಭಿನ್ನ ದೃಷ್ಟಿಕೋನದಿಂದ ಬೆಳಕು ಚೆಲ್ಲಲು ಯತ್ನಿಸುತ್ತದೆ. ಸ್ತ್ರೀವಾದಿ ದೃಷ್ಟಿ ನಮ್ಮ ಸಂಸ್ಕೃತಿಯ ತುಂಬ ಸಂವೇದನಾಶೀಲವಾದ ಹೃದಯದ ಸ್ಪಂದನಗಳ ಸ್ವರೂಪವನ್ನು ಗಮನಿಸುವಷ್ಟು

ಸೂಕ್ಷ್ಮವೂ ವ್ಯಾಪ್ತಿಯುಳ್ಳದ್ದೂ ಆಗಿದೆ. ಆದ್ದರಿಂದಲೇ ಪ್ರಜ್ಞಾಕ್ರಾಂತಿಯನ್ನು ಬಯಸುವಂಥ ಯಾರೂ ಈ ನಿಟ್ಟಿನ ಆಲೋಚನೆಗಳನ್ನು ಹಗುರವಾಗಿ ತಳ್ಳಿಹಾಕುವಂತಿಲ್ಲ.

ಕನ್ನಡದ ಗತಕಾಲಕ್ಕೆ ಸೇರಿದ ಮಹಿಳಾ ಬರಹಗಾರರಾದ ನಂಜನಗೂಡು ತಿರುಮಲಾಂಬಾ, ಆರ್. ಕಲ್ಯಾಣಮ್ಮ, ಬೆಳಗೆರೆ ಜಾನಕಮ್ಮ, ಶಾಮಲಾದೇವಿ ಬೆಳಗಾಂವ್‌ಕರ್, ಸರಸ್ವತೀಬಾಯಿ ರಾಜವಾಡೆ, ಎಚ್.ಎಸ್. ಕಾತ್ಯಾಯಿನಿ, ಎಚ್.ವಿ. ಸಾವಿತ್ರಮ್ಮ, ಸರಸ್ವತೀದೇವಿ ಗೌಡರ, ಮೊದಲಾದವರ ರಚನೆಗಳನ್ನು ಹುಡುಕಿ ಪರಿಶೀಲನೆಗೆ ಒಳಗು ಮಾಡಿ, ಅವರನ್ನು ಮರು ಓದಿಗೆ ಒದಗಿಸಿದ್ದು ಕರ್ನಾಟಕದಲ್ಲಿ ಸ್ತ್ರೀವಾದಿ ಅಧ್ಯಯನಗಳು ಮಾಡಿದ ಒಂದು ಮುಖ್ಯ ಸಾಧನೆ. ಇದರಿಂದಾಗಿ, ಅದುವರೆಗೆ ಮಹಿಳಾ ಬರಹವೆಂದರೆ ತ್ರಿವೇಣಿ, ಅನುಪಮಾ, ಉಷಾ ನವರತ್ನರಾಂ, ಎಂ.ಕೆ. ಇಂದಿರಾ ಎಂದು ಭಾವಿಸುತ್ತಿದ್ದ ದೃಷ್ಟಿಯು ಬದಲಾಗಿದೆ. ಮಾತ್ರವಲ್ಲ, ಇಪ್ಪತ್ತನೆಯ ಶತಮಾನದಲ್ಲಿ ದಶಕದಿಂದ ದಶಕಕ್ಕೆ ನಿರಂತರವಾಗಿ ಮಹಿಳಾ ಕಥಾಸಾಹಿತ್ಯ ಹೇಗೆ ಬೆಳೆದು ಬಂದಿದೆಯೆಂದು ಗುರುತಿಸಲು ಇಂದು ಸಾಧ್ಯವಾಗಿದೆ. ಪ್ರಾಚೀನ ಜಾನಪದ, ವಚನಯುಗ, ಹರಿದಾಸ ಸಾಹಿತ್ಯಯುಗ, ಅರಮನೆ ಕವಯತ್ರಿಯರ ಯುಗಕ್ಕೂ, ಆಧುನಿಕ ಸ್ವಾತಂತ್ರ್ಯಪೂರ್ವ, ಸ್ವಾತಂತ್ರ್ಯೋತ್ತರ ಅವಧಿಗಳ ಮಹಿಳಾ ಸಾಹಿತ್ಯಕ್ಕೂ ಇದರಿಂದ ಒಂದು ಬೆಸುಗೆಯ ಸೃಷ್ಟಿಯಾದಂತೆ ಆಗಿದೆ.

ನಾಡಿನ ಆಧುನೀಕರಣದ ಪ್ರಕ್ರಿಯೆಗೆ ನಮ್ಮ ಪುರುಷರು ಸ್ಪಂದಿಸಿರುವ ಬಗೆಗಳನ್ನು ನೋಡಿದರೆ ಹೊಸತನದ ಆವಿಷ್ಕಾರಗಳೆಲ್ಲಕ್ಕು ಪುರುಷರು ಪ್ರತಿನಿಧಿಗಳಾಗಿದ್ದರೆ, ಹಳೆಯ, ಸಾಂಸ್ಕೃತಿಕ ಮೌಲ್ಯಗಳ ಗಟ್ಟಿತನಕ್ಕೆ ಸ್ತ್ರೀಯರು ಪ್ರತೀಕಗಳಾಗಿರುವುದನ್ನು ಗುರುತಿಸಬಹುದು. ಆಧುನಿಕ ಮಹಿಳಾ ಬರಹಗಾರರು ಸಾಂಪ್ರದಾಯಿಕ ಸಾಂಸ್ಕೃತಿಕ ಮೌಲ್ಯಕ್ಕೆ ಪ್ರತೀಕವಾಗುವ ಸ್ತ್ರೀಮಾದರಿಗಳಿಗೆ ಬದಲಾಗಿ ಕುಟುಂಬ, ದಾಂಪತ್ಯ, ವಿವಾಹ, ಸಾಮಾಜಿಕ ಮೌಲ್ಯ, ಮಾನವೀಯ ಸಂಬಂಧಗಳು ವಿಚ್ಛಿದ್ರವಾಗುತ್ತಿರುವ ಸ್ಥಿತ್ಯಂತರಕಾಲದ ಸ್ತ್ರೀಪ್ರತೀಕಗಳನ್ನು ಹೆಚ್ಚಾಗಿ ಸೃಷ್ಟಿಸುತ್ತಿದ್ದಾರೆ ಎಂಬ ಸೂಕ್ಷ್ಮ ನೋಟವನ್ನು ಸ್ತ್ರೀವಾದಿ ಅಧ್ಯಯನ, ವಿಮರ್ಶೆ, ವಿಶ್ಲೇಷಣೆಗಳು ದೊರಕಿಸಿಕೊಟ್ಟಿವೆ.

ಕನ್ನಡದ ಸಂದರ್ಭದಲ್ಲಿ ಚಾರಿತ್ರಿಕ ಅನಿವಾರ್ಯತೆಯಿಂದಾಗಿ ಸ್ತ್ರೀವಾದವು ಪ್ರವೇಶಿಸಿದೆ. ಅಂತಾರಾಷ್ಟ್ರೀಯ ಸ್ತ್ರೀವಾದಿ ತಾತ್ವಿಕತೆಗಳಲ್ಲಿ, ಇಲ್ಲಿನ ಪರಿಸರಕ್ಕೆ ಅನ್ವಯಿಸಲು ಸಾಧ್ಯವಿರುವಂಥ ಅಂಶಗಳನ್ನು ಎತ್ತಿಕೊಂಡು, ಸ್ಥಳೀಯವಾದ ಸ್ತ್ರೀಯರ ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತ ಅದೂ ಬೆಳೆಯುತ್ತಿದೆ. ಸ್ತ್ರೀವಾದದಲ್ಲಿನ ಕೆಲವು ಅಂಶಗಳು ಸಾರ್ವತ್ರಿಕ ಲಕ್ಷಣಗಳುಳ್ಳವು. ಆದರೆ 'ಸಾರ್ವತ್ರಿಕತೆ' ಎಂದರೆ 'ಸಮವಸ್ತ್ರಧಾರಿತ್ವ'ವಲ್ಲ. ಜಗತ್ತಿನ ಬೇರೆ ಬೇರೆ ಭೂಭಾಗಗಳಲ್ಲಿರುವ ಮಾನವರ ಆಸೆ, ಆತಂಕಗಳಲ್ಲಿ ಆಯಾ ಸಂಸ್ಕೃತಿಯು ಕೆಲವನ್ನಷ್ಟೇ ಎತ್ತಿಹಿಡಿದು ಉಳಿದವುಗಳನ್ನು ಹತ್ತಿಕ್ಕಿ ಗೌಣವಾಗಿಸುತ್ತಿರುತ್ತದೆ. ನಮ್ಮ ಸಾಹಿತ್ಯಲೋಕದ ಸ್ತ್ರೀಯರು ಪ್ರಪಂಚದ ಪಿತೃಪ್ರಧಾನ ಸಮಾಜಗಳ ತಮ್ಮ ಪ್ರತಿರೂಪಗಳೊಂದಿಗೆ

ಎಷ್ಟೋ ಸಾಮ್ಯಾಂಶಗಳನ್ನು ಹೊಂದಿರುವಂತೆ ವೈರುಧ್ಯಗಳನ್ನೂ ಹೊಂದಿರುವುದುಂಟು. ಎಷ್ಟೇ ಬಲವಾದ ಸ್ತ್ರೀದಮನಕಾರಿ ಸಮಾಜವಿರಲಿ, ಅದರ ಒಳಪದರಗಳಲ್ಲಿ ಮಹಿಳೆಯರ ಖಾಸಗಿಯಾದ ಬಂಡಾಯದ ನೆಲೆಗಳು, ಮಾದರಿಗಳು ಇದ್ದೇ ಇರುತ್ತವೆ. ಪಾಶ್ಚಿಮಾತ್ಯ ಮಹಿಳೆಯರ ಬಂಡಾಯವು ತೀಕ್ಷ್ಣವಾದ ಕೋಪವಾಗಿ, ಆಸ್ಫೋಟಕಾರಿಯಾಗಿ, ಇಬ್ಸನ್ನನ 'ನೋರಾ'ಳ ಮಾದರಿಯಲ್ಲಿ ಪ್ರಕಟವಾಗುತ್ತದೆ. ಆದರೆ ಭಾರತೀಯ ಕಲ್ಪನೆಯ ಕಥಾಸಾಹಿತ್ಯದಲ್ಲಿ ಮಹಿಳೆಯ ಭಾವಾಭಿವ್ಯಕ್ತಿಯು ಉರಿವ ಕ್ರೋಧವಾಗುವುದಕ್ಕಿಂತ ಹೆಚ್ಚಾಗಿ ಯಾತನೆ, ನಿರಾಶೆ, ನೋವಿನ ರೂಪದಲ್ಲಿ ಕಾಣಿಸುತ್ತದೆಂಬ ಸುಧೀರ್ ಕಾಕರ್ ಅವರ ವಿಚಾರವನ್ನು ಕನ್ನಡಕ್ಕೂ ವಿಸ್ತರಿಸಲು ಸಾಧ್ಯವಿದೆ. ಪುರುಷನ ಸ್ಥಾನದಲ್ಲಿ ಸ್ತ್ರೀಯನ್ನು ಪ್ರತಿಷ್ಠಾಪಿಸಿದರೆ ಎಲ್ಲವೂ ಪರಿಹಾರವಾದಂತೆ ಎಂಬ ಚಿಂತನೆ ಕರ್ನಾಟಕದ ಸ್ತ್ರೀವಾದಿ ಚಿಂತನೆಯನ್ನು ರೂಪಿಸಿಲ್ಲ. ಬದಲಾಗಿ ಕನ್ನಡ ಸಹಿತ್ಯದ ಮಹಿಳಾ ರೂಪಗಳು, ಅದರಲ್ಲೂ ಇತ್ತೀಚಿನ ಮಹಿಳಾ ಕಾವ್ಯವು ಬಿಂಬಿಸುವ ಮಾದರಿಯು ಹೆಣ್ಣು ಗಂಡುಗಳು ಇಬ್ಬರೂ ಸಮಾನ ನೆಲೆಯಲ್ಲಿ ಜೋಡಿಸಿಕೊಂಡ ಏಕರೂಪಿ ಘಟಕದ ಆದರ್ಶವೊಂದನ್ನು ಪ್ರತಿಪಾದಿಸುತ್ತ, ಈ ಸಿದ್ಧಿಯ ಈಡೇರಿಕೆಗಾಗಿ ನಿರಂತರವಾದ ನಿರೀಕ್ಷೆ, ಹಂಬಲಗಳನ್ನು ಸೂಚಿಸುತ್ತದೆ. ಸ್ತ್ರೀ–ಪುರುಷರನ್ನು ಸಮಾನ ಸಖಿ–ಸಖರಂತೆ ಕಲ್ಪಿಸಿಕೊಂಡ ಈ ಸಾಮಾಜಿಕ ಆದರ್ಶ ಮಹಿಳಾ ಬರಹದ್ದು ಮಾತ್ರವಲ್ಲ, ಇಂಥ ಸಮಾನ ಸ್ತ್ರೀ–ಪುರುಷ ಸಂಬಂಧಗಳುಳ್ಳ ಪರ್ಯಾಯ ವ್ಯವಸ್ಥೆಯ ಆಶಯವೇ ಇಲ್ಲಿನ ಸ್ತ್ರೀವಾದಿ ಚಿಂತನೆಗೂ ಪ್ರೇರಕವಾಗಿರುವುದನ್ನು ಕಾಣಬಹುದು.

○

೭. ಮಹಿಳಾ ಸಾಹಿತ್ಯ – ಸ್ವಂತ ಪರಂಪರೆ, ಸ್ವಂತ ಅಭಿವ್ಯಕ್ತಿ

* ಮಹಿಳೆಯರು ಎಂತಹ ಪರಿಸರದಲ್ಲಿ ಬದುಕಿ, ಬರೆಯುತ್ತಿದ್ದಾರೆ, ಅವರನ್ನು ಓದುವವರು ಯಾರು, ಅವರ ಬಗ್ಗೆ ಬರೆಯುವವರು ಯಾರು ಎಂಬ ಅಂಶಗಳು ಅವರ ಬರೆಹದ ಸ್ವರೂಪ, ಲಕ್ಷಣಗಳ ಮೇಲೆ ಬಲವಾದ ಪ್ರಭಾವ ಬೀರುತ್ತವೆ. ಉದಾಹರಣೆಗೆ ಪುರುಷಪ್ರಧಾನವಾದ ವ್ಯವಸ್ಥೆಯಿರುವಲ್ಲಿ ಭಾಷೆ ಹಾಗೂ ಅದರ ಅಂಗವಾದ ಸಾಹಿತ್ಯ, ತತ್ವಚಿಂತನೆಗಳೆಲ್ಲ 'ಪುರುಷ' ಕೇಂದ್ರಿತ ರೀತಿಯಲ್ಲಿಯೇ ಬೆಳೆದಿರುತ್ತವೆ. ಸಾಹಿತ್ಯದ ಸ್ವರೂಪ, ಧ್ಯೇಯ, ಆದರ್ಶ ಮತ್ತು ಅವುಗಳ ಮಾನದಂಡಗಳು ಪುರುಷರಿಂದ ತಮ್ಮನ್ನೇ ದೃಷ್ಟಿಯಲ್ಲಿಟ್ಟುಕೊಂಡು ರೂಪುಗೊಂಡಿರುವಂಥ ಪರಿಸರದಲ್ಲಿ ಆ ಸಾಹಿತ್ಯಕ್ಕೆ ಪ್ರವೇಶ ಪಡೆಯುವುದೂ ಮಹಿಳೆಯರಿಗೆ ದುಸ್ತರವಾಗಬಹುದು. ಕನ್ನಡದ ಆಧುನಿಕ ಮಹಿಳಾ ಬರಹಗಾರರ ಮೊದಲ ಪೀಳಿಗೆಗೆ ಸೇರುವ ತಿರುಮಲಾಂಬಾ ಹಾಗೂ ಕಲ್ಯಾಣಮ್ಮ ಹೀಗೆ ಮೊದಲು ಬರಹಗಾರರೆಂದು ತಮ್ಮನ್ನು ಸ್ಥಾಪಿಸಿಕೊಳ್ಳುವುದಕ್ಕೂ ಹೋರಾಡಬೇಕಾಯಿತೆಂಬುದನ್ನು ಗಮನಿಸಬಹುದು.

೧. ತಡವಾಗಿ ಬಂದವರು

ಸಾಹಿತ್ಯ ಕ್ಷೇತ್ರಕ್ಕೆ ಮಹಿಳೆಯರು ಪ್ರವೇಶ ಪಡೆದರೂ, ಅಲ್ಲಿ ಅವರ ಜಾಗ 'ತಡವಾಗಿ ಬಂದವರು', 'ನೈಜವಲ್ಲದ, ತೋರಿಕೆ ಬರಹಗಾರರು' 'ಅತ್ಯುತ್ಸಾಹದಲ್ಲಿ ಬರೆಯುವವರು', ತಮ್ಮದಾಗಿರದ ಸಾಹಿತ್ಯಕ ಮಾನದಂಡಗಳ ದೃಷ್ಟಿಯಿಂದಲಂತೂ ''ಯಾವತ್ತೂ ನಿರೀಕ್ಷಿತ ಮಟ್ಟಕ್ಕೆ ಏರಲಾರದವರು' ಮುಂತಾದ ರೀತಿಯಲ್ಲಿರುತ್ತದೆ. ಬರಹಗಾರಿಕೆ ತಮ್ಮ ಸೃಜನಶೀಲ ಅಭಿವ್ಯಕ್ತಿಯ ನ್ಯಾಯಯುತ ಹಕ್ಕು ಎಂಬ ಪ್ರಜ್ಞೆಯಿಂದ ಮಹಿಳೆಯರು ಬರೆಯತೊಡಗಿದ್ದೇ ಕಳೆದ ಶತಮಾನದಿಂದ. ಆ ಮೊದಲ ಹಂತಗಳ ಲೇಖಕಿಯರು – ತಮ್ಮ ಸುತ್ತಲೂ ತೀವ್ರವಾಗಿ ಬದಲಾಗುತ್ತಿರುವ ಸಾಹಿತ್ಯ ಪರಿಸರದಲ್ಲಿ, ದಿಕ್ಕು ತಪ್ಪಿದವರಂತೆ ಇದ್ದರು. ನವೋದಯ ಕಾಲದ ಪುರುಷ ಬರಹಗಾರಿಕೆ ಆಂಗ್ಲ ಭಾಷಾ ಶಿಕ್ಷಣದಿಂದಲೂ ಪಾಶ್ಚಿಮಾತ್ಯ ಸಂಸ್ಕೃತಿಯ ಸಂಪರ್ಕ, ಪ್ರಭಾವಗಳಿಂದಲೂ ಹೊಸ ಪ್ರಕಾರಗಳ ಬರಹಗಾರಿಕೆಯ ಪ್ರಯೋಗಗಳಲ್ಲಿ ಮಿಂದೇಳುತ್ತಿದ್ದಾಗ ತಿರುಮಲಾಂಬಾ ಇನ್ನೂ ಹಿಂದಿನ ಲೇಖಕರಾದ ಆಲೂರು ವೆಂಕಟರಾವ್, ವೆಂಕಟರಂಗೋಕಟ್ಟಿ, ಕೆರೂರು ವಾಸುದೇವಾಚಾರ್ಯ, ಮುದವೀಡು ಕೃಷ್ಣರಾವ್ ಮುಂತಾದವರ

ಭಾಷೆ, ರಚನಾ ವಿಧಾನಗಳನ್ನು ಬಳಸಿ ಬರೆಯುತ್ತಿದ್ದರು. ಹೀಗೆ 'ತಡವಾಗಿ ಬಂದವರು' ಎಂಬ ಜಾಗದಲ್ಲಿ ಇದ್ದು, ಅದರ ಫಲವಾದ ಎಲ್ಲ ಟೀಕೆ, ನಿಂದೆ, ಕಟುವಿಮರ್ಶೆ, ನಿರುತ್ಸಾಹಕರ ಪ್ರತಿಕ್ರಿಯೆಗಳನ್ನು ಅವರು ಎದುರಿಸಿದರು ಎನ್ನುವುದು ಇದೀಗ ಮಹಿಳಾ ಸಾಹಿತ್ಯ ಚರಿತ್ರೆಯ ಒಂದು ಭಾಗವೇ ಆಗಿಬಿಟ್ಟಿದೆ.

೨. ಜಾಗಕ್ಕಾಗಿ ಹಕ್ಕೊತ್ತಾಯ

ಈಚಿನ ದಿನಗಳಲ್ಲಿ ಎಂದರೆ ಎರಡು ದಶಕಗಳಲ್ಲಿ ಈ ಮಹಿಳೆಯರ ಬರಹಗಾರಿಕೆಯದೇ ಸ್ವತಂತ್ರವೂ, ಸ್ವಂತದ್ದೂ ಆದ ಪರಂಪರೆಯೊಂದನ್ನು ಶೋಧಿಸಿ, ಸಂಗ್ರಹಿಸಿ ದಾಖಲಿಸುವ ಯತ್ನವು ಹೆಚ್ಚು ಪ್ರಚಲಿತವಾಗಿದೆ. ಈ ಸ್ವಂತ ಪರಂಪರೆಯ ಅವಶ್ಯಕತೆಯನ್ನು ಕುರಿತ ಚರ್ಚೆಗಳಲ್ಲಿ ಮಹಿಳಾ ಚಳವಳಿಗಾರರೂ, ಮಹಿಳಾ ಅಧ್ಯಯನಕಾರರೂ ಪ್ರತಿಪಾದಿಸುವ ಒಂದು ಮುಖ್ಯ ವಿಚಾರ ಇದು: ಪುರುಷ ಪ್ರಧಾನ ಸಾಹಿತ್ಯ ಚರಿತ್ರೆಯೊಳಗೆ ತಮ್ಮ ನ್ಯಾಯವಾದ ಸ್ಥಾನಮಾನಗಳನ್ನು ನಿರ್ಲಕ್ಷಿಸಲಾಗಿದೆ ಎಂಬ ಅಳಲು ಇಂಥ ವ್ಯವಸ್ಥೆಯಲ್ಲಿ ಮಹಿಳಾ ಬರಹಗಾರರಿಗೆ ಇದ್ದೇ ಇರುತ್ತದೆ. ಚರಿತ್ರೆಕಾರರು ಎಲ್ಲಾ ಮಹಿಳಾ ಬರಹಗಾರರನ್ನೂ ಒಟ್ಟಿಗೇ ಪಟ್ಟಿಮಾಡಿ ಚರಿತ್ರೆಯ ಕೊನೆಯ ಅನುಬಂಧದ ಹಾಗೆ ಇರಿಸಿ ಕೈ ತೊಳೆದುಕೊಂಡು ಬಿಡುವುದೇ ರೂಢಿಯಾಗಿದೆ–ಎಂಬುದರಿಂದ ಮಹಿಳಾ ಬರಹಗಾರರು ಕನಲಿ, ಆ ಚರಿತ್ರೆಯಲ್ಲಿ ತಮಗೆ ಸಮಾನ ಜಾಗಗಳು ಬೇಕೆಂದು ಆಕ್ರೋಶದಿಂದ ಹಕ್ಕೊತ್ತಾಯಿಸುವುದು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಇದ್ದೇ ಇರುತ್ತದೆ.

೩. ಸ್ವಂತಕ್ಕೊಂದು ಪರಂಪರೆ

ಈ ರೀತಿ ಗೋಗರೆಯುತ್ತಾ ಸಮಾನತೆ ಪಡೆಯುತ್ತೇವೆನ್ನುವುದು ಕನಸಿನ ಮಾತೇ ಸರಿ. ಸೃಜನಶೀಲ ಪ್ರತಿಭೆ ಹಾಗೂ ಭಾಷೆಯ ಮೇಲೆ ಪರಮಾಧಿಕಾರವುಳ್ಳ ಪುರುಷ ಬರಹಗಾರರು ತಮ್ಮದೇ ಹೊಸ ಹೊಸ ಪ್ರಯೋಗಶೀಲ ಪ್ರಯತ್ನಗಳಿಂದ ಹೊಸತನ್ನು ಸೃಷ್ಟಿಸುತ್ತಲೇ ಹೋಗುತ್ತಾರೆ. ಅವರನ್ನು ಬೆನ್ನು ಹತ್ತುವ ಮಹಿಳಾ ಬರಹಗಾರರು ಪುರುಷರ ಪ್ರತಿಭೆಗೆ ಅಸೂಯೆಪಡುತ್ತಾ, ಅವರ ಓಟಕ್ಕೆ ಪೈಪೋಟಿ ಹೂಡುತ್ತಾ ಹೋಗುತ್ತಾರೆ. ಆದರೆ ಪುರುಷರು ತಮಗಾಗಿಯೇ ಸೃಷ್ಟಿಸಿಕೊಂಡಿರುವ ಸಾಹಿತ್ಯ ಶ್ರೇಣಿಯಾಗಲೀ ಅದರ ಶ್ರೇಷ್ಠತೆಯ ಮಾನದಂಡಗಳಾಗಲೀ ಮಹಿಳಾ ಬರಹಗಾರಿಕೆಯನ್ನು ಸಮಾನವೆಂದು ಭಾವಿಸಲು ಎಂದೂ ಮುಂದಾಗಲಾರವು. ಹೀಗಿರುವುದರಿಂದ ಈಗಿರುವ ಚರಿತ್ರೆ, ಪರಂಪರೆಗಳೊಳಗೆ ಜಾಗ ಪಡೆಯಬೇಕೆಂಬ ಮಹಿಳೆಯರ ಗುದ್ದಾಟ ವ್ಯರ್ಥವೇ ಸರಿ. ಅದಕ್ಕೆ ಬದಲಾಗಿ ಅವರು ತಮ್ಮಂತೆಯೇ ಹಿಂದಿನಿಂದಲೂ ಮಹಿಳೆಯರ ಅನುಭವಗಳಿಗೆ ಲಭ್ಯವಾಗುತ್ತ ಬಂದಿರುವ ಅಭಿವ್ಯಕ್ತಿ ಮಾದರಿಗಳನ್ನೂ, ಅಂಥ ಮಹಿಳಾ ಬರಹಗಾರರನ್ನೂ ಶೋಧಿಸಿ, ಹೆಕ್ಕಿ ತೆಗೆದು ಗುರುತಿಸಿ ದಾಖಲಿಸುತ್ತಾ ತಮಗೊ ತಮ್ಮದೇ ಪರಂಪರೆಯೊಂದು ಇದೆ ಎಂಬ

ಆತ್ಮವಿಶ್ವಾಸವನ್ನು ಮೊದಲು ಬೆಳೆಸಿಕೊಳ್ಳಬೇಕು. ಆ ಪೂರ್ವ ಪರಂಪರೆಯ ಸತ್ವದ ಬೆಳಕಿನಲ್ಲಿ ಸಾಗಿ, ತಮ್ಮದೇ ಆದ ಹೊಸ ಭಾಷೆಯೊಂದನ್ನು ಕಟ್ಟಿಕೊಳ್ಳಬೇಕು. ತಮ್ಮ ಅನುಭವವು ಅಭಿವ್ಯಕ್ತಿಗೆ ಅತ್ಯಂತ ಅರ್ಹವೇ ಆಗಿದೆ ಎಂಬ ಆತ್ಮಘನತೆಯಲ್ಲಿ ಆತ್ಮಪ್ರತ್ಯಯದಿಂದ ಪ್ರಾಮಾಣಿಕವಾದ ಸೃಜನಾಶೀಲ ಅಭಿವ್ಯಕ್ತಿಗಾಗಿ ಶ್ರಮಿಸಬೇಕು. ಹೀಗೆ ಸ್ವಂತದ ಪರಂಪರೆ ಮತ್ತು ತಮ್ಮದೇ ಆದ ಭಾಷೆಯ ಕಟ್ಟೋಣದ ಮೂಲಕ ಹೊಸ ಸಾಹಿತ್ಯವೊಂದನ್ನು ತಮ್ಮದೇ ವಿಶಿಷ್ಟವಾದ ಛಾಪನ್ನೊತ್ತಿ ಒಟ್ಟು ಸಾಹಿತ್ಯ ಕ್ಷೇತ್ರದಲ್ಲಿ ಸ್ಥಾಪಿಸಲು ಸಾಧ್ಯ. ಎಂಬುದು ಸ್ತ್ರೀವಾದಿ ಚಿಂತಕರು, ಮಹಿಳಾ ಅಧ್ಯಯನಕಾರರೂ ಪ್ರತಿಪಾದಿಸುವ ಮತ್ತು ಒಪ್ಪುವ ವಿಚಾರವಾಗಿದೆ.

೪. ಕನ್ನಡ ಮಹಿಳೆಯರ ಸ್ವಚರಿತೆ

ಮಹಿಳಾ ಬರಹವನ್ನು ಅವಜ್ಞೆ, ತಿರಸ್ಕಾರಗಳಿಂದ, ಗೌಣವಾಗಿಸಿಡುವ ರೀತಿಯ ಚರಿತ್ರೆಯ ದೃಷ್ಟಿಕೋನವನ್ನು ಪ್ರತಿಭಟಿಸುವುದಕ್ಕಾಗಿಯೇ ಮಹಿಳಾ ಚಳವಳಿಗಾರರು ಚರಿತ್ರೆಯಲ್ಲಿ ನಷ್ಟವಾದ, ಕಾಣೆಯಾದ, ಗೈರುಹಾಜರಾದ ಮಹಿಳೆಯರ ಬರಹಗಳನ್ನು ಸಂಶೋಧಿಸಿ, ಚರಿತ್ರೆಯ ಗೋರಿಯಿಂದಲೂ, ಧೂಳು ಹಿಡಿದ ಹಳೆ ಪುಸ್ತಕ ರಾಶಿಯಿಂದಲೂ ಹೊರತಂದು, ಸಂರಕ್ಷಿಸಿ, ಅಂಥ ಬರಹಗಾರರನ್ನು ಮರು ಓದುಗಳಿಗೆ ಒಳಗುಮಾಡಿ ದಾಖಲಿಸುವ ಯತ್ನ ಕಳೆದ ಶತಮಾನದ ೮೦ರ ದಶಕದಿಂದಲೂ ನಡೆಸುತ್ತ ಬಂದಿದ್ದಾರೆ. ಕಾಲದ ಗತಿಯಲ್ಲಿ ಮೌನದೊಳಗೆ ಅಡಗಿಹೋದ ಮಹಿಳಾನುಭವಗಳನ್ನು ಆ ಮೌನಕೋಟೆಗಳಿಂದ ಪಾರು ಮಾಡಿ, ಅದರ ಧ್ವನಿಗಳು ಹೊರಜಗತ್ತಿಗೆ ಕೇಳಿಸುವಂತೆ ಮಾಡುವುದೇ ಸ್ವಂತ ಪರಂಪರೆಯನ್ನು ಕಟ್ಟುವ ಮೊದಲ ಮೆಟ್ಟಿಲು. ಕನ್ನಡದಲ್ಲಿ ಈಗ ಲಭ್ಯವಿರುವ 'ನಂಜನಗೂಡು ತಿರುಮಲಾಂಬಾ ಜೀವನ ಮತ್ತು ಸಾಹಿತ್ಯ' (೧೯೮೭) 'ಕಲ್ಯಾಣ ಸರಸ್ವತಿ' (೧೯೯೨), 'ಹಿತೈಷಿಣಿಯ ಹೆಜ್ಜೆಗಳು' (೧೯೮೯) 'ಶ್ಯಾಮಲಾ ಸಂಚಯ' (೧೯೮೯), 'ಬೆಳಗೆರೆ ಜಾನಕಮ್ಮ' (೧೯೮೮) 'ಕಾತ್ಯಾಯಿನಿ ಸಾಹಿತ್ಯ ವಾಚಿಕೆ' (೧೯೯೫) 'ಗಿರಿಬಾಲೆ ಸಾಹಿತ್ಯ ವಾಚಿಕೆ (೧೯೯೫) 'ಸಾರಸರಸ್ವತಿ' (೧೯೯೭) 'ತ್ರಿವೇಣಿ' (೧೯೮೭) 'ವಿಮುಕ್ತೆಯ ಹಾದಿ' (೧೯೯೮) 'ಆರ್. ಕಲ್ಯಾಣಮ್ಮನವರ ಬದುಕು ಬರಹ' (೧೯೯೧) 'ಭಾರತಿ' (೧೯೭೨) 'ಸುರಗಿ' (೧೯೯೧) 'ಅನುಪಮಾಭಿನಂದನ' (೧೯೮೮) ಮುಂತಾದ ಗ್ರಂಥಗಳೂ ಅನೇಕರ ಪಿ.ಎಚ್.ಡಿ. ಮಹಾಪ್ರಬಂಧಕಗಳೂ ಈ ರೀತಿಯ ಚರಿತ್ರೆಯ ಮರುಕಟ್ಟೋಣದ ಪ್ರಯತ್ನಗಳು ಹೇಗೆ ಎರಡು ದಶಕಗಳಲ್ಲಿ ಬೆಳೆಯುತ್ತ ಬಂದಿದೆ ಎಂಬುದಕ್ಕೆ ದಿಕ್ಸೂಚಿಗಳು. ಇಂತಹ ಪ್ರಯತ್ನವೆಲ್ಲ ಒಟ್ಟಾಗಿ ಒಂದು ಶಿಖರದ ಹಂತವನ್ನು ತಲುಪಿದೆಯೆನ್ನುವಂತೆ ಇತ್ತೀಚೆಗೆ "**ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ**" ಎಂಬ ಬೃಹತ್ ಸಂಪುಟವೊಂದನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಇತ್ತೀಚೆಗೆ ಹೊರತಂದಿದೆ (೨೦೦೬).

೫. ಮಹಿಳಾ ಬರಹದ ವಿಭಿನ್ನತೆ ಏಕೆ, ಹೇಗೆ : ಮಹಿಳೆಯರದೇ ಆದ ಭಾಷೆ

ಮಹಿಳಾ ಬರಹಗಾರಿಕೆಯದೇ ಸ್ವತಂತ್ರ ಪರಂಪರೆಯನ್ನು ಕಟ್ಟುವ ಹೊತ್ತಿನಲ್ಲಿ ಅವರ

ಬರಹಕ್ಕೆ ತಮ್ಮದೇ ಆದ ವೈಲಕ್ಷಣ್ಯವಿದೆಯೆ? ಅಂಥ ವಿಲಕ್ಷಣತೆಯ ಸ್ವರೂಪವೇನು? ಅದರ ಹಿಂದಿನ ಮೂಲ ಕಾರಣವು ಸ್ತ್ರೀಯೆಂಬ ಜೀವಶಾಸ್ತ್ರ ಮೂಲದ ನೈಸರ್ಗಿಕ ಭಿನ್ನ ಲಕ್ಷಣಗಳಿಂದಲೇ ಹುಟ್ಟಿದ್ದೋ ಅಥವಾ ರಾಜಕೀಯಾರ್ಥಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಪಿತೃಪ್ರಾಧಾನ್ಯದ ಅಡಿಯಲ್ಲಿ ದಮನಿತರಾಗಿ ಮಹಿಳೆಯರು ಅಧೀನರಾಗಿ ಬದುಕುವುದರಿಂದ ಅವರ ಬರಹಗಳು ಭಿನ್ನವಾದವ್ರೋ ಎಂಬ ವಿವಾದಸ್ಪದವಾದ ಪ್ರಶ್ನೆಗಳು ಎದ್ದಿವೆ. ಭಾಷೆಯ ಮೇಲಿನ ಅಧಿಕಾರ ಪೂರ್ಣವಾಗಿ ಪುರುಷರದೇ ಆಗಿರುವಾಗ ಅದೇ ಭಾಷೆಯ ಮೂಲಕ ಮಹಿಳೆ ತನ್ನ ಅನುಭವದ ವಿಶೇಷತೆಯನ್ನು ಪ್ರಕಟಿಸುವುದೇ ಸಾಧ್ಯವಾಗದು. ಲಿಂಗ ಭಿನ್ನತೆಯ ನೈಸರ್ಗಿಕ ವೈಲಕ್ಷಣ್ಯದ ಕಾರಣದಿಂದ ಮಹಿಳೆ ಈ ಜಗತ್ತನ್ನು ಗ್ರಹಿಸುವ ಕ್ರಮ, ಬದುಕಿನ ಅನುಭವಗಳನ್ನು ಪಡೆವ ಕ್ರಮಗಳೆಲ್ಲ ಪುರುಷರದಕ್ಕಿಂತ ಭಿನ್ನವೇ ಆಗಿರುತ್ತದೆ. ಹಾಗಾಗಿ ತನ್ನದೇ ಅನುಭವವನ್ನು ಹಿಡಿದು ಹೇಳಲು ಪುರುಷ ರೂಪಿತ ಭಾಷೆ ಮಹಿಳೆಗೆ ಒಗ್ಗಲಾರದು. ಆದ್ದರಿಂದ ತನ್ನ ಹೆಣ್ಣು ದೇಹದ ಸೂಕ್ಷ್ಮ ಸಂವೇದನೆ, ತನ್ನದೇ ದೇಹದ ಲಯಗಳನ್ನು ಹಿಡಿದು ನುಡಿಯಬಲ್ಲಂಥ ತನ್ನದೇ ಭಾಷೆಯನ್ನು ಮಹಿಳೆ ಈಗ ಹುಡುಕಿ ರೂಪಿಸಿಕೊಳ್ಳಬೇಕಾದದ್ದು ಅಗತ್ಯ ಎಂಬ ಒಂದು ನಿಟ್ಟಿನ ವಿಚಾರ ಈಗ ಪ್ರಚಲಿತವಿದೆ. ಅಂದರೆ ಪುರುಷರ ಅಭಿವ್ಯಕ್ತಿ ಮಾದರಿಯಲ್ಲಿ 'ಲಿಂಗಾತೀತ' ಎಂಬ ಅಮೂರ್ತವೂ ಕಾಲ್ಪನಿಕವೂ ಆದ ಜಾಗಕ್ಕೆ ಜಿಗಿಯಲು ಶ್ರಮಿಸುವ ಬದಲಾಗಿ, ಯಾವ ಸ್ತ್ರೀಲಿಂಗತ್ವದ ಕಾರಣದಿಂದ ತಾನು ನಿಕೃಷ್ಟ ಜಾಗಕ್ಕೆ ಒತ್ತರಿಸಲ್ಪಟ್ಟಿದಾಳೋ, ಅದೇ ಲೈಂಗಿಕ ಸ್ತ್ರೀ ವಿಶಿಷ್ಟ ನೆಲೆಯಿಂದಲೇ ತನ್ನೆಲ್ಲ ಅನುಭವಕ್ಕೆ ತೀವ್ರವೂ ಉತ್ಕಟವೂ ಆದ ಅಭಿವ್ಯಕ್ತಿ ಕೊಡಬಲ್ಲ ಭಾಷೆಯೊಂದನ್ನು ಕಟ್ಟುವುದರ ಮೂಲಕ ತನ್ನ ನೈಜ ವಿಮೋಚನೆಯನ್ನು ಮಹಿಳೆ ಅಭಿವ್ಯಕ್ತಿಯಲ್ಲಿ ಸಾಧಿಸಬಹುದು ಎಂದು ಫ್ರೆಂಚ್ ಸಾಂಸ್ಕೃತಿಕ ಸ್ತ್ರೀವಾದಿಗಳು ವಾದಿಸಿ, ಸಾಧಿಸಿಯೂ ತೋರಿಸಿದ್ದಾರೆ. ಆದರೆ ಕನ್ನಡದಂಥ ಭಾಷೆಯ ಸ್ವರೂಪ ಫ್ರೆಂಚ್ ಭಾಷೆಯ ಹಾಗೆ ಬಾಗುವ ಬಳುಕುವ ಹಿಗ್ಗಬಲ್ಲ ಹೇಗೆಂದರೆ ಹಾಗೆ ನುಡಿಯಬಲ್ಲ ರೀತಿಯಲ್ಲಿದೆಯೆ? ಎಂಬುದನ್ನು ವಿಚಾರ ಮಾಡಬೇಕು. ಕಳೆದ ಮೂರು ದಶಕಗಳಲ್ಲಿ ತೀವ್ರ ಸಂವೇದನಾಶೀಲ ಬರಹಗಳು ಮಹಿಳೆಯರಿಂದ ಬಂದಿವೆ. ಆದರೆ ಆ ಬರಹಕ್ಕೆ ವಿಶಿಷ್ಟವಾದ ಪ್ರಾದೇಶಿಕ ಹಾಗೂ ಜನಾಂಗಿಕ ಉಪಭಾಷಿಕ ಲಕ್ಷಣಗಳೇ ಹೆಚ್ಚು ಸತ್ವವನ್ನು ನೀಡಿರುವುದನ್ನೂ ಗಮನಿಸಬೇಕು. ವೈದೇಹಿ, ಗೀತಾನಾಗಭೂಷಣರಂಥ ಲೇಖಕಿಯರು ತುಂಬ ವಿಶಿಷ್ಟ ಸೂಕ್ಷ್ಮ ಭಾಷಾಭಿವ್ಯಕ್ತಿಯನ್ನು ಸಾಧಿಸಿದ್ದರೆ, ಅದರಲ್ಲಿ ಅವರು ಮಹಿಳೆಯರ ಹೆಣ್ತನದ ವೈಲಕ್ಷಣ್ಯಗಳನ್ನು ತಂದಿರುವುದೆಷ್ಟು ಪಾಲು? ಆಡುಭಾಷೆಗಳ ಸ್ಥಳೀಯ ರೂಢಿಸಿದ್ಧ ವೈಲಕ್ಷಣ್ಯಗಳ ಪಾಲೆಷ್ಟು? ಎಂಬುದು ಸಂಶೋಧನೆಗೆ ಯೋಗ್ಯವಾದ ವಸ್ತುವಾಗುತ್ತದೆ.

ಜೀವಶಾಸ್ತ್ರೀಯ ಹೆಣ್ತನದ ಭಿನ್ನತೆಯ ಮುಖಾಂತರ ಹೊಸದಾದ ಸ್ತ್ರೀಸಂಸ್ಕೃತಿಯೊಂದನ್ನು ಭಾಷೆಯ ಮುಖಾಂತರ ಕಟ್ಟಬಹುದೆಂಬ ಸಾಧ್ಯತೆಯನ್ನೇ ಪ್ರಶ್ನಿಸುವ ವಿಚಾರಧಾರೆಯೂ ಇಂದು ಪ್ರಚಲಿತವಿದೆ. ಸ್ತ್ರೀ–ಪುರುಷರನ್ನು ಯಜಮಾನಿಕೆ–ಅಧೀನತೆಗಳ ನಿರ್ದಿಷ್ಟ ಜಾಗದಲ್ಲಿದ್ದು ಕಟ್ಟಲಾಗಿರುವ ಪುರುಷ ಪ್ರಧಾನ ವ್ಯವಸ್ಥೆ ಸ್ಥಿರವಾದ ಸ್ಥಿತಿಯಲ್ಲ. ಅದು ರಾಜಕೀಯ, ಆರ್ಥಿಕ,

ಸಾಮಾಜಿಕಾದಿ ಭೌತಿಕ ಪರಿಸರದೊಂದಿಗೇ ಬೆಳೆದುಬಂದ ಕೇವಲ ಚಾರಿತ್ರಿಕ ಸ್ಥಿತಿ. ಆದ್ದರಿಂದ ಆ ಸಾಂಸ್ಕೃತಿಕ ಪರಿಸರ ಬದಲಾದಾಗ ಈ ವ್ಯವಸ್ಥೆಯ ಸ್ವರೂಪವೂ ಪಲ್ಲಟಗೊಳ್ಳಲೇಬೇಕು. ಈಗಿರುವ ಸಂಸ್ಕೃತಿಯನ್ನೂ, ಅದರ ಅಸ್ತ್ರವಾದ ಭಾಷೆಯನ್ನೂ ಕಟ್ಟುವಲ್ಲಿ ಪುರುಷರಂತೆಯೇ ಮಹಿಳೆಯರೂ ಕಾರ್ಯನಿರ್ವಹಿಸಿಯೇ ಇದ್ದಾರೆ. ಅವರ ಆ ಕ್ರಿಯೆಯನ್ನು ಮೌಲಿಕಗೊಳಿಸುವುದು ಅಗತ್ಯವಿರುವಾಗ ಆ ಭಾಷೆಯನ್ನೇ, ಅದರ ಎಲ್ಲಾ ಶಕ್ತಿ ಸಾಧ್ಯತೆಗಳೊಂದಿಗೆ ತನ್ನ ರಾಜಕೀಯಕ್ಕಾಗಿ ದುಡಿಸಿಕೊಳ್ಳುವುದೂ ಭಾಷೆ ಮತ್ತು ಅಭಿವ್ಯಕ್ತಿಯ ಮೇಲೆ ತನ್ನ ಅಧಿಕಾರವನ್ನು ಮತ್ತೆ ಪಡೆಯುವ ವಿಧಾನವಾಗಿರುತ್ತದೆ. ಈಗಿರುವ ಭಾಷೆಯ ಒಳಗಿನ ಜೆಂಡರ್ ತಾರತಮ್ಯದ ಎಲ್ಲ ಸ್ತರಗಳನ್ನೂ ಶೋಧಿಸಿ, ಸಮಾನಲಿಂಗದ ಪದರೂಪಗಳನ್ನು ಕಟ್ಟಿ ಬಳಕೆಗೆ ತರುವುದು ಈ ನಿಟ್ಟಿನಲ್ಲಿ ಆಗಬೇಕಾದ ಬಹು ಪ್ರಯಾಸಕರವಾದರೂ ತುರ್ತಾದ ಸಂಗತಿ ಎನ್ನುವುದು ಇನ್ನೊಂದು ಪ್ರಚಾರದಲ್ಲಿರುವ ವಾದವಾಗಿದೆ. ಈ ನಿಟ್ಟಿನಿಂದ ಅಕ್ಷರ ಸಾಹಿತ್ಯಕ್ಕಿಂತ ಭಿನ್ನವಾದ ಮೌಖಿಕ ಅಭಿವ್ಯಕ್ತಿಯಲ್ಲಿ ಮಹಿಳೆಯರ ಅಭಿವ್ಯಕ್ತಿಯ ವೈಶಿಷ್ಟ್ಯಗಳನ್ನು ಶೋಧಿಸುವುದು, ಪದಗಳು, ಕಟ್ಟುಕಥೆಗಳು, ಮಿಥಕಗಳು, ಗಾದೆಗಳು ಬೈಗುಳಗಳು ಮುಂತಾದ ಜನಸಾಮಾನ್ಯರ ದೈನಂದಿನ ಭಾಷಣ ವ್ಯವಹಾರಕ್ಕೆ ನಿಕಟವಾದ ಅಭಿವ್ಯಕ್ತಿಗಳಲ್ಲಿ ಬೇರೂರಿರುವ ಲಿಂಗತಾರತಮ್ಯದ ಲಕ್ಷಣವನ್ನು ಬಯಲಿಗೆ ತರುವುದೂ ಈ ನಿಟ್ಟಿನ ಒಂದು ಕ್ರಿಯಾತಂತ್ರವೆಂದು ಭಾವಿಸಲಾಗುತ್ತದೆ.

೬. ಉಪಸಂಸ್ಕೃತಿಯ ನೆಲೆಯ ಸ್ತ್ರೀಲೋಕಾನುಭವ

ಪಿತೃಪ್ರಾಧಾನ್ಯಕ್ಕೆ ಅಧೀನವಾಗಿ ಬದುಕುತ್ತ ಬಂದಿದ್ದು, ಮಹಿಳೆಯರು ಆ ಅಧೀನತೆಯ ಫಲವಾಗಿಯೇ ಕೆಲವು ಸವಲತ್ತಿನ ಒಳಲೋಕವೊಂದನ್ನು ರಚಿಸಿಕೊಂಡಿರುತ್ತಾರೆ. ತಮ್ಮನ್ನು ನಿಯಂತ್ರಿಸುತ್ತಿರುವ ಯಜಮಾನ ವ್ಯವಸ್ಥೆಯೊಂದಿಗೆ ಹೊಂದಿರುವ ಸಂಬಂಧಗಳ ಮೂಲಕ ಸೃಷ್ಟಿಸಿಕೊಳ್ಳಲಾಗುವ ಈ ಪ್ರತ್ಯೇಕ ಸ್ತ್ರೀಲೋಕದೊಳಗೆ ಮೇಲಿನ ವ್ಯವಸ್ಥೆಯ ಮಾದರಿಯ ಅಧಿಕಾರ ಶ್ರೇಣಿಗಳೂ ರಚಿತವಾಗಿರಬಹುದು. ಉದಾಹರಣೆಗೆ ಅತ್ತೆ–ಸೊಸೆ, ಅತ್ತಿಗೆ–ನಾದಿನಿ, ತಾಯಿ ಮತ್ತು ಹೆಣ್ಣುಮಕ್ಕಳ ಸಂಬಂಧಗಳೊಳಗಿನ ಆತ್ಮೀಯತೆ ಹಾಗೂ ಹಗೆ, ಒಲವು ಮತ್ತು ಪೈಪೋಟಿಯ ತುಯ್ದಾಟಗಳಲ್ಲಿ ಇರುವ ಅಧಿಕಾರ ಸಂಘರ್ಷದ ಹಾಗೆಯೇ ಮೇಲ್ಜಾತಿ, ಮೇಲ್ವರ್ಗ–ಕೆಳಜಾತಿ, ಕೆಳವರ್ಗದ ಸ್ತ್ರೀಯರ ನಡುವಿನ ಸಂಬಂಧಗಳಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಪಡಿನೆಳಲು ಬಿದ್ದಿರುತ್ತದೆ. ಹೀಗಿದ್ದಾಗಲೂ ತಮ್ಮದೇ ಆದ ಧಾರ್ಮಿಕ–ಸಾಮಾಜಿಕ ಆಚರಣೆಗಳು, ಪದ್ಧತಿಗಳು, ದುಡಿಮೆಯ ವಲಯಗಳ ಮೂಲಕ ಮಹಿಳೆಯರು ಪ್ರಜ್ಞಾಪೂರ್ವಕವಲ್ಲದಿದ್ದರೂ ಹೆಣ್ಣಾದ್ದರಿಂದ ತಾವೆಲ್ಲ ಒಂದೇ ಎಂಬ ಮಸುಕಾದ ಏಕತೆಯ ಭಾವನೆಯನ್ನು ಮನದಾಳದಲ್ಲಿ ಹೊಂದಿರುವುದು ಸಾಧ್ಯ. ಆದರೆ ಈ ಅಪ್ರಜ್ಞಾಪೂರ್ವಕವಾದ ಏಕತೆಯ ಭಾವನೆಯನ್ನು ಸ್ತ್ರೀವಾದಿ ಪ್ರಜ್ಞೆಯದೆಂದು ಭಾವಿಸಬಾರದು.

೭. ಬರೆವ ಮಹಿಳೆಯರೆಲ್ಲ ಸ್ತ್ರೀವಾದಿಗಳಲ್ಲ

ಏಕೆಂದರೆ ದಮನಿತರ ನೆಲೆಯಿಂದ ಹುಟ್ಟುವ 'ಹೆಣ್ಣಾದವರೆಲ್ಲರ ಪಾಡೂ ಹೀಗೆಯೆ ಸರಿ' ಎಂಬ ಸಾಧಾರಣೀಕರಣ ಬೇರೆ. ದಮನದ ಮೂಲ ಕಾರಣಗಳೇನು, ಅದನ್ನು ಸೃಷ್ಟಿಸುವ ಶಕ್ತಿಗಳಾವುವು ಎಂಬ ಅರಿವಿನೊಂದಿಗೆ ಅಂಥ ವ್ಯವಸ್ಥೆಯ ಬದಲಾವಣೆಗಾಗಿ ತಳೆಯುವ ರಾಜಕೀಯದ ನಿಲುವೇ ಬೇರೆ. ಈ ಕಾರಣದಿಂದಲೇ ಬರೆಯುತ್ತಿರುವ ಮಹಿಳೆಯರೆಲ್ಲರೂ ಸ್ತ್ರೀವಾದಿಗಳೇ ಎಂದು ತಿಳಿಯುವುದು ತಪ್ಪಾಗುತ್ತದೆ. ಸಾಂಸ್ಕೃತಿಕವಾದ ಬದಲಾವಣೆಗಾಗಿ ಲಿಂಗತಾರತಮ್ಯ ವಿರೋಧಿ ರಾಜಕೀಯ ಬೇಕೆಂದು ಹೇಳುವವರೂ, ಅಂಥ ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿರುವವರು ಅತ್ಯಲ್ಪ ಸಂಖ್ಯೆಯ ಮಹಿಳಾ ಬರಹಗಾರರು ಮಾತ್ರ. ಆದರೆ ಮಹಿಳಾ ಚಳವಳಿಯಿಂದಾಗಿಯೇ ತಮ್ಮ ಬರಹಗಳಿಗೆ ತಕ್ಕಮಟ್ಟಿನ ಜಾಗವೊಂದನ್ನು ದೊರಕಿಸಿಕೊಂಡು ಫಲಾನುಭವಿಗಳಷ್ಟೇ ಆಗಿರುವ ಬರಹಗಾರರೇ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಮಾತ್ರವಲ್ಲ ಸಾಂಸ್ಕೃತಿಕವಾಗಿ ಮಹಿಳಾ ಚಳವಳಿ ಸೃಷ್ಟಿಸಿರುವ ಒತ್ತಡಗಳಿಂದಾಗಿಯೇ ಮಹಿಳೆಯರ ಬರೆಯುತ್ತಿರುವ ಸಂದರ್ಭವೇ ತೀವ್ರವಾಗಿ ಬದಲಾಗುತ್ತಿದೆಲ ಅಂಥ ಮಹಿಳಾ ಬರಹವನ್ನು ಓದುವ ಕ್ರಮವೂ ಈಗ ಬದಲಾಗಿಬಿಟ್ಟಿದೆ. ಈ ವಿಶಾಲವಾದ ರಾಜಕೀಯ ಪ್ರಕ್ರಿಯೆಯ ಅರಿವಿಲ್ಲದೆಯೇ ಅನೇಕ ಮಹಿಳೆಯರು ವೇದಿಕೆಯೊಂದು ಸಿಕ್ಕ ಕೂಡಲೆ, ಮಹಿಳಾ ವಿಮರ್ಶಕರಿಗಿಂತಲೂ ಪುರುಷರ ಬೆನ್ನು ತಟ್ಟುವ ಕ್ರಿಯೆಯಿಂದಲೇ ತಾವು ಬೆಳೆದಿದ್ದೇವೆಂದು ಅಪ್ರಬುದ್ಧ ಹೇಳಿಕೆಗಳಿಗೆ ತೊಡಗುವುದನ್ನೂ ಇಂದು ಕಾಣುತ್ತೇವೆ. ಮತ್ತೊಂದು ದಿಕ್ಕಿನಲ್ಲಿ ಪುರುಷ ಬರಹಗಾರಿಕೆಯ ಒಳಗೇ ಸ್ತ್ರೈಣ ಅಂಶಗಳು ಇಂದು ಆದ್ಯತೆಯಿಂದಲೇ ಹೊಮ್ಮಿಬರುವುದರಲ್ಲೂ ಮಹಿಳಾ ಚಳವಳಿಯು ಸೃಷ್ಟಿಸಿದ ಸಾಂಸ್ಕೃತಿಕ ಒತ್ತಡವೇ ಕಾರಣವಾಗಿದ್ದರೂ, ಈ ವಿಷಯದ ಅರಿವಿಲ್ಲದವರಂತೆ ವಿಮರ್ಶಕರು ಬರಹದೊಳಗಿನ ಸ್ತ್ರೀಸಂವೇದನಾಶೀಲ ಲಕ್ಷಣ ಎಂಬುದು ಕೇವಲ ಸ್ತ್ರೀಪರವಾದ ಘೋಷಿತ ಭಾವಗಳನ್ನು ಕಲೆ ಹಾಕುವ ಕ್ರಿಯೆಯಲ್ಲ-ಎಂಬಂಥ ಉದ್ಗಾರಗಳನ್ನು ತೆಗೆಯುವುದೂ ಉಂಟು.

ಕುಟುಂಬ, ಸಮುದಾಯ, ಸಮಾಜ, ಸಂಸ್ಕೃತಿಗಳು ಹೇರುವ ನಿರ್ಬಂಧಗಳು ಎಷ್ಟೆಷ್ಟು ಮಹಿಳೆಯರಲ್ಲಿ ಆಳವಾಗಿ ಬೇರೂರಿರುತ್ತವೋ ಅಷ್ಟೂ ಅವರ ಬರಹ ಹಾಗೂ ಅಭಿವ್ಯಕ್ತಿಗಳಿಗೆ ಕೆಲವೊಂದು ವಿಲಕ್ಷಣ ರೂಪಾಕಾರಗಳು ಉಂಟಾಗಿರುತ್ತವೆ. ಉದಾಹರಣೆಗೆ ಯಜಮಾನ ಸಂಸ್ಕೃತಿ ಗಂಡಸರ ಲೋಕದ್ದಾಗಿದ್ದು, ಅದರ ತಳದಲ್ಲಿ ನೆಲೆಸಿರುವ ಸ್ತ್ರೀಲೋಕದ ಉಪಸಾಂಸ್ಕೃತಿಕ ನೆಲೆಗಳಲ್ಲಿ ಮದುವೆ, ದೇವರು, ಧರ್ಮ, ವ್ರತ, ನೋಂಪಿ, ಹಾಡು, ಹಸೆ, ಉತ್ಸವಾದಿಗಳೆಲ್ಲ ಮಹಿಳಾ ರಾಜ್ಯವೆನಿಸಿರುತ್ತವೆ. ಆ ರೀತಿ ಅಪ್ರಜ್ಞಾಪೂರ್ವಕವಾಗಿ ಒಟ್ಟಾಗುವ ಮಹಿಳೆಯರು ಕಟ್ಟಿಹಾಡುವ ಹಾಡುಗಳು ಪದಗಳು, ಕಥೆಗಳು ವಿಶೇಷವಾಗಿ ಸ್ವಂತದ ನೋವು ನಲಿವುಗಳನ್ನೇ ಹೊರಹಾಕುವಂತಿದ್ದರೂ, ಹಾಗೆ ಹೊರಕ್ಕೆ ತರುವಾಗ ನಾನಾ ರೀತಿಯ ರೂಪಕ, ಉತ್ಪ್ರೇಕ್ಷೆ, ಗುಪ್ತಭಾಷೆ, ಸಾಂಕೇತಿಕತೆಗಳ ಮೂಲಕ ಯಜಮಾನ ವ್ಯವಸ್ಥೆಗೆ ಕಣ್ಣಿಗೆ ಬೀಳದ ಹಾಗೆ ವಕ್ರರೂಪಗಳಲ್ಲಿ ಆ ಅಭಿವ್ಯಕ್ತಿಗಳನ್ನು ಮಹಿಳೆಯರು ಸಾಧಿಸಿರುತ್ತಾರೆ.

ಇದೇ ರೀತಿ ಅಕ್ಷರ ಸಾಹಿತ್ಯದ ಕ್ಷೇತ್ರಕ್ಕೆ ಬಂದ ಮೇಲೂ ಮಹಿಳೆಯರ ಅಭಿವ್ಯಕ್ತಿ ವಿಧಾನಗಳು ಮೂಲದ ಅಧೀನ ಸ್ಥಿತಿಯ ಫಲವಾಗಿ ಅನೇಕ 'ವ್ಯಕ್ತಾವ್ಯಕ್ತ' ತಂತ್ರಗಾರಿಕೆಯನ್ನು ಒಳಗೊಂಡಿರುವುದು ಸಾಧ್ಯ. ಉದಾಹರಣೆಗೆ ಮಹಿಳೆಯಾಗಿ ತನ್ನ ಲೈಂಗಿಕಾನುಭವವನ್ನು ಉತ್ಕಟ ವಾಸ್ತವತೆಯಲ್ಲಿ ಚಿತ್ರಿಸುವುದು ಇಂದಿಗೂ ಕನ್ನಡದ ಯಾವೊಬ್ಬ ಸಂವೇದನಾಶೀಲ ಮಹಿಳಾ ಬರಹಗಾರರಿಗೂ ಸಾಧ್ಯವಾಗಿಲ್ಲ. ಉದಾಹರಣೆಗೆ ಧೈರ್ಯ, ದಿಟ್ಟತನ, ಪ್ರಜ್ಞಾವಂತಿಕೆ, ಬೌದ್ಧಿಕತೆಗಳುಳ್ಳ ಆಧುನಿಕ ಮಹಿಳೆಯ ಚಿತ್ರಗಳನ್ನು ಕಟ್ಟಿಕೊಡಬಲ್ಲ ವೀಣಾಶಾಂತೇಶ್ವರ ಅಥವಾ ನೇಮಿಚಂದ್ರರಂಥವರು ಕಾಮದ ಬಗೆಗಿನ ಮಹಿಳಾನುಭವವನ್ನು ಕಲ್ಪಿಸುವಲ್ಲಿ ಅಪ್ರತಿಭರೆಂಬಂತೆಯೇ ಕಾಣಿಸುತ್ತಾರೆ. ಹೀಗೇಕೆ ಎಂದು ವಿಚಾರ ಮಾಡಿದರೆ, ಕನ್ನಡ ಮಹಿಳಾ ಬರಹಗಾರಿಕೆ, ಇಲ್ಲಿನ ಸಂಸ್ಕೃತಿಜನ್ಯ 'ಸೌಜನ್ಯ'ದ ಭಾವವನ್ನು ಸೃಜಶೀಲ ಗಳಿಗೆಯಲ್ಲೂ ಮೀರಲು ಸಿದ್ಧವಾಗಿಲ್ಲ ಎಂದು ತೋರುತ್ತದೆ. ಈ ವಿಷಯವನ್ನು ಮುಂದೆ ಒಂದು ಕಡೆ ವಿಸ್ತಾರವಾಗಿ ಚರ್ಚಿಸಲಾಗುವುದು.

೮. ಮಹಿಳೆಯರದೇ ಭಾಷೆ, ಅಂಕಿತ

ಮಹಿಳಾ ಚಳವಳಿಗಾರರು ಮಾನವತೆಯ ನೆಲೆಯಲ್ಲಿ ಸ್ತ್ರೀಯರು ಮಾತ್ರವಲ್ಲದೆ ಪುರುಷರನ್ನೂ ಪಿತೃಸಂಸ್ಕೃತಿಯು ಅನೇಕ ರೀತಿಗಳಲ್ಲಿ ಬೆಳೆಯಗೊಡದೆ ಅಪೂರ್ಣವಾಗಿಸಿದೆ ಎಂದು ನಂಬುವವರು. ಆದ್ದರಿಂದ ಲಿಂಗತ್ವ ವ್ಯವಸ್ಥೆ ಬದಲಾದಾಗ ವ್ಯಕ್ತಿಗಳಾಗಿ ಸ್ತ್ರೀಯರೂ, ಪುರುಷರೂ ಈಗಿರುವ ಹಾಗೆ ಯಜಮಾನಿಕೆ–ದಾಸತ್ವದ ಸಂಬಂಧಗಳಿಗೆ ಬದಲಾಗಿ ಸಮಾನ ನೆಲೆಗಳ ಹೊಸ ಸಂಬಂಧಗಳಲ್ಲಿ ಬದುಕಬಲ್ಲ ಆದರ್ಶಪ್ರಾಯ ಸಮಾಜವೊಂದನ್ನು ಕಟ್ಟಲು ಸಾಧ್ಯ ಎಂಬುದನ್ನು ಅವರು ನಂಬುತ್ತಾರೆ.

ಆದರೆ ಈ ನಂಬಿಕೆ ಹಾಗೂ ಅದನ್ನು ಸಾಧ್ಯವಾಗಿಸುವ ಸ್ತ್ರೀವಾದಿ ಚಳವಳಿಯು ಹುಟ್ಟಿಕೊಂಡದ್ದೇ ಸ್ತ್ರೀ–ಪುರುಷರಲ್ಲಿ ಅಧಿಕಾರದ ಅಸಮಾನ ಹಂಚಿಕೆ ಇರುವ ಪರಿಸರದಲ್ಲಿ. ವ್ಯವಸ್ಥೆಯನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿರುವ ಪುರುಷರು ಕಟ್ಟಿ ಬೆಳೆಸಿ, ತಮ್ಮ ಅಸ್ತ್ರವಾಗಿ ಮಾಡಿಕೊಂಡಿರುವ ಭಾಷೆ, ಪುರುಷಾಧಿಕಾರವನ್ನು ನಿರಂತರವಾಗಿ ಉಳಿಸಿಡುವ ವಾಹಕವೂ ಆಗಿದೆ. 'ಮಾನವ' ಎಂದರೆ ಪುರುಷ; ಮಾನವೀಯ ಎಂಬುದು ಪುರುಷ ಸಂಬಂಧಿತವೇ ಎಂಬ ತಾದಾತ್ಮ್ಯಭಾವದಲ್ಲಿ ಭಾಷೆಯಲ್ಲಿನ ಸಂಕೇತಾರ್ಥಗಳು ಏಕಲಿಂಗಾತ್ಮಕವಾಗಿಯೇ ರೂಪು ತಳೆದಿರುತ್ತವೆ. ಪುರುಷ ಪ್ರಧಾನವಾದ ಈ ಭಾಷಿಕ ಸಂರಚನೆಗಳಲ್ಲಿ ಸ್ತ್ರೀಲಿಂಗ ವಾಚಕವೆನಿಸುವ ಶಬ್ದಗಳು 'ಇತ್ತೀ=ಸ್ತ್ರೀ' ಎಂಬ ಪ್ರತ್ಯಯದ ಜೋಡಣೆಯಿಂದ ಮಾತ್ರ ಸಿದ್ಧಿಸುತ್ತವೆ. ಉದಾ : ಗಾಣಿಗ–ಗಾಣಿಗಿತ್ತಿ; ಕಬ್ಬಿಗ–ಕಬ್ಬಿಗಿತ್ತಿ, ಮೊದಲಿಗ–ಮೊದಲಿಗಿತ್ತಿ ಇತ್ಯಾದಿ ಅಥವಾ ಆ, ಇ, ಈ ಕಾರಗಳನ್ನು ಜೋಡಿಸಿ ಸ್ತ್ರೀಲಿಂಗ ರೂಪಗಳನ್ನು ಸೃಷ್ಟಿಸುವುದುಂಟು, ಲೇಖಕ–ಲೇಖಕಿ, ಅಧ್ಯಾಪಕ–ಅಧ್ಯಾಪಕಿ ಹೀಗೆ. ಆದರೆ ಇಲ್ಲಿ ಪ್ರಶ್ನೆ ಏಳುವುದು ಹೀಗೆ ಪದಗಳನ್ನು ಸಾಧಿಸುವ ವಿಷಯದಲ್ಲಲ್ಲ. ಹೀಗೆ ಸಾಧಿಸಲಾದ ಪದಗಳ ಅರ್ಥಗಳು ಸಂಸ್ಕೃತಿಯಲ್ಲಿನ

ತಾರತಮ್ಯ ಭಾವದೊಂದಿಗೆ ಮೇಲು-ಕೀಳೆಂಬ ಅರ್ಥದೊಂದಿಗೆ ಬೆಸೆದುಕೊಂಡೇ ರೂಢಿಯಲ್ಲಿರುತ್ತವೆ.

ಆದ್ದರಿಂದ ಇಂಥ ಸಂಜ್ಞೆ, ಸಂಕೇತಗಳಲ್ಲಿ ಮೈಗೂಡಿರುವ ಲಿಂಗತ್ವ ವ್ಯವಸ್ಥೆಯ ಮೌಲ್ಯ ಕಲ್ಪಿತ ಅರ್ಥಪರಂಪರೆಯನ್ನು ಮಹಿಳೆಯರೂ ಬಳಸುತ್ತಾ ಹೋದರೆ ಅವರ ಸ್ವಂತವೂ, ಸ್ವತಂತ್ರವೂ ಆದ ಅನುಭವವನ್ನು ಆ ಪದಗಳು ಹೇಳಲು ಸಾಧ್ಯವಾಗಲಾರವು. ಈ ಕಾರಣಕ್ಕಾಗಿಯೇ ತನ್ನದಾದ ಅನುಭವಗಳನ್ನು, ಅವುಗಳ ಸಮಗ್ರ ವಿಶೇಷತೆಯೊಂದಿಗೆ ಭಾಷೆಯಲ್ಲಿ ಅಭಿವ್ಯಕ್ತಿಸಲಿಕ್ಕಾಗಿ ಮಹಿಳೆಯರು ಈಗಿರುವ ಪುರುಷರ ಭಾಷೆಯ ಬದಲಾಗಿ ತಮ್ಮದೇ ಆದ ಭಾಷೆಯೊಂದನ್ನು ಸೃಷ್ಟಿಸಿಕೊಳ್ಳಬೇಕು ಎಂಬುದಾಗಿ ಸ್ತ್ರೀವಾದಿಗಳ ಒಂದು ಮುಖ್ಯ ವಿಚಾರಧಾರೆ ಹೇಳುತ್ತದೆ. ಅಂಥವರ ವಿಚಾರಗಳ ಸಾರಾಂಶ ಹೀಗಿದೆ :

೯. ಅಭಿವ್ಯಕ್ತಿಯ ಹಾದಿಗೆ ತೊಡಕುಗಳು

ಪುರುಷರೊಂದಿಗಿನ ತಾದಾತ್ಮ್ಯಭಾವದಿಂದ ಹುಟ್ಟಿರುವ ಭಾಷೆಯಲ್ಲಿ ಸಾಹಿತ್ಯ ರಚನೆಯೂ ಒಳಗೊಂಡಂತೆ ಎಲ್ಲಾ ಚಿಂತನೆ, ತತ್ವ, ಚರ್ಚೆಗಳು ಪುರುಷರದೇ ಚಟುವಟಿಕೆಗಳೆಂದು ಸ್ಥಾಪಿತವಾಗಿರುತ್ತವೆ. ಅಂತಹ ಭಾಷಾತ್ಮಕ ಚಿಂತನೆಯೊಳಗೆ ಮಹಿಳೆಯರು 'ವಸ್ತು'ಗಳೋ 'ಪಾತ್ರ'ಗಳೋ ಆಗಿರುತ್ತಾರೆ. ಬರಹಗಾರಿಕೆಗೆ ತೊಡಗುವ ಮಹಿಳೆ ತನ್ನನ್ನು ಬರೀ 'ವಸ್ತು'ವಾಗಿಸಿರುವ ಭಾಷಿಕ ಸ್ಥಿತಿಯಿಂದ ಹೊರಬರುತ್ತಾಳೆ. ತನ್ನ ಬರಹದ ಪ್ರಕ್ರಿಯೆಯೂ, ಅದರ ಪರಿಕಲ್ಪನೆಗಳೂ ಲಿಂಗಾಂಕಿತವಾಗಿವೆ ಎಂಬುದು ಆಗ ಆಕೆಗೆ ಅರಿವಾಗುತ್ತದೆ. ಸ್ಥಾಪಿತ ಭಾಷೆಯಲ್ಲಿ 'ಸ್ವಾತಂತ್ರ್ಯ' ಎಂಬುದೂ ಲಿಂಗಾಂಕಿತವೇ. ಸ್ವಾತಂತ್ರ್ಯದ ಹುಡುಕಾಟ, ಅದರ ಮಹತ್ವವನ್ನು ವೈಭವೀಕರಿಸುವ ಚಿತ್ರಣಗಳೆಲ್ಲ ಪುರುಷರ ಸವಲತ್ತಿನ ವಿಷಯಗಳು. ಆ ಬಗೆಯ 'ಸ್ವತಂತ್ರ'ರಾಗುವ ಸ್ಥಿತಿಗೆ ತಾನೆಂದೂ ಏರಲಾರೆ; ರೆಕ್ಕೆಯಿಲ್ಲದ ಹಕ್ಕಿಯ ಸ್ಥಿತಿ ತನ್ನದು. ಇಲ್ಲವೆ ಹಾರುವುದೂ ತೇಲುವುದೂ ತನಗೆ ಎಂದೋ ಮರೆತುಹೋಗಿದೆ ಎಂದು ಆಕೆಗೆ ಕಾಣಿಸಬಹುದು.

ಕನ್ನಡದಲ್ಲಿ ಕಳೆದ ಶತಮಾನದ ಎಂಬತ್ತರ ದಶಕದಲ್ಲಿ ಮೊದಲ ಬಾರಿಗೆ ಹೊಮ್ಮಿ ಬಂದ ಹೊಸ ಅರಿವಿನ ಮಹಿಳಾ ಕಾವ್ಯದಲ್ಲಿ ಈ ಮೇಲಿನ ಸ್ಥಿತಿಗೆ ಸ್ಪಷ್ಟ ಉದಾಹರಣೆಗಳನ್ನು ಕಾಣಬಹುದು. ಪಂಜರದಲ್ಲಿ ಕುಳಿತು, ಹಾಕಿದಷ್ಟು ಕಾಳು, ಹಣ್ಣಿನ ತುಂಡು ತಿಂದು ಹಾರದೆ, ಹಾಡದೆ 'ಕೊಕ್ಕಿನೊಳಗೇ ಗೊಣಗು'ತ್ತಿರುವ ಗಿಣಿಯ ಪ್ರತೀಕ, ಬಳಸುವ ಕಮಲಾ ಹೆಮ್ಮಿಗೆ. 'ಎರವಲೆದೆ ಮುಖವಾಡ' 'ಬೇರೊಬ್ಬರೆದೆಗೆ ಬೇರಿಳಿಸಿ' ಉಸಿರಾಡುವ ಬಂದಳಿಕೆಯ ಪ್ರತೀಕ ಬಳಸುವ ಸ. ಉಷಾ ಮುಂತಾದ ಕವಿಗಳು ಹೇಳುವ ಸ್ಥಿತಿ ಹೊರಗಿನ ಅಭಿವ್ಯಕ್ತಿಯ ಜಗತ್ತಿನೊಂದಿಗೆ ಮಹಿಳಾ ಬರಹದ ಸಂಪರ್ಕ ಕಡಿದುಹೋದ ಸ್ಥಿತಿಯನ್ನೇ. ತನ್ನತನದ ಹುಡುಕಾಟಕ್ಕೆ ಹೊರಟ ಮಹಿಳೆ ಬರಹದಲ್ಲಿ ತಾನು ಏನನ್ನು ಬರೆಯುತ್ತೇನೆ, ಬದುಕಿನಲ್ಲಿ ತಾನೇನು ಹೇಳುತ್ತೇನೆ ಎಂಬುದರ ಬೆಸುಗೆಯೇ ಬಿಟ್ಟುಹೋದಂಥ ಆಳವಾದ ಪರಕೀಯತೆಯ

ಭಾವವನ್ನು ಅನುಭವಿಸುತ್ತಾಳೆ. ತನ್ನದೇ ಮಾತಿಗಾಗಿ, ತನ್ನದಾದ ವ್ಯಕ್ತಿತ್ವಕ್ಕಾಗಿ, ತನ್ನ ಅಂಕಿತಕ್ಕಾಗಿ ಹುಡುಕುವ ಯತ್ನದಲ್ಲಿ ಪರಂಪರೆ ಒದಗಿಸುವ ಸ್ತ್ರೀಮೌಲ್ಯಗಳು, ಅವನ್ನು ಪ್ರತಿನಿಧಿಸುವ ಪುರಾಣ ಸ್ತ್ರೀಪ್ರತೀಕಗಳು, ಅವೇ ಮೌಲ್ಯಗಳ ವಾಹಕರೇ ಆದ ತಾಯಿ, ಅಜ್ಜಿ ಮಾದರಿಗಳೂ ಮೊದಲ ಹಂತದಲ್ಲಿ ಸ್ವಾಯತ್ತ ವ್ಯಕ್ತಿತ್ವ ಸಾಧನೆಗೆ ತೊಡಕುಗಳಂತೆ ತೋರಿ ಅವುಗಳನ್ನು ಪ್ರತಿಭಟಿಸುವುದೇ ಸ್ವಂತ ಅಂಕಿತ ಕಂಡುಕೊಳ್ಳುವ ಹಾದಿ ಎಂದೆನಿಸಿತ್ತು. ಆಮೇಲೆ ಇದೇ ಸ್ತ್ರೀಮೌಲ್ಯದ ಪರಂಪರೆಯ ಮುಖಾಂತರವಾಗಿ ತನ್ನ ಅಧಿಕಾರ, ಶಕ್ತಿ, ಸಾಮರ್ಥ್ಯ, ಕಸುವುಗಳನ್ನು ಗಳಿಸಿಕೊಳ್ಳುವ ಹಾದಿಯತ್ತಲೂ ಮಹಿಳಾ ಬರಹಗಾರರು ಯತ್ನಿಸಿದರು. ಇದರಿಂದ ಈ ಸ್ತ್ರೀ ಮೌಲ್ಯ ಸಂಕುಲ' ಇಂದು ಬರೆಯುವ ಮಹಿಳೆಯರಿಗೆ ಒಂದು ನಿಟ್ಟಿನಲ್ಲಿ ತ್ಯಾಜ್ಯವಾಗಿಯೂ ಮತ್ತೊಂದು ನಿಟ್ಟಿನಲ್ಲಿ ಶಕ್ತಿಯ ಮರುಕಟ್ಟೋಣಕ್ಕೆ ಸಾಧನವಾಗಿಯೂ ಕಾಡುವುದನ್ನು ನೋಡುತ್ತೇವೆ. ಅಂದರೇ ಒಂದೇ ಪರಂಪರೆಗೆ ಒಂದು ಮುಖ ಸಂಚಿಯ ಹೊನ್ನಮ್ಮನದಾದರೆ ಮತ್ತೊಂದು ಮುಖ ಅಕ್ಕಮಹಾದೇವಿಯದು!

ಈ ಇಬ್ಬಗೆಯ ನಿಜಸ್ಥಿತಿಗಳನ್ನು ಪ್ರಜ್ಞೆಗೆ ತಂದುಕೊಳ್ಳದೆ ಮಹಿಳಾ ಬರಹಗಾರರು ಪಿತೃಸಂಸ್ಕೃತಿಯಲ್ಲಿ ಭಾಷೆಯಲ್ಲಿ ದಾಖಲಾದ ಹೆಣ್ಣಿಗೆ ಸಂಬಂಧಿಸಿದ ಎಲ್ಲಾ ಸಂಕೇತಾರ್ಥಗಳನ್ನೂ, ತಥಾಕಥಿತ ಸ್ತ್ರೀಮೌಲ್ಯ ಪ್ರತೀಕಗಳೆಂದು ಇಡಿಯಾಗಿ ತಿರಸ್ಕರಿಸಿದರೆ ಅವರ ಅಭಿವ್ಯಕ್ತಿಗೆ ಉಳಿಯುವುದು ಶೂನ್ಯ ಮಾತ್ರ. ಹಾಗಾಗದೆ ಇರಲಿಕ್ಕೆ ಪ್ರಚಲಿತವಿರುವ ಭಾಷೆಯ ಒಳಗಿನಿಂದಲೇ ತಮಗೆ ಒಳಗಿನಿಂದಲೇ ಬಲವನ್ನು ಹೆಚ್ಚಿಸಬಲ್ಲ, ಸತ್ವವನ್ನು ಒದಗಿಸಬಲ್ಲ, ತಮ್ಮ ಬುದ್ಧಿ, ತಮ್ಮ ಭಾವಗಳ ಲಯಕ್ಕೆ ತಕ್ಕುದಾದಂಥ ಲಕ್ಷಣಗಳನ್ನು ಸೋಸಿ ಹಿಡಿದು ಪಳಗಿಸಿಕೊಳ್ಳಬೇಕು. ಅಗತ್ಯವಿರುವಾಗೆಲ್ಲ ತಮ್ಮದೇ ಪದಗಳನ್ನೂ ಸೃಷ್ಟಿಸಬೇಕು.

೧೦. ಮೌಲ್ಯಗಳು, ಒಳವಿರೋಧಗಳು

ಬರಹಗಾರರಾಗಿ ಸೃಜನಶೀಲತೆಯ ಅಭಿವ್ಯಕ್ತಿ ತಮ್ಮ ನ್ಯಾಯವಾದ ಹಕ್ಕು ಎಂದು ಅರಿತು ಹೊರಟಿರುವ ಮಹಿಳೆಯರು ಎದುರಿಸುತ್ತಿರುವ ಒಳವಿರೋಧಗಳು ಬಹುರೂಪದ್ದಾಗಿವೆ. ಮಹಿಳೆ ಹೇಗಿರಬೇಕು, ಹೇಗಿರಬಾರದು, ಅವಳು ಏನನ್ನು ಹೇಳಬೇಕು, ಏನನ್ನು ಹೇಳಬಾರದು ಎಂಬುದರ ಬಗ್ಗೆ–ಅಂದರೆ ಅಭಿವ್ಯಕ್ತಿಯ ವಿಷಯದಲ್ಲಿ ಪಿತೃಸಂಸ್ಕೃತಿ ಹೇರುತ್ತ ಬಂದ ಸೆನ್ಸಾರ್‌ಷಿಪ್ ಅವರಲ್ಲಿ ಅಂತರ್ಗತವಾಗಿ ಬಿಟ್ಟಿರುತ್ತದೆ. ಪುರುಷ ಕೇಂದ್ರಿತ ಜಗತ್ತಿನ ಕಾವಲುಗಾರರಾಗಿ ಉಳಿದು, ಅದನ್ನೇ ತಮ್ಮ ಭದ್ರತೆಯ ನೆಲೆಯೆಂದು ಆತುಕೊಂಡು. ಅಲ್ಲಿ ತಾವು ಗಳಿಸಿಕೊಂಡ ಭದ್ರ ಜಾಗಗಳನ್ನು ಕಾಯ್ದುಕೊಳ್ಳಲು ಪರಸ್ಪರರ ಜೊತೆ ಸದಾ ಪೈಪೋಟಿ, ಅಸೂಯೆ ಮಾತ್ಸರ್ಯ, ಕ್ರೌರ್ಯಗಳಲ್ಲಿ ಮಹಿಳೆಯರು ಮುಳುಗುವುದಕ್ಕೆ ಆತುಕೊಂಡಿರುವ ಆ ವ್ಯವಸ್ಥೆಯೇ ಕಾರಣವಾಗಿದ್ದರೂ, ಇವರಿಗೆ ಅದರ ಅರಿವು ಒಂದಿಷ್ಟೂ ಇರುವುದಿಲ್ಲ.

ಸಾಮಾನ್ಯ ಬದುಕಿನಲ್ಲಿ ಅತ್ತೆ–ಸೊಸೆ, ಅತ್ತಿಗೆ–ನಾದಿನಿ, ಓರಗಿತ್ತಿಯರು ಮುಂತಾದ ಮದುವೆಯಿಂದಲೇ ಹುಟ್ಟಿಕೊಳ್ಳುವ ಸಂಬಂಧಗಳು ಇಡೀ ಇಂಡಿಯಾದಲ್ಲಿ ಶತಶತಮಾನ

ಗಳಿಂದಲೂ ನೇತ್ಯಾತ್ಮಕ ಅರ್ಥಗಳನ್ನು ಪಡೆದಿವೆ. ಸ್ತ್ರೀವಾದಿಗಳನ್ನು ಜನ ಮತ್ತೆ ಮತ್ತೆ ಕೇಳುವ ಪ್ರಶ್ನೆಯೆಂದರೆ 'ಹೆಣ್ಣಿಗೆ ಹೆಣ್ಣೇ ಶತ್ರುವಲ್ಲವೆ? ಎಂಬುದು. ಹೆಣ್ಣಿಗೆ ಹೆಣ್ಣೇ ಶತ್ರುವಾಗಿದ್ದರೆ ಅದಕ್ಕೆ ಗಂಡಸಿನ ಯಾವುದಾದರೊಂದು ರೀತಿಯ ಪ್ರೀತಿ, ವಿಶ್ವಾಸ, ಮೆಚ್ಚುಗೆ, ಅನುಗ್ರಹ ಸಂಪಾದಿಸುವುದು, ತಾನವನ ನಿಕಟದಲ್ಲಿ ಸ್ಥಾಪಿತಳಾಗಬೇಕೆಂಬುದೂ ಕಾರಣ. ಈ ರೀತಿಯಲ್ಲಿ 'ಸ್ತ್ರೀಯರ ನಡುವಿನ ಮಾತ್ಸರ್ಯದ' ಪರಿಕಲ್ಪನೆಯು ಎಷ್ಟು ಬಲವಾಗಿ ಜನಮನದಲ್ಲಿ ಬೇರೂರಿರುತ್ತದೆ ಎಂದರೆ ಯಾವುದೇ ಅವಿವಾಹಿತ ಒಂಟಿ ಹೆಣ್ಣಿನ ಬಗ್ಗೆ ಸಮಾಜ ವ್ಯಕ್ತಪಡಿಸುವ ಅಪನಂಬಿಕೆಗಳು, ತಮ್ಮ ಗಂಡಂದಿರ ಅನ್ಯಸ್ತ್ರೀ ಆಸಕ್ತಿಗಳ ಬಗ್ಗೆ ಸ್ತ್ರೀಯರು ತೋರುವ ಕೋಪಗಳು, ನೋವು, ದುಃಖಗಳು ಎಲ್ಲವೂ ಗಂಡಸಿನ ಸಂಬಂಧದಲ್ಲಿ ಮಹಿಳೆ ಗುರುತಿಸಿಕೊಂಡಂಥವೇ. ಆದರೆ ಅದು ಆಕ್ರಮಣ ಮಾಡುವುದು ಮತ್ತೊಬ್ಬ ಹೆಣ್ಣನ್ನು ಎಂಬುದೇ ಬಹಳಷ್ಟು ಸಲ ನಿಜ. ಇಲ್ಲಿನ ವ್ಯಂಗ್ಯವೆಂದರೆ, ಕಂಡ ಪ್ರತಿಯೊಂದು ಹೆಣ್ಣನ್ನೂ ತನ್ನ ಭೋಗಕ್ಕೆ ಅರ್ಹವೆಂದೇ ನೋಡುವುದು ಗಂಡಸಿನ ಅಪ್ರಶ್ನಿತ ಹಕ್ಕಾಗಿಯೇ ಉಳಿದಿರುತ್ತದೆ. ಆ ಗಂಡಸಿನ ಗಮನಕ್ಕೆ 'ಪಾತ್ರ'ವಾದ ಹೆಣ್ಣಿನ ವ್ಯಕ್ತಿತ್ವ ಮತ್ತು ಚಾರಿತ್ರ್ಯಗಳನ್ನು ಛಿಂದಿ-ಚಿತ್ರಾನ್ನವಾಗಿಸಲು ಸಮಾಜ ಯತ್ನಿಸುತ್ತದೆ.

ಮಹಿಳಾ ಚಳವಳಿಯು ಆರಂಭದ ಹಂತದಲ್ಲಿ ಗುರುತಿಸಿ ಹೋರಾಟ ನಡೆಸಿದ ಅನೇಕ ಸಮಸ್ಯೆಗಳಲ್ಲಿ ವರದಕ್ಷಿಣೆ, ವಧೂದಹನ, ಅಸಮಾನ ವೇತನ ಮುಂತಾದ ಪ್ರಶ್ನೆಗಳು ಆರ್ಥಿಕ ಮೂಲದ್ದಾಗಿದ್ದು, ಈ ಎಲ್ಲದಕ್ಕೂ ಲಿಂಗತಾರತಮ್ಯವೇ ಮೂಲದಲ್ಲಿದೆ ಎಂಬುದನ್ನು ಗುರುತಿಸಿ ಪ್ರತಿಭಟಿಸಿದ್ದು ಮುಖ್ಯವಾಗಿತ್ತು. ಆದರೆ ಅದೇ ಹಂತದಲ್ಲೇ ಹಲವು ಸಂಘಟಿತ ಗುಂಪುಗಳು ದ್ವಿಪತ್ನಿತ್ವ, ಬಹುಪತ್ನಿತ್ವಗಳ ವಿರುದ್ಧವೂ ಪ್ರತಿಭಟಿಸುವ ಮೂಲಕ ವಿವಾಹಿತ ಮಹಿಳೆಯರ ಹಕ್ಕನ್ನು ನ್ಯಾಯವಾದದ್ದಾಗಿಸಲು ಯತ್ನಿಸಿದವು. ಆದರೆ ಈ ಬಗೆಯ ಯಾವುದೇ ಪಕ್ಷವಹಿಸುವಿಕೆಯಲ್ಲಿ ಮತ್ತೊಬ್ಬ ಮಹಿಳೆ ಶತ್ರುವಿನ ಸ್ಥಾನದಲ್ಲಿ ಅಥವಾ ಶತ್ರುವಾದ ಗಂಡಿನ ಜೊತೆ ಕೈ ಜೋಡಿಸಿದ ಅಪರಾಧಿ ಸ್ಥಾನದಲ್ಲೇ ಭಾವಿಸಲ್ಪಡುತ್ತಾಳೆಂಬುದನ್ನು ಗಮನಿಸಬೇಕು. ಈ ರೀತಿಯ ಹೋರಾಟಗಳಲ್ಲಿ ಮಾನವೀಯತೆ, ನ್ಯಾಯಬದ್ಧತೆ-ಇತ್ಯಾದಿ ತಾತ್ವಿಕತೆಗಳೆಲ್ಲ ಕೇವಲ ಸಾಪೇಕ್ಷವಾಗಿಬಿಡುತ್ತವೆ. ಆದರೆ ಸೃಜನಶೀಲ ಬರಹಗಾರರಾಗಿ ಮಹಿಳೆಯರು ಇಂಥ ಪ್ರಶ್ನೆಗಳನ್ನು ಅದರೆಲ್ಲಾ ಸಂಕೀರ್ಣತೆಯಲ್ಲಿ ಗ್ರಹಿಸಲು ಸಾಧ್ಯವಾದ ಪಕ್ಷದಲ್ಲಿ ಗಂಡು-ಹೆಣ್ಣಿನ ನಡುವಿನ ಸಮಾನ ಸಂಬಂಧ ಎಂಬುದರ ಪರಿಕಲ್ಪನೆ ಕೂಡ ಬೇರೆಯಾಗಲು ಅಥವಾ ಬದಲಾವಣೆಗೊಳ್ಳಲು ಸಾಧ್ಯ. ಉದಾಹರಣೆಗೆ ವಿಷಮ ದಾಂಪತ್ಯದಂಥ ತೀರ ವೈಯಕ್ತಿಕ ಸಂಬಂಧಗಳ ಬಿರುಕುಗಳನ್ನು, ಅಥವಾ ಆ ಬಿರುಕಿನಿಂದಾಗಿ ವಿಚ್ಛೇದನೆಯಲ್ಲಿ ಕಂಡುಕೊಂಡ ಪರಿಹಾರಗಳನ್ನು ಸಹಜವೆಂದು ನೋಡುವಷ್ಟು ತ್ರಾಣ ಕನ್ನಡ ಭಾಷೆಯ ಪರಿಧಿಯಲ್ಲಿ ಮಹಿಳೆಯರ ಬರಹದಲ್ಲಿ ಇನ್ನೂ ರೂಪುಗೊಳ್ಳಬೇಕಾಗಿದೆ. 'ನ್ಯಾಯ' ಸಿಂಧುವಾದ ರೀತಿಯಲ್ಲಿ, ಜನತಂತ್ರ ವ್ಯವಸ್ಥೆಯಲ್ಲಿ ವ್ಯಕ್ತಿಗಳು ಪಡೆಯುವ ಬದಲಾದ, ತಾವೇ ಕಂಡುಕೊಂಡ ಪರಿಹಾರದ ಮೂಲಕ ಸೃಷ್ಟಿಯಾಗುವ ಸಂಬಂಧಗಳನ್ನು ಅಯ್ಯೋ ಪಾಪ ಎಂದು ಮರುಕದ

ಮೂಲಕ ಮಹಿಳಾ ಬರಹಗಾರಿಕೆ ಕಾಣುತ್ತದೆಯೇ ಹೊರತು ಅದನ್ನು ಆರೋಗ್ಯಕರವೂ ಆದದ್ದೆಂದು ನೋಡಲೆತ್ನಿಸುವುದು ಅಪರೂಪ.

ಸಾವಿರಾರು ವರ್ಷಗಳಿಂದ ವ್ಯವಸ್ಥೆ ಹೆಣ್ಣಿಗೆ 'ಬಾಯ್ಮುಚ್ಚಿಕೊಂಡಿರು' ಎಂದು ಆಜ್ಞೆ ಮಾಡುತ್ತ ಬಂದಿರುವುದರಿಂದ, ಆ ವ್ಯವಸ್ಥೆಯ ನಿರಂಕುಶಾಧಿಪತ್ಯದ ವಿರುದ್ಧ ಬಹು ಪ್ರಭಾವಶಾಲಿ ಅಸ್ತ್ರವಾದ 'ವಾಕ್ ಸ್ವಾತಂತ್ರ್ಯ'ವನ್ನು ಮಹಿಳೆ ಬರಹದ ಮೂಲಕ ಗಳಿಸಿಕೊಳ್ಳಲು ಸಾಧ್ಯ. ಆದರೆ ಕುಟುಂಬದೊಳಗಿನ ಅನ್ಯಾಯ ಹಿಂಸೆಗಳ ಬಗ್ಗೆಯಾಗಲಿ, ಹೆಣ್ಣಿನ ಬದುಕಿನ ತಿರುಳೇ ಎನ್ನಿಸಿರುವ ಮದುವೆ, ದಾಂಪತ್ಯ, ತಾಯ್ತನಗಳ ಸಂಸ್ಥೆಗಳೊಳಗೆ ದಟ್ಟವಾಗಿರುವ ದಮನದ ಜಾಗಗಳನ್ನೇನಾದರೂ ಬಯಲು ಮಾಡಲು ಮಹಿಳೆ ಯತ್ನಿಸಿದರೆ, ಆ ಸಂಸ್ಥೆಗಳ ಬುಡಗಳೇ ಅಲುಗಾಡಿಬಿಡಬಹುದೆಂಬ ಭೀತಿಯಿಂದ ಪಿತೃಸಂಸ್ಕೃತಿಯು ಅಂತಹ ಅಭಿವ್ಯಕ್ತಿಗೆ ಮಹಿಳೆಗೆ ಅಡ್ಡಿಪಡಿಸುತ್ತದೆ. ದೀಪಾ ಮೆಹ್ತಾ ಎಂಬ ಚಲನಚಿತ್ರ ನಿರ್ಮಾಪಕಿ, ಭಾರತೀಯ ಮಹಿಳೆಯ ಕೌಟುಂಬಿಕ/ಸಾಮೂಹಿಕ ಬದುಕಿನ ವಾಸ್ತವ ಸ್ವರೂಪಗಳನ್ನು ಚಿತ್ರಿಸುವಾಗ ಆಕೆಯ ಪ್ರತಿಯೊಂದು ಚಲನಚಿತ್ರಕ್ಕೂ ಪಟ್ಟಭದ್ರ ಹಿತಾಸಕ್ತಿಗಳು ಎಬ್ಬಿಸುತ್ತಿರುವ ವಿರೋಧ, ಅಡ್ಡಿ ಆತಂಕಗಳು ಒಂದು ಉದಾಹರಣೆ ಮಾತ್ರ. ಮಹಿಳಾಭಿವ್ಯಕ್ತಿಗೆ ಎದುರಾಗುವ ತೊಡಕಿನ ಒಂದು ಮಾದರಿ ಅದು.

೧೯ನೆಯ ಶತಮಾನದಲ್ಲಾದ ಹಲವಾರು ಸ್ತ್ರೀಸುಧಾರಣಾ ಪ್ರಯತ್ನಗಳಿಂದಾಗಿ ಭಾರತದಲ್ಲಿ ಸ್ತ್ರೀ ಪ್ರಗತಿಗೆ ಒಂದು ದಿಕ್ಕು ದೊರಕಿತು. ಸ್ತ್ರೀ ಶಿಕ್ಷಣ, ಬಾಲ್ಯವಿವಾಹ ವಿರೋಧ, ಪ್ರೌಢ ವಿವಾಹದ ಕಾನೂನು, ವಿಧವಾ ವಿವಾಹದ ಚರ್ಚೆ, ಸತಿ ಪದ್ಧತಿ ರದ್ದತಿ, ವರದಕ್ಷಿಣೆ ವಿರೋಧಿ ಕಾನೂನು–ಮುಂತಾದವುಗಳಿಗೆ ಅಂದಿನ ಸಂಪ್ರದಾಯಸ್ಥರು ತೋರಿದ ತೀವ್ರವಾದ ಪ್ರತಿಕ್ರಿಯೆಗಳನ್ನು ಗಮನಿಸಿದರೆ, ಬಹುಶಃ ಅಂದಿನವರ ದೃಷ್ಟಿಗೆ ಸ್ತ್ರೀವಿಮೋಚನೆಯ ಕೊಟ್ಟಕೊನೆಯು ಅಷ್ಟೇ ಆಗಿತ್ತೆಂದು ಕಾಣುತ್ತದೆ. ಇಪ್ಪತ್ತನೆ ಶತಮಾನದ ಕೊನೆಯ ಎರಡು ದಶಕಗಳಲ್ಲಿ ಲಿಂಗತ್ವ ವ್ಯವಸ್ಥೆಯ ವಿರುದ್ಧವಾದ ಮಹಿಳಾ ಪ್ರತಿಭಟನೆಗಳು ಕಾಣಿಸಿಕೊಂಡಾಗ ಸಮಾಜದ ಇತರ ಪ್ರಗತಿಪರ, ವಿಚಾರವಾದಿ ಸಂಘಟನೆಗಳಿಂದ ಬೆಂಬಲ ಸಿಕ್ಕಿತಾದರೂ, ಸಂಪ್ರದಾಯಸ್ಥ ಸಮಾಜದಲ್ಲಿ ಅದು ಕ್ರೋಧ, ಅಭದ್ರತೆ, ಸ್ವಾಚ್ಛಂದ್ಯಗಳ ಭೀತಿಯನ್ನು ಹುಟ್ಟಿಸಿತ್ತು. ಏಕೆಂದರೆ ಮೌನದ ಗಡಿಗಳ ಹೊರಕ್ಕೆ ಮಹಿಳೆಯರ ಧ್ವನಿ ಕೇಳತೊಡಗಿತ್ತು.

ಮಹಿಳೆಯರು ತಮ್ಮ ಮತ್ತು ಪುರುಷರೊಂದಿಗಿನ ಸಂಬಂಧಗಳ ವಾಸ್ತವ ಸ್ವರೂಪವನ್ನು ಅನಾವರಣಗೊಳಿಸಿದರೆ ಅದೇಕೆ ಸಮಾಜಕ್ಕೆ ಆತಂಕಕಾರಿಯೆನ್ನಿಸುತ್ತದೆ? ಕುಟುಂಬವೇ ಸಮಾಜದ ಭದ್ರಕೋಟೆ ಆಗಿರುವುದಕ್ಕೆ ಕಾರಣವೇನು? ಕುಟುಂಬದ ಸುತ್ತಲೂ ಬದುಕುವುದು, ರೂಢಿಗತ ತಾಯ್ತನದಂಥ ತಾತ್ವಿಕತೆಗಳನ್ನು ಉಳಿಸಿಡಲೇಬೇಕಾದ್ದೆಂದು ಏಕೆ ಭಾವಿಸಲಾಗುತ್ತದೆ? ಮಹಿಳೆಯರ ಅಧೀನತೆಯು ವ್ಯವಸ್ಥಿತ ರಾಜಕೀಯದ್ದಾಗಿದ್ದು ಅದರ ಸಾರ ಮತ್ತು ಗಂಭೀರತೆಯನ್ನು ಗುರುತಿಸಲು ವ್ಯವಸ್ಥೆ ನಿರಾಕರಿಸುತ್ತದೇಕೆ? ಈ ಸ್ಥಾಪಿತ ವ್ಯವಸ್ಥೆಯಲ್ಲಿ ಮಹಿಳಾ ಬರಹಗಾರರಿಗೆ ಎದುರಾಗುವ ಅಡ್ಡಿ ಅಡಚಣೆಗಳನ್ನು ಕ್ಷುಲ್ಲಕ, ವೈಯಕ್ತಿಕ

ಸಂಗತಿಗಳೆಂದೇಕೆ ತಳ್ಳಿಹಾಕಲಾಗುತ್ತದೆ?–ಎಂಬ ಅನೇಕ ಪ್ರಶ್ನೆಗಳಿಗೆ ಮಹಿಳಾ ಚಳವಳಿಗಾರರು ಉತ್ತರ ಕಂಡು ಹಿಡಿಯಲು ನಡೆಸುತ್ತಿರುವ ಯತ್ನಗಳ ಫಲವಾಗಿ ಹಲವು ಸತ್ಯಾಂಶಗಳು ತಲೆದೋರತೊಡಗಿದವು.

೧೧. ಅದೃಶ್ಯ ನೆಲೆಗಳು ಮತ್ತು ಸೆನ್ಸಾರ್‌ಷಿಪ್

ಸಮಾಜವನ್ನು ಖಾಸಗಿ ಮತ್ತು ಸಾರ್ವಜನಿಕ ಎಂದು ಇಬ್ಬಗೆಯ ಜಾಗಗಳಾಗಿ ವಿಭಜಿಸಿ ನೋಡುವ ದೃಷ್ಟಿಕೋನ ತುಂಬ ಬಲವಾಗಿ ಬೇರೂರಿದ್ದಾಗಿದೆ. ಸಾಮಾನ್ಯವಾಗಿ 'ಸಾರ್ವಜನಿಕ' ವಲಯ ಪುರುಷರ ಕಾರ್ಯಕ್ಷೇತ್ರದ್ದೆನಿಸಿದ್ದು, ಅದಕ್ಕೆ ಹೊಂದಿಕೊಂಡ ಎಲ್ಲವೂ ಮೇಲೆನಿಸುತ್ತವೆ. ಮಹಿಳೆಯರ ಸಾಂಪ್ರದಾಯಿಕ ಕೌಟುಂಬಿಕ ನೆಲೆಯು ಖಾಸಗಿ ಜಾಗವೆನಿಸಿದ್ದು ಅಲ್ಲಿ ಅವರ ಶ್ರಮ, ದುಡಿಮೆ, ಅವರು ಪಡುವ ಯಾತನೆ, ಅವರು ಅನುಭವಿಸುವ ದಮನಗಳೂ ಅವರ ಸಾಧನೆ, ಅವರಿಂದ ಉಂಟಾಗುವ ಲಾಭ–ಎಲ್ಲವೂ ಕೀಳು ಅಥವಾ ಗೌಣವೇ ಆಗಿಬಿಡುತ್ತವೆ ಏಕೆಂದರೆ ಅವೆಲ್ಲ 'ಖಾಸಗಿ'ಯ ವಲಯದ್ದು. ಈ ಖಾಸಗಿ ಆಗಿರುವ ಸಂಗತಿಗಳನ್ನು 'ಸಾರ್ವಜನಿಕ'ದೆದುರು ತರಲಾಗುದ ಎಂಬುದಕ್ಕಾಗಿ ಅವೆಲ್ಲವನ್ನೂ 'ಅದೃಶ್ಯ' ವಾಗಿಸಲಾಗುತ್ತದೆ.

ಲಿಂಗಾಧಾರಿತ ಶ್ರಮ ವಿಭಜನೆ, ಸಂತಾನೋತ್ಪಾದನೆ, ಮಕ್ಕಳ ಪಾಲನೆ, ಪೋಷಣೆ, ವಯಸ್ಸಾದವರ ಹಾಗೂ ರೋಗಿಗಳ ಶುಶ್ರೂಷೆ, ಅತಿಥಿ ಸತ್ಕಾರ ಮೊದಲಾದ 'ಗೃಹಕೃತ್ಯ'ಗಳು ಮಹಿಳೆಯರ ಬದುಕಿನಿಂದ ಕಾಲವನ್ನು ಇಡಿಯಿಡಿಯಾಗಿ ಹೇಗೆ ಕಸಿದುಕೊಳ್ಳುತ್ತವೆ ಎಂಬುದನ್ನು 'ಹೊರಲೋಕ'ದ ಕಣ್ಣಿನಿಂದ ಸದಾ ಮರೆಸಿಡಲಾಗಿರುತ್ತದೆ. ಗಂಡಸಿಗ್ಯಾಕೆ ಗೌರೀದುಃಖ? ಎಂಬುದಾಗಿ ಈ ರೀತಿಯಾಗಿ ಜೀವನದ ಸರ್ವ ಸಾಮರ್ಥ್ಯಗಳೂ ಹರಣವಾಗಲು ಬಿಡುವುದೇ ಹೆಂಗಸರ ಹಣೆಬರಹ ಎನ್ನಿಸಿ ಬದಿಗೆ ಒತ್ತರಿಸಲ್ಪಡುತ್ತವೆ.

೧೨. ಕೌಟುಂಬಿಕತೆ Vs ನಾಗರಿಕ ಹಕ್ಕು

ಖಾಸಗಿ–ಸಾರ್ವಜನಿಕವೆಂಬ ಎರಡು ಜಾಗಗಳನ್ನುಳ್ಳ ವ್ಯವಸ್ಥೆಯಲ್ಲಿ ನಾಗರಿಕ ಸಂಸ್ಥೆಗಳ ಒಳಗಿದ್ದೇ ಮಹಿಳೆಯು ಪ್ರಜೆಯಾಗಿರುತ್ತಾಳೆ. ಮಹಿಳೆಯರು ಪುರುಷರಿಗೆ ಇರುವ ನಾಗರಿಕ ಹಕ್ಕುಗಳು ತಮಗೂ ಬೇಕೆಂದು ಹೋರಾಡಬೇಕಾದ ಸ್ಥಿತಿ ಜಗತ್ತಿನ ಎಷ್ಟೋ ದೇಶಗಳಲ್ಲಿದೆ. ಭಾರತದಲ್ಲಿ ಸಂವಿಧಾನದತ್ತವಾಗಿಯೇ ಸಮಾನ ನಾಗರಿಕ ಹಕ್ಕುಗಳು ಮಹಿಳೆಯರಿಗೆ ದೊರೆತಿವೆ. ಆದರೆ ಆ ಹಕ್ಕುಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ಚಲಾಯಿಸಲು ಬಹುಸಾಂಖ್ಯಾತ ಮಹಿಳೆಯರು ಇನ್ನೂ ಕಲಿಯಬೇಕಿದೆ. ಮತದಾನದ ಹಕ್ಕು ಹಾಗಿರಲಿ. ಕುಟುಂಬ, ಕುಲ, ಸಮುದಾಯಗಳಲ್ಲಿನ ಹಕ್ಕೊತ್ತಾಯಗಳಿಗಿಂತಲೂ ಎಷ್ಟೋ ಮಿಗಿಲಾದದ್ದು ರಾಜ್ಯ ಮತ್ತು ರಾಷ್ಟ್ರದಲ್ಲಿ ಪ್ರಜೆಯಾಗಿರುವ ಹಕ್ಕು. ಆದರೆ ಕೌಟುಂಬಿಕ ನೆಲೆಯಲ್ಲಿ ತಾಯಿ, ಪತ್ನಿ, ಮಗಳು, ಪ್ರೇಯಸಿಯರ ತುಂಬ ಸ್ಪಷ್ಟವಾದ 'ಖಾಸಗಿ' ಸಂಬಂಧಗಳಲ್ಲೇ ಪುರುಷರೊಂದಿಗೆ ಬದುಕುವ, ತಮ್ಮ ಸಮುದಾಯಗಳ ಸಂಸ್ಕೃತಿ, ಪರಂಪರೆಗಳನ್ನು ಕಾಯ್ದಿಡುವ ಜವಾಬ್ದಾರಿಗಳೇ

ಸರ್ವಸ್ವವೆಂದು ನಂಬಿರುವ ಮಹಿಳೆಯರು, ಅವರಾಚೆಗಿನ ಹೆಚ್ಚು ಪರಿಣಾಮಕಾರಿಯಾದ ಹಕ್ಕುಗಳನ್ನು ನಾಗರಿಕ ವ್ಯಕ್ತಿಗಳಾಗಿ ಬಳಸಿಕೊಳ್ಳುವ ಸ್ವಾತಂತ್ರ್ಯಗಳಿಗೆ ಹಂಬಲಿಸಲೂ ಆದರು. ಏಕೆಂದರೆ ವ್ಯಕ್ತಿ ಸ್ವಾತಂತ್ರ್ಯ ಅವರಿಗೆ ತೀರ ಅಪರಿಚಿತವೂ, ಆದ್ದರಿಂದ ಒಂಟಿತನದ ಹೆದರಿಕೆ ಹುಟ್ಟಿಸುವಂಥದೂ ಆಗಿ ಕಾಣಿಸುತ್ತದೆ. ಬರಹಗಾರರಾದಾಗಲೂ ಮಹಿಳೆಯರು ತಮ್ಮ ಸುಪರಿಚಿತ ಕುಟುಂಬ ವಲಯದ ಅನುಭವಗಳ ಆಚೆಗೆ ಬಾರದಿರುವುದಕ್ಕೆ ಈ ದಾರಿಯು ಹುಟ್ಟಿಸುವ ಅಪರಿಚಿತತೆಯು, ಏಕಾಕಿಯಾಗಿಬಿಡುವೆನೆಂಬ ಭೀತಿಯೇ ಮುಖ್ಯ ಕಾರಣವಾಗಿರುತ್ತವೆ.

೧೩. ಮೌನವೆ ಆಭರಣ?

ಹೀಗಾಗಿ ಮಹಿಳೆಯರ ಬರಹಗಾರಿಕೆಯ ತುಂಬ ಕೌಟುಂಬಿಕ ಅನುಭವಗಳೂ ಮದುವೆ, ಪ್ರೇಮ, ದಾಂಪತ್ಯ, ತಾಯ್ತನಗಳ ಸುತ್ತಲೇ ಸುತ್ತುತ್ತಾ ವಿಪುಲವಾಗಿ ಬೆಳೆದಿರುವ ಬದುಕಿನ ಜಿಜ್ಞಾಸೆಗಳೂ ಕಾಣುತ್ತವೆ. ಈ ವಸ್ತುಗಳು ಮತ್ತೆ ಮತ್ತೆ ಅವರ ಬರಹದಲ್ಲಿದ್ದರೂ ಆ ಯಾವೊಂದು ಅನುಭವವನ್ನೂ ಆಳವಾದ, ಸೂಕ್ಷ್ಮವಾದ ನಿಜಗಳ ಶೋಧನೆಗಾಗಲಿ, ಸಾಮಾಜಿಕ ವ್ಯವಸ್ಥೆಯಲ್ಲಿನ ತಮ್ಮ ವಿಷಮ ನೆಲೆಗಳನ್ನು ಚರ್ಚೆಗೆ ತರುವುದಕ್ಕಾಗಲಿ ತಲಸ್ಪರ್ಶಿಯಾಗಿ ಜಾಲಾಡುವ ಯತ್ನಗಳನ್ನು ಅವರ ಬರಹಗಳಲ್ಲಿ ಕಾಣುವುದು ಅಪರೂಪವೇ. ಬದುಕನ್ನು ಅಥವಾ ಸಂಬಂಧಗಳನ್ನು ಸಮಸ್ಯೀಕರಿಸುವುದರ ಬದಲಾಗಿ ಹೇಳದೆ ಬಿಟ್ಟುಬಿಡುವ, ಮೌನದ ಮೊರೆ ಹೋಗುವ ಅಥವಾ ಮುಜುಗರಿಸುವ ಮೂಲಕ ನಾಡಿನ 'ಸ್ತ್ರೀಯರ ಸೌಜನ್ಯದ ಭಾವವನ್ನು' ಮುಂದುವರೆಸುವುದೇ ಹೆಚ್ಚು. ಎಂದರೆ ಬಹಿರಂಗ ಚರ್ಚೆ ವಾಗ್ವಾದಗಳಿಗೆ ಸದಾ ಬಾಗಿಲು ಮುಚ್ಚಿಕೊಂಡ 'ಅಂತರಂಗದ ಲೋಕ' ಇದು.

೧೪. ಬಿಡಿ ವ್ಯಕ್ತಿಯಾದ ಮಹಿಳೆ Vs ಸಮಾಜ

ಕುಟುಂಬವೇ ಸರ್ವಸ್ವ ಆಗಿರುವಂಥ ಸಮಾಜದಲ್ಲಿ ಮಹಿಳೆಯರು ಬಿಡಿ ವ್ಯಕ್ತಿಗಳಾಗಿ ಬದುಕುವ ಸ್ಥಿತಿಯು, ಅನಪೇಕ್ಷಣೀಯವೂ, ಅಸಹಜವಾಗಿಯೂ ಸದಾ ಅನುಮಾನಕ್ಕೆ ಒಳಗಾಗುವಂಥದೂ ಆಗಿರುತ್ತದೆ. ಏಕಾಗಿಯಾಗಿ ಬದುಕುವ ಮಹಿಳೆಯೂ ವೈಯಕ್ತಿಕ ಬದುಕು, ವರ್ತನೆ, ಜೀವನದ ಆಯ್ಕೆಗಳಿಗೆ ಅವರದೇ ಆದ ನಂಬಿಕೆಗಳೂ, ಆದ್ಯತೆಗಳೂ ಇರಬಹುದು ಎನ್ನುವುದನ್ನು ರೂಢಿಗತ ಸಾಮಾಜಿಕ ಜೀವನಕ್ಕೆ ಕಟ್ಟುಬಿದ್ದ ಜನರು ಒಪ್ಪಲು ಸಿದ್ಧರಿರುವುದಿಲ್ಲ. 'ವ್ಯಕ್ತಿ ಸ್ವಾತಂತ್ರ್ಯ' ಎಂಬುದು ನಮ್ಮ ದೇಶಕ್ಕೆ ಜನತಾಂತ್ರಿಕತೆ ಎಂಬುದರ ಹಾಗೆಯೇ ಎರವಲಾಗಿ ಪಶ್ಚಿಮ ದೇಶಗಳಿಂದ ಬಂದಂಥ ಮತ್ತು ವಸಾಹತು ಶಾಹಿಯ ಫಲವಾಗಿ ನಾವು ಸ್ವೀಕರಿಸಿದಂಥ ಒಂದು ತಾತ್ವಿಕ ಪರಿಕಲ್ಪನೆ. ಭಾರತದ ಜಂಟಿ ಕುಟುಂಬ ಪದ್ಧತಿಯು ಪಿತೃ–ಪುರುಷ ಪ್ರಧಾನವಾದ. ಅನೇಕ ರೀತಿಯ ಶ್ರೇಣೀಕರಣಗಳಲ್ಲಿ ಬದ್ಧವಾಗಿದ್ದು, ಪುರುಷರಿಗೂ ಇಂದಿಗೂ ಸಂಪೂರ್ಣವಾಗಿ ವ್ಯಕ್ತಿಸ್ವಾತಂತ್ರ್ಯದ ತತ್ವವನ್ನು ವಾಸ್ತವೀಕರಿಸುವುದು ಸಾಧ್ಯವಾಗಿಲ್ಲ. ಪುರುಷಾಧೀನವಾಗಿಯೇ ಬದುಕುವ ಕ್ರಮದಲ್ಲೇ ಸ್ತ್ರೀಯನ್ನು ಭಾವಿಸುವುದರಿಂದ

ಇಂಥ ಸಮಾಜದಲ್ಲಿ ಬಿಡಿ ವ್ಯಕ್ತಿಯಾಗಿರುವ ಸ್ವತಂತ್ರವಾಗಿ ಬದುಕುವ ಮಹಿಳೆ ಜನರ ಕಣ್ಣುರಿಯಾಗಿ, ರೂಢಿಗತ ಸರಾಗ ಬದುಕಿಗೆ ಅಡ್ಡಗಲ್ಲಿನ ಹಾಗೆ, ತಿರಸ್ಕಾರ ಇಲ್ಲವೆ ದಿಗ್ಭ್ರಮೆ ಮಾತ್ರವಲ್ಲ ಬಹಳಷ್ಟು ಸಲ ಎಲ್ಲರ ಅಸೂಯೆಗೆ ಗುರಿಯೂ ಆಗಿರುತ್ತಾಳೆ. ಮಹಿಳೆಯು ಲೈಂಗಿಕ ಸ್ವಾಮ್ಯಕ್ಕೆ ಒಳಪಡಬೇಕೆಂಬುದನ್ನೇ ಒತ್ತಾಯಿಸುವ ಪರಿಸರದಲ್ಲಿ ಯಾರೊಬ್ಬರೊಂದಿಗೂ ಆ ರೀತಿಯಲ್ಲಿ ಬದ್ಧತೆಯನ್ನು ದಾಖಲಿಸಿಕೊಳ್ಳದ ಅಥವಾ ಬದ್ಧತೆಯನ್ನೇ ಬಯಸದ ಮಹಿಳಾ ಬದುಕನ್ನು ವಾಸ್ತವವೆಂದು ಒಪ್ಪುವ ಸಾಧ್ಯತೆ ಕೂಡ ಇರುವುದಿಲ್ಲ. ಸಾಮಾನ್ಯ ಸಮಾಜಬದ್ಧರು ಹಾಗಿರಲಿ, ಸ್ವತಃ ಸ್ತ್ರೀವಾದಿಗಳೂ, ಮಹಿಳಾ ಚಳವಳಿಗಾರರೂ ಇಂಥ ಸ್ಥಿತಿಗಳಿಗೆ ಎಷ್ಟು ಪ್ರಜ್ಞಾಪೂರ್ವಕವಾಗಿ ತೆಗೆದುಕೊಂಡಿರುತ್ತಾರೆನ್ನುವುದು ಅವರ ಸಮಾಜದೊಂದಿಗೆ ಸಾಪೇಕ್ಷವೇ ಆಗಿರುತ್ತದೆ. ಹೀಗಾಗಿ ಲೈಂಗಿಕತೆಗೆ ಮದುವೆಯ ಮೂಗುದಾರ ಹಾಕಿಕೊಂಡಿಲ್ಲದ ಮಹಿಳೆಯರು 'ಸಂಸಾರಸ್ಥ' ಬದುಕಿಗೆ ಅಪಾಯಕಾರಿಗಳೆಂದು ಕಾಣಿಸುತ್ತಾರೆ 'ಪತಿ, ಪತ್ನಿ ಔರ್ ವೊಹ್' ಎಂಬ ತ್ರಿಕೋನ ಸಂಬಂಧಗಳಲ್ಲೇ ಇಂಥ ಬಿಡಿ ವ್ಯಕ್ತಿಗಳಾದ ಮಹಿಳೆಯರನ್ನು ಭಾವಿಸುವ ಪರಿಪಾಠಿ ಇರುತ್ತದೆ. ಆದ್ದರಿಂದ ಅಂಥವರನ್ನು ರೂಢಿಗ್ರಸ್ತ ಚೌಕಟ್ಟಿನಲ್ಲಿ ಹಿಡಿದಿಡುವ ಒತ್ತಡಗಳನ್ನು ವ್ಯವಸ್ಥೆಯು ಸೃಷ್ಟಿಸುತ್ತಲೇ ಇರುತ್ತದೆ. ಇಂತಹ ಸಾಮಾಜಿಕ, ಸಾಂಸ್ಕೃತಿಕ ಆಗ್ರಹಗಳನ್ನು ಒತ್ತಡಗಳನ್ನು ಎದುರಿಸಿ ನಿಭಾಯಿಸಲು ಮನೋಬಲ ವಿಶೇಷವಾಗಿ ಇರಬೇಕಾಗುತ್ತದೆ. ಇಲ್ಲದಿದ್ದರೆ ವ್ಯಕ್ತಿತ್ವವಿನಾಶ ಅಥವಾ ಮನೋರೋಗಕ್ಕೆ ಬಲಿಯಾಗುವ ಅಪಾಯವೂ ಇರುತ್ತದೆ. ಆದ್ದರಿಂದಲೇ ಮಹಿಳೆಯರು ಬರೆಯುವ ಕ್ರಿಯೆಯಿಂದಾಗಿ ಸ್ಥಾಪಿತ ಸಾಂಸ್ಕೃತಿಕ ಮಿತಿಗಳನ್ನು ಮೀರಹೊರಟಾಗ ಇಡೀ ವ್ಯವಸ್ಥೆಗೆದುರಾಗಿ ಒಬ್ಬ ವ್ಯಕ್ತಿಯಾಗಿ ಏಕಾಕಿತನವನ್ನು ಬರಮಾಡಿಕೊಳ್ಳಲು ಅಂಜುವುದು ಸಾಮಾನ್ಯ.

೧೫. ವ್ಯವಸ್ಥೆಯನ್ನು ಒಪ್ಪಿದರೆ ಮಾನ್ಯತೆ

ಬರೆಯುವಿಕೆ ಒಂದು ಸೀಮೋಲ್ಲಂಘನದ ಕ್ರಿಯೆ. ಆದ್ದರಿಂದಲೆ ಗಡಿ ಮೀರುವ ಬರಹದ ಯತ್ನಗಳನ್ನು ಹತ್ತಿಕ್ಕಲು, ಹಾಗೆ ಬರೆಯುವವರ ಚಾರಿತ್ರ್ಯನಾಶ ಮಾಡಲು, ಚರಿತ್ರೆಯಿಂದ ಅವರನ್ನು ದೂರವಿಡಲು ವ್ಯವಸ್ಥೆ ಸದಾ ಯತ್ನಿಸುತ್ತಿರುತ್ತದೆ. ತದ್ವಿರುದ್ಧವಾಗಿ ಯಾರನ್ನೂ ಯಾವುದನ್ನೂ ಹಾನಿಗೊಳಿಸದೆ, ಯಾವ ಕ್ಲಿಷ್ಟವಾದ ಸಂಬಂಧಗಳನ್ನೂ ಸ್ಪರ್ಶಿಸಲೆತ್ನಿಸದೆ, ಜನರ ನೆಮ್ಮದಿ ಕೆಡಿಸದೆ ಬರೆಯುತ್ತಿರುವಾಗ ಅವರ ಬರಹಕೌಶಲ್ಯ, ಕಲಾತ್ಮಕತೆಗಳು ಮೆಚ್ಚುಗೆಗೆ ಪಾತ್ರವಾಗುತ್ತವೆ. ಗೌರವ ಸಂದಾಯವಾಗುತ್ತದೆ. ರಸ್ತೆಯೇ ಇರದ, ಯಾರೂ ಕಾಲಿಡದ ಹಾದಿಯಲ್ಲಿ ಪ್ರಯಾಣ ಹೊರಟಾಗ 'ಸೆನ್ಸಾರ್‌ಷಿಪ್' ತನ್ನ ಚಾವಟಿಯನ್ನು ಬೀಸಿ ಕಡಿವಾಣ ಹಾಕುತ್ತದೆ.

ಸಾಂಪ್ರದಾಯಿಕ ಜೀವನ ವ್ಯವಸ್ಥೆಯಲ್ಲೂ ಗಾಯಕಿಯರು, ನರ್ತಕಿಯರು, ರಂಗಕಲಾವಿದೆಯರು ಮುಂತಾದ ಕೆಲವು ಕುಲವೃತ್ತಿನಿರತ ಮಹಿಳೆಯರನ್ನು ಬೇಕಾದರೆ ಒಬ್ಬಂಟಿಗಳಾಗಿ ಬದುಕಲು ಸಮಾಜ ಬಿಡಬಲ್ಲದು. ಆ ರೀತಿ ಬಿಟ್ಟಿರಲಿಕ್ಕೆ ಈ ವೃತ್ತಿಗಳಲ್ಲಿ

ಮಹಿಳೆಯರು ಪುರುಷರ ಸುಖ ಹಾಗೂ ಮನೋರಂಜನೆಗೇ ಯತ್ನಿಸುತ್ತಿರುವುದೇ ಮುಖ್ಯ ಕಾರಣ. ಅಂದರೆ ಈ ಮಹಿಳೆಯರ ಸ್ವತಂತ್ರ ವೃತ್ತಿ ಕೂಡ ಪುರುಷರನ್ನೇ ಕೇಂದ್ರವಾಗಿಟ್ಟುಕೊಂಡಿರುತ್ತದೆಯಾಗಿ ಅದು ಲಾಭಕರ ಮತ್ತು ಅಪಾಯಕಾರಿಯಲ್ಲ. ಆದರೆ ಬರಹಗಾರಿಕೆಯ ಮುಖಾಂತರವಾಗಿ ಮಹಿಳೆಯರು ಈವರೆಗೆ ಚರಿತೆಯು ತಮಗೆ ನಿರಾಕರಿಸಿರುವ ಜಾಗವೊಂದಕ್ಕಾಗಿ ಹಕ್ಕೊತ್ತಾಯಿಸುತ್ತಿರುವುದರಿಂದ ಅವರನ್ನು ದಮನಿಸಲೇಬೇಕಾದ್ದು ಅಗತ್ಯವಾಗಿ ವ್ಯವಸ್ಥೆಗೆ ತೋರುತ್ತದೆ.

೧೬. ತನ್ನದಲ್ಲದ ದೇಹ?

ಜೀವನ, ಪ್ರೇಮ, ಮದುವೆಗೆ ಸಂಬಂಧಿಸಿದ ಮಹಿಳೆಯರ ವಾಸ್ತವ ಸ್ಥಿತಿಗಳು ಎಂದಿನಿಂದಲೂ ಸಾಹಿತ್ಯಕ್ಕೆ ವಸ್ತುಗಳೇ ಆಗಿವೆ. ಈ ವಸ್ತುಗಳನ್ನು ಪುರುಷರು ತಮ್ಮ ದೃಷ್ಟಿಗೆ ತಕ್ಕಂತೆ ಸಾಹಿತ್ಯದಲ್ಲಿ ಸೃಷ್ಟಿಸಿದರೆ, ಆ ಚಿತ್ರಿತ ಮಹಿಳಾ ರೂಪಗಳು ಓದುಗರಲ್ಲಿ ಕರುಣೆ, ಮರುಕ, ವಿಷಾದಗಳನ್ನು ಹುಟ್ಟಿಸಿರುವುದು ಸಾಧ್ಯ. ಶರಚ್ಚಂದ್ರರಂಥವರ ಕಾದಂಬರಿಗಳ ಸ್ತ್ರೀಲೋಕ ಕಂಡು ಮಿಡಿಯದವರಾರು? ಪುರುಷರು ಸ್ತ್ರೀತ್ವವನ್ನೂ ಸ್ತ್ರೀದೇಹವನ್ನೂ ಶೋಧಿಸುತ್ತಲೇ ತಮ್ಮ ಆ ಅನುಭವದ ವೈಭವೀಕೃತ ಚಿತ್ರಗಳನ್ನು ಬರೆದರೆ ಅದೆಷ್ಟೆ ಹಸಿಬಿಸಿಯದಿರಲಿ, ಹಪಾಹಪಿತನದ್ದೇ ಆಗಿರಲಿ, ಸಮಾಜ ಅದರ ಬಗ್ಗೆ ಆಗ್ರಹ ಮಾಡುವುದಿಲ್ಲ. ಬದಲಾಗಿ ವಿಮರ್ಶಕವರ್ಗ ಆ ಅವಸ್ಥೆಗೂ ಒಂದು ಸಾಂಕೇತಿಕಾರ್ಥ ಹುಡುಕಿ ಕೊಡಲು ಶ್ರಮಿಸಬಲ್ಲದು. ಆದರೆ ಅದೇ ಸ್ತ್ರೀಯರು ತಮ್ಮದೇ ದೇಹವನ್ನು ಅದರ ಅನುಭವಗಳನ್ನು ಶೋಧಿಸಿಕೊಳ್ಳುತ್ತಾ ಬರೆದರೆ ಜನರು ಅದು ಬರಹವೆಂದೂ, ಅನುಭವಕ್ಕೆ ಕೊಟ್ಟ ಸಾಂಕೇತಿಕ ಅಭಿವ್ಯಕ್ತಿಯೆಂದೂ ಭಾವಿಸಲು ಸಿದ್ಧರಿರುವುದಿಲ್ಲ. ಬರಹದಲ್ಲಿ ದಾಖಲಾದ ಅನುಭವಕ್ಕೂ ಅದನ್ನು ಬರೆದ ಮಹಿಳೆಗೂ ಗಂಟುಹಾಕಿಬಿಟ್ಟು, ಆಕೆಯ ಚಾರಿತ್ರ್ಯವಧೆಗೆ ಸಿದ್ಧವಾಗುತ್ತದೆ. ಮಹಿಳೆಯನ್ನು ಯಾರಾದರೂ ಪ್ರತಿನಿಧೀಕರಿಸಬಹುದು. ಆದರೆ ಅವಳೆ ತನ್ನನ್ನು ಪ್ರತಿನಿಧೀಕರಿಸಕೂಡದು ಎಂಬ ವ್ಯಂಗ್ಯ ಇಲ್ಲಿದೆ. ಹೀಗಾಗಿ ಸ್ವಾಭಿವ್ಯಕ್ತಿಯಲ್ಲಿ ರೂಢಿಗತ ಸಮಾಜದತ್ತ ಸದಾ ಎಚ್ಚರವಾಗಿದ್ದು ತಂತಿಯ ಮೇಲೆ ನಡೆಯುವ ಹಾಗೆ ಮಹಿಳೆ ತನ್ನ ನಿಜಗಳನ್ನು ಹೇಳಲು ಹವಣಿಸುತ್ತಾಳೆ.

ಪುರುಷರ ಬರಹಗಳು ಮೂಲೋತ್ಪಾಟನೆ ಮಾಡುವಷ್ಟು ವಿದ್ರೋಹಕಾರಿಯಾಗಿದ್ದು ಸಾರ್ವಜನಿಕ ಸಂರಚನೆಗಳಿಗೆ, ರಾಜ್ಯ ವ್ಯವಸ್ಥೆಗೆ ಆತಂಕ ತರುವಂತಿದ್ದಾಗ ಸರ್ಕಾರಗಳು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕ್ರಮಗಳಿಂದ ಆ ಕೃತಿಗಳ ಪ್ರಕಟಣೆ, ಮುದ್ರಣ, ಮಾರಾಟಗಳನ್ನು ನಿಷೇಧಿಸಬಲ್ಲದು. ಆದರೆ ಅದೇ ಬರಹ ಮಹಿಳೆಯರದಾಗಿದ್ದಲ್ಲಿ ಅಥವಾ ಅದು ಪಿತೃಪ್ರಧಾನ ಸಂರಚನೆಯನ್ನು ಅಲುಗಾಡಿಸುವಂತೆ ಇದ್ದಲ್ಲಿ ಅದನ್ನು ಹತ್ತಿಕ್ಕಲು ಕೇವಲ ಅಭಿವ್ಯಕ್ತಿ ಸ್ವಾತಂತ್ರ್ಯಹರಣದ ಕಾನೂನಷ್ಟೇ ಬಳಕೆಯಾಗುವುದಿಲ್ಲ. ಆಕೆಯ ಇರುವಿಕೆಗೂ ಧಕ್ಕೆ ಒದಗಬಹುದಾದ ಅಸಂಖ್ಯಾತ ಕ್ರೂರ ವಿಧಾನಗಳಿಂದ ಅವರು ದುರ್ಬಲ ಲಿಂಗದವರೆಂಬ

ಸ್ಥಿತಿಯನ್ನು ಬಳಸಿಕೊಂಡು ಸರ್ವವಿಧವಾಗಿಯೂ ಹತ್ತಿಕ್ಕುವ ಯತ್ನಗಳು ನಡೆಯುತ್ತವೆ. ಲೈಂಗಿಕ ಹಿಂಸಾಚಾರಗಳಿಂದಲೂ, ಚಾರಿತ್ರ್ಯ ವಧೆಯಿಂದಲೂ ಅಂತಹ ಬರಹಗಾರರ ಯದುಕೇ ಅಸಹನೀಯವಾಗುವಂತೆ ಮಾಡಲು ವ್ಯವಸ್ಥೆಗೆ ಕಷ್ಟವಾಗದು.

೧೭. ಒಳಗಿರುವ ಆತ್ಮಕ್ಕಾವ ಲಿಂಗ?

ಕುಟುಂಬ ಮತ್ತು ಮದುವೆಗಳು ಪಿತೃಸಂಸ್ಕೃತಿಯ ತುಂಬ ಪ್ರಬಲವಾದ ಸ್ತಂಭಗಳು. ವ್ಯಕ್ತಿಗಳಾಗಿ ಮಹಿಳೆಯರ ಮಾನಸಿಕ, ಸಾಮಾಜಿಕ ಹಾಗೂ ಲೈಂಗಿಕ ಸ್ವಾತಂತ್ರ್ಯಗಳ ಗಡಿಗಳನ್ನು ಅವರ ಲಿಂಗವೇ ನಿರ್ಧರಿಸುವಂತೆ ಈ ಸಂಸ್ಥೆಗಳು ಮಹಿಳೆಯರನ್ನು ತಿದ್ದಿತೀಡಿರುತ್ತವೆ. ತಾನು ಹೆಣ್ಣೆಂಬುದರ ಅರಿವಿನ ಮೂಲಕವೇ ಪ್ರತಿಕ್ಷಣವೂ ಬದುಕನ್ನು ಎದುರಿಸಬೇಕಾದ ಮಹಿಳೆ ಆ ರೀತಿಯ ಲಿಂಗತ್ವಕ್ಕೆ ಮೀರಿದ, 'ಲಿಂಗಾತೀತ'ವಾಧ ಜಾಗವೊಂದಕ್ಕೆ ಮಾನಸಿಕವಾಗಿ ಪಾರಾಗುವುದು ಕಷ್ಟವೇ. ಏಕೆಂದರೆ ತಮ್ಮದೇ ವ್ಯವಸ್ಥೆಯಲ್ಲಿ ಸ್ವತಂತ್ರ ವ್ಯಕ್ತಿಗಳಾದ ಪುರುಷರ ಸಹಜವಾದ ಸವಲತ್ತಿನ ಜಾಗ ಆ ಲಿಂಗಾತೀತತೆ. ಮಹಿಳೆಗೆ ಅದು ವಾಸ್ತವಕ್ಕೆ ಮೀರಿದ ಕಾಲ್ಪನಿಕ ನೆಲೆ. ಪುರುಷ ಬರಹಗಾರರು ಸ್ತ್ರೀಪಾತ್ರಗಳನ್ನು ಚಿತ್ರಿಸುವಾಗ 'ಪರಕಾಯ ಪ್ರವೇಶ' ಮಾಡಿ ಸ್ತ್ರೀಯರ ವ್ಯಕ್ತಿತ್ವ, ಸ್ವಭಾವಾದಿಗಳನ್ನು ಸತ್ಯಕ್ಕೆ ಹತ್ತಿರವೆನಿಸುವಂತೆ ಚಿತ್ರಿಸಿರುವುದು ಇದೆ. ಆದರೆ ಮಹಿಳೆಯರು ಅಷ್ಟರಮಟ್ಟಿಗೆ ಪುರುಷರನ್ನು ಚಿತ್ರಿಸುವುದು ಇರಲಿ, ಮಹಿಳೆಯುರ ಪಾತ್ರಗಳ ಚಿತ್ರಣದಲ್ಲಿ ಕೂಡ ಗಾಢವಾದ ಪರಕಾಯ ಪ್ರವೇಶ ಸಾಧಿಸಿದ್ದಿಲ್ಲ. ಇದೇಕೆ ಹೀಗೆ? ಎಂಬುದು ಸಾಮಾನ್ಯವಾಗಿ ಮಹಿಳಾ ಬರಹಗಾರರನ್ನು ಕುಹಕವಾಗಿ ಕೇಳಲಾಗುತ್ತದೆ. 'ಲಿಂಗಾತೀತತೆ' ಎಂಬುದು ಮಹಿಳೆಯರಿಗೆ ಸುಲಭವಲ್ಲದ ಕಾಲ್ಪನಿಕ ಜಾಗವಾಗಿದ್ದು, ತಾನಿರುವ ವಾಸ್ತವ ಬದುಕಿನಲ್ಲಿ ಸ್ವತಂತ್ರ ಏಜೆಂಟ್ ಆಗಿದ್ದಾಗ ಮಾತ್ರವೇ 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದು' ಮಹಿಳೆಗೆ ಸಾಧ್ಯವಾಗಬಹುದು. ಕಲ್ಪನೆಗೂ ಎಟುಕದಂಥ ಆ ಸ್ವಾತಂತ್ರ್ಯವನ್ನು ಬಳಸಿಕೊಳ್ಳಲಾರದಂಥ ರೀತಿ ಮಾನಸಿಕ ದಿಗ್ಬಂಧನಗಳಲ್ಲಿ ಮಹಿಳಾ ಬರಹಗಾರರು ಸಿಲುಕಿದ್ದಾರೆ. ಮೊದಲು ಆ ಮಾನಸಿಕ ತೊಡಕುಗಳಿಂದಲೇ ಪಾರಾಗಬೇಕಾದ ಸ್ಥಿತಿ ಅವರದ್ದಾಗಿದೆ. ಮಹಿಳೆಯರ ಬರಹಕ್ಕೆ ಒದಗುವ ಪರಿಮಿತಿ ಈ ರೀತಿ ಸಂಸ್ಕೃತಿಯು ಬಿತ್ತಿ ಬೆಳಸಿರುವ ಮನೋದಾಸ್ಯಕ್ಕೆ ಹೊಂದಿಕೊಂಡಿರುತ್ತದೆ ಎಂಬುದೇ ಸಧ್ಯಕ್ಕೆ ಆ ಪ್ರಶ್ನೆಗೆ ನೀಡಬಹುದಾದ ಉತ್ತರ.

೧೮. ತನ್ನಿಂದ ತಾನೇ ಶಕ್ತಿಯಾಗಲಾರಳೇಕೆ?

ವ್ಯಕ್ತಿಯಾಗಿ ಮಾನಸಿಕವಾಗಿ ತನ್ನ ಸಾಮಾಜಿಕ. ದೈಹಿಕ ಅನುಭವಗಳ ಅಭಿವ್ಯಕ್ತಿಗೆ ತನ್ನಿಂದ ತಾನು ಹೊರನಿಂತು 'ವಸ್ತುನಿಷ್ಠ'ವಾಗಿ ನೋಡುವ ಕ್ರಮ ಪುರುಷರು ರೂಪಿಸಿಕೊಂಡದ್ದು. ಮಹಿಳೆಯರೂ ಹಾಗೆಯೇ ಏಕೆ ಬರೆಯಲೆತ್ನಿಸಬೇಕು? ಮಹಿಳೆಯ ದೇಹರಚನೆ ಮತ್ತು ಅದಕ್ಕೆ ಹೊಂದಿಕೊಂಡ ಮಾನಸಿಕ ಲಕ್ಷಣ ಮತ್ತು ಜೀವಶಾಸ್ತ್ರೀಯ ಗತಿಗಳು ತನ್ನೊಳಗೆ ಸಕಲವನ್ನೂ 'ಒಳಗೊಳ್ಳುವ'. ಎಲ್ಲವನ್ನೂ ಗರ್ಭಸ್ಥವಾಗಿಸಿಕೊಂಡು

ತಾನೇ ಆವರಿಸಿಬಿಡುವ, ರಕ್ಷಿಸುವ ಮಹಾನ್ ಶಕ್ತಿಯ ತತ್ವವುಳ್ಳದ್ದು. ಹಾಗಿರುವಾಗ: 'ಸರ್ವತೋ. ವ್ಯಾಪ್ಯ ವಿಶ್ವಂ' ಎಂಬ ನೆಲೆಯನ್ನೇಕೆ ಮಹಿಳಾ ಬರಹಗಾರಿಕೆ ತನ್ನ ಸ್ವಂತ ಮನೆಯನ್ನಾಗಿ ಮಾಡಿಕೊಳ್ಳಬಾರದು? ಅಂದರೆ ತನಗೆ ತಾನೇ ದೇವರಾಗುವ ಸ್ಥಿತಿ ಇದು. ಸದಾ 'ಪುರುಷದೇವ' ರಾಗಿರುವ ಮಹಿಳೆಯರ ಮನೋಭಿತ್ತಿಗೆ ತನ್ನೊಳಗಿನ ಈ ಶಕ್ತಿಯನ್ನು ಸಾಕ್ಷಾತ್ಕರ ಮಾಡಿಕೊಳ್ಳಲು ಬೇಕಾದಂಥ ಬಿಡುವನ್ನು ಅವರ ಇಹಕ್ಕಂಟಿದ ಬದುಕು ನೀಡಲಾರದು.

ಆಧ್ಯಾತ್ಮಿಕವೆನ್ನಬಹುದಾದ ಈ ಸ್ವಶಕ್ತಿ ಕೇಂದ್ರತ್ವವನ್ನು ಸಾಧಿಸುವುದು ಹಾಗಿರಲಿ, ಸ್ಥಾಪಿತ ವ್ಯವಸ್ಥೆ ಕಟ್ಟಿಕೊಟ್ಟಿರುವ 'ಒಳ್ಳೆಯ ಹುಡುಗಿ', 'ಒಳ್ಳೆಯ ಗೃಹಿಣಿ' ಸಿಂಡ್ರೋಮನ್ನೇ ಅವರು ಬಿಟ್ಟುಬಿಡಲು ತಯಾರಿಲ್ಲ. ಆದ್ದರಿಂದ ಲೌಕಿಕತೆಯ ಒಳಿತು–ಕೆಡುಕಿನ ಅರ್ಥಗಳ ದ್ವಂದ್ವದ ಆಚೆಗೆ ತಾನೇ ವಿಶ್ವವ್ಯಾಪಕವಾಗುವ ಶಕ್ತಿಯು ಗ್ರಹಿಕೆಗೂ ಸಿಗಲಾರದ್ದು. ಬರಹದೊಳಗೆ ಗಡಿಗಳನ್ನು ಮೀರಲಿಕ್ಕೂ ತನ್ನ ಕುಟುಂಬ, ಸಮಾಜ ಒಪ್ಪಿಗೆ ಕೊಡಬೇಕೆಂದು ನಿರೀಕ್ಷಿಸುತ್ತಿರುವ ಮಹಿಳೆಯರು ಮನೆ ಜನ ಏನಂದಾರೋ, ಸಮಾಜ ಏನಂದೀತೋ ಎಂಬ ಮಿಡುಕಾಟಗಳಿಂದ ಮುಕ್ತರಾಗಿಲ್ಲ. ಇತರರ ಒಪ್ಪಿಗೆಗೆ ತನ್ನನು ಒಗ್ಗಿಸಿಕೊಳ್ಳುವ ತರಬೇತಿಯೇ ಅವರಿಗೆ ಪರಂಪರಾಗತವಾದ ವಿದ್ಯೆ. ಆದ್ದರಿಂಧ ಪರಿಸರದಿಂದ ಹುಟ್ಟಬಹುದಾದ ಅಸಮ್ಮತಿ, ಟೀಕೆಗಳನ್ನು ಎದುರಿಸಲಿಕ್ಕೆ ಹಾಗೂ ನಿರ್ಭೀತಿ, ನಿಸ್ಸಂಕೋಚಗಳಿಂದ ಬರೆಯುವ ಸ್ಥಿತಿಯನ್ನು ಸಾಧಿಸಲಿಕ್ಕೆ ಅವರ ಸಮಾಜಾಭಿಮುಖತ್ವವೇ ದೊಡ್ಡ ಅಡ್ಡಿಯಾಗಿರುತ್ತದೆ. ಸಾಮಾಜಿಕ, ಕೌಟುಂಬಿಕ ಸೆನ್ಸಾರ್‌ಷಿಪ್‌ನ ಭೀತಿಯಿಂದ ಹೊರಬಂದಾಗಲೇ ಮುಕ್ತ ಅಭಿವ್ಯಕ್ತಿ ಸಾಧ್ಯ.

ತಾನು ಇನ್ನೊಬ್ಬರ ವಸ್ತು, ಒಡವೆ; ತನ್ನ ಸಿಂಗಾರ ಇತರರ ರಂಜನೆಗೆ; ತಾನು ಬದುಕುವ ರೀತಿ ಇನ್ನೊಬ್ಬರಿಂದ ಮೆಚ್ಚುಗೆಗೆ–ಹೀಗೆ ಸದಾ 'ಅನ್ಯಮನಸ್ಕತೆಯನ್ನು ಬಿಡಲಾರದೆ, ತನ್ನಲ್ಲಿ ತಾನು ಮುಳುಗಿ ನಿಜಗಳನ್ನು ಶೋಧಿಸಲಿಕ್ಕೆ ಬೇಕಾದ 'ಧ್ಯಾನಸ್ಥ ಸ್ಥಿತಿಯ ಅಭಾವದಲ್ಲಿ ಪಡೆವ ಅನುಭವದ ಕಥನವೇ ಬರಹವೂ ಆಗಿಬಿಡುವುದು ಸಾಮಾನ್ಯ ನೋಟ.

೧೯. ಶ್ರೇಣೀಕೃತ ಬದುಕಿನ ಸ್ತರಗಳಿಂದ

ಗ್ರಾಮೀಣ ಹಾಗೂ ಕೆಳಜಾತಿ ವರ್ಗಗಳಿಂದ ಬಂದು ಶಿಕ್ಷಣ ಪಡೆದು ಬರಹದ ದಾರಿ ಕಂಡುಕೊಳ್ಳುವ ಮಹಿಳೆಯರಿಗೆ ಎದುರಾಗುವ ತೊಡಕುಗಳು, ಬಹಸಂಕೀರ್ಣವಾದವು. ಕೆಳಸ್ತರೀಯ ನೆಲೆಗಳು ಆ ಮಹಿಳಾ ಬರಹಗಾರರಿಗೆ ಸಾಮಾಜಿಕವಾಗಿ ಸ್ವೀಕಾರಾರ್ಹ ವಾಗುವುದಕ್ಕೂ ಶ್ರಮಿಸುವಂತೆ ಮಾಡುತ್ತವೆ. ವರ್ಗ ಹಾಗೂ ಜಾತಿಗಳೂ ಮಹಿಳೆಯರ ಶಕ್ತಿಯನ್ನು ಕಸಿದು ಅಭಿವ್ಯಕ್ತಿಗಳನ್ನು ನಿಯಂತ್ರಿಸಲು ಯತ್ನಿಸುತ್ತವೆ. ಇದರಿಂದ ಜೆಂಡರ್ ವ್ಯವಸ್ಥೆ ಹೇರುವ ನಿರ್ಬಂಧಗಳು ಇನ್ನಷ್ಟು ಜಟಿಲವಾಗಬಹುದು. ಕನ್ನಡದಲ್ಲಿ ತೊಂಬತ್ತರ ದಶಕದಿಂದ ಈಚೆಗೆ ಕೆಳಸ್ತರೀಯ ಮಹಿಳಾ ಬರಹಗಾರರು ತಮ್ಮ ಸಮುದಾಯಗಳ ಜೀವನಾನುಭವಗಳನ್ನು, ಪ್ರಾದೇಶಿಕ ವೈಶಿಷ್ಟ್ಯಗಳ ಸಮೇತವಾಗಿ, ಆಡುಭಾಷೆಗಳ ಸೊಗಡಿನೊಂದಿಗೆ ಕಟ್ಟಿಕೊಡುವ ಯತ್ನಗಳನ್ನು ಮಾಡುತ್ತಿದ್ದಾರೆ.

ಆದರೆ ಪುರೋಹಿತಶಾಹಿ ಇಲ್ಲವೆ ಬ್ರಾಹ್ಮಣ ಧರ್ಮದ ವ್ಯವಸ್ಥೆಯನ್ನು ವಿಮರ್ಶಿಸಲು ತೋರುವಷ್ಟೇ ಧೈರ್ಯ ಹಾಗೂ ಸೂಕ್ಷ್ಮತೆಗಳಿಂದ ತಮ್ಮದೇ ಕುಲ, ಜಾತಿ ಸಮುದಾಯದಲ್ಲಿನ ಲಿಂಗತ್ವ ವ್ಯವಸ್ಥೆಯನ್ನೂ, ಅದರಲ್ಲಿನ ದಮನಕಾರಿ ಅಂಶಗಳನ್ನೂ ಅವರು ಪರೀಕ್ಷಿಸಬಲ್ಲರೆ ಎಂಬುದು ಅನುಮಾನಾಸ್ಪದ. ಲೈಂಗಿಕ ಶೋಷಣೆಯ ಅನುಲೋಮ ಮಾದರಿಗಳನ್ನು ಎತ್ತಿ ತೋರಿಸುವ ಪರಂಪರೆಯನ್ನು ಬಂಡಾಯ ಸಾಹಿತ್ಯ ಚಳುವಳಿಯೇ ಸೃಷ್ಟಿಸಿತ್ತು. ಕೆಳಜಾತಿ, ವರ್ಗಗಳ ಹಾಗೂ ಮುಸ್ಲಿಂ ಸಮುದಾಯದ ಮಹಿಳೆಯರು ಬರೆಯಲು ಪ್ರೋತ್ಸಾಹ, ಅವಕಾಶಗಳನ್ನೂ ಆ ಚಳವಳಿಯೇ ಒದಗಿಸಿತ್ತು. ಹಾಗಾಗಿಯೇ ಸುಕನ್ಯಾ ಮಾರುತಿ, ಮಲ್ಲಿಕಾಘಂಟಿ, ಬಿ.ಟಿ. ಲಲಿತಾನಾಯಕ, ಸರಸ್ವತಿಗೌಡ, ದು. ಸರಸ್ವತಿ, ಗೀತಾ ನಾಗಭೂಷಣ, ಸಾರಾ ಅಬೂಬಕ್ಕರ್ ಮೊದಲಾದವರ ಸ್ವಾನುಭವಲೋಕ ಕನ್ನಡ ಸಾಹಿತ್ಯದೊಳಗೆ ಪ್ರವೇಶ ಪಡೆಯಲು ಸಾಧ್ಯವಾಯಿತು.

ಅನಂತರದ ಅವಧಿಯಲ್ಲಿ ಎಂ.ಎಸ್. ವೇದ, ಧರಣೀ ಮಾಲಗತ್ತಿ, ಬಾನುಮುಷ್ತಾಕ್ ಮುಂತಾದ ಸ್ತ್ರೀವಾದಿ ಚಿಂತನೆಯ ಪ್ರಭಾವವುಳ್ಳವರ ಸ್ವತಂತ್ರ ಬರಹಗಳೂ ಬರತೊಡಗಿದವು. ಆದರೆ ಹೀಗೆ ಸ್ತ್ರೀನಿಷ್ಠ ಬಂಡಾಯದ ಜಾಗವೊಂದನ್ನು ಕಂಡುಕೊಳ್ಳಬೇಕಾದ ಅವಶ್ಯಕತೆ ಹಾಗೂ ಜಾತಿ-ವರ್ಗಗಳ ವ್ಯವಸ್ಥೆಯನ್ನು ಬುಡಮೇಲಾಗಿಸುವಿಕೆಗಳಲ್ಲಿ ತಮ್ಮ ಆದ್ಯತೆ ಯಾವುದು ಆಗಿರಬೇಕು ಎಂಬ ಬಗ್ಗೆ ಕೆಳಸ್ತರಗಳ ಮಹಿಳಾ ಬರಹಗಾರಿಕೆಯಲ್ಲಿ ಇನ್ನೂ ಗೊಂದಲವಿದೆ. ಮಹಿಳೆಯರಾಗಿ ತಮ್ಮ ಅನುಭವದ ಸ್ವರೂಪ ಶೋಧನೆಗೆ-ಜಾತಿ, ವರ್ಗ, ಲಿಂಗಗಳೆಲ್ಲದರ ಮೂಲಕವಾಗಿಯೂ ಛೇದಿಸಿಕೊಂಡು ತಮ್ಮ ಅಭಿವ್ಯಕ್ತಿಯನ್ನು ಅವರು ಸಾಧಿಸಬೇಕಾಗಿದೆ.

೨೦. ಚಳವಳಿಗಳು ಪಕ್ಷ ರಾಜಕೀಯಗಳು ಒಡ್ಡುವ ತಡೆಗಳು

ವಿವಿಧ ಚಳವಳಿಗಳಲ್ಲಿ ಮತ್ತು ರಾಜಕೀಯ ಪಕ್ಷಗಳಲ್ಲಿ ಸಂಘಟಿತರಾಗಿ ಹೋರಾಟ ನಿರತರಾದ ಮಹಿಳೆಯರಿಗೆ ದಕ್ಕುವ ರಾಜಕೀಯಾನುಭವ ವಿಪುಲವಾಗಿರುತ್ತದೆ. ಆದರೆ ಆ ಚೌಕಟ್ಟುಗಳೊಳಗೆ ನಿರ್ಣಯಾಧಿಕಾರವೆಲ್ಲ ಕೇಂದ್ರಿತವಾಗಿರುವುದು ನಾಯಕರಾದ ಪುರುಷರ ಕೈಯಲ್ಲಿ. ಅವರೂ ರೂಪಿಸುವ ತತ್ವಪ್ರಣಾಲಿ, ಹಾಗೂ ಕ್ರಿಯಾತಂತ್ರಗಳಿಗೆ ನಿಷ್ಠರಾಗಿರುವುದೇ ಮಹಿಳೆಯರ ತತ್ವನಿಷ್ಠೆ, ಪಕ್ಷನಿಷ್ಠೆಗಳೆನಿಸಿಕೊಳ್ಳುತ್ತವೆ. ತಮ್ಮದೇ ಸಂಘಟನೆಯ ಒಳಗೂ ರೂಢಿಯಾಗಿರುವ ಪಿತೃಪ್ರಧಾನ ಧೋರಣೆಗಳನ್ನೂ, ಜನತಂತ್ರ ವಿರೋಧಿಯಾದ ಕಾರ್ಯ ವೈಖರಿಗಳನ್ನೂ, ಅರ್ಥಾತ್ ಸಂಘಟನೆಯದೇ ಒಳವಿರೋಧಗಳನ್ನು ಮಹಿಳೆಯರ ಅನುಭವವೆಂದು ಅವರು ಅಬಿವ್ಯಕ್ತಿಸಲು ಹೊರಟರೆ, ಅವರನ್ನು ನಿರುತ್ಸಾಹಗೊಳಿಸುವ, ತಿದ್ದುವ, ದಂಡಿಸುವ ನೀತಿಗಳನ್ನು ಚಳವಳಿ-ರಾಜಕೀಯ ಪಕ್ಷಗಳೂ ಅನುಸರಿಸಬಹುದು. ರಾಜಕೀಯ ಕಾರ್ಯಕರ್ತರಾಗಿ ತಾವು ಗಳಿಸಿದ ಅನುಭವ ಎಷ್ಟೇ ವಿಸ್ತಾರವಾಗಿದ್ದರೂ ಸತ್ಯಶೋಧನೆಯ ನೆಲೆಯಿಂದ ಮಹಿಳೆಯರು ಅದನ್ನು ಅಭಿವ್ಯಕ್ತಿಸಿರುವುದು ತೀರಾ ವಿರಳ.

ಮಹಾಶ್ವೇತಾದೇವಿ, ಇಸ್ಮತ್ ಚುಗ್ತಾಯಿ ಇಲ್ಲವೆ ಅಮೃತಾ ಪ್ರೀತಂ ಅಥವಾ ಛಾಯಾ ದಾತಾರ್ ಅಗುವುದೇನೂ ಸುಲಭದ ಮಾತಲ್ಲ. ಕನ್ನಡದಲ್ಲಂತೂ ಅಂತಹ ಬರಹ ಮಹಿಳೆಯರಿಂದ ಇನ್ನೂ ಬರಬೇಕಾದ್ದಿದೆ.

ರಾಜಕೀಯದಂಥ ಪುಂಕೇಂದ್ರಿತ ವ್ಯವಸ್ಥೆಯೊಳಗಿನ ಮಹಿಳಾನುಭವವನ್ನು ಹೇಳುವ ಹಕ್ಕು ನ್ಯಾಯಯುತವೇ. ಆದರೆ ಅದೇ ರಾಜಕೀಯದ ಪಕ್ಷಹಿತಾಸಕ್ತಿಯ ಎದುರಲ್ಲಿ ಈ ಸತ್ಯಶೋಧನೆ ಮಣಿಯಲೇಬೇಕಾಗುತ್ತದೆ. ನ್ಯಾಯ–ಅನ್ಯಾಯಗಳ ಚರ್ಚೆಯನ್ನು ಕುರಿತು ರಾಜಕೀಯದಲ್ಲಿರುವ ಮಹಿಳೆಯರು ಮೌನವಹಿಸುವುದು ಹೀಗೆ ಪಕ್ಷದ ಹಿತಾಸಕ್ತಿಯಿಂದಲೇ ಅಲ್ಲದೆ, ಯಾವುದೇ ರಾಜಕೀಯ ಹೋರಾಟ ಯಾವಾಗಲೂ 'ಹೊರಗಿನ' ಶತ್ರುವನ್ನು ಲಕ್ಷ್ಯವಾಗಿಟ್ಟುಕೊಂಡಿರುತ್ತದೆ. ಭಿನ್ನ ಪಕ್ಷಗಳ, ಸರ್ಕಾರಗಳ, ಆರ್ಥಿಕ–ರಾಜಕೀಯ ನೀತಿಗಳು, ವಿದೇಶೀ ಶಕ್ತಿಗಳ ವಿರುದ್ಧವಾಗಿ ಹೋರಾಡಿ, ಆ ಬಗ್ಗೆ ಬರೆಯುವುದೂ ಹೋರಾಟ ಧರ್ಮವೆಂದೇ ಸ್ವೀಕೃತವಾಗುತ್ತದೆ. ಆ ಬರಹ ತುಂಬ ಪ್ರಗತಿಪರವೆಂದು ಮಾನ್ಯತೆಯನ್ನು ಪಡೆಯುತ್ತದೆ. ಆಯಾ ಪಕ್ಷಗಳ, ಸಂಘಟನೆಗಳ ಬೆಂಬಲ, ಪ್ರೋತ್ಸಾಹಗಳನ್ನೂ ಇಂತಹ ಮಹಿಳಾ ಬರಹಗಾರರು ಗಳಿಸಿಕೊಳ್ಳುತ್ತಾರೆ.

ಆದರೆ ಸಾರ್ವತ್ರಿಕವಾದ ಪುರುಷಪ್ರಾಧಾನ್ಯದ ವೈಪರೀತ್ಯಗಳನ್ನೇನಾದರೂ ತಮ್ಮದೇ ಸಂಘಟನೆಗಳೊಳಗೂ ಇವೆಯೆಂದು ತೋರಿಸಲೆತ್ನಿಸಿದಲ್ಲಿ ಅವರ ಸ್ಥಿತಿ ಕಷ್ಟಕರವಾಗಬಹುದು. ಜನತಾಂತ್ರಿಕ ನೀತಿಗಳು, ಮಾನವೀಯ ಘನತೆ, ಸಂಬಂಧಗಳಲ್ಲಿನ ಅಸಮಾನತೆ ಮುಂತಾದ ಪ್ರಶ್ನೆಗಳನ್ನು ಸಂಘಟನೆಯ ಸೈದ್ಧಾಂತಿಕತೆಯ ಹಾದಿ ತಪ್ಪಿಸುವ ಯತ್ನಗಳೆಂದೂ, ಸ್ವಚ್ಛಂದತೆಯತ್ತ ಸಾಗುವ ತಾತ್ವಿಕ ಗೊಂದಲದ ದ್ಯೋತಕವೆಂದೂ ಅರ್ಥೈಸಲಾಗುತ್ತದೆ. ಹೀಗಾಗಿ ಮಹಿಳಾ ಬರಹಗಾರರು ರಾಜಕೀಯ ಬದುಕಿಗೂ ತಮ್ಮ ಶಾಶ್ವತ ನೆಲೆಯಾದ ಕುಟುಂಬದ ಮಾದರಿಯಲ್ಲೇ ಜಾಗವನ್ನು ಸೃಷ್ಟಿಸಿಕೊಂಡಿರುತ್ತಾರೆ. ಅಂದರೆ ಕುಟುಂಬನಿಷ್ಠೆ, ಪಕ್ಷನಿಷ್ಠೆಯಾಗುತ್ತದೆ. ಕೌಟುಂಬಿಕ ತ್ಯಾಗ–ಇಲ್ಲಿ ಸ್ಥಾನ ತ್ಯಾಗವಾಗಬಹುದು. ಮೌನ–ಸಹನೆಗಳಂತೂ ಅವರ ಜನ್ಮಸಿದ್ಧ ಗುಣಗಳೇ ತಾನೆ. ನಾಯಕರಾದ ಪುರುಷರ ಹೆಗಲಿಗೆ ಹೆಗಲು ಜೋಡಿಸುತ್ತಾ ಸಹಧರ್ಮಿಣಿ ಗೃಹಿಣಿಯ ತತ್ವದಲ್ಲೇ ಕಾಮರೇಡ್‌ಗಳೂ ಆಗುತ್ತಾರೆ. ಹೀಗಾಗುವುದರಿಂದ ರಾಜಕೀಯ ಅನುಭವದ ಸತ್ಯಶೋಧನೆ ಎಂದರೆ ಪಕ್ಷಗಳೂ, ತತ್ವಗಳೂ, ನಾಯಕರೂ ಒಪ್ಪಿರುವ ಸತ್ಯದ್ದೇ ಶೋಧನೆಯಾಗುತ್ತದೆ.

೨೧. ಮಹಿಳಾ ಬರಹದ ವಸ್ತು, ಪ್ರಕಾರಗಳ ಪ್ರಶ್ನೆ

ಸಾಹಿತ್ಯ ಸೃಷ್ಟಿಯ ಪ್ರಶ್ನೆಯನ್ನು ಚರ್ಚಿಸುವಾಗ ಬಹಳ ಸಲ ಕೇಳಿಬರುವ ಹೇಳಿಕೆಯೆಂದರೆ 'ವಸ್ತುವೇ ತನ್ನ ಪ್ರಕಾರವನ್ನು ಕಂಡುಕೊಳ್ಳುತ್ತದೆ' ಎಂಬುದು. ಅಂದರೆ ಬರಹಗಾರರು ಯಾವ ವಸ್ತುವನ್ನು ಹೇಳಲೆತ್ನಿಸುತ್ತಾರೋ ಆ ವಸ್ತುವಿಗೆ ತಕ್ಕಂಥ ಆಕಾರದಲ್ಲಿ ತಾನಾಗಿಯೇ ಅದು ಹೊಮ್ಮಬರಬೇಕು. ಆದರೆ ಮಹಿಳಾ ಬರಹಕ್ಕೆ ಇದೇ ಮಾತನ್ನು ಅನ್ವಯಿಸಲು ಕಷ್ಟಸಾಧ್ಯ. ಹೊರ–ಒಳ ಜಗತ್ತುಗಳ ದ್ವಿಗುಣಿತ ಜವಾಬ್ದಾರಿಗಳಲ್ಲಿ ಮಹಿಳೆಯರು ನಮ್ಮ ಪರಿಸರದಲ್ಲಿ

ಪುರುಷರಿಗಿಂತ ಹೆಚ್ಚಿನ ಹೊಣೆಗಳನ್ನು ಹೊತ್ತಿರುತ್ತಾರೆ. ಕೊಂಕುಳಲ್ಲಿ ಮಗುವನ್ನೂ, ಕೈಯಲ್ಲಿ ಭಾರವಾದ ಲಗ್ಗೇಜನ್ನೂ ಹಿಡಿದು ಗಂಡನ ಹಿಂದೆ ಸಾಗುವ ಹೆಂಡತಿಗೂ, ಕೈ ಬೀಸಿ ದಾಪುಗಾಲು ಹಾಕುತ್ತಾ ಮುಂದೆ ಸಾಗುವ ಆ ಗಂಡನಿಗೂ ಇರುವ ಜವಾಬ್ದಾರಿಗಳು ಬೇರೆ ಬೇರೆಯೇ. ಮಹಿಳಾ ಬರಹಗಾರರ ಸ್ಥಿತಿ ಕೂಡ ಆ ಹೆಂಡತಿಯ ಸ್ಥಿತಿಗಿಂತ ತುಂಬ ಭಿನ್ನವಲ್ಲ. ಹೀಗಾಗಿ ಈ ಎಲ್ಲಾ ಜವಾಬ್ದಾರಿಗಳಿಂದ ಅಲ್ಪ ಅವಧಿಗಾದರೂ ಬಿಡುಗಡೆ ಪಡೆಯಲು ಬರಹವ್ರೂ ಒಂದು ಸಾಧನವಾಗಿರುವ ಸಾಧ್ಯತೆ ತೀರಾ ಹೆಚ್ಚು. ಜಂಜಾಟಗಳಿಂದ ಹೀಗೆ ಪಾರಾಗಲು ಕಂಡುಕೊಂಡ ಸವಲತ್ತಿನ ಜಾಗವಾದ ಬರಹದಲ್ಲಿ ಮಹಿಳೆಯರು ಯಾವಾಗಲೂ ತಮ್ಮ ಇಷ್ಟವಾದ ಪ್ರಕಾರವನ್ನು ವೈಯಕ್ತಿಕ ಆಸಕ್ತಿಯಿಂದಲೇ ಆರಿಸಿಕೊಂಡಿರುತ್ತಾರೆಂದು ಹೇಳಬರುವುದಿಲ್ಲ. ಅಥವಾ ಅವರ ಬರಹದ ಆಕಾರದ ಆಯ್ಕೆ ಅವರ ಪ್ರತಿಭೆಗೆ, ಕಲ್ಪನಾ ಸಾಮರ್ಥ್ಯಕ್ಕೆ ತಕ್ಕುದೇ ಆಗಿರುತ್ತದೆ ಎಂಬುದೂ ಹೇಳಬರುವಂಥದ್ದಲ್ಲ. ಬಹಳ ಸಲ ಯಾವುದು ಸುಲಭವೋ, ಯಾವುದನ್ನು ಓದುಗರು ಮೆಚ್ಚಬಹುದೋ ಅಥವಾ ಯಾವುದನ್ನು ಪ್ರಕಾಶಕರು ಬಯಸುತ್ತಾರೋ ಅಂಥ ಪ್ರಕಾರವನ್ನೇ ಮಹಿಳೆಯರು ಆಯ್ದುಕೊಂಡಿರುತ್ತಾರೆ.

ಮಹಿಳಾ ಬರಹಗಾರರಿಗೂ ಈ ಜಗತ್ತಿನ ಎಷ್ಟೋ ವಿಷಯಗಳ ಬಗ್ಗೆ ಬರೆವ ಮಹದಾಸೆ ಇರಬಹುದು. ಆದರೆ ಬರೆಯಲು ಆಗುವುದಿಲ್ಲ. ಸಾಮಾಜಿಕ ಅನುಮೋದನೆ ಕೊರತೆ ಒಂದೆಡೆ, ಅದನ್ನು ನಿರ್ಲಕ್ಷಿಸಿಯೂ ಬರೆಯಬಲ್ಲ ಧೈರ್ಯದ ಅಭಾವ ಇನ್ನೊಂದು ಕಡೆ ಅವರ ಬರಹಗಳ ವಸ್ತುಗಳ ಆಯ್ಕೆಯನ್ನು ನಿಯಂತ್ರಿಸುತ್ತಿರುತ್ತವೆ. ಪರಂಪರೆ, ಸಂಸ್ಕೃತಿಗಳನ್ನೂ ಕೌಟುಂಬಿಕ ಘನತೆ ಗೌರವಗಳನ್ನೂ ಕಾಪಾಡುವುದರ ಹೆಸರಿನಲ್ಲಿ ಮೇಲ್ಜಾತಿ, ಮೇಲ್ವರ್ಗಗಳ ಬರಹಗಾರರು ಪರಿಮಿತಿಗೆ ಒಳಗಾಗಿದ್ದರೆ ಜಾತೀಯ ಅಂಕಿತವ್ರೂ, ಬಡತನವ್ರೂ ಕೆಳಸ್ತರೀಯ ಮಹಿಳಾ ಬರಹಗಾರರಿಗೆ ನಿರ್ಬಂಧಗಳನ್ನು ಒಡ್ಡುತ್ತವೆ.

ಈಗ ಬರೆಯುತ್ತಿರುವ ಮಹಿಳೆಯರಲ್ಲಿ ನಗರಗಳಲ್ಲಿನ ಮೇಲ್ಜಾತಿ, ಮಧ್ಯಮ ವರ್ಗಗಳಿಂದ ಬಂದವರೇ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಅವರು ಧರ್ಮ ಮತ್ತು ಜಾತಿಗಳನ್ನು ಬಲವಾಗಿ ಪ್ರತಿಭಟಿಸಲಾರದ ಸ್ಥಿತಿಯಿಂದ ಹೊರಬರದೆ ಉಳಿದಿದ್ದಾರೆ. ದಲಿತ ಹಾಗೂ ಮುಸ್ಲಿಂ ಮಹಿಳಾ ಬರಹಗಾರರು ಜಾತಿ, ಧರ್ಮಗಳ ಹೊರಗಿನ ಶಕ್ತಿಗಳ ದಮನಕಾರಿ ಲಕ್ಷಣಗಳನ್ನು ಬಯಲು ಮಾಡುವಷ್ಟರ ಧೈರ್ಯದಿಂದ ಸ್ವಂತದ ಸಮುದಾಯದ ಒಳಗಿನ ಲಿಂಗತಾರತಮ್ಯದ ವಿರುದ್ಧ ಬರೆಯಲು ಕಷ್ಟ ಎದುರಿಸುತ್ತಾರೆ. ಜಾತಿಪದ್ಧತಿ, ಶ್ರೀಮಂತಿಕೆ–ಬಡತನಗಳ ವಿಷಯಗಳು ವಸ್ತುವಾಗಿ ನಿಭಾಯಿಸಲು ಸುಲಭ; ಹಾಗೆ ಮಾಡಿದಾಗ ಸ್ವಸಮುದಾಯ ಬಾಂಧವರಿಂದ ಹೊಗಳಿಕೆ, ಬೆಂಬಲ ಕೂಡ ಸಿಕ್ಕೀತು. ಆದರೆ ಸ್ವಂತ ಸಮುದಾಯದ್ದೇ ವಿಮರ್ಶೆಗೆ ಹೊರಟಕೂಡಲೇ ಅದೇ ಸಮುದಾಯದ ಪಿತೃಪ್ರಧಾನ ಶಕ್ತಿಗಳು ಅದನ್ನು ಸ್ವಜಾತಿ ದ್ರೋಹವೆಂದು ಬಗೆದು ವಿಶ್ವಾಸದ್ರೋಹ, ವಂಚನೆಗಳ ಆಪಾದನೆಗಳನ್ನು ಹೊರಿಸಬಲ್ಲದು.

ದಲಿತ ಚಳವಳಿಯಂತಹ ಕೆಳಸ್ತರೀಯ ಚಿಂತನೆಯಲ್ಲಿ ಕಾಣುವ ಬಹು ಸಾಮಾನ್ಯವಾದ ಒಳವಿರೋಧವೆಂದರೆ ಬ್ರಾಹ್ಮಣ ಧರ್ಮದ ನಯ, ವಿನಯ, ಮರ್ಯಾದೆ, ಮಡಿವಂತಿಕೆಯ ಜೀವನಕ್ರಮ ಮತ್ತು ಮೌಲ್ಯಗಳನ್ನು ಬೇರೆ ಎಲ್ಲಾ ಸಂದರ್ಭಗಳಲ್ಲೂ ಖಂಡಿಸಲು ನಾಯಕ ವರ್ಗವು ಹಿಂಜರಿಯಲಾರದು. ಆದರೆ ಲಿಂಗತಾರತಮ್ಯದ ಪ್ರಶ್ನೆ ಬಂದಾಗ ಅಂಥ ಚಳವಳಿಯ ಪುರುಷವರ್ಗ, ತಮ್ಮ ಮಹಿಳೆಯರಿಂದ ಅದೇ ಬ್ರಾಹ್ಮಣಿಕೆಯ ನಯ, ವಿನಯ, ಮರ್ಯಾದೆಗಳನ್ನು ನಿರೀಕ್ಷಿಸುತ್ತದೆ. ಅದೇ ಬಗೆಯ 'ಮರ್ಯಾದೆ' ಮಾದರಿಗಳ ತಮ್ಮ ಮಹಿಳೆಯರ ಮೇಲೆ ಹೇರಲು ಹಿಂಜರಿಯುವುದಿಲ್ಲ.

ರಾಜಕೀಯ ಗುಂಪುಗಳೂ, ಸಂಘಟನೆಗಳೂ ತಮ್ಮನ್ನು ಮಾನವೀಯತೆ, ಸಮಾನತೆಗಳಿಗೆ ಬದ್ಧರೆಂದು ಎಷ್ಟೇ ಘೋಷಿಸಿಕೊಂಡರೂ, ತಮ್ಮದೇ ಗುಂಪಿನಲ್ಲಿನ ಪುರುಷ ಪ್ರಾಧಾನ್ಯದ ಲಕ್ಷಣಗಳ ವಿರುದ್ಧ ಬರೆಯಲು ಮಹಿಳೆಯರಿಗೆ ಹೇಗೆ ಅಡ್ಡಿ ಉಂಟು ಮಾಡುತ್ತವೆಯೋ ಅದೇ ರೀತಿಯಲ್ಲಿ ಬಡತನ, ಜಾತಿಪದ್ಧತಿಗಳಿಂದಾಗಿರುವ ಸಾಮಾಜಿಕ ಶೋಷಣೆ, ಧಾರ್ಮಿಕ ದಮನಗಳ ಬಗ್ಗೆ ಬರೆಯುವಿಕೆಯನ್ನು ಎತ್ತಿಹಿಡಿವ ಕೆಳಜಾತಿ ಸಂಘಟನೆಗಳೇ ತಮ್ಮನ್ನೇ ಪ್ರಶ್ನಿಸುವಂಥ ಮಹಿಳೆಯರ ಬರಹಗಳನ್ನು ಕ್ಷಮಿಸಲಾರವು.

ಇಡೀ ವ್ಯವಸ್ಥೆಯಲ್ಲಿ ವ್ಯವಸ್ಥೆಯೊಂದಿಗೆ ವಿಧೇಯರಾಗಿರುವುದಕ್ಕಾಗಿಯೇ ತರಬೇತು ಪಡೆದು ಬೆಳೆವ ಮಹಿಳೆಗೆ ಗಂಡ, ಕುಟುಂಬ ಒಪ್ಪುವಂತೆ ಬದುಕುವುದೇ ಹೆಚ್ಚು ಪರಿಚಿತ. ಇಂಥ ಬದುಕಿನಿಂದ ಸಿಗುವ 'ಸ್ವೀಕೃತಿ'ಯು ಹುಟ್ಟಿಸುವ ಭದ್ರತೆಯ ಭಾವವನ್ನು ಅವರು ಕಳೆದುಕೊಳ್ಳಲಿಚ್ಛಿಸುವುದಿಲ್ಲ. ಇನ್ನೊಂದು ನಿಟ್ಟಿನಲ್ಲಿ ಈ ರೂಢಿಗತವಾದ ಬದುಕು ಸೃಜನಶೀಲತೆ ಮತ್ತು ಬೌದ್ಧಿಕತೆಗಳ ದೃಷ್ಟಿಯಿಂದ ಗಾಳಿಯಿರದ, ಉಸಿರುಗಟ್ಟಿಸುವ ರೀತಿಯದಾಗಿರುತ್ತದೆ. ಎಡೆಬಿಡದ ಗೃಹಕೃತ್ಯಗಳ ಪುನರಾವರ್ತನೆ, ಅದರಿಂದ ಹುಟ್ಟುವ ಏಕತಾನತೆಯ ಕಾಡದಂತೆ ಆ ಪ್ರತಿಯೊಂದು ಗಳಿಗೆಯಲ್ಲೂ ಜೀವಂತಿಕೆ ಕಂಡುಕೊಳ್ಳುವುದು ಹರಸಾಹಸವೇ ಸರಿ. ಆ ಸಾಹಸದಲ್ಲೇ ಶಕ್ತಿಹ್ರಾಸವಾಗಿ ಬುದ್ಧಿ ಮಂಕಾಗಿ ಚುರುಕುತನ ಕಳೆದುಕೊಂಡರೆ ಆಶ್ಚರ್ಯವಿಲ್ಲ. ಹಲವು ಸಲ ಒಪ್ಪಿತವಾದ ದಾಂಪತ್ಯ ಜೀವನದಲ್ಲಿ ಕೂಡ ಉಸಿರುಗಟ್ಟಿಸುವ ಭೀತಿಕಾರಕ ಅನುಭವಗಳು ಎದುರಾಗಬಹುದು.

ಈ ಎಲ್ಲ ಇಕ್ಕಟ್ಟಿನಿಂದ ಪಾರಾಗಲು ಮಹಿಳೆಯರಿಗೆ ಬರಹವು ಒಂದು ಸಾಧನವಾಗಬಹುದು. ಅಂದರೆ ಬರಹವೆಂಬುದು ಅಸ್ತಿತ್ವ ಕಾಯ್ದುಕೊಳ್ಳುವ ಹೋರಾಟ ವಿಧಾನ ಆದಂತೆ. ನಿಜಜೀವನದಲ್ಲಿ ಕವಿದುಕೊಂಡು ಬರುವ ಮೌನವನ್ನು ಮುರಿಯಲೆಂದೋ ಅಥವಾ ಬಾಯಿ ಬಿಡಲಾಗದಂಥ ಕೋಪಕ್ಕೆ ಹೊರಬರಲು ದಾರಿ ಕಲ್ಪಿಸಲೆಂದೋ, ತಮ್ಮ ಮೇಲೇ ಸೇಡು ತೀರಿಸುವಂತೆಯೋ ಅಥವಾ ತಮ್ಮ ಕಥೆಗಳನ್ನು ಯಾರಿಗಾದರೂ ಹೇಳಿಕೊಳ್ಳಲೇಬೇಕೆಂಬ ತುಡಿತದಿಂದಲೋ ಮಹಿಳೆಯರು ಬರೆಯುತ್ತಾರೆ. ಹೀಗೆ ಬರಹವನ್ನೇ ಕಸಬುಗಾರಿಕೆಯಿಂದ ಹೊಸ ಹೊಸ ಪ್ರಯೋಗಗಳಿಗಾಗಿ ಆರಿಸಿಕೊಳ್ಳುವಿಕೆ ಬಹಳಷ್ಟು ಮಹಿಳಾ ಬರಹಗಾರರಿಗೆ ದೂರದ ಸಂಗತಿಯಾಗಿಯೇ ಇರಲು ಸಾಧ್ಯವಿದೆ.

ವ್ಯವಸ್ಥೆಯಲ್ಲಿನ ಪ್ರತಿಯೊಂದನ್ನೂ ಪ್ರಶ್ನಿಸಲೆತ್ನಿಸಿದರೆ ಆ ಮಹಿಳೆಯ ಬರಹವನ್ನು ಅತಿ ಅಪಾಯಕರವೆಂದೋ ತಿರಸ್ಕಾರಾರ್ಹವೆಂದೋ ತಳ್ಳಿಹಾಕುವ ಸಾಧ್ಯತೆ ಇರುತ್ತದೆ. ಆದ್ದರಿಂದ ಎಲ್ಲ ಜಾಗಗಳೂ ಜೆಂಡರ್‌ನಿಂದ ನಿರ್ಧರಿತವಾಗಿರುತ್ತವೆ ಎಂದು ಒಪ್ಪಲೂ ಹಲವು ಮಹಿಳಾ ಬರಹಗಾರರು ನಿರಾಕರಿಸಬಹುದು. 'ಸಾಹಿತ್ಯದ ಯಾವುದೇ ವಸ್ತುವನ್ನು ನಿರೂಪಿಸುವವರು ಯಾರು ಎಂಬುದು ಮುಖ್ಯವಲ್ಲವೆಂದೂ ಹೇಗೆ ನಿರೂಪಿಸುತ್ತಾರೆಂಬುದೇ ಮುಖ್ಯವೆಂದೂ ಹೇಳಲಾಗುತ್ತದೆ. ಆದರೆ ಲೈಂಗಿಕತೆ ಮತ್ತು ರಾಜಕೀಯದಂಥ ವಸ್ತುಗಳು ಪುರುಷರು ಮತ್ತೆ ಮತ್ತೆ ಬರೆದಿರುವ, ಮತ್ತೆ ಮತ್ತೆ ಮುಕ್ತವಾಗಿ ಶೋಧಿಸುವಂಥವು. ಆ ವಿಷಯಗಳ ಬಗ್ಗೆಯೇ ಅಷ್ಟೇ ಮುಕ್ತವಾಗಿ ಮಹಿಳೆಯರು ಬರೆದಲ್ಲಿ ಸಾಮಾಜಿಕವಾಗಿ ಅವು ಅನಿಷ್ಟವೆಂದು ಆಕ್ಷೇಪ ಎದುರಿಸಲು ಸಿದ್ಧವಾಗಿರಲೂ ಬೇಕು.

ಸಾರ್ವಜನಿಕ ಮತ್ತು ಖಾಸಗಿ ಎಂಬ ವಲಯಗಳ ಗಡಿಗಳಲ್ಲೇ ವ್ಯವಹರಿಸುತ್ತಾ ಬರೆಯಲು ಹೊರಟಾಗ ಮಹಿಳೆಯರಿಗೆ ಈ ಗಡಿರೇಖೆಗಳು ಸ್ಥಿರವಲ್ಲ, ಅವು ಬೇಕಾದಾಗ ಬೇಕಾದಂತೆ ಹಿಂದಕ್ಕೂ ಮುಂದಕ್ಕೂ ಚಲಿಸುತ್ತವೆ ಎಂಬುದು ಅರಿವಿಗೆ ಬರುತ್ತದೆ. ಅಂದರೆ ಸಂಸ್ಕೃತಿ ಬೆಳೆಸಿರುವ ಸೆನ್ಸಾರ್‌ಷಿಪ್ ಅನ್ನು ಎದುರಿಸುವುದೇ ಮುಖ್ಯ ಹೋರಾಟವಾಗಿರುತ್ತದೆ. ಈ ಸೆಣಸಾಟ ಅವರ ಬರಹದ ವಸ್ತುವಿನ ಆಯ್ಕೆಯ ಮೇಲೆ ಪರಿಣಾಮ ಬೀರುತ್ತಿರುತ್ತದೆ. ಯಾವುದು 'ಸರಿ', ಯಾವುದು 'ಸೂಕ್ತ' ಎಂಬುದನ್ನು ಈ ಸೆನ್ಸಾರ್‌ಷಿಪ್ ನಿರ್ಧರಿಸುತ್ತಿರುತ್ತದೆ.

ಉದಾಹರಣೆಗೆ, ಧರ್ಮ, ರಾಜಕೀಯ, ಯುದ್ಧ, ಆರ್ಥಿಕ ವ್ಯವಸ್ಥೆ, ಜನಾಂಗತ್ವ ಮುಂತಾದ ವಸ್ತುಗಳು ಸ್ತ್ರೀಯರ ಬೌದ್ಧಿಕ ಸಾಮರ್ಥ್ಯಕ್ಕೂ ಅವರ ಸೃಜನಶೀಲ ಪ್ರತಿಭೆಗೂ ಒಗ್ಗುವಂಥವಲ್ಲ ಅಥವಾ ಮೀರಿದಂಥವು ಎಂಬುದಾಗಿ ವ್ಯವಸ್ಥೆಯೇ ನಿರ್ಧರಿಸಿಬಿಟ್ಟಿರುತ್ತದೆ. ಆ ಕ್ಷೇತ್ರಗಳ ಬಗ್ಗೆ ತಮ್ಮ ಅನುಭವ, ಅರಿವುಗಳನ್ನು ವಿಸ್ತರಿಸಿಕೊಂಡು ಕ್ಷೇತ್ರ ಕಾರ್ಯ ಮಾಡಿ ಮಾಹಿತಿ ಗಳಿಸಿ, ಅವುಗಳನ್ನು ಸೃಜನಶೀಲ ರೂಪಾಕಾರಗಳಲ್ಲಿ ಹೊರತರುವುದು ಅಪಾರ ಶ್ರಮವನ್ನು ಅಪೇಕ್ಷಿಸುತ್ತದೆ.

ಬಹಳ ಮಂದಿ ಮಹಿಳಾ ಬರಹಗಾರರಿಗೆ ಈ ಸಂಶೋಧನೆಯ ಆಸಕ್ತಿ, ಅದಕ್ಕೆ ಬೇಕಾದ ಅನುಕೂಲಗಳು ಅಲಭ್ಯ. ಆದ್ದರಿಂದ ಆ ಕ್ಷೇತ್ರಗಳು ತಮ್ಮಂಥವರಿಗೆ ಅಲ್ಲ ಎಂದು ಅವರೂ ವ್ಯವಸ್ಥೆಯು ನಂಬಿದ್ದನ್ನೇ ನಂಬಲೆತ್ನಿಸುತ್ತಾರೆ.

ವಸ್ತುವಿನ ಆಯ್ಕೆಯ ಹಾಗೆಯೇ ಅದರ ಅಭಿವ್ಯಕ್ತಿ ಕ್ರಮವೂ ಅಷ್ಟೇ ಮುಖ್ಯ. ತಾಯ್ತನದಂಥ ವಸ್ತುವನ್ನು ಸಮಾಜದ ನಿರೀಕ್ಷೆಯ ಮಾದರಿಯಲ್ಲೇ ವೈಭವೀಕರಿಸಿ ಬರೆದ ನೂರಾರು ಮಾದರಿಗಳಿವೆ. ಆದರೆ ಅದೇ ತಾಯ್ತನವನ್ನು ಸಮಸ್ಯೀಕರಿಸಿದಾಗ ಅತ್ಯಂತ ಆಳವಾದ ರಾಜಕೀಯ ಚರ್ಚೆಯ ವೇದಿಕೆ ಕೂಡ ಆಗಬಹುದು ಎಂಬುದಕ್ಕೆ ಮಹಾಶ್ವೇತಾದೇವಿಯವರ 'ಸ್ತನದಾಯಿನಿ' ಕಥೆಯೇ ಉಜ್ವಲ ಉದಾಹರಣೆ. ಸಮತೆ, ಜನತಾಂತ್ರಿಕತೆ, ಪಾರದರ್ಶಕತೆಗಳ ಪ್ರಶ್ನೆಗಳನ್ನು ಕೇಳಬಲ್ಲ ಬರಹಕ್ಕೆ ಪಿತೃಸಂಸ್ಕೃತಿಯ ಗೋಡೆಗಳು ಅಡ್ಡಿ ಮಾಡಿಯೇ ಮಾಡುತ್ತವೆ. ಇದರಿಂದಾಗಿ ಮಹಿಳಾ ಬರಹ ತನ್ನ ದಿಟ್ಟತನ, ಸತ್ವಗಳನ್ನು

ಬಿಟ್ಟುಕೊಟ್ಟು ತೆಳುವಾದ ಸ್ತ್ರೀಸಂವೇದನೆಯ ಪ್ರಶ್ನೆಗೇ ಅಂಟಿಕೊಳ್ಳಲು ಯತ್ನಿಸುತ್ತದೆ. ಮುಖ್ಯಸತ್ವವೇ ಚೆದುರಿಹೋದ ಮಹಿಳಾ ಬರಹ ವಸ್ತ್ರವನ್ನು ನೇಯುವ ಕಸಬುಗಾರಿಕೆಯೇನೂ ಇಲ್ಲದೆ ಬಟ್ಟೆಯ ಮೇಲೆ ಬಣ್ಣ ಬಣ್ಣದ ದಾರಗಳಿಂದ ಕಸೂತಿ ಹೆಣೆವ ಅಲಂಕಾರದಲ್ಲೇ ತೃಪ್ತವಾಗಿ ಉಳಿಯುತ್ತದೆ.

ಒಟ್ಟಾರೆಯಾಗಿ ತಮ್ಮ ಬರಹಗಾರಿಕೆಗೆ ಪಿತೃಪ್ರಧಾನ ವ್ಯವಸ್ಥೆ ಎಂಥ ಅರ್ಥವನ್ನು ನೀಡಬಹುದು ಎಂಬುದೇ ಮಹಿಳಾ ಬರಹದ ಕೈಹಿಡಿದು ನಡೆಸುವುದೂ ಉಂಟು. ಕುಟುಂಬ, ಮದುವೆ ಸಂಸ್ಥೆಗಳ ಸಾಚಾತನವನ್ನು ಪ್ರಶ್ನಿಸುವುದೂ ಇಡೀ ರಾಷ್ಟ್ರದ ಸಂಸ್ಕೃತಿಗೇ ಅಪಾಯಕರ ಎಂಬ ಹುಯಿಲೆಬ್ಬಿಸಬಹುದು. ಲೈಂಗಿಕತೆ, ಕಾಮದ ಶೋಧನೆಗೆ ಯತ್ನಿಸುವುದು ಸ್ವೇಚ್ಛಾಚಾರ, ಅನೈತಿಕೆಗಳನ್ನು ಬಿತ್ತರಿಸುತ್ತದೆಂಬ ಭೀತಿಗೆ ಮೂಲವಾಗಬಹುದು. ಸಮುದಾಯಗಳ ಬಲವಾದ ಒಳಸುಳಿಗಳಲ್ಲಿ ಸಿಕ್ಕಿಕೊಂಡಿರುವ ಮಹಿಳೆಯರಿಗೆ ವಿವಾಹದ ಮೂಲದಿಂದ ಸಿದ್ಧವಾಗುವ ಕುಟುಂಬ ಜಗತ್ತಿನಿಂದ ಆಚೆಗೆ ತೆರೆದುಕೊಂಡಿರುವ ಇನ್ನೊಂದು ಜಗತ್ತೆಂದರೆ ಧಾರ್ಮಿಕ ಜಗತ್ತು. ಅಲ್ಲಿ ತಮ್ಮ 'ಹೆಣ್ಣು'ತನವನ್ನು ಖಾಯಮ್ಮಾಗಿ ಬಲಿಗೊಟ್ಟು, ನಿರ್ಲಿಂಗತ್ವದ ನೆಲೆಗೆ ಸಲ್ಲುವುದಕ್ಕೆ ಸಾಧ್ಯ. ಅದನ್ನು ಬಿಟ್ಟರೆ ಬೇರೆಬೇರೆ ಕ್ರಾಂತಿಕಾರಿ ಪಂಥಗಳೊಂದಿಗೆ ಸಹಕಾರ್ಯಕರ್ತರಾಗಿ, ಅವರ ಯುದ್ಧಗಳಲ್ಲಿ ಸಂಗಾತಿಗಳಾಗಿ, ಪಾಲುಗೊಳ್ಳುತ್ತಾ ಅಲ್ಲಿನ ಸೆನ್ಸಾರ್‌ಗೆ ಒಪ್ಪಿತವಾದ ರೀತಿಗಳಲ್ಲಿ ಬರೆಯಲೂಬಹುದು.

ಸೆನ್ಸಾರ್‌ಷಿಪ್ ಎಂಬುದು ಕೇವಲ ಹೊರಗಿನಿಂದಲೇ ಇರಬೇಕೆಂದಿಲ್ಲ. ವ್ಯವಸ್ಥೆ ಫಲವಾಗಿ ಅಂತಹ ಸೆನ್ಸಾರ್ ಮಹಿಳೆಯರಲ್ಲೇ ಅಂತಸ್ಥವಾಗಿಯೂ ಕೆಲಸ ಮಾಡುತ್ತಿರುತ್ತವೆ. ತುಂಬ ಕೈಗೆಟುಕುವ, ಭಾವನಾತ್ಮಕವಾಗಿ ನಿಕಟವಾದ ಕೌಟುಂಬಿಕ ಸಂಬಂಧಗಳನ್ನು ಕುರಿತು ಬರೆಯುವಾಗಲೂ ವೈಯಕ್ತಿಕ ಆಪ್ತ ಜಾಗಗಳಲ್ಲಿ ಬಿರುಕು ಬಿಡಬಾರದು, ಸಂಬಂಧಗಳು ಕುಸಿದು ಬಿಡಬಾರದು ಎಂಬ ರಕ್ಷಣೆಯ ಭಾವನಾತ್ಮಕ ಹೊಣೆಗಾರಿಕೆ ಅವರನ್ನು ಬಿಡಲಾರದು. ಆ ಅನುಭವವನ್ನು ಪ್ರಾಮಾಣಿಕವಾಗಿ ಸೃಜನಶೀಲವಾಗಿ ಶೋಧಿಸಬೇಕೆಂಬ ಬಲವಾದ ಪ್ರೇರಣೆ ಅವರನ್ನು ಹೊಯ್ದಾಟಕ್ಕೆ ಒಳಗು ಮಾಡುತ್ತಿದ್ದರೂ ಆಯ್ದುಕೊಂಡ ವಸ್ತುವಿನ ನಿರ್ವಹಣೆಯಲ್ಲಿ ವ್ಯಾವಹಾರಿಕವಾದ ಎಚ್ಚರದ ಕಣ್ಣೊಂದು ಅವರಲ್ಲಿ ಕೆಲಸ ಮಾಡುತ್ತಲೇ ಇರುತ್ತದೆ. ತಮ್ಮ ಘನತೆಯನ್ನು ಕಾಯ್ದುಕೊಳ್ಳಲು ವಾಸ್ತವದ ಬಲಿಗೊಡಲು ಅವರು ಹಿಂಜರಿಯಲಾರರು. ಕನ್ನಡದಲ್ಲಿ ಮಹಿಳಾ ಬರಹಗಾರರು ಬರಹಗಾರರಾಗಿ ತಮ್ಮ ಅನುಭವವನ್ನು ತಾವೇ ಮುಕ್ತವಾಗಿ, ಆಪ್ತವಾಗಿ ಹೇಳಿಕೊಂಡಿರುವಂಥ 'ಲೇಖ–ಲೋಕ' ಎಂಬ ಹೆಸರಿನ ಐದು ಸಂಪುಟಗಳನ್ನು ಅಖಿಲ ಕರ್ನಾಟಕ ಲೇಖಕಿಯರ ಸಂಘ, (ಬೆಂಗಳೂರು) ಪ್ರಕಟಿಸಿದೆ. ಈ ಲೇಖ–ಲೋಕವನ್ನು ಸೂಕ್ಷ್ಮವಾಗಿ ಗಮನವಿಟ್ಟು ಓದಿದರೆ, ಸುಪರಿಚಿತರಾದ ಮಹಿಳೆಯರೂ ತಮ್ಮದೇ ಅನುಭವ ಕಥನದ ಹೊತ್ತಿನಲ್ಲಿ ನಿಜವಾಗಿ ಮುಕ್ತವಾಗಿರಲು ಹೇಗೆ ಸಾಧ್ಯವಾಗಿಲ್ಲ, ಹೇಗೆ ಅವರು ಓದುಗರಿಗೆ ಪ್ರಿಯವಾಗಲು ಸತ್ಯಗಳನ್ನು ಮರೆಮಾಚಲೆತ್ನಿಸುತ್ತಾರೆ ಇಲ್ಲವೆ ರಂಜನೀಯ ಕಥನಗಳಾಗುವಂತೆ ಯತ್ನಿಸುತ್ತಾರೆ ಎನ್ನುವುದನ್ನು

ಕಾಣಬಹುದು. ಇದರರ್ಥ ಅವರೆಲ್ಲ ಅಪ್ರಾಮಾಣಿಕರು ಎಂದಲ್ಲ; ಬದಲಾಗಿ ಮುಕ್ತವಾಗಿ ತಮ್ಮೊಳಗಿನ ನಿಜಗಳನ್ನು ಹೇಳಿದರೆ ಎಲ್ಲಿ ತಂದೆಗೋ, ಅಣ್ಣ ತಮ್ಮಂದಿರಿಗೋ, ಗಂಡಂದಿರಿಗೋ ತಾವು ಅಪರಾಧ ಮಾಡಿ ಬಿಡುತ್ತೇವೋ ಎಂಬ ಅಂಜಿಕೆಗೆ ಅವರಿಗೆ ಬಿಡಲಾಗಿಲ್ಲ ಎಂದು ಅರ್ಥವಷ್ಟೆ. ಅಂದರೆ ತಮ್ಮ ಮನಗಳಲ್ಲಿ ನಿಜವಾಗಿ ಏನಾಗುತ್ತಿದೆ ಎಂಬುದನ್ನು ಹೇಳದಿರುವುದೇ ತಮಗೆ ಹಾಗೂ ತಮ್ಮನ್ನು ನಂಬಿದವರಿಗೆ ಕ್ಷೇಮಕರ ಎಂಬ ಜಾಣತನವು ಮಹಿಳಾ ಬರಹಗಾರಿಕೆಯಲ್ಲಿ ಯಾವಾಗಲೂ ಒಂದು ನಿಯಂತ್ರಕ ಶಕ್ತಿಯಾಗಿದೆ. ಅದರಲ್ಲೇ ಆ ಬರಹದ ಮಿತಿಯ ಮೂಲವೂ ಇದೆ ಎನ್ನಬಹುದು.*

○

---

* ಈ ನಿಟ್ಟಿನ ವಿಸ್ತಾರವಾದ ಚರ್ಚೆ, ಸಂದರ್ಶನಗಳಿಗೆ ಪರಾಮರ್ಶೆಗೆ ನೋಡಬಹುದು.

Just Between us : women speak about their wirting. Ed. by Ammu Joseph Vasanth Kannabriyan, Rita meuon, Gouri Salvi, Volga, Pub by. Women Unlimited, Nwe Delhi & Women's world (India) & Asmita Resource Centre for women, Hydrabad, Year : 2004.

ಅನುಬಂಧ

ಕುವೆಂಪು ಕಾದಂಬರಿಗಳು : ಒಂದು ಸ್ತ್ರೀವಾದಿ ಓದು

ಬದುಕಿನ ಅಪಾರವೂ ವೈವಿಧ್ಯಮಯವೂ ಆದ ಅನುಭವ ಲೋಕವನ್ನು ಗರ್ಭದಲ್ಲಿಟ್ಟುಕೊಂಡು, ಮಾನವರ ಮನದ ಸೂಕ್ಷ್ಮವೂ ಅದ್ಭುತವೂ ಆದ ನಿಗೂಢ ಸ್ತರಗಳ ಮೇಲೆ ಬೆಳಕು ಬೀರುವ ಕುವೆಂಪು ಅವರ ಪ್ರಕಾಂಡ ಕಾದಂಬರಿಗಳು ನೂರಾರು ದೃಷ್ಟಿಕೋನಗಳಿಗೂ ಅಧ್ಯಯನಕ್ಕೆ ಒದಗುವಂಥವು. ಸಾಮಾನ್ಯ ಮನುಷ್ಯರ ಬದುಕಿನ ವಿವರಗಳನ್ನೂ ಪ್ರೀತಿ, ಶ್ರದ್ಧೆಗಳಿಂದ ಕಟ್ಟಿಕೊಡುವ "ಮಲೆಗಳಲ್ಲಿ ಮದುಮಗಳು" ಹಾಗೂ "ಕಾನೂರು ಹೆಗ್ಗಡಿತಿ" ಕಾದಂಬರಿಗಳ ಹಿಂದೆ ಕುವೆಂಪು ಅವರ ವ್ಯಕ್ತಿತ್ವವನ್ನು ರೂಪಿಸಿದ್ದ ಪ್ರಜಾಪ್ರಭುತ್ವದ ಸಮಾನತಾವಾದ, ಉದಾರ ಮಾನವತಾವಾದ, ಗಾಂಧಿ. ವಿವೇಕಾನಂದರ ಚಿಂತನೆಗಳೆಲ್ಲ ಇರುವುದು ಸಾಧ್ಯ. ಆದರೆ ಈ ಆಧುನಿಕ ವೈಚಾರಿಕತೆ ಅವರ ತಾತ್ವಿಕತೆಯ ಒಂದು ಮೈ ಮಾತ್ರ. ಅದಕ್ಕಿಂತ ಗಾಢವಾದ ಸರ್ವಜೀವಕೋಟಿಯನ್ನೂ ಸಮಾನವೆಂದು ನೋಡುವ, ಎಲ್ಲಾ ಜೀವಿಗಳ ವಿಕಾಸದ ಸಾಧ್ಯತೆಯನ್ನು ಎತ್ತಿಹಿಡಿವ ಆಧ್ಯಾತ್ಮಿಕ ಕಾಳಜಿ ಕೂಡ ಕುವೆಂಪು ಅವರ ರಚನೆಗಳ ಒಳ ಮೈ ಆಗಿರುತ್ತದೆ ಎಂಬುದನ್ನು ಮರೆಯುವಂತಿಲ್ಲ. ಯಾವುದೇ ಅಧ್ಯಯನ ಈ ಎರಡೂ ಅಂಶಗಳನ್ನೂ ಗಮನಕ್ಕೆ ತೆಗೆದುಕೊಳ್ಳುವುದು ಅವಶ್ಯಕ.

ನವೋದಯ ಕಾಲದ ಲೇಖಕರು ವಸಾಹತುಶಾಹಿಯ ಫಲವಾಗಿ ಸಾಂಸ್ಕೃತಿಕ ಸ್ಥಿತ್ಯಂತರ, ಮೌಲ್ಯ ಪರಿವರ್ತನೆಯ ಸ್ಥಿತಿಗೆ ಸೃಜನಶೀಲವಾಗಿ ಸ್ಪಂದಿಸುವ ಹೊತ್ತಿನಲ್ಲಿ ಮೌಲ್ಯಗಳ ವಿಘಟನೆಗಳ ಎದುರಿನಲ್ಲಿ ಸ್ಥಿರತೆ ಉಳಿಸಿಡುವ ಶಕ್ತಿಗಳನ್ನುಳ್ಳ ಸ್ತ್ರೀಪ್ರಪಂಚವನ್ನು ಕೃತಿಗಳಲ್ಲಿ ಬಿಂಬಿಸಿದ್ದುಂಟು. ಉದಾಹರಣೆಗೆ ಮಾಸ್ತಿಯವರ ಗಟ್ಟಿಗಿತ್ತಿ ಸಹಧರ್ಮಿಣಿಯರು, ಕುಟುಂಬಿನಿಯರು. ಮತ್ತೊಂದು ನಿಟ್ಟಿನಿಂದ ನೋಡುವಾಗ, ಸಾಂಸ್ಕೃತಿಕ ಸ್ಥಿತ್ಯಂತರದ ಬಹು ಸೂಕ್ಷ್ಮರೂಪಗಳನ್ನು ಕಲ್ಪನಾತ್ಮಕವಾಗಿ ಪ್ರತಿನಿಧೀಕರಿಸಲೂ ಸ್ತ್ರೀಪಾತ್ರಗಳು ಲೇಖಕರಿಗೆ ಒದಗಿಬಂದಿವೆ. ಕುವೆಂಪು ಅವರ ಕಾದಂಬರಿಗಳ ಸ್ತ್ರೀಲೋಕವನ್ನು ಗಮನಿಸಿದರೆ ಅದು ಒಮ್ಮೆಗೇ ಎರಡು ಹೊಣೆಯನ್ನು ನಿರ್ವಹಿಸುವಂತೆ ತೋರುತ್ತದೆ. ೧. ಕೃತಿಯೊಳಗಿನ ಸಾಂಸ್ಕೃತಿಕ ಮೌಲ್ಯ ಜಿಜ್ಞಾಸೆಗೆ, ಮೌಲ್ಯ ನಿರ್ದೇಶನಗಳಿಗೆ ವಾಹಕಗಳಂತೆ ಇಲ್ಲಿನ ಸ್ತ್ರೀಪಾತ್ರಗಳನ್ನು ನೋಡಬಹುದು. ೨. ಲಿಂಗಾಧಾರಿತ ಶೋಷಣೆಯನ್ನು ಸೂಕ್ಷ್ಮಾತಿಸೂಕ್ಷ್ಮ ಒಳದನಿಗಳೊಂದಿಗೆ ಬೃಹತ್ತಾಗಿ ಚಿತ್ರಿಸಿತೋರಿಸುವ ಅನನ್ಯ ದಾಖಲೆಯೆಂದೂ ಈ ಕಾದಂಬರಿಗಳನ್ನು ನೋಡಲು ಸಾಧ್ಯ. ಈ ಎರಡೂ ಅಂಶಗಳನ್ನು ಇಲ್ಲಿ ಪರಿಶೀಲಿಸಬಹುದಾಗಿದೆ.

“ಕಾನೂರು ಹೆಗ್ಗಡಿತಿ” ಹಾಗೂ “ಮಲೆಗಳಲ್ಲಿ ಮದುಮಗಳು” ಎಂಬ ಎರಡೂ ಹೆಸರುಗಳು ಸ್ತ್ರೀಸಂಬಂಧಿತ ನೆಲೆಗಳನ್ನು ಸೂಚಿಸುವಂತಿವೆ. ‘ಮದುಮಗಳು’ ಎನ್ನುವುದು ಹೆಣ್ಣಿನ ಪರಂಪರಾಗತ ಕೌಟುಂಬಿಕ ನೆಲೆಯನ್ನು ಸೂಚಿಸಿದರೆ ‘ಹೆಗ್ಗಡಿತಿ’ ಎನ್ನುವುದು ಈ ರೂಢಿಗತ ಅಧೀನ ನೆಲೆಯನ್ನು ಉಲ್ಲಂಘಿಸಿದ ಅಧಿಕಾರಕ್ಕೇರಿದ ಹೆಣ್ಣಿನ ನೆಲೆಯ ಸೂಚಕವಾಗಿದೆ. ಹೆಣ್ಣು ಅಧೀನತೆಯಿಂದ ಸರಿದು ಅಧಿಕಾರದ ನೆಲೆಯತ್ತ ಸಾಗುವ ಸಾಂಸ್ಕೃತಿಕ ಪ್ರಕ್ರಿಯೆಯನ್ನು ಕುವೆಂಪು ಅವರ ಎರಡು ಕಾದಂಬರಿಗಳಲ್ಲೂ ಗುರುತಿಸಲು ಸಾಧ್ಯವಿದೆ. ಆದರೆ ಈ ಪ್ರಕ್ರಿಯೆ ‘ಅಸಂಸ್ಕೃತಿ–ಕುಸಂಸ್ಕೃತ ಮತ್ತು ಸುಸಂಸ್ಕೃತಿಗಳ’ ನಡುವಿನ ಮುಖಾಮುಖಿಯಾಗಿ, ನೈತಿಕ ಹೋರಾಟವಾಗಿ “ಕಾನೂರು ಹೆಗ್ಗಡಿತಿ”ಯಲ್ಲಿ ದಾಖಲಾಗುತ್ತದೆ. “ಮಲೆಗಳಲ್ಲಿ ಮದುಮಗಳು” ಕಾದಂಬರಿಯಲ್ಲಿ ಸಂಸ್ಕೃತಿ ಜಿಜ್ಞಾಸೆ ಕೇವಲ ಮಾನವಲೋಕವನ್ನಷ್ಟೆ ಕುರಿತದ್ದಲ್ಲ. ಎಲ್ಲ ಜೀವಿಗಳ ಅತ್ಯುನ್ನತ ವಿಕಾಸಸಾಧ್ಯತೆಯನ್ನು ಗುರುತಿಸುವ ಅಧ್ಯಾತ್ಮಿಕ ನೆಲೆ ಅಲ್ಲಿ ಮುಖ್ಯವಾಗಿ ಕೆಲಸ ಮಾಡುತ್ತದೆ. ಹೂವಯ್ಯ ಒಂದರ ಪ್ರಜ್ಞಾಕೇಂದ್ರವಾಗಿದ್ದರೆ ಮತ್ತೊಂದರಲ್ಲಿ ಈ ಪ್ರಜ್ಞಾಕೇಂದ್ರ ‘ಗುತ್ತಿ’ ಎನ್ನುವುದು ಈ ದೃಷ್ಟಿವಿಸ್ತಾರದತ್ತ ಸೂಚನೆ ನೀಡಬಲ್ಲದು.

ಸಂಸ್ಕೃತಿ ಸಂಘರ್ಷದ, ಮೌಲ್ಯ ವಿಘಟನೆ, ಮತ್ತು ಅವನತಿಗಳೆಲ್ಲ “ಕಾನೂರು ಹೆಗ್ಗಡಿತಿ”ಯಲ್ಲಿ ತುಂಬ ಸ್ಫುಟವಾದ ಗಡಿರೇಖೆಗಳುಳ್ಳ ಆಕೃತಿಯಾಗಿ ಕಾಣಿಸಿಕೊಂಡಿರುವುದು ಬಹುಶಃ ಸುಬ್ಬಮ್ಮನ ಪಾತ್ರದಲ್ಲಿಯೇ. ಪುರುಷ ಪ್ರಧಾನವೂ, ಊಳಿಗಮಾನ್ಯವೂ ಆದ ವ್ಯವಸ್ಥೆಯ ನೇತ್ಯಾತ್ಮಕವಾದ ಆದ್ದರಿಂದಲೇ ಢಾಳಾಗಿ ಎದ್ದುತೋರುವ ಲಕ್ಷಣಗಳೆಲ್ಲ ಈ ಸುಬ್ಬಮ್ಮನಲ್ಲಿ ಘನೀಭವಿಸುತ್ತವೆ. ಉದಾಹರಣೆಗೆ, ೧. ಬಡತನ–ಸಿರಿತನಗಳ ನಡುವಿನ ಅಸಮಾನತೆ, ವೈಪರೀತ್ಯಗಳು ಹೇಗೆ ವ್ಯಕ್ತಿಯೊಳಗಿನ ಮಾನವತ್ವವನ್ನೂ ವ್ಯಕ್ತಿಮತ್ವವನ್ನೂ ಹಿಗ್ಗಿಸಬಹುದು ಇಲ್ಲವೆ ಕುಗ್ಗಿಸಬಹುದು ಎಂಬುದಕ್ಕೆ ಸುಬ್ಬಮ್ಮ ಒಂದು ಉದಾಹರಣೆ ಆಗುತ್ತಾಳೆ. ೨. ಅದೇ ರೀತಿ ಯಜಮಾನಿಕೆ–ಊಳಿಗತನಗಳ ಅತಿರೇಕಗಳೂ ಆಕೆಯ ವ್ಯಕ್ತಿತ್ವದಲ್ಲಿ ಮೈಗೂಡಿವೆ. ೩. ಪ್ರೇಮ–ಕಾಮಗಳ ಮನಶ್ಶಾಸ್ತ್ರೀಯ ತುಯ್ದಾಟಗಳಿಗೂ ಆಕೆ ಒಂದು ನೆಲೆಯಾಗಿದ್ದಾಳೆ. ೪. ಹತ್ತಿಕ್ಕಲ್ಪಟ್ಟ ಬಯಕೆಗಳು ಭಾವನೆಗಳು ಮಿತಿಮೀರಿದ ಒತ್ತಡ ಸೃಷ್ಟಿಸಿ, ಆಸ್ಫೋಟಿಸಿದರೆ ಹೇಗೆ ವಿಕೃತ/ಪ್ರಾಕೃತಿಕ ಸ್ವಭಾವ ಮತ್ತು ಸ್ವಚ್ಛಂದ ಸ್ವಾತಂತ್ರ್ಯಗಳಾಗಿ ಉಲ್ಬಣಿಸಬಹುದು ಎಂಬುದಕ್ಕೂ ಸುಬ್ಬಮ್ಮನನ್ನು ಒಂದು ಉದಾಹರಣೆಯಾಗಿ ನೋಡಬಹುದು. ೫. ನವಶ್ರೀಮಂತಿಕೆಯತ್ತ ಏರುವ ಗುಲಾಮರೊಳಗೆ ಆ ಸಿರಿವಂತಿಕೆ ಹುಟ್ಟಿಸಬಹುದಾದ ವಿಕೃತಿಗೂ ಈಕೆಯನ್ನು ನಿದರ್ಶನವಾಗಿ ನೋಡಲು ಸಾಧ್ಯ.

ಹೀಗೆ ಕುವೆಂಪು ಚಿತ್ರಿಸಿರುವ ಸುಬ್ಬಮ್ಮ ಅನೇಕ ದ್ವಂದ್ವಗಳ, ಆಂತರಿಕ ಹೊಯ್ದಾಟಗಳಿಗೆ ತಾಣವಾದ ಅತ್ಯಂತ ಸಂಕೀರ್ಣ ವ್ಯಕ್ತಿತ್ವವುಳ್ಳವಳು. “ಕಾನೂರು ಹೆಗ್ಗಡಿತಿ” ಕಾದಂಬರಿಯಲ್ಲಿ ಸುಸಂಸ್ಕೃತಿಯ ಸಮಗ್ರ ನೆಲೆಯನ್ನು ಪ್ರತಿನಿಧಿಸುವ ಹೂವಯ್ಯನಿಗೆ ಸರಿಸಮನಾಗಿ ನಿಲ್ಲುವ

ಹೆಣ್ತನದ ಮಾದರಿ ಸುಬ್ಬಮ್ಮನೇ. ಅವನಿಗೆ ತದ್ವಿರುದ್ಧವಾದ ಅಸಂಸ್ಕೃತಿ-ಕುಸಂಸ್ಕೃತಿಗಳೆರಡಕ್ಕೂ ಪ್ರತಿನಿಧಿಯಾಗಿ ಲೇಖಕರ ಮೌಲ್ಯಾನ್ವೇಷಣೆಯ ನೈತಿಕ ದೃಷ್ಟಿಗೆ ತಕ್ಕಂತೆ ಇವಳ ಆಕೃತಿ, ಸ್ವಭಾವಗಳು ಮೈತಳೆಯುತ್ತವೆ. ಸುಬ್ಬಮ್ಮನ ಬಲಿಷ್ಠ ಹೆಣ್ತನದ ವ್ಯಕ್ತಿತ್ವದ ಅರಿವು ಹೂವಯ್ಯನಲ್ಲೂ, ಹೂವಯ್ಯನ ಇರುವಿಕೆಯು ಸುಬ್ಬಮ್ಮನಲ್ಲೂ ಆಂತರಿಕ ತುಯ್ದಾಟವನ್ನು ಹುಟ್ಟಿಸುವುದನ್ನು ಆರಂಭದಿಂದಲೂ ನೋಡಬಹುದು. ಆದರೆ ಇವರ ನಡುವೆ ಪರಸ್ಪರರಿಗೆ ಪೂರಕವಾಗಬಹುದಾದ ಅಂಶಗಳಿಲ್ಲ.

ಸುಬ್ಬಮ್ಮನ ವ್ಯಕ್ತಿತ್ವದ ಸಬಲವಾದ ಆದ್ದರಿಂದಲೇ ಒಂದು ಬಗೆಯ ಹೆದರಿಕೆ ಮಿಶ್ರಿತ ಆಕರ್ಷಣೆಯನ್ನು ಹುಟ್ಟಿಸುವ ಲಕ್ಷಣಗಳು ಮಾನವೀಯ ದೃಷ್ಟಿಯಿಂದ ದಾಖಲಾಗುತ್ತವೆ. ಅವಳ ಶರೀರದ ಚೆಲುವು, ದುಡಿವ ಸಾಮರ್ಥ್ಯ, ಅದರಿಂದ ದೊರೆತ ದೇಹಬಲ, ಸದಾ ಚಟುವಟಿಕೆಯಲ್ಲಿ ತೊಡಗಿರುವಿಕೆ, ಅಧಿಕಾರದಲ್ಲಿ ದಕ್ಷತೆ – ಎಲ್ಲವೂ ಇತ್ಯಾತ್ಮಕ ಗುಣಗಳೇ. ಆದರೆ ಇವುಗಳನ್ನು ಸುಸಂಗತವಾಗಿ ಬೆಳೆಯಗೊಡದಂತೆ ಅವಳಿರುವ ಪರಿಸರ ಆಕೆಯನ್ನು ಹತ್ತಿಕ್ಕುತ್ತದೆ. ಈ ರೀತಿ ದಮನಕಾರಿ ಪರಿಸ್ಥಿತಿಗಳು ಹುಟ್ಟಿದ ಮನೆಯ ಬಡತನ, ಸೇರಿದ ಮನೆಯ ಗಂಡನ ಕ್ರೌರ್ಯ, ದಬ್ಬಾಳಿಕೆಗಳ ರೂಪದಲ್ಲಿ ವಿಸ್ತಾರವಾಗಿ ಕಾದಂಬರಿಯಲ್ಲಿ ದಾಖಲುಗೊಳ್ಳುತ್ತವೆ. ಇದರಿಂದ ಸುಬ್ಬಮ್ಮನ ಸ್ವಭಾವ ಕೂಡ 'ಬಂಧಿತ' ನೆಲೆಯಲ್ಲೇ ಉಳಿಯುತ್ತದೆ. ವಿನಾಶಾತ್ಮಕ ಶಕ್ತಿಗಳೆಲ್ಲ ಒಟ್ಟಾಗಿ ಯಾವ ಕಡೆಗೆ ಎಳೆದರೆ ಆ ಕಡೆಗೆ ಸಾಗಿಬಿಡಬಲ್ಲ ದುರ್ಬಲಾಂಶಗಳೂ ಅವಳ ವ್ಯಕ್ತಿತ್ವದಲ್ಲಿವೆ. ಹೀಗೆ ಒಂದು ರೀತಿಯಲ್ಲಿ ಛಿದ್ರಿತ ವ್ಯಕ್ತಿತ್ವ ಇವಳದು. ಇಂಥ ವ್ಯಕ್ತಿತ್ವದ ಮೌಲಿಕ ಬಿರುಕಿನಲ್ಲೇ ಅವಳ ದುರಂತದ ಎಳೆಗಳು ಸೃಷ್ಟಿಯಾಗುತ್ತವೆ. ಅವಳ ಸಾವು ಮೌಲ್ಯವೇ ಇಲ್ಲದಂಥ ನಿರ್ಮಾನವ ಸ್ಥಿತಿಯಲ್ಲಿ ಸಂಭವಿಸುತ್ತದೆ. ಹೂವಯ್ಯ ಯಾವ ಸುಸಂಸ್ಕೃತಿಗೆ ಪ್ರತೀಕವೋ ಆ ಮೌಲ್ಯದ ದೃಷ್ಟಿಯಲ್ಲಿ ಸುಬ್ಬಮ್ಮ ಬರೀ ಮರುಕದ ವಸ್ತುವಾಗುತ್ತಾಳೆ.

ಕಾದಂಬರಿಯಲ್ಲಿ ಸುಬ್ಬಮ್ಮ ಜಡ ವ್ಯಕ್ತಿಯಲ್ಲ. ತುಂಬ ಕ್ರಿಯಾಶೀಲ ಚೇತನ ಅವಳದು. ಆದರೆ ಅವಳ ಚೈತನ್ಯ ಮತ್ತು ಕ್ರಿಯಾಶೀಲತೆಗಳು ಬದುಕುಳಿಯುವುದಕ್ಕಾಗಿ, ಆ ಬದುಕಿನಲ್ಲಿ ಕಿಂಚಿತ್ತು ಸುಖವನ್ನು ಕಾಣುವ ಹಂಬಲಕ್ಕಾಗಿ ಇವೆ. ವಿರುದ್ಧ ಪರಿಸ್ಥಿತಿಗಳಲ್ಲಿ ನೇರವಾಗಿ ಪ್ರತಿಭಟನೆಗಿಂತ ರಾಜಿ ಮಾಡಿಕೊಳ್ಳುತ್ತಾ, ಅವಕಾಶ ಸಿಕ್ಕಿದಾಗ ಪ್ರಬಲಳೂ ಆಗುವುದು ಅವಳ ಸ್ವಭಾವ. ಗಂಡ ಚಂದ್ರಯ್ಯಗೌಡ ಕೊಲ್ಲಲು ಬಂದಾಗ, ಸಾಯುವುದನ್ನು ತಪ್ಪಿಸಿಕೊಳ್ಳಲು ತವರಿಗೆ ಓಡುತ್ತಾಳೆ. ಆದರೆ ತವರಿನವರ ಬಡತನದೆದುರು, ಮದುವೆಗೆ ಮೊದಲು ಮಾಡುತ್ತಿದ್ದಂತೆ, ದುಡಿಮೆಗೆ ತನ್ನನ್ನು ತೆತ್ತುಕೊಳ್ಳುತ್ತಾಳೆ. ಅಂದರೆ ನಿರ್ಬಂಧಕಾರಿ ಪರಿಸ್ಥಿತಿಯ ಎದುರಲ್ಲಿ ಈಕೆಯದೊಂದು ಹೋರಾಟ. ಅದು ಕೇವಲ ಅಸ್ತಿತ್ವಕ್ಕಾಗಿ ಹೋರಾಟವೇ ಆಗಿರಲಿ – ಅಂತೂ ಇದೆ. ಈ ಹೋರಾಟದಲ್ಲಿ ತನ್ನೆಲ್ಲ ಕೃತ್ಯಗಳ ಮೂಲಕವೇ ಶಕ್ತಿಹೀನನಾಗುವ ಚಂದ್ರಯ್ಯಗೌಡನನ್ನು ಸೇವೆ, ಪ್ರೀತಿಗಳಿಂದ ಈಕೆ ಗೆದ್ದುಕೊಳ್ಳುತ್ತಾಳೆ. ಮಾತ್ರವಲ್ಲ, ಆತನ

ಮರಣದ ನಂತರ ಹೆಗ್ಗಡೆತನದ ಅಧಿಕಾರವೂ ಇವಳದಾಗುತ್ತದೆ. ಇದನ್ನು ತನ್ನ ಪರಿಸ್ಥಿತಿಯ ವಿರುದ್ಧವಾದ ಹೋರಾಟದಲ್ಲಿ ಈಕೆ ಗಳಿಸಿದ ವಿಜಯ ಎನ್ನಬಹುದು. ಈ ವಿಷಯವನ್ನು ಗುರತಿಸುತ್ತಾ ಟಿ.ಪಿ. ಅಶೋಕ ಅವರು ಈಕೆಯ ಮರಣದ ದುರಂತಕ್ಕಿಂತ ಅವಳ ವಿಜಯವೇ ಹೆಚ್ಚು ಮನಸ್ಸಿಗೆ ತಟ್ಟುವಂತಾದ್ದೆಂದು ಸೂಚಿಸುತ್ತಾರೆ. ("ಸಾಹಿತ್ಯ ಸಂದರ್ಭ": ೧೯೯೧, ಪು. ೪೭–೪೬) ಅಶೋಕರ ಈ ಅಭಿಪ್ರಾಯವನ್ನು ಒಪ್ಪುವುದು ಕಷ್ಟ. ಏಕೆಂದರೆ, ಅಶೋಕ ಅವರೇ ಗುರುತಿಸುವಂತೆ ಚಂದ್ರಯ್ಯಗೌಡರ ಗದ್ದುಗೆಯ ಜೊತೆಗೆ, ಅವರ ಯಜಮಾನಿಕೆಯ ಕ್ರೌರ್ಯ, ದರ್ಪ, ಅಹಂಕಾರ, ಹಿಂಸೆಗಳನ್ನೂ ತನ್ನದಾಗಿಸಿಕೊಂಡ, ಕೊನೆಗೆ ಚಂದ್ರಯ್ಯಗೌಡರೇ ಆಗಿಬಿಡುವುದೇ ಈಕೆಯ ವಿಜಯದ ನೆಲೆ. ಆದರೆ ಈ ವಿಜಯದ ಪ್ರಾಬಲ್ಯವನ್ನು ಒಳಗಿನಿಂದಲೇ ಕೊರೆದು ನುಗ್ಗುವ ಪ್ರವೃತ್ತಿಗಳ ವಿಜಯವೇ ಕಾದಂಬರಿಯಲ್ಲಿ ಮುಖ್ಯವಾಗಿ ತೋರುವುದನ್ನು ಸೂಕ್ಷ್ಮವಾಗಿ ಗಮನಿಸಬೇಕು.

'ಯಜಮಾನಿಕೆ'ಯ ಹೊರಮೈ ಪಡೆದಿದ್ದರೂ ಸುಬ್ಬಮ್ಮ ನಿಜವಾಗಿ ಯಜಮಾನಿ ಅಲ್ಲ. ಸೇರೆಗಾರನಂಥ ಸ್ವಾರ್ಥಿ–ಲಂಪಟನಿಂದಲೂ ಗಂಗೆಯಂಥ, ಸ್ವತಃ ಶೋಷಿತಳಾದರೂ ಶೋಷಕತೆಯಲ್ಲಿ ಬದುಕುವ ಹಾದಿ ಕಂಡುಕೊಂಡ ವ್ಯಕ್ತಿಯಿಂದಲೂ ಶೋಷಣೆಗೆ ಒಳಗಾಗಿಬಿಡುವ ಅಸಹಾಯಕತೆಯೂ ಅವಳಲ್ಲಿದೆ. ಚಂದ್ರೇಗೌಡನಿಗೂ, ಸುಬ್ಬಮ್ಮನಿಗೂ ಇರುವ ತಾತ್ವಿಕ ಅಂತರವನ್ನು ಇಲ್ಲಿ ಗಮನಿಸಬಹುದು. ಯಜಮಾನಿಕೆ, ಗಂಡಿನ ನೆಲೆಯಿಂದ ದಕ್ಕುವ ಲೈಂಗಿಕ ಸ್ವೇಚ್ಛಾಚಾರದ ಸವಲತ್ತುಗಳೆರಡನ್ನೂ ನಡೆಸಿ, ಹೆಂಡತಿಯನ್ನು ಕಾಲ ಕಸವಾಗಿ ಕಂಡರೂ ಚಂದ್ರಯ್ಯ ಗೌಡ ತನ್ನ ಕೊನೆಗಾಲದಲ್ಲಿ ಕಣ್ಣೀರಿಟ್ಟು, ಪಶ್ಚಾತ್ತಾಪ ಪಡುವುದರಿಂದ ಗೌರವಯುಕ್ತ ಮರಣವನ್ನು ಪಡೆಯುತ್ತಾನೆ. ಕುವೆಂಪು ಅವರ ನೈತಿಕ ದೃಷ್ಟಿಯೊಳಗೆ ಈ ಬಗೆಯ ಶುದ್ಧೀಕರಣಕ್ಕೆ ಆಸ್ಪದವಿದ್ದೇ ಇದೆ.

ಆದರೆ ಅದೇ ಬಗೆಯ ಬದುಕನ್ನು ಬದುಕಿದ ಸುಬ್ಬಮ್ಮ ಅನಾಗರಿಕ ಗರ್ಭಪಾತಕ್ಕೆ ಬಲಿಯಾಗುತ್ತಾಳೆ. ಸಾವಿನಲ್ಲೂ ಸಮಾಜದ ಕುಹಕ ದೃಷ್ಟಿಯಿಂದ ಆಕೆ ಪಾರಾಗಿಲ್ಲ. ಅವಳು ರಕ್ತದ ಮಡುವಿನ ನಡುವೆ ಸತ್ತ ಸ್ಥಿತಿಯನ್ನು ಕಂಡ ರಾಮಯ್ಯ ತಮ್ಮ ಮನೆತನಕ್ಕೆ ಮಸಿ ಬಳಿದಳೆಂಬ ಅಸಹ್ಯದಿಂದ ನೇಣು ಹಾಕಿಕೊಳ್ಳುತ್ತಾನೆ. ಪುಟ್ಟಣ್ಣ, ಅವಳ ಸಾವಿಗೆ ಮೂಲವಾದ ಆ 'ಅನೈತಿಕ' ಪಿಂಡ, ರಕ್ತದ ಕಾಲುವೆಗಳು ಹೂವಯ್ಯನ ಕಣ್ಣಿಗೆ ಬೀಳದಿರಲೆಂದು ಗುಟ್ಟಾಗಿ ಶುಚಿಗೊಳಿಸುತ್ತಾನೆ. ಹೂವಯ್ಯ ಅಲ್ಲಿಗೆ ಬರುವ ವೇಳೆಗೆ ಸುಬ್ಬಮ್ಮ ತೊಳೆದಿಟ್ಟು ಪರಿಶುದ್ಧವಾದ ಶವವಾಗಿರುತ್ತಾಳೆ. ಈ ಮರಣದ ಸ್ಥಿತಿ ಎಷ್ಟು ಗಾಢವಾಗಿ ಓದುಗರ ಮನವನ್ನು ಕಾಡುವುದೆಂದರೆ ಆಕೆ ಒಮ್ಮೆ ಸ್ವತಃ ಹೆಗ್ಗಡಿತಿಯಾಗಿ ಮೆರೆದಿದ್ದ ವಿಜಯದ ವೀರನಾಯಕಿಯಾಗಿದ್ದವಳು ಎಂಬುದು ಈ ಸಾವಿನೆದುರು ಮತ್ತಷ್ಟು ಅನುಕಂಪಕ್ಕೆ ಮಾತ್ರ ಅರ್ಹವಾಗಿಬಿಡುತ್ತದೆ. ಸುಬ್ಬಮ್ಮ ಯಾವುದೇ ಮೌಲ್ಯಕ್ಕಾಗಿ ಹೋರಾಡಿ ಮಡಿದ ಹುತಾತ್ಮ ನಾಯಕಿಯಾಗಿರದೆ, ಸ್ವತಃ ಮೌಲ್ಯದ ಅವನತಿ, ವಿನಾಶಗಳ ಉತ್ಕಟ

ಸಂಕೇತವಾಗಿಬಿಡುತ್ತಾಳೆಂಬುದು ಗಮನಾರ್ಹ. ಈ ದೃಷ್ಟಿಯಿಂದ ನೋಡಿದಾಗ ನವೋದಯ ಲೇಖಕರಾಗಿ ಕುವೆಂಪು ಸಂಸ್ಕೃತಿ ಸಂಘರ್ಷ, ಮೌಲ್ಯ ವಿನಾಶಗಳ ಕಥೆ ಹೇಳಲು ಅಂಥ ಮೌಲ್ಯ ವಿಘಟನೆಯ ಹೊತ್ತಿನ ಅತ್ಯಂತ ಸಂಕೀರ್ಣ ಆಯಾಮಗಳನ್ನು ಚಂದ್ರಯ್ಯಗೌಡನಷ್ಟು ಅಥವಾ ಅದಕ್ಕೂ ಹೆಚ್ಚು ಮುಖ್ಯವಾಗಿ ಸುಬ್ಬಮ್ಮನ ಮೂಲಕ ಪ್ರತಿನಿಧೀಕರಿಸಲು ಯತ್ನಿಸಿದ್ದಾರೆನಿಸುತ್ತದೆ. ಈ ಕಾದಂಬರಿಯ ಇನ್ನೊಂದು ಮುಖ್ಯಪಾತ್ರವಾದ ಸೀತೆ ಬದಲಾದ ಮೌಲ್ಯಗಳಲ್ಲಿನ ಉತ್ತಮಿಕೆ, ವೈಚಾರಿಕತೆ, ಪ್ರಗತಿಪರ ಆಶಯಗಳನ್ನು ಪ್ರತಿನಿಧಿಸುವಂತೆ ತೋರಿದರೂ ಈ ಒಳಿತುಗಳೆಲ್ಲ ಇನ್ನೂ ಸಾಕಾರವಾಗಿರದ ಸಂದಿಗ್ಧ ಪರಿಸ್ಥಿತಿಯನ್ನು ಅವಳ ಅಷ್ಟು ಪ್ರಖರವಾಗಿರದ ವ್ಯಕ್ತಿತ್ವ ಸೂಚಿಸುತ್ತದೆ. ಸುಬ್ಬಮ್ಮನಿಗೆ ತದ್ವಿರುದ್ಧವೆನ್ನಬಹುದಾದ ಸ್ತ್ರೀತ್ವ ಹಾಗೂ ವ್ಯಕ್ತಿತ್ವದ ಆರೋಗ್ಯಪೂರ್ಣ ವಿಕಾಸದ ಸಾಧ್ಯತೆಯನ್ನು "ಮಲೆಗಳಲ್ಲಿ ಮದುಮಗಳು"ವಿನ ಪೀಂಚಲು ಪ್ರತಿನಿಧಿಸುವುದನ್ನು ಕಾಣುತ್ತೇವೆ. ಆದರೆ ಆಧ್ಯಾತ್ಮಿಕ ಸೂಕ್ಷ್ಮ ಸಂವೇದನಗಳ ಶಿಕ್ಷಿತ ಸ್ತ್ರೀತ್ವದ ಸೀತೆಗೆ ಸದೃಶವಾದ ಮಾದರಿ ಅಲ್ಲಿ ಚೆನ್ನಮ್ಮನಲ್ಲಿದೆ.

* * *

ಆರಂಭದಲ್ಲಿ ಪ್ರಸ್ತಾಪ ಮಾಡಿದ ಹಾಗೆ ಸ್ತ್ರೀ ಶೋಷಣೆಯ ಬಹುಮುಖ ಆಯಾಮಗಳ ಚಿತ್ರಣಕ್ಕಾಗಿ ಕುವೆಂಪು ಅವರ ಕಾದಂಬರಿಗಳ ಪರಿಶೀಲನೆ ಮಾಡಿದಲ್ಲಿ ತುಂಬ ಕುತೂಹಲಕರ ಅಂಶಗಳನ್ನು ಗುರುತಿಸಬಹುದು. ಪುರುಷಪ್ರಧಾನ ವ್ಯವಸ್ಥೆಯಲ್ಲಿನ ಲಿಂಗಾಧಾರಿತ ಶೋಷಣೆಯನ್ನು ಒಂದು ತಲೆಕೆಳಗಾದ ಪಿರಮಿಡ್ಡಿನ ರೀತಿ ಕಲ್ಪಿಸಿಕೊಂಡರೆ, ಈ ಪಿರಿಮಿಡ್ಡಿನ ಅತ್ಯಂತ ಕೆಳಗಿನ ಕೇಂದ್ರ ಬಿಂದುವಿನಲ್ಲಿ, ಶ್ರೇಣೀಕರಣದಲ್ಲಿ ಅತಿ ಕೆಳಗಿನ ಜಾತಿ, ವರ್ಗಗಳ ಸ್ತ್ರೀಯರು ನಿಲ್ಲುತ್ತಾರೆ. ತಿಮ್ಮಿ, ಪೀಂಚಲು, ಅಕ್ಕಣಿ, ಸೇಸಿ, ಕಾಡಿಯಂಥವರು ತಮ್ಮ ದುಡಿಮೆ ತಮ್ಮ ವ್ಯಕ್ತಿತ್ವ ಎರಡರಿಂದಲೂ ಇತರರನ್ನು ಬೆಳೆಸುವವರು. ದಲಿತ ಸ್ತ್ರೀಯರಂತೆ, ದಲಿತರಲ್ಲದ ಇತರ ಕೆಳಜಾತಿವರ್ಗಗಳ ಸ್ತ್ರೀಯರನ್ನೂ ಹೀಗೆ ಶೋಷಿತಾತಿ ಶೋಷಿತ ನೆಲೆಯಲ್ಲಿ ಕುವೆಂಪು ಕಂಡಿದ್ದಾರೆ ಎಂಬುದು ಗಮನಾರ್ಹ. ಇಂಥ ಹೆಣ್ಣುಗಳ ಆರ್ಥಿಕ ನೆಲೆ ಸದಾ ದುರ್ಬಲ, ಅಸ್ಥಿರ, ಅದರಿಂದಲೇ ಲೈಂಗಿಕವಾಗಿಯೂ ಸುಲಭವಾಗಿ ಮೇಲಿನವರಿಗೆ ಬಲಿಬೀಳಬಹುದಾದ ಸಾಧ್ಯತೆ ಇವರದು. ತಮ್ಮತನವೊಂದನ್ನು ಹೊಂದಿರುವಂತೆ ತೋರುವ ಪೀಂಚಲು, ತಿಮ್ಮಿಯರೂ ಮೇಲ್ಜಾತಿ–ಸ್ತರದ ಗಂಡಸರಿಗೆ ಭೋಗದ ವಸ್ತುವಾಗಿಬಿಡಬಹುದಾದ ಅಭದ್ರತೆಯ ನೆಲೆಯಲ್ಲೇ ಬದುಕಿರುವವರು. ಜಾತಿಯ ಎಣಿಕೆಯಲ್ಲಿ ಇವರಿಗಿಂತ ಕ್ರಮವಾಗಿ ಮೇಲೆ ಇರುವ ಹಳೆಪೈಕದ ಹೂವಿ, ವಿಧವೆ ನಾಗಕ್ಕ, ಗಂಡ ಬಿಟ್ಟ ಹಳೆಮನೆ ರಂಗಮ್ಮ, ಮಂಜುಭಟ್ಟರ ಸೊಸೆ ಮುಂತಾದವರದೂ ಆರ್ಥಿಕ ಹಾಗೂ ಲೈಂಗಿಕ ಶೋಷಣೆಯಲ್ಲಿ ಕೆಳಸ್ತರದ ಸ್ತ್ರೀಯರಿಗಿಂತೇನೂ ಸುಧಾರಿತ ಸ್ಥಿತಿಯಲ್ಲ. ಸಮಾಜದ ವಿವಿಧ ಜಾತಿ, ವರ್ಗಗಳೆಲ್ಲದರ ಒಳಗೂ ಇರುವಂಥ ಲಿಂಗಾಧರಿತ ಯಜಮಾನಿಕೆ, ದಬ್ಬಾಳಿಕೆಗಳನ್ನು ಹೀಗೆ ಸೂಕ್ಷ್ಮವಾಗಿ ಅನಾವರಣಗೊಳಿಸುವಲ್ಲಿ ಕುವೆಂಪು ನಿಷ್ಪಕ್ಷಪಾತ ಧೋರಣೆಯನ್ನೇ ಬಹುವಾಗಿ ತೋರಿದರೂ ಶೂದ್ರ ದೃಷ್ಟಿಯಿಂದ

ಬ್ರಾಹ್ಮಣರ ಸಂಕುಚಿತ ಬುದ್ಧಿಯನ್ನು ವಿಡಂಬನೆ ಮಾಡುವ ಒಂದು ಧೋರಣೆ ಕುವೆಂಪು ಬರಹದಲ್ಲಿ ಬೇರೆ ಕಡೆಯೂ ಇರುವಂತೆ ಇಲ್ಲೂ ಕಾಣಸಿಗುತ್ತದೆ.

ಈ ಕೆಳನೆಲೆಯ ಸ್ತ್ರೀಯರ ಭುಜಗಳ ಮೇಲೆ ನಿಲ್ಲುವ ಸ್ತ್ರೀಯರು ಸಾಂಸ್ಕೃತಿಕ ವ್ಯವಸ್ಥೆಯಿಂದಾಗಿ ಸ್ತ್ರೀಯರಾದ್ದರಿಂದ ಶೋಷಿತರೇ. ಆದರೆ ಆ ವ್ಯವಸ್ಥೆಯ ಯಜಮಾನರೊಂದಿಗೆ, ಅವರ ಶೋಷಿತ ತಾತ್ವಿಕತೆಯೊಂದಿಗೆ ರಾಜಿ ಮಾಡಿಕೊಂಡು, ಆ ವ್ಯವಸ್ಥೆಯ ಶೋಷಕಾಂಶಗಳನ್ನೇ ಅಂತಸ್ಥವಾಗಿಸಿಕೊಂಡು ತಮಗಿಂತ ದುರ್ಬಲರಾದ ಸ್ತ್ರೀಯರನ್ನು ಪುರುಷರಂತೆಯೇ ಶೋಷಿಸುವ ಸ್ತ್ರೀಯರಿದ್ದಾರೆ. ಸೇರೆಗಾರರ ಹೆಣ್ಣು ಗಂಗೆ, ಅಂತಕ್ಕ ಸೆಟ್ಟಿಯ ಮಗಳು ಕಾವೇರಿ, ನಾಗಕ್ಕನ ಅತ್ತೆ ನಾಗತ್ತೆ, ಜಟ್ಟಮ್ಮ, ಲಕ್ಕಮ್ಮ ಮುಂತಾದವರು ದಾಸ್ಯದ ಪರಂಪರಾಗತವಾದ ವಿವಿಧ ಸ್ತರಗಳನ್ನು ಪ್ರತಿನಿಧಿಸುತ್ತಾರೆ ಮಾತ್ರವಲ್ಲ, ಆ ದಾಸ್ಯವನ್ನೇ ಉಳಿಸಿಡುವ ವಾಹಕಗಳೂ ಆಗಿದ್ದಾರೆ. ತಮ್ಮ ದುಃಖ, ಯಾತನೆಗಳ ಮೂಲ ಕಾರಣಗಳು ಏನೆಂದು ಅರಿವಿಲ್ಲದ ಇವರು ತಮ್ಮ ತಮ್ಮ ಹೆಣ್ಣುತನವನ್ನೇ ಬಂಡವಾಳವಾಗಿ ಮಾಡಿಕೊಂಡು, ಯಜಮಾನರನ್ನು ಓಲೈಸಲೆತ್ನಿಸುತ್ತಾರೆ. ಅವರ ಮೇಲೆ ಹಿಡಿತ ಸಾಧಿಸಬೇಕೆಂಬ ತಮ್ಮ ಹಪಾಹಪಿಗಳಲ್ಲಿ ತಮ್ಮ ಅಧೀನಕ್ಕೆ ಬರುವಂಥ ಸ್ತ್ರೀಯರನ್ನು ತಾವು ಗಳಿಸಿದ ಹೊಸ ಅಧಿಕಾರದ ನೆಲೆಯಿಂದ ಶೋಷಿಸುತ್ತ ಬದುಕುತ್ತಾರೆ. ಈ ಬಗೆಯ ವಿಸ್ತೃತ ಮಾದರಿಯೊಂದನ್ನು ಹೆಗ್ಗಡಿತಿಯಾದ ನಂತರದ ಸುಬ್ಬಮ್ಮನಲ್ಲೂ ಕಾಣಲು ಸಾಧ್ಯ.

ಗ್ರಾಮೀಣ ಮಧ್ಯಮ ಜಾತಿಯ ಜಮೀನುದಾರ ಮನೆತನಗಳ ಸ್ತ್ರೀಯರು ಕುವೆಂಪು ಅವರ ಕಾದಂಬರಿಗಳಲ್ಲಿ 'ಉತ್ತಮ ಸ್ತ್ರೀತ್ವ'ದ ಮಾದರಿಗಳಾಗಿದ್ದು ಈ ಪಿರಮಿಡ್ಡಿನ ಅತಿ ಉನ್ನತವಾದ ನೆಲೆಯಲ್ಲಿ ನಿಲ್ಲುತ್ತಾರೆ. ಕಾಗಿನೂರಿನ ಅಮ್ಮ ದಾನಮ್ಮ ಹೆಗ್ಗಡಿತಿ, ಮುತ್ತಳ್ಳಿಯ ಗೌರಮ್ಮ, ಚಿನ್ನಮ್ಮ, ಚಿನ್ನಮ್ಮನ ಅಜ್ಜಿ ಈ ಸ್ತರದ ಪ್ರತಿನಿಧಿಗಳು. ಕೌಟುಂಬಿಕವಾಗಿ ಪಿತೃಪ್ರಾಧಾನ್ಯದ ಚೌಕಟ್ಟಿನ ಒಳಗೇ ಬದುಕುವವರಾಗಿಯೂ ಈ ಹೆಂಗಸರು ಒಳಗಿನ ಸತ್ವ, ಮಾತೃಸಹಜ ಅಂತಃಕರಣ, ವಿವೇಚನೆಗಳಿಂದ ಅನ್ಯಾಯವನ್ನು ಕಂಡಾಗ ಪ್ರತಿಕ್ರಿಯಿಸುವಷ್ಟು ಸಂವೇದನೆಯಿರುವವರು. ಈ ದೃಷ್ಟಿಯ ಹಿರಿಯ ತಲೆಮಾರನ್ನು ದಾನಮ್ಮ ಹೆಗ್ಗಡಿತಿ ಹಾಗೂ ಗೌರಮ್ಮ ಸೂಚಿಸಿದರೆ ಇವರ ಮುಂದಿನ ಪೀಳಿಗೆಯ ಚಿನ್ನಮ್ಮ ಮತ್ತು ಸೀತೆ ಅಧೀನತೆಯ ನೆಲೆಯಿಂದ ಸಮಾನತೆಯ ಕಡೆಗೆ ಮಾನವ ಜನಾಂಗವನ್ನು ಕೊಂಡೊಯ್ಯುವ ವಿಕಾಸತತ್ವದ ಶಕ್ತಿತುಂಬಿದ ಮೊಳಕೆಯಂತೆ ಇದ್ದಾರೆ. ಒಟ್ಟಾರೆಯಾಗಿ ಕುವೆಂಪು ಕಾದಂಬರಿಗಳು ಸೂಚಿಸುವ ಹೊಸಬದುಕಿನ ಮೌಲ್ಯಗಳಿಗೆ ಒಂದು ಸಾಧ್ಯತೆಯನ್ನು ಇವರು ಸೂಚಿಸುತ್ತಾರೆನ್ನಬಹುದು.

* * *

ಕುವೆಂಪು ಕಾದಂಬರಿಗಳು ಒಳಗೊಂಡಿರುವುದು ಈ ಶತಮಾನ ಪೂರ್ವದ ಕರ್ನಾಟಕದ ಹಳ್ಳಿಗಾಡಿನ ಬದುಕನ್ನು ಆದ್ದರಿಂದ ಸಹಜವಾಗಿ ಈ ಎರಡೂ ಕಾದಂಬರಿಗಳಲ್ಲಿ ಸೀತೆ

ಮತ್ತು ಪಾದ್ರಿ ಜೀವರತ್ನಯ್ಯನ ಮಗಳು – ಈ ಇಬ್ಬರನ್ನು ಬಿಟ್ಟರೆ, ಉಳಿದೆಲ್ಲ ಸ್ತ್ರೀಯರೂ ನಿರಕ್ಷರಿಗಳು. ಹೆಂಗಸರು ವಿದ್ಯೆ ಕಲಿಯುವುದು ಗಂಡಸರು ಸೀರೆ ಉಡುವುದಕ್ಕಿಂತಲೂ ಹಾಸ್ಯಾಸ್ಪದವೆನಿಸುತ್ತಿದ್ದ ಕಾಲ ಅದು. ಗಂಡನಾದವನು ಹೆಂಡತಿಯನ್ನು 'ಅದು' ಎಂದು ಕರೆದರೆ, ಸ್ತ್ರೀ–ಪುರುಷರಿಬ್ಬರಿಗೂ ಅದರಲ್ಲಿ ಏನೂ ಅಸಹನೀಯತೆ ಕಾಣಲಾರದು. ಮದುವೆಯಾಚೆಗಿನ ಗಂಡಂದಿರ ಲೈಂಗಿಕ ಸಂಬಂಧಗಳಿಗೆ 'ಗಂಡಸರ ಸ್ವಭಾವವೇ ಹಾಗೆ' ಎಂದು ಪ್ರತಿಕ್ರಿಯಿಸಿ ಸಹಿಸುವ, ಕ್ಷಮಿಸುವ ಈ ಹೆಣ್ಣುಮಕ್ಕಳು ಜಾತಿನೆಲೆಗಳಲ್ಲಿ ಮಾತ್ರ ಮೇಲು–ಕೀಳುಗಳನ್ನು ತಪ್ಪದೆ ಪಾಲಿಸುವ ನಿಷ್ಠಾವಂತ ವ್ಯವಸಾಯಿಗಳು. ತಮ್ಮ ತಮ್ಮ ಕರುಳಿನ ಕುಡಿಗಳಿಗಾಗಿ ತುಡಿದ ಮಾತೆಯರು, ಪರಿಸ್ಥಿತಿ ತಮ್ಮ ಹಿಡಿತದಲ್ಲಿಲ್ಲದಾಗ ಹೆಣ್ಣು–ಹೆಂಗಸರಾಗಿ ತಾವು ಇನ್ನೇನು ಮಾಡಲು ಸಾಧ್ಯ ಎಂದು ಅಸಹಾಯಕತೆಯನ್ನು ಆಶ್ರಯಿಸುವವರು.

ತಮ್ಮ ತಮ್ಮ ಕುಟುಂಬಗಳ ಪರಿಧಿಗಳಲ್ಲಿ, ಆಯಾ ಕುಟುಂಬದ ಯಜಮಾನರ ಅಂಕೆಯಲ್ಲಿ ಆಶ್ರಿತರಾಗಿರುವುದರ ಹೊರತಾಗಿ ಬೇರೆ ದಾರಿ ಇಲ್ಲದ ರೀತಿಯಲ್ಲಿ ಇವರೊಳಗೆ ಅಜ್ಞಾನ, ಅವಿದ್ಯೆ, ಬಡತನ, ನಿರ್ಗತಿಕತೆಗಳಿವೆ. ಕುಟುಂಬದ ಚೌಕಟ್ಟು ಒಂದು ವೇಳೆ ತಾನಾಗಿ ಮುರಿದರೆ, ಸ್ವತಂತ್ರವಾಗಿ ಬದುಕಬೇಕೆಂಬ ಸ್ವಾಭಿಮಾನ, ಛಲ, ಪರಿಶ್ರಮದ ಬುದ್ಧಿಯೂ ಇವರಲ್ಲಿ ಹಲವರಿಗಿಲ್ಲ. ಸಾಧಾರಣವಾಗಿ ಕೆಲವು ನಗರಪಂಡಿತರು ಭಾರತದ ಹಳ್ಳಿಗಳ ಹೆಣ್ಣುಮಕ್ಕಳನ್ನು ಅವರ ಜಾತಿ, ಬಡತನ ಮತ್ತು ಅನಿವಾರ್ಯ ದುಡಿಮೆಗಳನ್ನು ಸರಳಗೊಳಿಸಿ ಸ್ತ್ರೀಸಬಲತೆಯ ಲಕ್ಷಣಗಳೆಲ್ಲವನ್ನೂ ಆರೋಪಿಸುವುದುಂಟು. ಆದರೆ ಕುವೆಂಪು ಅವರ ಕಾದಂಬರಿಗಳು ತೆರೆದುತೋರುವ ಗ್ರಾಮಲೋಕ ಇಂತಹ ಯಾವುದೇ ಸರಳ ಲೈಂಗಿಕ ನೆಲೆಗೆ ಸವಾಲೆಸೆಯುವಂಥ ಸಂಕೀರ್ಣ ರೂಪದ್ದಾಗಿದೆ.

ಉದಾಹರಣೆಗೆ ಸ್ವತಃ ವಿಧವೆಯಾದ ನಾಗತ್ತೆ, ತನ್ನ ವಿಧುರ ಮಗನಿಗೆ ಕೂಡಿಕೆ ಮಾಡಿಸಿ ನಾಗಕ್ಕನನ್ನು ಸೊಸೆಯಾಗಿ ಪಡೆದುಕೊಂಡವಳು. ಆದರೆ ಈ ಮಗ ನಾಗಣ್ಣ ಕೂಡ ಸತ್ತುಹೋದಾಗ ಈಗಾಗಲೇ ಎರಡು ಸಲ ವಿಧವೆಯಾಗಿರುವ ನಾಗಕ್ಕ ಮತ್ತೆ ಕೂಡಿಕೆ ಮಾಡಿಕೊಳ್ಳಲು ಇಷ್ಟಪಡುವುದಿಲ್ಲ. ಮೈಮುರಿವಂತೆ, ಹೊಲದ ಕೂಲಿಯಾಳಾಗಿ ದುಡಿಯಲು ಆಕೆ ಸಿದ್ಧ. ಆದರೆ ದುಡಿಮೆಗಿಂತ ಸಿರಿವಂತರನ್ನು ಓಲೈಸಿದರೆ ಬದುಕು ನಿರಾಯಾಸವಾಗಬಲ್ಲದು ಎಂಬುದು ನಾಗತ್ತೆಯ ನಂಬಿಕೆ. ಯಾರಾದರೊಬ್ಬ ಆಸ್ತಿವಂತ ವಿಧುರನಿಗೆ ಸೊಸೆಯ ಕೂಡಿಕೆ ಮಾಡಿಸಲು ನಾಗತ್ತೆ ಕುಂಟಕೆಣಿಯ ದಾರಿ ಹಿಡಿಯಲಿಕ್ಕೂ ಹಿಂಜರಿಯಲಾರಳು. ಇವಳ ಮುಷ್ಟಿಯಲ್ಲಿ ಕೇವಲ ಆರ್ಥಿಕವಾಗಿ ಅಷ್ಟೇ ಆಗಿರದೆ ಮಾನಸಿಕವಾಗಿಯೂ ಬಂಧಿತಳಾಗಿರುವ ನಾಗಕ್ಕ ಇದರಿಂದ ಪಾರಾಗಲು ಯಾವ ಯತ್ನ ಕೂಡ ಮಾಡಲಾರಳು. ಆರ್ಥಿಕ ಪರಾವಲಂಬತನ ಮತ್ತು ಹೆಣ್ತನಗಳೆರಡೂ ಇಲ್ಲಿ ಶೋಷಣೆಗೆ ಸಾಧನಗಳು. ಆದರೆ ಆ ಶೋಷಣೆಯು ಜರುಗುವುದಕ್ಕೆ ಸ್ತ್ರೀಯರೇ ಇಲ್ಲಿ ಕಾರಣರು.

ನಾಗತ್ತೆ–ನಾಗಕ್ಕನ ಸಂದರ್ಭ 'ಕೂಡಿಕೆ' ಪದ್ಧತಿಯನ್ನೂ ಸಮಸ್ಯೀಕರಿಸುವುದು ನಿಜಕ್ಕೂ ಕುತೂಹಲಕರ ಸಂಗತಿ. ಬ್ರಾಹ್ಮಣ ವಿಧವೆಯರ ಕಷ್ಟಗಳ ವಿರುದ್ಧ ೨೦ನೇ ಶತಮಾನದ ಆರಂಭದಲ್ಲಿ ನಡೆದ ರಾಷ್ಟ್ರೀಯ ಸುಧಾರಣಾ ಚಳವಳಿಗಳು – ಕೆಳಸ್ತರ, ಕೆಳಜಾತಿಗಳ ಬಹುಸಂಖ್ಯಾತ ಸ್ತ್ರೀಯರಿಗೆ ವೈಧವ್ಯವು ಸಮಸ್ಯೆಯೇ ಆಗಿರಲಿಲ್ಲವೆಂಬುದನ್ನು ನಿರ್ಲಕ್ಷಿಸಿದ್ದವು ಎಂದು ಡಿ.ಡಿ. ಕೋಸಾಂಬಿಯಂಥ ಚಿಂತಕರು ಬಹು ಹಿಂದೆಯೇ ಪ್ರತಿಪಾದಿಸಿದ್ದರು. ರಾಷ್ಟ್ರೀಯ ಸುಧಾರಣಾವಾದಿ ಚಳುವಳಿಗಳ ಇತಿಮಿತಿಗಳನ್ನು ಕುರಿತ ಚರ್ಚೆಯಲ್ಲಿ ಸಾಮಾನ್ಯವಾಗಿ ಕೆಳಜಾತಿ ವರ್ಗಗಳಲ್ಲಿ ಆಚರಣೆಯಲ್ಲಿದ್ದ 'ಕೂಡಿಕೆ'ಯನ್ನು ಸವಲತ್ತಿನ ನೆಲೆಯೆಂದೇ ಭಾವಿಸಲಾಗುತ್ತದೆ. ಆದರೆ ಕುವೆಂಪು ಅವರು ಚಿತ್ರಿಸಿರುವ ಬಗೆಯಲ್ಲಿ ಉಪಸಾಂಸ್ಕೃತಿಕ ಆಚರಣೆಯಾದ 'ಕೂಡಿಕೆ' ಪದ್ಧತಿ ಸವಲತ್ತಾಗಿರುವ ಬದಲಾಗಿ ಪುರುಷ ಪ್ರಧಾನ ಹಿತಾಸಕ್ತಿಗೇ ಹೊಂದಿಕೊಂಡ ಮಸಲತ್ತಿನಲ್ಲಿ ಸ್ತ್ರೀ ಕೂಡ ವಿವಶಳಾಗಿರುವುದನ್ನು ವ್ಯಂಗ್ಯವಾಗಿಸುತ್ತದೆ. ಮಿರ್ಜಿ ಅಣ್ಣಾರಾಯರ "ನಿಸರ್ಗ" ಕಾದಂಬರಿಯಲ್ಲಿ ಕೂಡ ಇದೇ ವಸ್ತುವಿನ ಬಹುದಾರುಣ ಮುಖವು ಚಿತ್ರಿತವಾಗಿದೆ. ಕಲ್ಲೂರು ಗುಡ್ಡದ ದೇವಾಲಯದ ದರ್ಶನದ ಸಂದರ್ಭದಲ್ಲಿ ಕಿಟ್ಟು ಎಂಬ ಜಮೀನ್ದಾರರ ಮಗ ಬೋಳುಮುಂಡೆ ಹಾರವತಿಯರ ಸ್ಥಿತಿ ತಮ್ಮ ಮನೆಗಳಲ್ಲಿ ಇಲ್ಲ ಎಂದು ಹೇಳುವ ಸಂದರ್ಭವನ್ನು ಕುವೆಂಪು ಚಿತ್ರಿಸಿದ್ದಾರೆ. ಆದರೆ 'ಕೂಡಿಕೆ' ಕೂಡ ಇಲ್ಲಿ ಅಂಥ ಇತ್ಯಾತ್ಮಕ ಪರಿಹಾರದ ರೀತಿಯಲ್ಲಿ ಹೆಮ್ಮೆಯಿಂದ ಎತ್ತಿಹಿಡಿಯಲ್ಪಡುವುದಿಲ್ಲ ಎಂಬುದನ್ನು ಗಮನಿಸಬೇಕು.

* * *

ಕುವೆಂಪು ಅವರ ಎರಡೂ ಕಾದಂಬರಿಗಳಲ್ಲಿ ಹೆಣ್ಣಿನ ಬಗ್ಗೆಯೇ ಗಂಡಸರಿಗೆ ಅಪನಂಬಿಕೆ ಇರುವುದರತ್ತ ಗಮನ ಸೆಳೆದು ಬಸವರಾಜ ಕಲ್ಗುಡಿಯವರು ಇದನ್ನು ಅವನತ ಸಂಸ್ಕೃತಿಯ ಲಕ್ಷಣವೆಂದು ಗುರುತಿಸುತ್ತಾರೆ ("ಕನ್ನಡದ ಕೆಲವು ಮುಖ್ಯ ಕಾದಂಬರಿಗಳು": ೧೯೯೦, ಪು. ೮೯). ಆದರೆ ಹೆಣ್ತನದ ಬಗೆಗಿನ ಅಪನಂಬಿಕೆ ಎನ್ನುವುದು (ಉದಾಃ ಚಂದ್ರಯ್ಯಗೌಡ ಸುಬ್ಬಮ್ಮನ ಬಗ್ಗೆ, ಐತಪೀಂಚಲು ಬಗ್ಗೆ ತಳೆವ ಅಪನಂಬಿಕೆ) ಒಂದು ಸಾಂಸ್ಕೃತಿಕ ವ್ಯವಸ್ಥೆಯಲ್ಲಿನ ತಾತ್ವಿಕತೆಯ ಪರಿಣಾಮವೇ ಹೊರತು ಅದೇ ತಳಪಾಯವಾಗಿರುವುದಿಲ್ಲ. ಅಂದರೆ ಹೆಣ್ಣು ಗಂಡಿನ ಸ್ವತ್ತಾಗಿ ಸ್ಥಾನಪಲ್ಲಟಗೊಂಡ ಮಾನವ ನಾಗರಿಕತೆಯ ಚರಿತ್ರೆಯೇ ಪಿತೃಪ್ರಧಾನ ಸಂಸ್ಕೃತಿಯ ತಳಪಾಯ. ಈ ತಳಹದಿಯ ಮೇಲೆ ಕಟ್ಟಲ್ಪಟ್ಟ ಸಂಸ್ಕೃತಿಯಲ್ಲಿ ಲೈಂಗಿಕ ಅಪನಂಬಿಕೆ ಒಂದು ಅಂಶ ಮಾತ್ರ.

ಉದಾಹರಣೆಗೆ, ಜಟ್ಟಮ್ಮನಂಥ ದೃಢಕಾಯದ, ಆರೋಗ್ಯಪೂರ್ಣ ಹೆಂಡತಿಯಿದ್ದರೂ ಗಂಡು ಸಂತಾನದ ನೆಪವೊಡ್ಡಿ ಇನ್ನೊಬ್ಬ ಹೆಣ್ಣನ್ನು ಮದುವೆಯಾಗಲು ಹವಣಿಸುವ ಭರಮಯ್ಯ ಹೆಗ್ಗಡೆ ಸ್ವತಃ ಒಬ್ಬ ಗುಹ್ಯರೋಗಿ. ಅವನಿಗೆ ತನ್ನ ಪೌರುಷದ ಬಗ್ಗೆಯೇ ಅಪನಂಬಿಕೆ. ಅದರಿಂದ ಪಾರಾಗಲು ಹೇಗಾದರೂ ಪೌರುಷವನ್ನು ಸಾಬೀತುಪಡಿಸಬೇಕಾಗಿದೆ.

ಈ ಹಪಾಹಪಿಗಾಗಿ ಅವನ ಕೈ ಹಿಡಿಯಲು ಒಬ್ಬ ಹೆಣ್ಣು ಬೇಕಿದೆ. ಆ ಹೆಣ್ಣು ಯಾರಾದರೂ ಆಗಿರಬಹುದು. ಆಕೆ ಮಂಜಮ್ಮನೋ ಇಲ್ಲವೇ ಚೆನ್ನಮ್ಮನೋ ಎಂಬುದು ಅವನಿಗೆ ಮುಖ್ಯವಲ್ಲ. ಆದರೆ ಆಕೆ ತನ್ನ ಸಾಮಾಜಿಕ ಪ್ರತಿಷ್ಠೆಗೆ ಸಮಾನವಾದ ನೆಲೆಯವಳಾಗಿರಬೇಕು. ಇವನ ಹಾಗೆಯೇ ತಿಮ್ಮಪ್ಪ ಹೆಗ್ಗಡೆಯ ಸ್ಥಿತಿ ಇದ್ದರೂ ಕಾರಣಗಳು ಬೇರೆ. ನೋಡಲು ಕುರೂಪಿ, ಸ್ವಭಾವದಿಂದ ಒರಟನಾದ ತಿಮ್ಮಪ್ಪ ಹೆಗ್ಗಡೆಗೆ ಹೆಣ್ಣು ಕೊಡಲು ಯಾರೂ ಸಿದ್ಧರಿಲ್ಲ. ಅವನದು ತೀರ ಪ್ರವೃತ್ತಿನೆಲೆಯ ಲೈಂಗಿಕ ತುರ್ತು. ಪಡ್ಡೆ ಹೋರಿಯಂಥ ಅವನ ವರ್ತನೆಗೆ ಲೈಂಗಿಕವಾಗಿ ಯಾರೋ ಒಬ್ಬ ಹೆಣ್ಣಾದರೆ ಸಾಕು. ಆದರೆ ಮದುವೆ ಒಂದು ಸಾಮಾಜಿಕ ಪ್ರತಿಷ್ಠೆಯ ವಿಷಯ. ಆದ್ದರಿಂದ ಇವನಿಗೂ ಮನೆತನಸ್ತ ಹೆಣ್ಣು ಬೇಕು. ಭರಮಯ್ಯ ಹೆಗ್ಗಡೆಯ ತಂಗಿ ಲಕ್ಕಮ್ಮನ ಹೊರತು ಬೇರೆ ಕುಲಸ್ತ ಹೆಣ್ಣು ದೊರೆಯದಂಥ ಅವನಿವಾರ್ಯತೆಯಲ್ಲಿ ಅವಳನ್ನು ಪಡೆಯಲೆಂದು ಇವನು ನಡೆಸುವ ಹುನ್ನಾರ ಅಷ್ಟಿಷ್ಟಲ್ಲ. ಈ ಬಗೆಯ ಮಂದಿಯ ಲೈಂಗಿಕ ವ್ಯವಹಾರಗಳೆಲ್ಲ ಹೆಣ್ಣನ್ನು ಗಂಡಿನ ಆಸ್ತಿಯೆಂದೇ ನೋಡುವಂಥ ಸಾಂಸ್ಕೃತಿಕ ರಚನೆಯಿಂದಲೇ ಹುಟ್ಟಿಕೊಂಡಂಥವು, ಅದರ ಫಲಿತ ರೂಪಗಳು. ಮಾತೃಪ್ರಧಾನ ವ್ಯವಸ್ಥೆಯಲ್ಲಿದ್ದ ಮೂಲ ನೆಲೆಗಳಲ್ಲೇ ಸ್ಥಾನಪಲ್ಲಟವಾದದ್ದರ ಪರಂಪರಾಗತ ಪರಿಣಾಮಗಳನ್ನು ಇಲ್ಲಿ ಸ್ತ್ರೀ ಪುರುಷ ಮಾದರಿಗಳು ಸೂಚಿಸುತ್ತವಷ್ಟೆ.

ತಮ್ಮನ್ನು ಅಸಮಾನ ನೆಲೆಗಳಲ್ಲೇ ಉಳಿಸಿಡಬಯಸುವ ಪುರುಷಪ್ರಧಾನ ಊಳಿಗಮಾನ್ಯ ಮೌಲ್ಯಗಳನ್ನು ಅಂತರ್ಗತವಾಗಿಸಿಕೊಂಡ ಸ್ತ್ರೀಯರು ಹೇಗೆ ಅವೇ ಮೌಲ್ಯಗಳನ್ನು ಬೆಳೆಸುತ್ತಾ ಹೋಗುತ್ತಾರೆ ಎಂಬುದಕ್ಕೆ ಗಂಗೆ, ಕಾವೇರಿ, ದೇವಮ್ಮ ಮುಂತಾದವರು ಪ್ರತೀಕವಾಗುತ್ತಾರೆ. ಮದುವೆಯಿಂದಾಗಿ ಬದುಕಿಡೀ ಹದಗೆಟ್ಟು, ಸಾಂಸಾರಿಕವಾದ ಪ್ರೀತಿ, ಭಾವನಾತ್ಮಕ ಭದ್ರತೆಯ ಕೊರತೆಯನ್ನು ಹೊಂದಿರುವ ಗಂಗೆಯು ತಾನು ಪುರುಷರನ್ನು ವಶೀಕರಿಸಿಕೊಂಡು ಬದುಕುವುದಕ್ಕೆ ಸುಬ್ಬಮ್ಮನನ್ನು ಒಂದು ಸಾಧನವನ್ನಾಗಿ ಮಾಡಿಕೊಳ್ಳುತ್ತಾಳೆ. ದೇವಮ್ಮ ಗಂಡನ ಅನ್ಯಸ್ತ್ರೀ ಸಂಬಂಧಗಳನ್ನು ಚಕಾರವೆತ್ತದೆ ಸಹಿಸಿದರೂ ಜಾತಿ ಬಿಡುವುದೆಂದರೆ ಬೇರೇ ಕಿತ್ತುಬಂದಂತೆ ಎಂದು ಹೆದರುತ್ತಾಳೆ. ದಾನಮ್ಮ ಹೆಗ್ಗಡಿತಿ ಕೂಡ ಜಾತಿಯ ಮೇಲು-ಕೀಳು ತಾರತಮ್ಯವನ್ನು ಸಮರ್ಥಿಸುತ್ತಾಳೆ. ಹೊಲತಿ ಅಕ್ಕಣಿ ರೋಗಿಷ್ಠ ಗಂಡನಿಗಾಗಿ ಚೀಂಕ್ರನ ಕಿರುಕುಳಗಳನ್ನೂ ಸಹಿಸಿಕೊಂಡವಳು, ಗಂಡನ ಆತ್ಮಹತ್ಯೆಯ ನಂತರ ಚೀಂಕ್ರನ ವಿರುದ್ಧ ಪ್ರತಿಭಟಿಸಲು ಅವನು ಕೆಳಜಾತಿ ವರ್ಗದವನಾಗಿದ್ದು ಒಂದು ಕಾರಣ. ಆದರೆ ಅದೇ ಹಾಗೆ ತನ್ನನ್ನು ಆಕ್ರಮಿಸುವ ವ್ಯಕ್ತಿ ಮೇಲ್ಜಾತಿವರ್ಗದ ಜಮೀನುದಾರ ರಂಗಪ್ಪಗೌಡರಾದರೆ ಅವಳಿಗೆ ಅಂಥ ವಿರೋಧವಿಲ್ಲ. ತನ್ನ ಮಕ್ಕಳಿಗೆ ಬದುಕಲು ಬೇರೆ ಆರ್ಥಿಕ ದಾರಿಯಿಲ್ಲದ ಸ್ಥಿತಿಯಲ್ಲಿ ಅವಳಿದನ್ನು ಒಪ್ಪಲು ಸಿದ್ಧ. ಅಂತಕ್ಕ ಸೆಟ್ಟಿಯ ಮಗಳು ಕಾವೇರಿ, ತಾಯಿಯ ಆರ್ಥಿಕ ಸ್ವಾವಲಂಬಿಕ ಸ್ಥಿತಿಯಿಂದಾಗಿ ಕೆಲಮಟ್ಟಿನ ಸ್ವಾತಂತ್ರ್ಯ ಹಾಗೂ ಬದುಕಿನ ಬಗ್ಗೆ ತನ್ನದೇ ಅಭಿಪ್ರಾಯ ಹೊಂದಿರುವವಳು. ತನ್ನದೇ ಬಳಗದ ವರನನ್ನು ಕುರೂಪಿ ಎಂಬುದಕ್ಕಾಗಿ

ಮದುವೆಯಾಗಲು ಒಪ್ಪದ ಅವಳು ರೂಪ, ಸಂಪತ್ತು, ಜಾತಿ, ಅಂತಸ್ತುಗಳಿಂದ ತನಗಿಂತ ಮೇಲಿನವನಾದ ದೇವಯ್ಯಗೌಡನಿಗೆ ಇಟ್ಟುಕೊಂಡವಳಾಗುವುದರಲ್ಲಿ ಯಾವ ಅವಹೇಳನವನ್ನೂ ಕಾಣುವುದಿಲ್ಲ. ಇಂಥ ಸಮಾಜದಲ್ಲಿ ಧರ್ಮಸಮ್ಮತ ವಿವಾಹಕ್ಕೆ ಸಮಾನಜಾತಿಯೇ ಬೇಕಾಗಿದ್ದರೂ, ವಿವಾಹೇತರ ಲೈಂಗಿಕ ವ್ಯವಹಾರಗಳಲ್ಲಿ ಹೆಣ್ಣು ಯಾವಾಗಲೂ ಕೆಳಜಾತಿಸ್ತರದವಳಾಗಿದ್ದು, ಗಂಡು ಮೇಲು ಜಾತಿ, ಸ್ತರಗಳಲ್ಲಿರುವುದು ಒಂದು ಸಾಮಾಜಿಕ ಒಪ್ಪಂದವಾಗಿರುತ್ತದೆಂದು ಹೇಳಿ ಎನ್. ಗಾಯತ್ರಿ ಕಾವೇರಿಯನ್ನು ಅದಕ್ಕೆ ನಿದರ್ಶನವಾಗಿ ನೋಡುತ್ತಾರೆ. ["ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ" ೧೯೯೩, ಪು. ೧೨೪]

* * *

ವ್ಯವಸ್ಥೆಯೊಂದರಲ್ಲಿ ಅದನ್ನೊಪ್ಪಿ ಪಾಲಿಸಿ ಮುಂದುವರೆಸುವವರು ಇರುವಂತೆಯೇ ಅದನ್ನು ತಮ್ಮದೇ ರೀತಿಗಳಿಂದ ಪ್ರತಿಭಟಿಸುವವರೂ ಇರುತ್ತಾರೆ. ಬಹಳಷ್ಟು ಸಂದರ್ಭಗಳಲ್ಲಿ ಈ ಪ್ರತಿಭಟನೆ ಅಥವಾ ವಿರೋಧ ಎಂಬುದು ಪ್ರಜ್ಞಾಪೂರ್ವಕವಾದ ಬಂಡಾಯದ ಆಯ್ಕೆ ಆಗಿರುವುದಿಲ್ಲ. ಈ ವಿರೋಧದ ಪ್ರತಿಕ್ರಿಯೆಯು ಬದುಕಿನ ಉಳಿವು–ಅಳಿವಿನ ಪ್ರಶ್ನೆ ಎದುರಾದಾಗ ಜೀವವು ತನ್ನನ್ನು ಉಳಿಸಿಕೊಳ್ಳಲು ನಡೆಸುವ ಹೋರಾಟವಾಗಿರುವುದೇ ಹೆಚ್ಚು. ಅಥವಾ ಒಪ್ಪಿತ ವ್ಯವಸ್ಥೆಯ ನೈತಿಕ ಮೌಲ್ಯಗಳು ಸುಪ್ತವಾಗಿ ಪ್ರಜ್ಞೆಯಲ್ಲಿದ್ದು ತದ್ವಿರುದ್ಧ ಸಂದರ್ಭಕ್ಕೆ ತೋರುವ ಪ್ರತಿಭಟನೆ ಕೂಡ ಅದಾಗಿರಬಹುದು. "ಕಾನೂರು ಹೆಗ್ಗಡಿತಿ"ಯಲ್ಲಿ ಸೀತೆಯು ರಾಮಯ್ಯನ ಜೊತೆಗಿನ ಮದುವೆಗೆ ತೋರುವ ರೋಗ, ಹುಚ್ಚು, ಆವೇಶ ರೂಪದ ಪ್ರತಿಭಟನೆಗಳು, ಹೂವಯ್ಯನ ಬಗೆಗಿನ ತನ್ನ ಪ್ರೇಮದ ಬಗೆಗಿನ ಗಟ್ಟಿಯಾದ ಪ್ರಜ್ಞಾಪೂರ್ವಕ ನಂಬಿಕೆಗಿಂತ ಹೆಚ್ಚಾಗಿ, ಸುಪ್ತ ಪ್ರಜ್ಞೆ ಹೂಡುವ ಮನೋ–ದೈಹಿಕ ಪ್ರತಿಕ್ರಿಯೆಯಾಗಿ ತೋರುತ್ತದೆ. ಆದರೆ ಮದುವೆ ನಡೆದುಹೋಗಿ, ರಾಮಯ್ಯನೊಂದಿಗೇ ದಾಂಪತ್ಯ ನಡೆಸುವುದು ಅನಿವಾರ್ಯವಾಗಿ ಹೇರಲ್ಪಟ್ಟಾಗ, ಚಂದ್ರಯ್ಯಗೌಡನ ಕ್ರೂರ ದಬ್ಬಾಳಿಕೆಗಂಜಿ ಆಕೆ ಮನೆಯಿಂದ ಪಲಾಯನ ಮಾಡುವುದು ಒಂದು ರೀತಿ ಕ್ರಿಯಾರೂಪದ ಪ್ರತಿಭಟನೆ ಆಗುತ್ತದೆ. ರಾಮಯ್ಯ ತನ್ನನ್ನು ಕರೆದೊಯ್ಯಲು ಬಂದಾಗ ಅವಳು ಹೋಗಲು ನಿರಾಕರಿಸುವ ಮೂಲಕ, ಮುಂದೆ ಅವನು ಸತ್ತಾಗ, ಒಂದು ರೀತಿ ತಪಸ್ವಿನಿಯಂತೆ ಬದುಕುವ ಮೂಲಕ ಸ್ವತಂತ್ರ ಚಿಂತನೆ, ಕ್ರಿಯೆ ಹಾಗೂ ಭಾವನೆಗಳುಳ್ಳ ಒಬ್ಬ ವ್ಯಕ್ತಿಯಾಗಿ ಅವಳು ಬೆಳೆಯುತ್ತಾಳೆ. ರೂಢಿಗತ ಕೌಟುಂಬಿಕ ಚೌಕಟ್ಟಿಗೆ ಪ್ರತಿಯಾಗಿ ಆದರ್ಶವಾದಿ ರೊಮ್ಯಾಂಟಿಕ್ ನೆಲೆಯಲ್ಲಿ ಈಕೆ ನಿಲ್ಲುತ್ತಾಳೆ.

"ಮಲೆಗಳಲ್ಲಿ ಮದುಮಗಳು" ಕಾದಂಬರಿಯಲ್ಲಿ 'ಪಲಾಯನ ಸೂತ್ರ' ಎಂಬುದು ಇಡೀ ಕಾದಂಬರಿಯ ಗತಿತಾರ್ಕಿಕತೆಯನ್ನು ಮುನ್ನಡೆಸುವ ನಿರೂಪಣಾ ತಂತ್ರವೇ ಆಗುತ್ತದೆ. ತಿಮ್ಮಿ–ಚೆನ್ನಮ್ಮ ಕೂಡ ಪಲಾಯನಕ್ಕೆ ಹೊರಟವರೇ. ಈ ಇಬ್ಬರ ಪಲಾಯನಗಳಲ್ಲಿ ಅವರ

ಬದುಕುಗಳಲ್ಲಿ ಆವರೆಗೆ ದೊರೆತಿದ್ದ ಕುಟುಂಬಮೂಲವಾದ ಭದ್ರತೆಯಿಂದ ಅವರು ಪ್ರತ್ಯೇಕಗೊಳ್ಳಬೇಕಾಗುತ್ತದೆ. ಭವಿಷ್ಯದ ಬದುಕಿನ ಕನಸು ಭರವಸೆಗಳಿದ್ದರೂ ಅದನ್ನೆಲ್ಲ ಮೀರಿಸುವಂಥ ಗಂಡಾಂತರಗಳ ಸೂಚನೆಗಳು ಅಲ್ಲಿ ದಟ್ಟವಾಗಿವೆ. ಓಡಿಹೋಗುವ ಕ್ರಿಯೆ ಮುಕುಂದಯ್ಯ ಮತ್ತು ಚೆನ್ನಮ್ಮ ಇಬ್ಬರಿಗೂ ಒಂದೇ. ಆದರೆ ಅದರ ಪರಿಣಾಮ ಮಾತ್ರ ಗಂಡಾದ ಮುಕುಂದಯ್ಯನಿಗೂ ಹೆಣ್ಣಾದ ತನಗೂ ಬೇರೆಬೇರೆಯೇ ಎಂಬ ನೈತಿಕ, ಸಾಮಾಜಿಕ ಭೀತಿಗಳು ಚೆನ್ನಮ್ಮನಲ್ಲಿ ತಳಮಳವನ್ನು ಹುಟ್ಟಿಸುತ್ತವೆ. ಸಾಮಾಜಿಕವಾಗಿ ಕೆಳಗಿನವಳಾದ ತಿಮ್ಮಿಗೆ ತನ್ನ ತಂದೆ, ಅವನ ಮೇಲೆ ಹಿಡಿತ ಹೊಂದಿರುವ ಒಡೆಯರ ಗೂಂಡಾಗಿರಿ, ದಬ್ಬಾಳಿಕೆಗಳ ಭೀತಿಯಿದೆ. ಗುತ್ತಿಯೊಂದಿಗೆ ಊರು ಬಿಟ್ಟು ಬೇರೊಂದು ಕಡೆ ಆಶ್ರಯ ಪಡೆದರೂ ಚಂದ್ರಯ್ಯಗೌಡರಂಥ ಒಡೆಯರ ಹೆದರಿಕೆಯು ತಪ್ಪುವುದಿಲ್ಲ. ತಾವು ಬಯಸಿದವರನ್ನೇ ಪಡೆದವರು. ಎಂಬ ದೃಷ್ಟಿಯಿಂದ ಸೀತೆಗಿಂತ ಇವರು ಹೆಚ್ಚು ಸಫಲವಾದವರು. ಭೀಕರವಾದ ವಾಸ್ತವವನ್ನು ಎದುರಿಸುವುದರ ದೃಷ್ಟಿಯಿಂದಲೂ ಸಾಮಾಜಿಕವಾದ ಲಿಂಗಸಮಾನತೆಯ ಸಾಧ್ಯತೆಯನ್ನು ಇವರು ಪ್ರತಿನಿಧಿಸುತ್ತಾರೆನ್ನಬಹುದು.

"ಮಲೆಗಳಲ್ಲಿ ಮದುಮಗಳು" ಕಾದಂಬರಿಯನ್ನು, ಈ ಚರ್ಚೆಯ ಆರಂಭದಲ್ಲಿ ಪ್ರಸ್ತಾಪಿಸಿದಂತೆ ಹೆಣ್ಣಿನ ಪರಂಪರಾಗತ ಕೌಟುಂಬಿಕ ನೆಲೆಯ ತಾತ್ವಿಕ ಜಿಜ್ಞಾಸೆ ಎಂದು ನೋಡವುದಾದರೆ ಇಲ್ಲಿನ ಐತ–ಪೀಂಚಲು ಅತ್ಯಂತ ವಿಶಾಲವಾದ, ಪ್ರೇಮಪೂರ್ಣವಾದ, ಸ್ವಾತಂತ್ರ್ಯ ಮತ್ತು ಪರಸ್ಪರ ಗೌರವವುಳ್ಳ ಸ್ತ್ರೀಪುರುಷ ದಾಂಪತ್ಯದ ಆದರ್ಶ ಮಾದರಿ ಆಗಿದ್ದಾರೆ. ಮುಕುಂದಯ್ಯನ ಕಲ್ಪನೆಯಲ್ಲಿ ಇವರೇ ಶಿವ–ಶಿವಾಣಿಯಾಗಿರುವುದು, ಒಂದು ಮುಖ್ಯ ಸಮಾಜವಾದಿ ಚಲನಶೀಲತೆಯ ತತ್ವವನ್ನು ಧ್ವನಿಸುತ್ತದೆಂದು ಕಲ್ಗುಡಿಯವರು ಗುರುತಿಸುವುದು ಸರಿಯಾಗಿಯೇ ಇದೆ (ಪೂರ್ವೋಕ್ತ: ೯೭–೯೮). ಈ ಸಮಾಜವಾದಿ ಚಲನಶೀಲತೆ ಎನ್ನುವುದು ಹೆಣ್ಣನ್ನು ನೆಲೆಯಿಂದ ಸಮಾನತೆಯತ್ತ ಮುನ್ನಡೆಸುವುದರ ಮೂಲಕ ಮಾತ್ರ ಸಾಧ್ಯವಾಗುತ್ತದೆ. ಆ ಮೂಲಕವೇ ಸಂಸ್ಕೃತಿಯ ವಿಕಾಸ ಸಾಧ್ಯ ಎಂಬುದನ್ನು ಕುವೆಂಪು ಅವರ ಕಾದಂಬರಿಗಳು ಧ್ವನಿಸುವಂತೆ ಇವೆ.

* * *

ಸ್ತ್ರೀ ಸಮಾನತೆಯು ಲೌಕಿಕ ನೆಲೆಯ ಒಂದು ಸಮಾಜವಾದಿ ತಾತ್ವಿಕ ಆಶಯವಾಗಿ ಈ ಕಾದಂಬರಿಗಳಲ್ಲಿ ವಾಸ್ತವ ವಿವರಗಳ ಮೂಲಕ ಚರ್ಚಿತವಾಗುತ್ತದೆ, ನಿಜ. ಆದರೆ ಕುವೆಂಪು ಅವರನ್ನು ಗಾಢವಾಗಿ ಪ್ರಭಾವಿಸಿದ, ಅವರ ಬಹುಮುಖ್ಯ ಶ್ರದ್ಧೆಯ ನೆಲೆಗಳಲ್ಲಿ ಒಂದಾದ ಸ್ತ್ರೀಸತ್ವದ ದೈವೀಕೃತ ಆಯಾಮವನ್ನು ಗುರುತಿಸದಿದ್ದರೆ ಅವರ ಕೃತಿಗಳ ಚರ್ಚೆ ಪೂರ್ಣವಾಗುವುದಿಲ್ಲ. ಜಗತ್ತಿನ ಮೂಲಭೂತ ಶಕ್ತಿಯ ಅನೂಹ್ಯ ಸಾಮರ್ಥ್ಯ ಮತ್ತು ನಿಗೂಢತೆಯ ಬಗ್ಗೆ ವಿಸ್ಮಯ ಪಡುವಂಥ ಸನ್ನಿವೇಶದಲ್ಲಿ ಸ್ತ್ರೀಪಾತ್ರಗಳು ಆ ನಿಗೂಢತೆಗೆ ಪ್ರತಿನಿಧಿಗಳಾಗುವುದನ್ನು ಕುವೆಂಪು ಕಾದಂಬರಿಗಳಲ್ಲಿ ಕಾಣಬಹುದು. ಸಣ್ಣ ಬೀರನನ್ನು

ಕಲ್ಲಯ್ಯಗೌಡರು ಮರಕ್ಕೆ ಕಟ್ಟಿಸಿ ಹೊಡೆಸುವಾಗ, ತಾಯಿ ಸೇಸಿಯು ಮಗನ ಜೀವ ಕಾಪಾಡಲು ಅದುವರೆಗಿನ ತನ್ನೆಲ್ಲ ಸಾಮಾಜಿಕ ದಿಗ್ಬಂಧನಗಳನ್ನು ಮೀರಿ ನಿಂತು ಮಾತೃತ್ವ ಶಕ್ತಿಯ ಪ್ರತೀಕವಾಗಿ ಆ ಅನ್ಯಾಯದ ವಿರುದ್ಧ ತೀವ್ರವಾಗಿ ಪ್ರತಿಭಟಿಸುತ್ತಾಳೆ. "ಹೊಲೆಯಳಾದರೂ ಬಡವಳಾದರೂ ಯಾವ ವಿಧವಾದ ವ್ಯಕ್ತಿತ್ವ ವಿಶೇಷವೂ ಲವಲೇಶವೂ ಇಲ್ಲದವಳಾದರೂ ಸಂಕಟತಪ್ತ ತಾಯ್ತನ ಎಂಥ ಅಲ್ಪ ಸ್ತ್ರೀಯನ್ನಾದರೂ ಭೂಮ ಪಟ್ಟಕ್ಕೇರಿಸಿ ಬಿಡುತ್ತದೆಯೋ ಏನೋ ಎಂಬಂತೆ ಅವಳ ಮಾತೃದುಃಖಜನ್ಯ ಕ್ರೋಧದ ಸಾನ್ನಿಧ್ಯ ಭೀಷಣೆಗೆ ಕ್ಷಣಮಾತ್ರ ಭೀತಚೇತಸನಾದ ಇಜಾರದ ಸಾಬಿಯು ಗೌಡರ ಆಜ್ಞೆಯನ್ನು ಮರೆತು ಸೇಸಿಯ ಮಾತಿಲ್ಲದ ಆಣತಿಗೆ ಒಳಗಾದವನಂತೆ ಬೇಗಬೇಗನೆ ಸಣ್ಣ ಬೀರನನ್ನು ಬಿಗಿದಿದ್ದ ಹಗ್ಗದ ಕಟ್ಟುಗಳನ್ನೆಲ್ಲ ಬಿಚ್ಚಿ ಹಾಕಿದನು." ("ಮಲೆಗಳಲ್ಲಿ ಮದುಮಗಳು" ೧೯೬೫, ಪು. ೩೭೨.)

ಮೈಮೇಲೆ ಜಕಣಿ ಬಂದಿತೋ ಎಂಬಂತೆ ಗೌಡರನ್ನು ಕಂಡರೆ ನೂರು ಮಾರು ದೂರದಲ್ಲಿಯೇ ಕುಗ್ಗಿ ಹೆದರಿ ಹುದುಗಿಕೊಳ್ಳುವ ಸ್ವಭಾವದ, ಸಹಜ ಭೀರುವಾದ ಆ ಹೊಲತಿ ಈಗ ಗೌಡರಿಗೆ ಎದುರಾಗಿ ಕೈಮುಗಿದು ಗಂಡ, ಮಗನ ಬಿಡುಗಡೆಗಾಗಿ ಗೌಡರನ್ನು ಬೇಡುವಷ್ಟು ದಿಟ್ಟತನ ತೋರುವುದು ಸಾಮಾನ್ಯ ಸಂಗತಿಯಲ್ಲ. ಅದು ಸಾಮಾನ್ಯಕ್ಕೆ ಅತೀತವಾದ, ಅಸಾಧಾರಣ, ಆವೇಶದ ರೀತಿಯ ಶಕ್ತಿಯೊಂದರ ಪ್ರಕಟಣೆಯ ರೂಪದ್ದು, ರಕ್ಷಕಮಾತೆಯ ಆಂಶಿಕ ಪ್ರತೀಕ ಇಲ್ಲಿ ಸೇಸಿಯಂಥ ಸಾಮಾನ್ಯಾತಿ ಸಾಮಾನ್ಯ ಹೆಣ್ಣಿನಲ್ಲೂ ಮೈಪಡೆಯುತ್ತದೆ.

ಮಾತೃಶಕ್ತಿಯನ್ನು ಅದರ ಅನಾದಿ–ಅನಂತ ನಿರ್ಲಿಪ್ತ ಲೀಲೆಯ ರೂಪದಲ್ಲಿ ಕಟ್ಟಿಕೊಡುವ ಚಿತ್ರವೊಂದು ದೇವಮ್ಮನ ಮೂಲಕ ಚಿತ್ರಿತವಾಗುತ್ತದೆ. ಅದು ಸ್ವತಃ ಒಂದು ವ್ಯಾಖ್ಯಾನವೂ ಆಗಿದೆ. ಕುವೆಂಪು ಅವರ ಭಾಷೆಯೂ ಇಲ್ಲಿ ಧ್ಯಾನಸ್ಥ ಕಾವ್ಯಮಯತೆಯನ್ನು ತಳೆಯುತ್ತದೆ: "ಅಡುಗೆ ಮನೆಯ ಒಂದು ಕಂಬಕ್ಕೆ ಬೆನ್ನು ಆನಿಸಿ, ಒರಗಿ ಚಿಕ್ಕಾಲುಬಕ್ಕಾಲು ಹಾಕಿ ಅರೆಗತ್ತಲಲ್ಲಿ ಕುಳಿತಿದ್ದ ಅಮ್ಮನ ತೊಡೆಯ ಮೇಲೆ ಮಲಗಿ ಸಶಬ್ದವಾಗಿ ಮೊಲೆಯುಣ್ಣುತ್ತಿದ್ದ ಕಂದನ ಆನಂದವನ್ನು ಸಾಸಿರ್ಮಡಿಯಾಗಿ ಸವಿಯುತ್ತಾ ಸುಖಮೂರ್ಛೆಗೆ ಸದೃಶವಾದ ಚಿತ್ತಸ್ಥಿತಿಯಲ್ಲಿದ್ದ ಚೊಚ್ಚಲುತಾಯಿ ದೇವಮ್ಮನ ಪ್ರಜ್ಞೆಗೆ ಹೊರಗಣ ಲೋಕದ ಕಠೋರತೆಯಾಗಲಿ, ಕ್ರೌರ್ಯವಾಗಲಿ ತಮ್ಮ ತೀಕ್ಷ್ಣ, ವಾಸ್ತವ ರೂಪದಲ್ಲಿ ಪ್ರವೇಶಿಸುವಂತಿರಲಿಲ್ಲ. ಕಾವ್ಯಪ್ರಪಂಚದಲ್ಲಿ ಯಾತ್ರಿಯಾಗುವ ರಸಾಸ್ವಾದಿ ಸಹೃದಯನ ಪ್ರಜ್ಞೆಗೆ ಸಂಭವಿಸುತ್ತದೆ ಎಂದು ಹೇಳಲಾಗುವ ಒಂದು ರೀತಿಯ ಸದ್ಯಃಪರ ನಿರ್ವೃತ್ತಿ ಅವಳ ಚೇತನವನ್ನು ತನ್ನ ವಕ್ಷಸ್ಥಲದಲ್ಲಿಟ್ಟುಕೊಂಡು ರಕ್ಷಿಸಿತ್ತು" ("ಮಲೆಗಳಲ್ಲಿ ಮದುಮಗಳು" ೧೯೮೫, ಪು. ೨೭೭–೭೮:).

ಕಾವ್ಯರಸಾಸ್ವಾದನೆಯ ಆನಂದವನ್ನೂ ದೇವಮ್ಮನ ತಾಯ್ತನದ ಮೂಲದ ಆನಂದವನ್ನೂ ಒಂದಾಗಿ ನೋಡುವುದರಲ್ಲಿ ಕುವೆಂಪು ಮಾತೃಮೂಲವಾದ ವಿಶ್ವಾತ್ಮಕ ಶಕ್ತಿಯೊಂದರ ಬಗ್ಗೆ ಹೊಂದಿರುವ ಶ್ರದ್ಧೆಯ ಪ್ರೇರಣೆ ಇರಬಹುದು. ಆದರೆ ಅವರ ಎರಡೂ ಕಾದಂಬರಿಗಳ

ವಾಸ್ತವ ಲೋಕದಲ್ಲಿ 'ತಾಯ್ತನ'ದ ಇಂಥ ಯಾವ 'ಪರಾಶಕ್ತಿ' ನೆಲೆಗೂ ಆಸ್ಪದವಿಲ್ಲ. ಹೆಂಡತಿಯರು ಸತ್ತಂತೆಲ್ಲ ಮರುಮದುವೆಯಾಗುವ ಗಂಡಸರು, ಬಹುಸಂಖ್ಯೆಯಲ್ಲಿ ಹೆರಿಗೆಗಳಿಂದ, ಅದರಿಂದ ಉಂಟಾದ ರೋಗಗಳಿಂದ ತೀರಿಕೊಳ್ಳುವ ಹೆಂಗಸರು ವಿಡಂಬನೆ, ಅನುಕಂಪಗಳಿಂದ ಇಲ್ಲಿ ಚಿತ್ರಿತರಾಗುತ್ತಾರೆ.

ಮಾತೃತ್ವದ ಜೈವಿಕ ಪ್ರಕ್ರಿಯೆಯೊಂದನ್ನು ಕುವೆಂಪು ವೈಭವೀಕರಿಸಿರುವುದನ್ನು ದೇವಮ್ಮನ ಚಿತ್ರ ಸೂಚಿಸುತ್ತದೆ. ಆದರೆ ನಿಜವಾದ ಮಾತೃತ್ವದ ವಾತ್ಸಲ್ಯ ಎನ್ನುವುದು ಸ್ವಸಂತಾನಕ್ಕಷ್ಟೇ ಸೀಮಿತವಾದದ್ದಲ್ಲ. ಅಥವಾ ಹೆಣ್ಣಿಗಷ್ಟೇ ಮೀಸಲಾದ ಗುಣವೂ ಅಲ್ಲ. ಹೂವಯ್ಯ, ಮುಕುಂದಯ್ಯನಂಥ ಮೃದು ಮನಸ್ಸಿನ ವ್ಯಕ್ತಿಗಳಲ್ಲಿ, ಐತ, ಗುತ್ತಿಯಂಥ ಸಂವೇದನಾಶೀಲ ಗಂಡುಗಳಲ್ಲಿ ಇಂಥ ಆರ್ದ್ರತೆಯ ಭಾವವನ್ನು ಹುಡುಕಬಹುದಾದರೂ ಸಮಗ್ರವಾಗಿ ಇಂಥ ವಾತ್ಸಲ್ಯದ ಆವಿಷ್ಕರಣವೂ ಇಲ್ಲಿನ ಸ್ತ್ರೀಯರಲ್ಲಿ, ಪುರುಷರಲ್ಲೂ ಲಭ್ಯವಾಗದಂಥ ಸಾಂಸ್ಕೃತಿಕ ಪರಿಸ್ಥಿತಿಗಳೇ ಈ ಕಾದಂಬರಿಗಳು ಒದಗಿಸುವ ಮುಖ್ಯನೋಟವೆನ್ನಬಹುದು.

○

ಅಭ್ಯಾಸಸೂಚಿ

೧. ಕೇಶವ ಶರ್ಮ ಕೆ. (೧೯೯೨) : "ಸ್ತ್ರೀವಾದಿ ವಿಮರ್ಶೆ", ಅನ್ವೇಷಣೆ ಪ್ರಕಾಶನ, ಬೆಂಗಳೂರು.

೨. ಗಾಯತ್ರಿ ಎನ್. (೧೯೯೨) : "ಮಹಿಳೆ ಬಿಡುಗಡೆಯ ಹಾದಿಯಲ್ಲಿ", ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

೩. – (೧೯೯೮) : "ಮಹಿಳಾ ಚಳುವಳಿಯ ಮಜಲುಗಳು", ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

೪. ಗಾಯತ್ರಿ ನಾವಡ (೧೯೯೭) : "ವಿರಚನೆ" (ಸ್ತ್ರೀವಾದಿ ಸಾಹಿತ್ಯ ಚಿಂತನ,) ಎನ್.ಆರ್.ಎಂ.ಎಸ್. ಪ್ರಕಾಶನ, ಕೋಟೇಶ್ವರ, ದ.ಕ.

೫. ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನ (೧೯೯೪) "ಸ್ತ್ರೀವಾದಿ ಸಾಹಿತ್ಯ ವಿಮರ್ಶೆ" ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ, ಬೆಂಗಳೂರು.

೬. ನಾಗಮಣಿ ಎಸ್. ರಾವ್ (ಸಂ.) : "ಲೇಖ–ಲೋಕ" (ಮಹಿಳಾ ಸಾಹಿತ್ಯ: ಒಂದು ಆತ್ಮಕಥನ) ಸಂಪುಟ ೨, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.

೭. ನೇಮಿಚಂದ್ರ : (೧೯೮೮) "ಬೆಳಗೆರೆ ಜಾನಕಮ್ಮ : ಬದುಕು–ಬರಹ", ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.

೮. ಬರಗೂರು ರಾಮಚಂದ್ರಪ್ಪ (ಸಂ.) ೧೯೯೩) : "ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ", ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೯. – (ಸಂ.): (೧೯೯೩) "ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆ", ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೦. ಮನು ಚಕ್ರವರ್ತಿ (೧೯೯೩) : "ಭಾರತೀಯ ಸ್ತ್ರೀವಾದ", ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೧೧. ಮಲ್ಲಿಕಾ ಘಂಟಿ (೧೯೯೪) : "ಕನ್ನಡದಲ್ಲಿ ಮಹಿಳಾ ಕಥಾಸಾಹಿತ್ಯ", ಯುವಲೋಕ ಪ್ರಕಾಶನ, ಧಾರವಾಡ.

೧೨. ರೋಹಿಣಿ ಬಿ.ಎಂ. (೧೯೯೫) : "ಸ್ತ್ರೀ ಸಂವೇದನೆ", ಹೇಮಾಂಶು ಪ್ರಕಾಶನ, ಮಂಗಳೂರು.

೧೩. ವಿಜಯಾ ದಬ್ಬೆ (೧೯೮೯) : "ಮಹಿಳೆ ಸಾಹಿತ್ಯ ಸಮಾಜ", ರಚನಾ ಪ್ರಕಾಶನ, ಮೈಸೂರು.

೧೪. – (ಸಂ.) (೧೯೮೯) : "ಹಿತೈಷಿಣಿ ಹೆಜ್ಜೆಗಳು" (ದಿ. ನಂಜನಗೂಡು ತಿರುಮಲಾಂಬಾ ಬದುಕು, ಬರಹ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೧೫. – (ಸಂ.) (೧೯೮೯) : "ಶಾಮಲಾ ಸಂಚಯ" (ದಿ. ಶ್ಯಾಮಲಾದೇವಿ ಬೆಳಗಾಂವಕರ್ ಬದುಕು, ಬರಹ), ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.

೧೬. – (ಸಂ.) (೧೯೯೭) : "ಸಾರ ಸರಸ್ವತಿ" (ದಿ. ಸರಸ್ವತೀದೇವಿ ಗೌಡರ್ ಬದುಕು ಬರಹ), ಮಹಿಳಾ ಸಾಹಿತ್ಯಿಕಾ, ಧಾರವಾಡ.

೧೭. (ಸಂ.) (೧೯೯೮) : "ನಾರಿ ದಾರಿ ದಿಗಂತ" ರಚನಾ ಪ್ರಕಾಶನ, ಮೈಸೂರು.

೧೮. – (ಸಂ.) (೧೯೯೮) : "ಲೇಖ–ಲೋಕ" : (ಮಹಿಳಾ ಸಾಹಿತ್ಯ: ಒಂದು ಆತ್ಮಕಥನ) ಸಂಪುಟ ೧, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.

೧೯. ವೀಣಾ ಶಾಂತೇಶ್ವರ (ಸಂ.) ೧೯೯೩) : "ಮಹಿಳಾ ಅಧ್ಯಯನ" (ಪ್ರೊ. ಎಚ್.ವಿ. ನಾಗೇಶ್ ಅಭಿನಂದನ ಗ್ರಂಥ), ಧಾರವಾಡ.

೨೦. ಶ್ರೀವಳ್ಳಿ (ಸಂ.) ೧೯೯೫) : "ಗಿರಿಬಾಲೆ ಸಾಹಿತ್ಯ ವಾಚಿಕೆ" (ದಿ. ಸರಸ್ವತೀ ಬಾಯಿ ರಾಜುವಾಡೆ ಬದುಕು ಬರಹ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೧. ಸವಿತಾ ನಾಗಭೂಷಣ (೧೯೯೨) : "ಮುಡಿ ಮಲ್ಲಿಗೆ" (ಸ್ತ್ರೀವಾದಿ ಚಿಂತನೆ), ಸಂವಾದ ಪ್ರಕಾಶನ, ಚಿತ್ರದುರ್ಗ.

೨೨. ಸುಮಿತ್ರಾಬಾಯಿ ಬಿ.ಎನ್. (೧೯೮೬) : "ಸಾರ್ವತ್ರಿಕದೆಡೆಗೆ" (ಸಮಕಾಲೀನ ಮಹಿಳಾಕಾವ್ಯದ ಅಧ್ಯಯನ) ಮಾನವ ಪ್ರಕಾಶನ, ಹಾಸನ.

೨೩. – (ಸಂ.) (೧೯೯೨) "ಕಲ್ಯಾಣ ಸರಸ್ವತಿ" (ದಿ. ಆರ್. ಕಲ್ಯಾಣಮ್ಮ ಬದುಕು ಬರಹ), ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.

೨೪. – (೧೯೯೫) : "ವಿಚಯ", ಇಳಾ ಪ್ರಕಾಶನ, ಬೆಂಗಳೂರು.

೨೫. – (ಸಂ.) (೧೯೯೫) : "ಕಾತ್ಯಾಯಿನಿ ಸಾಹಿತ್ಯವಾಚಿಕೆ" (ದಿ. ಎಚ್.ಎಸ್. ಕಾತ್ಯಾಯಿನಿ ಬದುಕು ಬರಹ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೬. (ಸಂ.) (೧೯೯೭) "ಅಂಗಳದೊಳಗಿನ ಕಡಲು" ಕರ್ನಾಟಕ ಸಂಘ, ಪುತ್ತೂರು ದ.ಕ.

೨೭. ಸುಮಿತ್ರಾಬಾಯಿ ಬಿ.ಎನ್. ಮತ್ತು ಎನ್. ಗಾಯತ್ರಿ (ಸಂ.) (೧೯೯೫) "ಸ್ತ್ರೀವಾದಿ ಪ್ರವೇಶಿಕೆ", ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.

೨೮. – (ಸಂ.) (೧೯೯೮) : "ವಿಮುಕ್ತೆಯ ಹಾದಿ" (ದಿ. ಎಚ್.ವಿ.ಸಾವಿತ್ರಮ್ಮನವರ ಸಾಹಿತ್ಯಾಧ್ಯಯನ), ಜಾಗೃತಿ ಮಹಿಳಾ ಪ್ರಕಾಶನ, ಬೆಂಗಳೂರು.

29. Christian, Barbara (1986), Black Feminist Criticism, New York, Pergamon press.

30. Davis, Angela (1986); Women, Race and Class, London, The Women's Press Limited.

31. Ghadially, Rehana : (ed) (1988), Women in Indian Society, New Delhi, Sage publications.

32. Grant, Judith (1993), Fundamental Feminism, New York, Routledge.

33. Green, Gayle & Kahn, Koppelia (1985), Making a Difference : Feminist Literary Criticism, London, Mathawn.

34. Humm, Maggie (1986), Feminist Criticism : women as Contemporary Critics, Great Britain, The Harvest Press Limited.

35. Kakar, Sudhir (1990) Intimate Relations : Exploring Indian Sexuality, New Delhi, Penguin Books.

36. Moi, Toril (1985), Sexual Textual Politics : Feminist Literary Theory, London, Methuen.

37. Montefiore, Jan (1987), Feminism and Poetry, London, Pandora.

38. Nandi, Ashis (1990), At the Edge of Psychology: Essays in Politics and Culture, Delhi, Oxford University Press.

39. Rowbatham, Sheila (1989), The Past is Before Us, London, Pandora.

40. Sangari, Kusum & Vaid, Sudhesh (1989) (Eds) Recasting Women : Studies in Colonial History, New Delhi, Kali for women.

41. Showalter, Elaine : (ed) (1985), The New Feminist Criticism: Essays on Women, Literature and Theory, New York, Pantheon Books.

42. Tharu, Susie and Lalitha, K. (Eds) (1991), Women Writting in India. Vol. I, & (1993), Women Writing in India Vol. II, New York, The Feminist Press.

43. Weeden, Chris (1989), Feminist Practice and Post Structuralist Theory, New York, Basil Blackwell.

44. Wolff, Janet (1990), Feminist Sentences : Essays on Women and Culture, Berkely, Los Angeles,University of California Press.

45. Woolf, Virginia (1957), A Room of One's Own, New York, Harcourt Brace, Jovanovich.

***** *****

ಪಾರಿಭಾಷಿಕ ಮಾಲೆ ಕೃತಿಗಳು

		ರೂ. ಪೈ.
ಕಥನ ಕವನ	ಎಚ್.ಎಸ್. ವೆಂಕಟೇಶಮೂರ್ತಿ	೨೫.೦೦
ಅಸಂಗತ	ಬಸವರಾಜ ನಾಯ್ಕರ್	೩೦.೦೦
ಪುರಾಣ	ಕೆ.ಎಲ್. ಗೋಪಾಲಕೃಷ್ಣಯ್ಯ	೩೦.೦೦
ಕಾಮಿಡಿ	ಜಿ.ಎಸ್. ಆಮೂರ	೩೦.೦೦
ವಸಾಹತೋತ್ತರ ಚಿಂತನೆ	ಸಿ.ಎನ್. ರಾಮಚಂದ್ರನ್	೪೦.೦೦
ಸಾಂಸ್ಕೃತಿಕ ಅಧ್ಯಯನ	ರಹಮತ್ ತರೀಕೆರೆ	೬೦.೦೦
ಬಂಡಾಯ-ದಲಿತ ಸಾಹಿತ್ಯ	ಪುರುಷೋತ್ತಮ ಬಿಳಿಮಲೆ	೩೫.೦೦

ಬೆಲೆ ನಲವತ್ತು